ಭಾನುವಾರ, ಮಾರ್ಚ್ 26, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ
ಮುಂಬೈನಲ್ಲಿ ಹಮ್ಮಿಕೊಂಡಿದ್ದ ಪ್ರಶಸ್ತಿ ಪ್ರದಾನ ಸಮಾರಂಭವೊಂದರಲ್ಲಿ ಪಾಲ್ಗೊಂಡಿದ್ದ ಬಾಲಿವುಡ್ ನಟಿ ಸನ್ನಿ ಲಿಯೋನ್



ವರುಣಾದಿಂದ ಸಿದ್ದರಾಮಯ್ಯ ಸ್ಪರ್ಧೆ • ಬಹುತೇಕ ಹಾಲಿ ಸದಸ್ಯರಿಗೆ ಮತ್ತೆ ಟಿಕೆಟ್

124 ಕ್ಷೇತ್ರಕ್ಕೆ 'ಕೈ' ಅಭ್ಯರ್ಥಿ ಘೋಷಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬರುವ ವಿಧಾನಸಭಾ ಚುನಾವಣೆಗೆ 124 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಕಾಂಗ್ರೆಸ್ ಹೈಕಮಾಂಡ್ ಶನಿವಾರ ಪ್ರಕಟಿಸಿದೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವರುಣಾ ಕ್ಷೇತ್ರದಿಂದ ಕಣಕ್ಕೆ ಇಳಿಯಲಿದ್ದಾರೆ ಎಂದು ಘೋಷಿಸುವ ಮೂಲಕ 'ಕ್ಷೇತ್ರ ಗೊಂದಲ'ಕ್ಕೆ ತೆರೆ ಎಳೆದಿದೆ.

93 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಜೆಡಿಎಸ್ ಕೆಲವು ತಿಂಗಳ ಹಿಂದೆಯೇ ಘೋಷಿಸಿದೆ. ಈ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳು ಪ್ರಚಾರ ಕಾರ್ಯ ಆರಂಭಿಸಿದ್ದಾರೆ. ಆಡಳಿತಾರೂಢ ಬಿಜೆಪಿ ಟಿಕೆಟ್ ಹಂಚಿಕೆ ಕುರಿತು ಪ್ರಕ್ರಿಯೆಯನ್ನೇ ಆರಂಭಿಸಿಲ್ಲ. ಇದರ ನಡುವೆ, ಚುನಾವಣಾ ವೇಳಾಪಟ್ಟಿ ಘೋಷಣೆಗೆ ಮುನ್ನವೇ 'ಕೈ' ಪಾಳಯವು ಹೆಚ್ಚಿನ ತಂಟೆ ತಕರಾರು ಇಲ್ಲದೆ 124 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸಿದೆ.

ಪ್ರಸ್ತುತ ಬಾದಾಮಿ ಕ್ಷೇತ್ರದ ಶಾಸಕರಾಗಿರುವ ಸಿದ್ದರಾಮಯ್ಯ, 'ಹೈಕಮಾಂಡ್ ಒಪ್ಪಿಗೆ ಕೊಟ್ಟರೆ ಕೋಲಾರದಿಂದ ಸ್ಪರ್ಧೆ ಮಾಡುತ್ತೇನೆ' ಎಂದು ಈ ಹಿಂದೆ ಘೋಷಿಸಿದ್ದರು. ಕೋಲಾರದಲ್ಲಿ ಸ್ಪರ್ಧೆ ಮಾಡಲು ಸಕಲ ತಯಾರಿ ಮಾಡಿಕೊಂಡಿದ್ದರು. ಕಳೆದ ಶನಿವಾರ ನಡೆದ ಕೇಂದ್ರ ಚುನಾವಣಾ ಸಮಿತಿ ಸಭೆಯ ಬಳಿಕ ಸಿದ್ದರಾಮಯ್ಯ ಜತೆಗೆ ಪ್ರತ್ಯೇಕ ಸಭೆ ನಡೆಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ಸ್ಪರ್ಧೆ ವಿಷಯದಲ್ಲಿ ರಿಸ್ಕ್ ತೆಗೆದುಕೊಳ್ಳುವುದು ಬೇಡ. ಕೋಲಾರದಲ್ಲಿ ಕಣಕ್ಕೆ ಇಳಿಯಬೇಡಿ' ಎಂದು ಸಲಹೆ ನೀಡಿದ್ದರು. ಕೋಲಾರದಲ್ಲಿ ಸ್ಪರ್ಧೆ ಮಾಡುವುದಿಲ್ಲ ಎಂಬುದಾಗಿ ಆಪ್ತರ ಬಳಿ ಸಿದ್ದರಾಮಯ್ಯ ಹೇಳಿಕೊಂಡಿದ್ದರು.

ಕುಟುಂಬ ಸದಸ್ಯರ ಜತೆಗೆ ಸಮಾಲೋಚನೆ ನಡೆಸಿದ್ದ ಸಿದ್ದರಾಮಯ್ಯ, ವರುಣಾದಿಂದ ಸ್ಪರ್ಧೆ ಮಾಡುವುದಾಗಿ ಹೈಕಮಾಂಡ್‌ಗೆ ತಿಳಿಸಿದ್ದರು. ಮೊದಲ ಪಟ್ಟಿಯಲ್ಲಿ ಬಾದಾಮಿ, ಕೋಲಾರ ಕ್ಷೇತ್ರಕ್ಕೆ ಹುರಿಯಾಳುಗಳ ಹೆಸರನ್ನು ಘೋಷಿಸಿಲ್ಲ. ಕೋಲಾರದಿಂದಲೂ ಸ್ಪರ್ಧೆ ಮಾಡಲು ಉತ್ಸುಕನಾಗಿದ್ದೇನೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಮೊದಲ ಪಟ್ಟಿಯಲ್ಲಿ ಆರು ಹಾಲಿ ಶಾಸಕರ ಹೆಸರು ಇಲ್ಲ. ಕಾಂಗ್ರೆಸ್ ಸಹ ಸದಸ್ಯ ಶರತ್ ಬಚ್ಚೇಗೌಡ ಹೊಸಕೋಟೆಯಿಂದ ಹಾಗೂ ಇತ್ತೀಚೆಗೆ ಪಕ್ಷಕ್ಕೆ ಸೇರ್ಪಡೆಯಾದ ಎಚ್.ನಾಗೇಶ್ ಮಹದೇವಪುರದಿಂದ ಸ್ಪರ್ಧಿಸಲಿದ್ದಾರೆ. ಆಕಾಂಕ್ಷಿಗಳ ವಿರೋಧದ ನಡುವೆಯೂ ರಾಜಾಜಿನಗರದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಪುಟ್ಟಣ್ಣ ಅವರಿಗೆ ಮಣೆ ಹಾಕಲಾಗಿದೆ. ಅವರು ಇತ್ತೀಚೆಗೆ ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿ ಕೈ ಪಾಳಯಕ್ಕೆ ಸೇರ್ಪಡೆಯಾಗಿದ್ದರು.

ದೇವನಹಳ್ಳಿಯಲ್ಲಿ ಕೇಂದ್ರದ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ ಅವರಿಗೆ ಅವಕಾಶ ನೀಡಲಾಗಿದೆ. ಈ ಕ್ಷೇತ್ರದಲ್ಲಿ ಸ್ಪರ್ಧಿಸಲು ಎರಡು ವರ್ಷಗಳಿಂದ ಸಿದ್ಧತೆ ಮಾಡಿಕೊಂಡಿದ್ದ ಎ.ಸಿ.ಶ್ರೀನಿವಾಸ್ ಹೆಸರನ್ನು ಟಿಕೆಟ್ ಪರಿಶೀಲನಾ ಸಮಿತಿ ಶಿಫಾರಸು ಮಾಡಿತ್ತು. ಒಂದು ವೇಳೆ, ಮುನಿಯಪ್ಪ ಅವರಿಗೆ ಟಿಕೆಟ್ ನೀಡಿದರೆ ಹುದ್ದೆಗಳಿಗೆ ರಾಜೀನಾಮೆ ನೀಡುವುದಾಗಿ ದೇವನಹಳ್ಳಿಯ ಹಲವು ಮುಖಂಡರು ಮೂರು ದಿನಗಳ ಹಿಂದೆ ಎಚ್ಚರಿಸಿದ್ದರು. ಕಳೆದ ಲೋಕಸಭಾ ಚುನಾವಣೆಯಲ್ಲಿ ಕೋಲಾರ ಕ್ಷೇತ್ರದಲ್ಲಿ ಪಕ್ಷದ ನಾಯಕರ ಒಳೇಟಿನಿಂದ ಸೋತ ಮುನಿಯಪ್ಪ ಅವರ ರಾಜ್ಯ ರಾಜಕಾರಣ ಪ್ರವೇಶಕ್ಕೆ ಹೈಕಮಾಂಡ್ ವೇದಿಕೆ ಕಲ್ಪಿಸಿದೆ. ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವ ನಾರಾಯಣ ಹಾಗೂ ಮಾಜಿ ಸಚಿವ ಎಚ್.ಸಿ.ಮಹದೇವಪ್ಪ ಹೆಸರನ್ನು ಕೆಪಿಸಿಸಿ ನಂಜನಗೂಡು ಕ್ಷೇತ್ರಕ್ಕೆ ಶಿಫಾರಸು ಮಾಡಿತ್ತು. ಧ್ರುವನಾರಾಯಣ ಕೆಲವು ದಿನಗಳ ಹಿಂದೆ ಹೃದಯಾಘಾತದಿಂದ ನಿಧನರಾಗಿದ್ದರು. ಅವರ ಪುತ್ರ ದರ್ಶನ್ ಅವರಿಗೆ ಟಿಕೆಟ್ ನೀಡಬೇಕು ಎಂದು ಕಾರ್ಯಕರ್ತರು ಪಟ್ಟು ಹಿಡಿದಿದ್ದರು. ದರ್ಶನ್ ಅವರಿಗೆ ಮಹದೇವಪ್ಪ ಸಹ ಬೆಂಬಲ ಘೋಷಿಸಿದ್ದರು. ದರ್ಶನ್ ಅವರಿಗೆ ಟಿಕೆಟ್ ಲಭಿಸಿದೆ. ಮಹದೇವಪ್ಪ ಅವರನ್ನು ಟಿ.ನರಸೀಪುರದಲ್ಲಿ ಕಣಕ್ಕೆ ಇಳಿಸಲಾಗಿದೆ. ಇಲ್ಲಿ ಮಹದೇವಪ್ಪ ಪುತ್ರ ಸುನೀಲ್ ಬೋಸ್ ಅರ್ಜಿ ಹಾಕಿದ್ದರು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಪ್ತ, ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್ ಅವರಿಗೆ ಬಸವನಗುಡಿ ಕ್ಷೇತ್ರದ ಟಿಕೆಟ್ ನೀಡಲಾಗಿದೆ. ಇತ್ತೀಚೆಗೆ ಕಾಂಗ್ರೆಸ್‌ಗೆ ಸೇರ್ಪಡೆಯಾದ ಕಿರಣ್ ಕುಮಾರ್ (ಚಿಕ್ಕನಾಯಕನಹಳ್ಳಿ), ಯು.ಬಿ. ಬಣಕಾರ್ (ಹಿರೇಕೆರೂರು) ಅವರಿಗೆ ಸಹ ಟಿಕೆಟ್ ಲಭಿಸಿದೆ.

6 ಶಾಸಕರ ಹೆಸರು ಮೊದಲ ಪಟ್ಟಿಯಲ್ಲಿಲ್ಲ

'ಕೈ' ಪಾಳಯದ ಹಾಲಿ ಶಾಸಕರು ಇರುವ ಆರು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಮೊದಲ ಪಟ್ಟಿಯಲ್ಲಿ ಕಾಣಿಸಿಕೊಂಡಿಲ್ಲ.

ಪುಲಕೇಶಿನಗರ (ಅಖಂಡ ಶ್ರೀನಿವಾಸ ಮೂರ್ತಿ), ಶಿಡ್ಲಘಟ್ಟ (ವಿ.ಮುನಿಯಪ್ಪ), ಹರಿಹರ (ಎಂ.ರಾಮಪ್ಪ), ಕುಂದಗೋಳ (ಕುಸುಮಾವತಿ ಶಿವಳ್ಳಿ), ಲಿಂಗಸುಗೂರು (ಡಿ.ಎಸ್.ಹೂಲಗೇರಿ), ಅಫಜಲಪುರ (ಎಂ.ವೈ.ಪಾಟೀಲ) ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಘೋಷಿಸಿಲ್ಲ.

ಶಿಡ್ಲಘಟ್ಟದಿಂದ ಈ ಸಲ ಕಣಕ್ಕೆ ಇಳಿಯುವುದಿಲ್ಲ ಎಂದು ಸ್ಪಷ್ಟಪಡಿಸಿರುವ ಅಲ್ಲಿನ ಶಾಸಕ ವಿ.ಮುನಿಯಪ್ಪ, ಕೋಲಾರ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಬ್ಯಾಲಹಳ್ಳಿ ಗೋವಿಂದ ಗೌಡ ಸ್ಪರ್ಧೆ ಮಾಡುವರು ಎಂದು ಈಗಾಗಲೇ ಘೋಷಿಸಿದ್ದಾರೆ. ಶಿಡ್ಲಘಟ್ಟಕ್ಕೆ ಗೋವಿಂದ ಗೌಡ ಹೆಸರನ್ನು ಪಕ್ಷದ ಟಿಕೆಟ್ ಪರಿಶೀಲನಾ ಸಮಿತಿ ಶಿಫಾರಸು ಮಾಡಿದೆ.

ಈ ನಡುವೆ, ಕೋಲಾರ ಕ್ಷೇತ್ರದಿಂದ ಸಿದ್ದರಾಮಯ್ಯ ಕಣಕ್ಕೆ ಇಳಿಯದಿದ್ದರೆ ಗೋವಿಂದಗೌಡ ಅವರನ್ನು ಆ ಕ್ಷೇತ್ರದಲ್ಲಿ ಟಿಕೆಟ್ ನೀಡಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಉತ್ಸುಕರಾಗಿದ್ದಾರೆ. ಹಾಗಾಗಿ, ಮೊದಲ ಪಟ್ಟಿಯಲ್ಲಿ ಶಿಡ್ಲಘಟ್ಟದ ಅಭ್ಯರ್ಥಿಯ ಹೆಸರನ್ನು ಘೋಷಿಸಿಲ್ಲ ಎಂದು ಮೂಲಗಳು ಹೇಳಿವೆ.

ತಮ್ಮ ಪುತ್ರನಿಗೆ ಟಿಕೆಟ್ ನೀಡುವಂತೆ ಎಂ.ವೈ. ಪಾಟೀಲ ಅವರು ಹೈಕಮಾಂಡ್‌ಗೆ ಮನವಿ ಮಾಡಿದ್ದಾರೆ. ಪುಲಕೇಶಿನಗರ, ಹರಿಹರ, ಲಿಂಗಸುಗೂರು ಹಾಗೂ ಕುಂದಗೋಳದಲ್ಲಿ ಹಾಲಿ ಶಾಸಕರಿಗೆ ಟಿಕೆಟ್ ನೀಡಿದರೆ ಗೆಲುವು ಕಷ್ಟ ಎಂದು ಪಕ್ಷದ ಆಂತರಿಕ ಸಮೀಕ್ಷೆಗಳು ಹೇಳಿವೆ. ಈ ಕ್ಷೇತ್ರಗಳಲ್ಲಿ ಮತ್ತೊಂದು ಸುತ್ತಿನ ಸಮೀಕ್ಷೆ ನಡೆಸಿ ಮುಂದಿನ ಹೆಜ್ಜೆ ಇಡಲು ಪಕ್ಷ ತೀರ್ಮಾನಿಸಿದೆ.

ತನ್ನ ಬದಲು ಪುತ್ರನಿಗೆ ಟಿಕೆಟ್ ನೀಡುವಂತೆ ಪಾವಗಡದ ಶಾಸಕ ವೆಂಕಟರಮಣಪ್ಪ ಕೋರಿಕೊಂಡಿ ದ್ದರು. ಅವರ ಪುತ್ರ ವೆಂಕಟೇಶ್ ಉಮೇದುವಾರಿಕೆಗೆ ಹೈಕಮಾಂಡ್ ಹಸಿರು ನಿಶಾನೆ ತೋರಿದೆ. ವರುಣಾದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ತಂದೆಗೆ ಕ್ಷೇತ್ರ ಬಿಟ್ಟುಕೊಟ್ಟಿದ್ದಾರೆ. ಟಿಕೆಟ್ ಬೇಡವೆಂದು ಹೇಳಿದ್ದ ನರಸಿಂಹರಾಜ ಶಾಸಕ ತನ್ವೀರ್ ಸೇಠ್ ಅವರನ್ನು ಸಮಾಧಾನಪಡಿಸಿ ಕಣಕ್ಕೆ ಇಳಿಸಲಾಗಿದೆ.

'ಬಲಗೈ' ಪ್ರಾಬಲ್ಯ

ರಾಜ್ಯದಲ್ಲಿ ಪರಿಶಿಷ್ಟ ಜಾತಿಯ 36 ಮೀಸಲು ಕ್ಷೇತ್ರಗಳಿವೆ. ಮೊದಲ ಪಟ್ಟಿಯಲ್ಲಿ 22 ಕ್ಷೇತ್ರಗಳಿಗೆ ಹುರಿಯಾಳುಗಳನ್ನು ಘೋಷಿಸಲಾಗಿದೆ. ಈ ಪೈಕಿ, ಬಲಗೈ ಒಳ ಪಂಗಡದ 12, ಎಡಗೈ ಒಳ ಪಂಗಡದ ನಾಲ್ವರು, ಲಂಬಾಣಿ ಸಮುದಾಯದ ನಾಲ್ವರು ಹಾಗೂ ಬೋವಿ ಸಮುದಾಯದ ಇಬ್ಬರಿಗೆ ಅವಕಾಶ ನೀಡಲಾಗಿದೆ.

'ಎಡಗೈ ಒಳ ಪಂಗಡದ ಮುಖಂಡರಿಗೆ 14 ಕ್ಷೇತ್ರಗಳಲ್ಲಿ ಅವಕಾಶ ನೀಡುವಂತೆ ಹೈಕಮಾಂಡ್‌ಗೆ ಮನವಿ ಮಾಡಿದ್ದೆವು. ಈಗ ನಾಲ್ಕು ಕ್ಷೇತ್ರಗಳಲ್ಲಿ ಅವಕಾಶ ನೀಡಿದ್ದಾರೆ. ಎರಡನೇ ಹಾಗೂ ಮೂರನೇ ಪಟ್ಟಿಯಲ್ಲಿ ಇನ್ನಷ್ಟು ಮಂದಿಗೆ ಅವಕಾಶ ಸಿಗುವ ನಿರೀಕ್ಷೆ ಇದೆ. ಕಳೆದ ಬಾರಿಗಿಂತ ಹೆಚ್ಚಿನ ಮಂದಿಗೆ ಟಿಕೆಟ್ ಸಿಗಲಿದೆ' ಎಂದು ಸಮುದಾಯದ ಮುಖಂಡರಾದ ಎಲ್. ಹನುಮಂತಯ್ಯ ಹಾಗೂ ಎಚ್.ಆಂಜನೇಯ ಹೇಳಿದರು.

ಮಹದೇವಪುರ ಟಿಕೆಟ್ ಗೊಂದಲ

ಮಹದೇವಪುರ ಕ್ಷೇತ್ರದ ಅಭ್ಯರ್ಥಿ ಘೋಷಣೆ ವಿಷಯದಲ್ಲಿ ಶನಿವಾರ ಬೆಳಿಗ್ಗೆ ಗೊಂದಲ ಸೃಷ್ಟಿಯಾಯಿತು.

ಈ ಕ್ಷೇತ್ರದ ಟಿಕೆಟ್ ಬಯಸಿ ನಲ್ಲೂರಹಳ್ಳಿ ನಾಗೇಶ್ (ಟಿ.ನಾಗೇಶ್), ಆನಂದ ಕುಮಾರ್ ಸೇರಿದಂತೆ 12 ಮಂದಿ ಅರ್ಜಿ ಸಲ್ಲಿಸಿದ್ದರು. ಈ ನಡುವೆ, ಮುಳಬಾಗಿಲಿನ ಪಕ್ಷೇತರ ಶಾಸಕ ಎಚ್.ನಾಗೇಶ್ ಎರಡು ತಿಂಗಳ ಹಿಂದೆ 'ಕೈ' ಪಾಳಯಕ್ಕೆ ಸೇರಿದ್ದರು. ಮಹದೇವಪುರದಲ್ಲಿ ಅವರಿಗೆ ಟಿಕೆಟ್ ನೀಡಲಾಗುವುದು ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದ್ದರು. ಪಕ್ಷದ ಟಿಕೆಟ್ ಪರಿಶೀಲನಾ ಸಮಿತಿ ಸಹ ಅವರ ಹೆಸರನ್ನು ಶಿಫಾರಸು ಮಾಡಿತ್ತು. ಶನಿವಾರ ಬೆಳಿಗ್ಗೆ ಪ್ರಕಟವಾದ ಪಟ್ಟಿಯಲ್ಲಿ ಟಿ.ನಾಗೇಶ್ ಹೆಸರಿತ್ತು. ಇದರಿಂದ ಖುಷಿಗೊಂಡ ಟಿ.ನಾಗೇಶ್ ಉಳಿದ ಆಕಾಂಕ್ಷಿಗಳಿಗೆ ಕರೆ ಮಾಡಿ, 'ಮಲ್ಲಿಕಾರ್ಜುನ ಖರ್ಗೆ ಆಶೀರ್ವಾದ ಮಾಡಿದ್ದಾರೆ. ನನಗೆ ಬೆಂಬಲ ನೀಡಬೇಕು' ಎಂದು ಕೇಳಿಕೊಂಡರು. ಈ ಬೆಳವಣಿಗೆಗಳಿಂದ ಆತಂಕಗೊಂಡ ಎಚ್.ನಾಗೇಶ್ ಅವರು ಡಿ.ಕೆ. ಶಿವಕುಮಾರ್ ಮನೆಗೆ ಧಾವಿಸಿ ಅಳಲು ತೋಡಿಕೊಂಡರು. 'ಎಚ್.ನಾಗೇಶ್ ಅವರಿಗೆ ಟಿಕೆಟ್ ನೀಡಲಾಗಿದೆ. ಪಟ್ಟಿಯಲ್ಲಿ ಸಣ್ಣ ಲೋಪವಾಗಿದೆ' ಎಂದು ಶಿವಕುಮಾರ್ ಸ್ಪಷ್ಟಪಡಿಸಿದರು.

ಎಂಟು ಕ್ಷೇತ್ರಗಳಲ್ಲಿ ತಂದೆ–ಮಕ್ಕಳಿಗೆ ಟಿಕೆಟ್

ಎಂಟು ಕ್ಷೇತ್ರಗಳಲ್ಲಿ ತಂದೆ–ಮಕ್ಕಳಿಗೆ ಟಿಕೆಟ್ ನೀಡುವ ಮೂಲಕ ಕಾಂಗ್ರೆಸ್ 'ಕುಟುಂಬ ರಾಜಕಾರಣ'ದ ಪರಂಪರೆಯನ್ನು ಮುಂದುವರಿಸಿದೆ.

ಬಿಟಿಎಂ ಲೇಔಟ್‌ನಲ್ಲಿ ರಾಮಲಿಂಗಾ ರೆಡ್ಡಿ ಹಾಗೂ ಜಯನಗರದಲ್ಲಿ ಸೌಮ್ಯಾ ರೆಡ್ಡಿ, ದೇವನಹಳ್ಳಿಯಲ್ಲಿ ಕೆ.ಎಚ್. ಮುನಿಯಪ್ಪ ಹಾಗೂ ಕೆಜಿಎಫ್‌ನಲ್ಲಿ ರೂಪಕಲಾ, ವಿಜಯನಗರದಲ್ಲಿ ಎಂ.ಕೃಷ್ಣಪ್ಪ ಹಾಗೂ ಗೋವಿಂದರಾಜನಗರದಲ್ಲಿ ಪ್ರಿಯಾಕೃಷ್ಣ, ದಾವಣಗೆರೆ ದಕ್ಷಿಣದಲ್ಲಿ ಶಾಮನೂರು ಶಿವಶಂಕರಪ್ಪ ಹಾಗೂ ದಾವಣಗೆರೆ ಉತ್ತರದಲ್ಲಿ ಎಸ್.ಎಸ್. ಮಲ್ಲಿಕಾರ್ಜುನ ಅವರಿಗೆ ಮಣೆ ಹಾಕಲಾಗಿದೆ.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಸಹೋದರ ಬಿ.ಕೆ.ಶಿವರಾಮ್ ಪುತ್ರ ರಕ್ಷಿತ್ ಶಿವರಾಮ್ ಅವರನ್ನು ಬೆಳ್ತಂಗಡಿಯಿಂದ ಕಣಕ್ಕೆ ಇಳಿಸಲಾಗಿದೆ.

ಶೀಘ್ರವೇ ಎರಡನೇ ಪಟ್ಟಿ– ಡಿ.ಕೆ.ಶಿವಕುಮಾರ್

ಬೆಂಗಳೂರು: 'ವಿಧಾನಸಭೆಗೆ ಸ್ಪರ್ಧಿಸಲಿರುವ ಪಕ್ಷದ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಮುಂದಿನ ಮೂರ್ನಾಲ್ಕು ದಿನಗಳಲ್ಲಿ ಪ್ರಕಟಿಸಲಾಗುವುದು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಶೇ 95ರಷ್ಟು ಹಾಲಿ ಶಾಸಕರಿಗೇ ಟಿಕೆಟ್ ಸಿಗಲಿದೆ. ಕೆಲವು ಕ್ಷೇತ್ರಗಳಲ್ಲಿ ಸಂಧಾನ ಮಾತುಕತೆ ನಡೆಯುತ್ತಿದ್ದು, ಎರಡನೇ ಪಟ್ಟಿಯಲ್ಲಿ ಉಳಿದ ಹೆಸರುಗಳು ಪ್ರಕಟವಾಗಲಿವೆ' ಎಂದು ತಿಳಿಸಿದರು.

'ನಂಜನಗೂಡು ಕ್ಷೇತ್ರದಲ್ಲಿ ಆರ್. ಧ್ರುವನಾರಾಯಣ ಅವರು ಸ್ಪರ್ಧಿಸಬೇಕಿತ್ತು. ಆದರೆ, ಅವರು ನಮ್ಮನ್ನು ಅಗಲಿದ್ದಾರೆ. ಹೀಗಾಗಿ, ಅವರ ಪುತ್ರನಿಗೆ ಟಿಕೆಟ್ ನೀಡಿದ್ದೇವೆ' ಎಂದರು. ವಿರೋಧದ ನಡುವೆಯೂ ಪುಟ್ಟಣ್ಣ ಅವರಿಗೆ ರಾಜಾಜಿನಗರ ಕ್ಷೇತ್ರದ ಟಿಕೆಟ್ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನಾಲ್ಕೂವರೆ ವರ್ಷಗಳ ವಿಧಾನ ಪರಿಷತ್ ಸದಸ್ಯತ್ವ ಅವಧಿ ತ್ಯಜಿಸಿ ಪುಟ್ಟಣ್ಣ ಪಕ್ಷ ಸೇರಿದ್ದಾರೆ. ಹೀಗಾಗಿ ಅವರಿಗೆ ಒಂದು ಅವಕಾಶ ಕಲ್ಪಿಸಲು ಪಕ್ಷ ತೀರ್ಮಾನಿಸಿದೆ' ಎಂದು ಸಮರ್ಥಿಸಿಕೊಂಡರು.

ಸಿದ್ದರಾಮಯ್ಯ ಅವರು ವರುಣಾ ಕ್ಷೇತ್ರದಿಂದ ಸ್ಪರ್ಧಿಸುವ ವಿಚಾರವಾಗಿ ಕೇಳಿದಾಗ, 'ಕ್ಷೇತ್ರ ಆಯ್ಕೆಯನ್ನು ಸಿದ್ದರಾಮಯ್ಯನವರ ವಿವೇಚನೆಗೆ ಬಿಡಲಾಗಿತ್ತು. ಅವರು ವರುಣಾದಿಂದ ಸ್ಪರ್ಧಿಸಲು ಇಚ್ಛಿಸಿದ್ದು, ಪಕ್ಷ ಟಿಕೆಟ್ ನೀಡಿದೆ' ಎಂದರು.

'ಕೋಲಾರ, ಬಾದಾಮಿ ಕ್ಷೇತ್ರಕ್ಕೆ ಟಿಕೆಟ್ ಘೋಷಣೆಯಾಗದ ಕಾರಣ ಸಿದ್ದರಾಮಯ್ಯ ಅವರು ಮತ್ತೊಂದು ಕ್ಷೇತ್ರದಿಂದ ಸ್ಪರ್ಧಿಸಬಹುದೇ' ಎಂಬ ಪ್ರಶ್ನೆಗೆ, 'ಈ ಪ್ರಶ್ನೆಯನ್ನು ಪಕ್ಷದ ಹೈಕಮಾಂಡ್‌ಗೆ ಕೇಳಬೇಕು' ಎಂದರು. ರಾಜಕೀಯ ದ್ವೇಷದಿಂದ ರಾಹುಲ್ ಅನರ್ಹ: 'ರಾಜಕೀಯ ದ್ವೇಷದಿಂದ ರಾಹುಲ್ ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಲಾಗಿದೆ. ನಾವು ಇದನ್ನು ಖಂಡಿಸುತ್ತೇವೆ. ನ್ಯಾಯಾಲಯದಲ್ಲಿ ಈ ವಿಚಾರವಾಗಿ ಹೋರಾಟ ಮಾಡುತ್ತೇವೆ. ನಮಗೆ ನ್ಯಾಯ ಸಿಗುವ ಭರವಸೆ ಇದೆ' ಎಂದರು.

'ಕರ್ನಾಟಕದಲ್ಲಿ ಇಬ್ಬರು ಬಿಜೆಪಿ ಶಾಸಕರು ಚೆಕ್ ಬೌನ್ಸ್ ಹಾಗೂ ಇತರ ಪ್ರಕರಣದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿದ್ದಾರೆ. ಅವರನ್ನು ಅನರ್ಹಗೊಳಿಸಿಲ್ಲ ಯಾಕೆ? ಅವರಿಗೆ ಬೇರೆ, ನಮಗೆ ಬೇರೆ ಕಾನೂನು ಇದೆಯೇ' ಎಂದೂ ಪ್ರಶ್ನಿಸಿದರು.

ಮೀಸಲಾತಿ ಬೋಗಸ್: 'ಮೀಸಲಾತಿ ಹೆಚ್ಚಳ ಬೋಗಸ್ ಘೋಷಣೆ. ರಾಜ್ಯದ ಜನರನ್ನು ಮೂರ್ಖರನ್ನಾಗಿಸುವ ಪ್ರಯತ್ನ' ಎಂದರು.

'ಮಹಿಳೆಯರಿಗೆ ಆದ್ಯತೆ ನೀಡುವ ನಿರೀಕ್ಷೆ'

ಮೈಸೂರು: 'ಮಹಿಳೆಯರಿಗೆ ಪಕ್ಷದಲ್ಲಿ ಸಮಾನ ಪ್ರಾತಿನಿಧ್ಯವಿದೆ. 2ನೇ ಪಟ್ಟಿಯಲ್ಲಿ ಹೆಚ್ಚು ಮಹಿಳೆಯರಿಗೆ ಟಿಕೆಟ್ ಸಿಗುವ ವಿಶ್ವಾಸವಿದೆ' ಎಂದು ಎಐಸಿಸಿ ಮಹಿಳಾ ಘಟಕದ ಅಧ್ಯಕ್ಷೆ ನೆಟ್ಟಾ ಡಿಸೋಜಾ ಹೇಳಿದರು. ಶನಿವಾರ ಕೆಪಿಸಿಸಿ ಮಹಿಳಾ ಕಾಂಗ್ರೆಸ್ ಕಾರ್ಯಕಾರಿಣಿ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು, ಅವರು, 'ಪಕ್ಷದಲ್ಲೇ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮಂಡಿಸಲು ಅವಕಾಶವಿದೆ. ಅದೇ ಹೋರಾಟದಲ್ಲೂ ನಾವಿದ್ದೇವೆ' ಎಂದರು.

ಲಿಂಗಾಯತರಿಗೆ 32 ಟಿಕೆಟ್

ಬೆಂಗಳೂರು: ಕಾಂಗ್ರೆಸ್ 124 ಕ್ಷೇತ್ರಗಳಿಗೆ ಘೋಷಿಸಿದ ಮೊದಲ ಪಟ್ಟಿಯಲ್ಲಿ ಜಾತಿವಾರು ಲೆಕ್ಕಾಚಾರವೂ ಗಮನ ಸೆಳೆದಿದೆ. ನಿರೀಕ್ಷೆಯಂತೆ ಲಿಂಗಾಯತ ಸಮುದಾಯದವರಿಗೆ ಹೆಚ್ಚು ಟಿಕೆಟ್ ನೀಡಲಾಗಿದೆ. ಉಳಿದಂತೆ ಒಕ್ಕಲಿಗ, ಪರಿಶಿಷ್ಟ ಜಾತಿ, ಕುರುಬ ಮತ್ತು ಮುಸ್ಲಿಂ ಸಮುದಾಯದ ಅಭ್ಯರ್ಥಿಗಳಿಗೆ ಕಾಂಗ್ರೆಸ್ ಹೈಕಮಾಂಡ್ ಮಣೆ ಹಾಕಿದೆ.

ಈ ಬಾರಿ ಲಿಂಗಾಯತ ಸಮುದಾಯ ಅಭ್ಯರ್ಥಿಗಳಿಗೆ ಹೆಚ್ಚು ಟಿಕೆಟ್ ನೀಡಬೇಕು ಎಂದು ಅಖಿಲ ಭಾರತ ಲಿಂಗಾಯತ ಮಹಾಸಭಾ ಈಗಾಗಲೇ ಕಾಂಗ್ರೆಸ್ ವರಿಷ್ಠರಲ್ಲಿ ಬೇಡಿಕೆ ಇಟ್ಟಿದೆ. ಅದಕ್ಕೆ ಪೂರಕವಾಗಿ, ಮೊದಲ ಪಟ್ಟಿಯಲ್ಲಿ ಈ ಸಮುದಾಯದ 32 ಅಭ್ಯರ್ಥಿಗಳು ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ರಾಜ್ಯದ ಒಟ್ಟು 224 ವಿಧಾನಸಭಾ ಕ್ಷೇತ್ರಗಳ ಪೈಕಿ, 36 ಅನ್ನು ಪರಿಶಿಷ್ಟ ಜಾತಿಗೆ, 15 ಕ್ಷೇತ್ರಗಳನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಲಾಗಿದೆ. ಕಾಂಗ್ರೆಸ್ ತನ್ನ ಮೊದಲ ಪಟ್ಟಿಯಲ್ಲಿ 22 ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ ಮತ್ತು 10 ಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿದೆ.

ಕಾಂಗ್ರೆಸ್ ಮೊದಲ ಪಟ್ಟಿ

ಕ್ಷೇತ್ರ	ಅಭ್ಯರ್ಥಿ
ಚಿಕ್ಕೋಡಿ–ಸದಲಗ	ಗಣೇಶ ಹುಕ್ಕೇರಿ
ಕಾಗವಾಡ	ಭರಮಗೌಡ (ರಾಜು) ಕಾಗೆ
ಕುಡಚಿ	ಮಹೇಂದ್ರ ಕೆ.ತಮ್ಮಣ್ಣನವರ
ಹುಕ್ಕೇರಿ	ಎ.ಬಿ.ಪಾಟೀಲ
ಯಮಕನಮರಡಿ	ಸತೀಶ ಜಾರಕಿಹೊಳಿ
ಬೆಳಗಾವಿ ಗ್ರಾಮೀಣ	ಲಕ್ಷ್ಮಿ ಹೆಬ್ಬಾಳಕರ
ಖಾನಾಪುರ	ಡಾ.ಅಂಜಲಿ ನಿಂಬಾಳ್ಕರ್
ಬೈಲಹೊಂಗಲ	ಮಹಾಂತೇಶ ಕೌಜಲಗಿ
ರಾಮದುರ್ಗ	ಅಶೋಕ ಎಂ.ಪಟ್ಟಣ
ಜಮಖಂಡಿ	ಆನಂದ ಸಿದ್ದು ನ್ಯಾಮಗೌಡ
ಹುನಗುಂದ	ವಿಜಯಾನಂದ ಎಸ್.ಕಾಶಪ್ಪನವರ
ಮುದ್ದೇಬಿಹಾಳ	ಅಪ್ಪಾಜಿ ಸಿ.ಎಸ್.ನಾಡಗೌಡ
ಬಸವನ ಬಾಗೇವಾಡಿ	ಶಿವಾನಂದ ಪಾಟೀಲ
ಬಬಲೇಶ್ವರ	ಎಂ.ಬಿ.ಪಾಟೀಲ
ಇಂಡಿ	ಯಶವಂತ ವಿ.ಪಾಟೀಲ
ಜೇವರ್ಗಿ	ಡಾ.ಅಜಯ್‌ಧರ್ಮಸಿಂಗ್
ಸುರಪುರ	ರಾಜ ವೆಂಕಟಪ್ಪ ನಾಯಕ್
ಶಹಾಪುರ	ಶರಣ ಬಸಪ್ಪಗೌಡ
ಚಿತ್ತಾಪುರ	ಪ್ರಿಯಾಂಕ್ ಖರ್ಗೆ
ಸೇಡಂ	ಡಾ.ಶರಣ ಪ್ರಕಾಶ ಪಾಟೀಲ
ಚಿಂಚೋಳಿ	ಸುಭಾಷ್ ವಿ ರಾಥೋಡ್
ಕಲಬುರ್ಗಿ (ಉತ್ತರ)	ಖನೀಜ್ ಫಾತಿಮಾ
ಆಳಂದ	ಬಿ.ಆರ್.ಪಾಟೀಲ
ಹುಮನಾಬಾದ್	ರಾಜಶೇಖರ್ ಬಿ.ಪಾಟೀಲ
ಬೀದರ್ (ದಕ್ಷಿಣ)	ಅಶೋಕ್ ಖೇಣಿ
ಬೀದರ್	ರಹೀಮ್ ಖಾನ್
ಭಾಲ್ಕಿ	ಈಶ್ವರ ಖಂಡ್ರೆ
ರಾಯಚೂರು ಗ್ರಾಮೀಣ	ಬಸನಗೌಡ ದದ್ದಲ್
ಮಸ್ಕಿ	ಬಸನಗೌಡ ತುರುವಿಹಾಳ್
ಕುಷ್ಟಗಿ	ಅಮರೇಗೌಡ ಪಾಟೀಲ ಬಯ್ಯಾಪುರ
ಕನಕಗಿರಿ	ಶಿವರಾಜ ತಂಗಡಗಿ
ಯಲಬುರ್ಗ	ಬಸವರಾಜ ರಾಯರಡ್ಡಿ
ಕೊಪ್ಪಳ	ಕೆ.ರಾಘವೇಂದ್ರ ಹಿಟ್ನಾಳ
ಗದಗ	ಎಚ್.ಕೆ.ಪಾಟೀಲ
ರೋಣ	ಜಿ.ಎಸ್.ಪಾಟೀಲ
ಹುಬ್ಬಳ್ಳಿ–ಧಾರವಾಡ (ಪೂರ್ವ)	ಅಬ್ಬಯ್ಯ ಪ್ರಸಾದ್
ಹಳಿಯಾಳ	ಆರ್.ವಿ.ದೇಶಪಾಂಡೆ
ಕಾರವಾರ	ಸತೀಶ ಸೈಲ್
ಭಟ್ಕಳ	ಮಾಂಕಾಳ್ ವೈದ್ಯ
ಹಾನಗಲ್	ಶ್ರೀನಿವಾಸ ವಿ.ಮಾನೆ
ಹಾವೇರಿ	ರುದ್ರಪ್ಪ ಲಮಾಣಿ
ಬ್ಯಾಡಗಿ	ಬಸವರಾಜ ಎನ್.ಶಿವಣ್ಣನವರ
ಹಿರೇಕೆರೂರ್	ಯು.ಬಿ.ಬಣಕಾರ್
ರಾಣೆಬೆನ್ನೂರು	ಪ್ರಕಾಶ್ ಕೆ.ಕೋಳಿವಾಡ
ಹಡಗಲಿ	ಪಿ.ಟಿ.ಪರಮೇಶ್ವರ ನಾಯ್ಕ್
ಹಗರಿಬೊಮ್ಮನಗಳ್ಳಿ	ಭೀಮಾ ನಾಯ್ಕ್
ವಿಜಯನಗರ	ಎಚ್.ಆರ್.ಗವಿಯಪ್ಪ
ಕಂಪ್ಲಿ	ಜೆ.ಎನ್.ಗಣೇಶ
ಬಳ್ಳಾರಿ (ಎಸ್‌ಟಿ)	ಬಿ.ನಾಗೇಂದ್ರ
ಸಂಡೂರು	ಇ.ತುಕಾರಾಮ್
ಚಳ್ಳಕೆರೆ	ಟಿ.ರಘುಮೂರ್ತಿ
ಹಿರಿಯೂರು	ಡಿ.ಸುಧಾಕರ್
ಹೊಸದುರ್ಗ	ಬಿ.ಜಿ.ಗೋವಿಂದಪ್ಪ
ದಾವಣಗೆರೆ ಉತ್ತರ	ಎಸ್.ಎಸ್.ಮಲ್ಲಿಕಾರ್ಜುನ
ದಾವಣಗೆರೆ ದಕ್ಷಿಣ	ಶಾಮನೂರು ಶಿವಶಂಕರಪ್ಪ
ಮಾಯಕೊಂಡ	ಕೆ.ಎಸ್.ಬಸವರಾಜು
ಭದ್ರಾವತಿ	ಸಂಗಮೇಶ್ವರ ಬಿ.ಕೆ.
ಸೊರಬ	ಎಸ್.ಮಧು ಬಂಗಾರಪ್ಪ
ಸಾಗರ	ಗೋಪಾಲಕೃಷ್ಣ ಬೇಳೂರು
ಬೈಂದೂರು	ಕೆ.ಗೋಪಾಲ ಪೂಜಾರಿ
ಕುಂದಾಪುರ	ಎಂ.ದಿನೇಶ ಹೆಗ್ಡೆ
ಕಾಪು	ವಿನಯಕುಮಾರ್ ಸೊರಕೆ

ಕ್ಷೇತ್ರ	ಅಭ್ಯರ್ಥಿ
ಶೃಂಗೇರಿ	ಟಿ.ಡಿ.ರಾಜೇಗೌಡ
ಚಿಕ್ಕನಾಯಕನಹಳ್ಳಿ	ಕಿರಣ್ ಕುಮಾರ್
ತಿಪಟೂರು	ಕೆ.ಷಡಕ್ಷರಿ
ತುರುವೇಕೆರೆ	ಕಾಂತರಾಜ್ ಬಿ.ಎಂ.
ಕುಣಿಗಲ್	ಡಾ.ಎಚ್.ಡಿ.ರಂಗನಾಥ್
ಕೊರಟಗೆರೆ	ಡಾ.ಜಿ.ಪರಮೇಶ್ವರ
ಶಿರಾ	ಟಿ.ಬಿ.ಜಯಚಂದ್ರ
ಪಾವಗಡ	ಎಚ್.ವಿ.ವೆಂಕಟೇಶ್
ಮಧುಗಿರಿ	ಕೆ.ಎನ್.ರಾಜಣ್ಣ
ಗೌರಿಬಿದನೂರು	ಎನ್.ಎಚ್.ಶಿವಶಂಕರ ರೆಡ್ಡಿ
ಬಾಗೇಪಲ್ಲಿ	ಎಸ್.ಎನ್.ಸುಬ್ಬಾರೆಡ್ಡಿ
ಚಿಂತಾಮಣಿ	ಡಾ.ಎಂ.ಸಿ.ಸುಧಾಕರ್
ಶ್ರೀನಿವಾಸಪುರ	ಕೆ.ಆರ್.ರಮೇಶ ಕುಮಾರ್
ಕೆಜಿಎಫ್	ರೂಪಕಲಾ ಎಂ.
ಬಂಗಾರಪೇಟೆ	ಎಸ್.ಎನ್.ನಾರಾಯಣಸ್ವಾಮಿ
ಮಾಲೂರು	ಕೆ.ವೈ.ನಂಜೇಗೌಡ
ಬ್ಯಾಟರಾಯನಪುರ	ಕೃಷ್ಣ ಬೈರೇಗೌಡ
ರಾಜರಾಜೇಶ್ವರಿನಗರ	ಕುಸುಮಾ ಎಚ್.
ಮಲ್ಲೇಶ್ವರ	ಅನೂಪ್ ಅಯ್ಯಂಗಾರ್
ಹೆಬ್ಬಾಳ	ಸುರೇಶ್ ಬಿ.ಎಸ್.
ಸರ್ವಜ್ಞನಗರ	ಕೆ.ಜೆ.ಜಾರ್ಜ್
ಶಿವಾಜಿನಗರ	ರಿಜ್ವಾನ್ ಅರ್ಷದ್
ಶಾಂತಿನಗರ	ಎನ್.ಎ.ಹ್ಯಾರಿಸ್
ಗಾಂಧಿನಗರ	ದಿನೇಶ್ ಗುಂಡೂರಾವ್
ರಾಜಾಜಿನಗರ	ಪುಟ್ಟಣ್ಣ
ಗೋವಿಂದರಾಜನಗರ	ಪ್ರಿಯಾಕೃಷ್ಣ
ವಿಜಯನಗರ	ಎಂ.ಕೃಷ್ಣಪ್ಪ
ಚಾಮರಾಜಪೇಟೆ	ಜಮೀರ್ ಅಹ್ಮದ್ ಖಾನ್
ಬಸವನಗುಡಿ	ಯು.ಬಿ.ವೆಂಕಟೇಶ್
ಬಿಟಿಎಂ ಬಡಾವಣೆ	ರಾಮಲಿಂಗಾ ರೆಡ್ಡಿ
ಜಯನಗರ	ಸೌಮ್ಯಾ ರೆಡ್ಡಿ
ಮಹದೇವಪುರ	ಎಚ್.ನಾಗೇಶ್
ಆನೇಕಲ್	ಬಿ.ಶಿವಣ್ಣ
ಹೊಸಕೋಟೆ	ಶರತ್ ಬಚ್ಚೇಗೌಡ
ದೇವನಹಳ್ಳಿ	ಕೆ.ಎಚ್.ಮುನಿಯಪ್ಪ
ದೊಡ್ಡಬಳ್ಳಾಪುರ	ಟಿ.ವೆಂಕಟರಮಣಯ್ಯ
ನೆಲಮಂಗಲ	ಎನ್.ಶ್ರೀನಿವಾಸಯ್ಯ
ಮಾಗಡಿ	ಎಚ್.ಸಿ.ಬಾಲಕೃಷ್ಣ
ರಾಮನಗರ	ಇಕ್ಬಾಲ್ ಹುಸೇನ್ ಎಚ್.ಎ.
ಕನಕಪುರ	ಡಿ.ಕೆ.ಶಿವಕುಮಾರ್
ಮಳವಳ್ಳಿ	ಪಿ.ಎಂ.ನರೇಂದ್ರಸ್ವಾಮಿ
ಶ್ರೀರಂಗಪಟ್ಟಣ	ರಮೇಶ್ ಬಂಡಿಸಿದ್ದೇಗೌಡ
ನಾಗಮಂಗಲ	ಎನ್.ಚಲುವರಾಯಸ್ವಾಮಿ
ಹೊಳೆನರಸೀಪುರ	ಶ್ರೇಯಸ್ ಎಂ.ಪಟೇಲ್
ಸಕಲೇಶಪುರ	ಮುರಳಿ ಮೋಹನ್
ಬೆಳ್ತಂಗಡಿ	ರಕ್ಷಿತ್ ಶಿವರಾಮ್
ಮೂಡುಬಿದಿರೆ	ಮಿಥುನ್ ಎಂ. ರೈ
ಮಂಗಳೂರು	ಯು.ಟಿ.ಖಾದರ್
ಬಂಟ್ವಾಳ	ಬಿ.ರಮಾನಾಥ ರೈ
ಸುಳ್ಯ	ಜಿ.ಕೃಷ್ಣಪ್ಪ
ವಿರಾಜಪೇಟೆ	ಎ.ಎಸ್.ಪೊನ್ನಣ್ಣ
ಪಿರಿಯಾಪಟ್ಟಣ	ಕೆ.ವೆಂಕಟೇಶ್
ಕೃಷ್ಣರಾಜನಗರ	ಡಿ.ರವಿಶಂಕರ್
ಹುಣಸೂರು	ಎಚ್.ಪಿ.ಮಂಜುನಾಥ್
ಎಚ್.ಡಿ.ಕೋಟೆ	ಅನಿಲ್ ಕುಮಾರ್ ಸಿ.
ನಂಜನಗೂಡು	ದರ್ಶನ್ ಧ್ರುವನಾರಾಯಣ್
ನರಸಿಂಹರಾಜ	ತನ್ವೀರ್ ಸೇಠ್
ವರುಣಾ	ಸಿದ್ದರಾಮಯ್ಯ
ಟಿ.ನರಸೀಪುರ	ಎಚ್.ಸಿ.ಮಹದೇವಪ್ಪ
ಹನೂರು	ಆರ್.ನರೇಂದ್ರ
ಚಾಮರಾಜನಗರ	ಪುಟ್ಟರಂಗ ಶೆಟ್ಟಿ
ಗುಂಡ್ಲುಪೇಟೆ	ಎಚ್.ಎಂ.ಗಣೇಶ ಪ್ರಸಾದ್

ಬಿಜೆಪಿ ಪ್ರಮುಖರ ಸಮಿತಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ಬಿಜೆಪಿ ರಾಜ್ಯ ಪ್ರಮುಖರ ಸಮಿತಿ ಸಭೆ ಭಾನುವಾರ ನಡೆಯಲಿದ್ದು, ರಾಜ್ಯದಲ್ಲಿ ಚುನಾವಣಾ ಸಿದ್ಧತೆ, ಅಭ್ಯರ್ಥಿಗಳ ಆಯ್ಕೆ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆ ನಡೆಯಲಿದೆ.

ಬೀದರ್ ಮತ್ತು ರಾಯಚೂರು ಪ್ರವಾಸ ಮುಗಿಸಿ ಭಾನುವಾರ ಸಂಜೆ ಬೆಂಗಳೂರಿಗೆ ಬಂದಿಳಿಯುವ ಅಮಿತ್ ಶಾ, ಹೋಟೆಲ್ ತಾಜ್ ವೆಸ್ಟೆಂಡ್‌ನಲ್ಲಿ ಗುಜರಾತಿ ಸಮಾಜದ ನೇತೃತ್ವದಲ್ಲಿ ಆಯೋಜಿಸಿರುವ ಅನಿವಾಸಿ ಗುಜರಾತಿಯರ ಸಮಾವೇಶದಲ್ಲಿ ಪಾಲ್ಗೊಳ್ಳುವರು. ನಂತರ ವಿಧಾನಸೌಧದ ಮುಂಭಾಗದಲ್ಲಿ ನಡೆಯುವ 'ನಮ್ಮ ಬೆಂಗಳೂರು ಹಬ್ಬ'ದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ, ಬಸವೇಶ್ವರ ಹಾಗೂ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಅನಾವರಣ ಮಾಡುವರು.

ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ರಾತ್ರಿ 8.30ರಿಂದ ನಡೆಯುವ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಪಕ್ಷದ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಸೇರಿದಂತೆ ಪ್ರಮುಖ ನಾಯಕರು ಪಾಲ್ಗೊಳ್ಳುವರು.

ಹಳೆ ಮೈಸೂರು ಭಾಗದಲ್ಲಿ ಪಕ್ಷದ ಸಂಘಟನೆಯನ್ನು ಬಲಪಡಿಸುವ ಕುರಿತು ಚರ್ಚೆ ನಡೆಯುವ ಸಾಧ್ಯತೆ ಇದೆ. ಚುನಾವಣಾ ಗೆಲುವಿಗೆ ಕಾರ್ಯತಂತ್ರ ರೂಪಿಸಲು ಸಚಿವ ಶಾ ಮಾರ್ಗದರ್ಶನ ಮಾಡಲಿದ್ದಾರೆ ಎಂದು ಮೂಲಗಳು ಹೇಳಿವೆ.

ಸಿದ್ದರಾಮಯ್ಯ ವಿರುದ್ಧ ಪ್ರಬಲ ಅಭ್ಯರ್ಥಿ ಕಣಕ್ಕೆ: ಬೊಮ್ಮಾಯಿ

ದಾವಣಗೆರೆ: 'ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಯಾವ ಕ್ಷೇತ್ರದಿಂದ ಸ್ಪರ್ಧಿಸುತ್ತಾರೆ ಎಂಬುದು ಅವರಿಗೇ ಬಿಟ್ಟ ವಿಚಾರ. ಎಲ್ಲೇ ಸ್ಪರ್ಧಿಸಿದರೂ ಬಿಜೆಪಿ ಅವರ ವಿರುದ್ಧ ಪ್ರಬಲ ಅಭ್ಯರ್ಥಿ ಕಣಕ್ಕಿಳಿಸಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಸಮಾರೋಪ ಸಮಾರಂಭದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಚುನಾವಣೆಯಲ್ಲಿ ಪಕ್ಷಕ್ಕೆ ಸ್ಪಷ್ಟ ಬಹುಮತ ದೊರೆಯಲಿದೆ' ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಏಪ್ರಿಲ್ ಮೊದಲ ವಾರದಲ್ಲಿ ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿ ಪ್ರಕಟವಾಗಲಿದೆ ಎಂದು ತಿಳಿಸಿದರು.

'ಕೋಲಾರ ಕೂಡಾ ಕೇಳಿದ್ದೇನೆ'

ಬೆಂಗಳೂರು: 'ನಾನು ವರುಣಾ ಮತ್ತು ಕೋಲಾರ ಎರಡೂ ಕಡೆ ಟಿಕೆಟ್ ಕೊಡುವಂತೆ ಹೈಕಮಾಂಡ್‌ಗೆ ಕೇಳಿದ್ದೇನೆ. ವರುಣಾ ಟಿಕೆಟ್ ಘೋಷಣೆಯಾಗಿದೆ. ಹೈಕಮಾಂಡ್ ಹೇಳಿದರೆ ಕೋಲಾರದಿಂದಲೂ ಕಣಕ್ಕಿಳಿಯುತ್ತೇನೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಶನಿವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಒಂದೇ ಹೆಸರು, ಗೊಂದಲ ಇಲ್ಲದ ಕ್ಷೇತ್ರಗಳಿಗೆ ಟಿಕೆಟ್ ಘೋಷಣೆಯಾಗಿದೆ' ಎಂದರು.

'ಆರು ಹಾಲಿ ಶಾಸಕರ ಕ್ಷೇತ್ರದಲ್ಲಿ ಹೆಚ್ಚು ಆಕಾಂಕ್ಷಿಗಳು ಇದ್ದಾರೆ. ಹೀಗಾಗಿ, ಆ ಕ್ಷೇತ್ರಗಳಿಗೆ ಘೋಷಣೆ ಆಗಿಲ್ಲ. ಎರಡನೇ ಪಟ್ಟಿಯಲ್ಲಿ ಆ ಕ್ಷೇತ್ರಗಳ ಟಿಕೆಟ್ ಘೋಷಣೆ ಆಗಲಿದೆ' ಎಂದರು.'ಟಿಕೆಟ್ ನೀಡಲು ಸಮೀಕ್ಷೆ ಒಂದೇ ಮಾನದಂಡ ಅಲ್ಲ. ಜಿಲ್ಲಾಧ್ಯಕ್ಷ, ಬ್ಲಾಕ್ ಅಧ್ಯಕ್ಷರ ಅಭಿಪ್ರಾಯವನ್ನೂ ಪಡೆದಿದ್ದೇವೆ' ಎಂದೂ ಹೇಳಿದರು.

ಸಂಕ್ಷಿಪ್ತ ಸುದ್ದಿ

ಪ್ರತ್ಯೇಕ ಪ್ರಕರಣ ₹ 1.12 ಕೋಟಿ ವಶ

ಗಂಗಾವತಿ (ಕೊಪ್ಪಳ ಜಿಲ್ಲೆ): ಗಂಗಾವತಿ ತಾಲ್ಲೂಕಿನ ಬಸವಪಟ್ಟಣದ ಬಳಿ ಶುಕ್ರವಾರ ರಾತ್ರಿ ಕಾರಿನಲ್ಲಿ ಒಯ್ಯುತ್ತಿದ್ದ ದಾಖಲೆಯಿಲ್ಲದ ₹ 60 ಲಕ್ಷ ಹಣವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ

ಕಾರು ಕೊಪ್ಪಳದಿಂದ ಗಂಗಾವತಿಗೆ ಬರುತ್ತಿತ್ತು. ನಗದು ಮೂಲ ಪರಿಶೀಲಿಸಲು ಐ.ಟಿ. ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯೋಶೋಧಾ ವಂಟಗೋಡಿ ತಿಳಿಸಿದರು.

₹ 49 ಲಕ್ಷ ವಶ (ವಿಜಯಪುರ ವರದಿ): ಮಹಾರಾಷ್ಟ್ರ ಗಡಿ ಬಳಿಯ ಧೂಳಖೇಡ ಚೆಕ್ ಪೋಸ್ಟ್ ಬಳಿ ಸೋಲಾಪುರದಿಂದ ಇಂಡಿಗೆ ದಾಖಲೆ ಇಲ್ಲದೇ ಒಯ್ಯುತ್ತಿದ್ದ ₹49 ಲಕ್ಷ ನಗದನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಕೊಪ್ಪಳ ವರದಿ: ಜಿಲ್ಲಾಧಿಕಾರಿ ಕಚೇರಿ ಬಳಿ ಗೌತಮ್ ಜೈನ್ ಹಾಗೂ ಜಿತೇಂದ್ರ ಜೈನ್ ಅವರು ದಾಖಲೆ ಇಲ್ಲದೆ ಬೈಕ್‌ನಲ್ಲಿ ಒಯ್ಯುತ್ತಿದ್ದ ₹ 3.15 ಲಕ್ಷ ಹಣವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಬಿಜೆಪಿಗೆ ಬೆಂಬಲ; 12 ಕ್ಷೇತ್ರಕ್ಕೆ ಟಿಕೆಟ್ ಕೋರಿಕೆ: ಆರ್‌ಪಿಐ

ಮೈಸೂರು: 'ಕರ್ನಾಟಕದಲ್ಲಿ ಬಿಜೆಪಿ ಬೆಂಬಲಿಸಿ ಚುನಾವಣೆ ಎದುರಿಸಲು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಅಠವಳೆ) ನಿರ್ಧರಿಸಿದ್ದು, 10ರಿಂದ 12 ಸ್ಥಾನಗಳಿಗೆ ಬೇಡಿಕೆ ಮುಂದಿಟ್ಟಿದೆ' ಎಂದು ಪಕ್ಷದ ರಾಷ್ಟ್ರೀಯ ಕಾರ್ಯಾಧ್ಯಕ್ಷ ಡಾ.ಎಂ.ವೆಂಕಟಸ್ವಾಮಿ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು, ರಾಜ್ಯವನ್ನು ಕಾಂಗ್ರೆಸ್ ಮುಕ್ತಗೊಳಿಸುವುದು ನಮ್ಮ ಗುರಿ. 12 ಸ್ಥಾನಕ್ಕೆ ಬೇಡಿಕೆ ಇದ್ದು, ಬಿಜೆಪಿ ಜೊತೆ ಪಕ್ಷದ ಅಧ್ಯಕ್ಷ ರಾಮದಾಸ್ ಅಠವಳೆ ನೇತೃತ್ವದಲ್ಲಿ ಚರ್ಚೆ ನಡೆದಿದೆ' ಎಂದು ಹೇಳಿದರು.

ಅವರದು ಅವಕಾಶವಾದಿ, ಸ್ವಾರ್ಥ ರಾಜಕಾರಣ – ದಾವಣಗೆರೆಯಲ್ಲಿ ಪ್ರಧಾನಿ ಮೋದಿ ವಾಗ್ದಾಳಿ

'ಕಾಂಗ್ರೆಸ್‌ನಿಂದ ಕರ್ನಾಟಕಕ್ಕೆ ನಷ್ಟವೇ ಹೆಚ್ಚು'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಅವಕಾಶವಾದಿ, ಸ್ವಾರ್ಥ ರಾಜಕಾರಣಕ್ಕೆ ಹೆಸರಾದ ಕಾಂಗ್ರೆಸ್ ಸರ್ಕಾರಗಳು, ಕರ್ನಾಟಕಕ್ಕೆ ಈವರೆಗೆ ಅನುಕೂಲಕ್ಕಿಂತ ಹೆಚ್ಚು ನಷ್ಟ ಉಂಟು ಮಾಡಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಆರೋಪಿಸಿದರು.

ಬಿಜೆಪಿಯ ವಿಜಯಸಂಕಲ್ಪ ಯಾತ್ರೆಯ ಸಮಾರೋಪವಾದ 'ಮಹಾಸಂಗಮ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ನೇತೃತ್ವದಲ್ಲಿ ರಚನೆಯಾಗಿದ್ದ ಸಮ್ಮಿಶ್ರ ಸರ್ಕಾರವೂ ರಾಜ್ಯದ ಅಭಿವೃದ್ಧಿಗೆ ಚಿಂತಿಸಲಿಲ್ಲ. ಇದುವರೆಗೂ ಕರ್ನಾಟಕವನ್ನು ತಮ್ಮ ತಿಜೋರಿ ಭರ್ತಿಗೆ ಬಳಸಿಕೊಂಡಿರುವ ಕಾಂಗ್ರೆಸ್ ನಾಯಕರು ಪ್ರತಿ ಚುನಾವಣೆ ಸಂದರ್ಭ ಸುಳ್ಳು ಭರವಸೆಗಳನ್ನು ನೀಡುವುದರಲ್ಲಿ ನಿಸ್ಸೀಮರಾಗಿದ್ದಾರೆ ಎಂದು ಮೂದಲಿಸಿದರು.

'ಸುಳ್ಳು ಗ್ಯಾರಂಟಿ ಕಾರ್ಡ್ ನೀಡುತ್ತಲೇ ಜನರನ್ನು ಮರುಳು ಮಾಡಿರುವ ಕಾಂಗ್ರೆಸ್, ಈಚೆಗೆ ಹಿಮಾಚಲ ಪ್ರದೇಶದ ಚುನಾವಣೆಯಲ್ಲಿ ನೀಡಿದ್ದ ಭರವಸೆಗಳ ಪೈಕಿ ಒಂದನ್ನೂ ಈಡೇರಿಸುವ ಗೋಜಿಗೆ ಹೋಗಿಲ್ಲ. ಅಂಥ ಸುಳ್ಳರಿಗೆ ಕರ್ನಾಟಕದಲ್ಲಿ ಕಾಲಿಡಲೂ ಅವಕಾಶ ನೀಡಬೇಡಿ' ಎಂದು ಮತದಾರರನ್ನು ಕೋರಿದರು.

'ನೆಚ್ಚಿನ ಮುಖಂಡನಿಗೆ ಟಿಕೆಟ್‌ಗೆ ಒತ್ತಾಯಿಸಲು ಬೆಂಗಳೂರಿಗೆ ಬಂದಿದ್ದ ಕಾರ್ಯಕರ್ತರೊಬ್ಬರ ಕೆನ್ನೆಗೆ ಕಾಂಗ್ರೆಸ್ ಮುಖಂಡರೊಬ್ಬರು ಹೊಡೆದಿರುವ ಘಟನೆ ಶುಕ್ರವಾರ ನಡೆದಿದೆ. ಕಾರ್ಯಕರ್ತನ ಕಪಾಳಕ್ಕೆ ಬಡಿದಿರುವ ಆ ನಾಯಕ, ರಾಜ್ಯದ ಜನಸಾಮಾನ್ಯರ ರಕ್ಷಣೆ ಮಾಡುತ್ತಾರಾ' ಎಂದರು.

ಕಾಂಗ್ರೆಸ್ ನಾಯಕರು ನರೇಂದ್ರ ಮೋದಿಯ 'ಸಮಾಧಿ'ಯ ಕನಸು ಕಾಣುತ್ತಿದ್ದಾರೆ. ಆದರೆ, ಕರ್ನಾಟಕದ ಮತದಾರರು 'ಮೋದಿಯ ಕಮಲವನ್ನು ಅರಳಿಸುವ ಪಣ ತೊಟ್ಟಿದ್ದಾರೆ. ಈಗ ಇಡೀ ಭಾರತ ಕರ್ನಾಟಕದತ್ತ ನೋಡುತ್ತಿದ್ದು, ಯುವಜನರ ಉಜ್ವಲ ಭವಿಷ್ಯಕ್ಕಾಗಿ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರಲು ಶ್ರಮಿಸಬೇಕು. 'ಡಬಲ್ ಎಂಜಿನ್' ಸರ್ಕಾರಕ್ಕೆ ಒತ್ತು ನೀಡುವಂತೆ ಕೋರಿದರು' ಎಂದು ಕಾರ್ಯಕರ್ತರಿಗೆ ಸೂಚಿಸಿದರು.

'ನಾನು ಮತ್ತೆ ನಿಮ್ಮ ಸೇವೆ ಮಾಡಲು ರಾಜ್ಯದಲ್ಲೂ ಬಿಜೆಪಿಗೆ ಆದ್ಯತೆ ನೀಡಬೇಕು ಎನ್ನುವ ಮೂಲಕ 2024ರ ಲೋಕಸಭೆ ಚುನಾವಣೆಗೆ ಈಗಿನಿಂದಲೇ ಸಿದ್ಧತೆ ನಡೆಸಿರುವುದನ್ನು ಮೋದಿ ಸೂಚ್ಯವಾಗಿ ತಿಳಿಸಿದರು.

ಕಾಂಗ್ರೆಸ್ ಅಧ್ಯಕ್ಷರ ಊರಿನಿಂದಲೇ ವಿಜಯೋತ್ಸವ: 'ಕಾಂಗ್ರೆಸ್‌ನ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕರ್ಮಭೂಮಿ ಕಲಬುರಗಿಯಲ್ಲೇ ಬಿಜೆಪಿಯ ಮೇಯರ್ ಆಯ್ಕೆಯಾಗಿದ್ದಾರೆ. ಅಲ್ಲಿಂದಲೇ ಬಿಜೆಪಿ ವಿಜಯೋತ್ಸವ ಆರಂಭವಾಗಿದೆ. ವಿಧಾನಸಭೆಯಲ್ಲೂ ಗೆಲುವು ದೊರೆಯಲಿದೆ ಎಂಬುದಕ್ಕೆ ಈ ಸಮಾವೇಶವೇ ಸಾಕ್ಷಿ' ಎಂದರು.

ಕಾರ್ಯಕರ್ತರ ಪ್ರತಿಕ್ರಿಯೆ ಕೋರಿದ ಪ್ರಧಾನಿ, ವಿಧಾನಸಭೆ ಚುನಾವಣೆಯಲ್ಲಿ ಪ್ರತಿ ಪ್ರತಿ ಬೂತ್‌ನಲ್ಲೂ ಪಕ್ಷದ ಗೆಲುವಿಗೆ ಶ್ರಮಿಸುವಂತೆ ಮನವಿ ಮಾಡಿದರು.



ಚಿಕ್ಕಬಳ್ಳಾಪುರ ತಾಲ್ಲೂಕಿನ ಮುದ್ದೇನಹಳ್ಳಿ ಸತ್ಯಸಾಯಿ ಗ್ರಾಮದಲ್ಲಿನ ಮಧುಸೂದನ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರಧಾನಿ ನರೇಂದ್ರ ಮೋದಿ. ಮಧುಸೂದನ ಸಾಯಿ ಜೊತೆಗಿದ್ದರು.

ಪ್ರಧಾನಿಯತ್ತ ನುಗ್ಗಲೆತ್ನಿಸಿದ ಯುವಕ

ದಾವಣಗೆರೆ: ಹೆಲಿಪ್ಯಾಡ್‌ನಿಂದ ಸಮಾವೇಶದ ಸ್ಥಳಕ್ಕೆ ತೆರೆದ ವಾಹನದಲ್ಲಿ ಸಾಗುತ್ತಿದ್ದ ಪ್ರಧಾನಿ ಮೋದಿ ಅವರತ್ತ ಯುವಕನೊಬ್ಬ ಧಾವಿಸಿದ ಘಟನೆ ನಡೆಯಿತು. ಪ್ರಧಾನಿ ಆಗಮಿಸುತ್ತಿದ್ದಂತೆಯೇ ನೂಕುನುಗ್ಗಲು ಉಂಟಾಗಿ ಬ್ಯಾರಿಕೇಡ್ ನೆಲಕ್ಕುರುಳಿತ್ತು. ಆಗ ಕೊಪ್ಪಳ ಮೂಲದ ಬಸವರಾಜ್ ಎಂಬ ಯುವಕ ಪ್ರಧಾನಿ ವಾಹನದತ್ತ ಧಾವಿಸಲು ಯತ್ನಿಸಿದ. ಕೂಡಲೇ ಪೊಲೀಸರು ಆತನನ್ನು ವಶಕ್ಕೆ ಪಡೆದರು. ಭದ್ರತಾ ಲೋಪವಾಗಿಲ್ಲ ಎಂದು ಎಸ್ಪಿ ಹೇಳಿದರು.

ವೈಟ್‌ಫೀಲ್ಡ್ ಮೆಟ್ರೊ ಸೇವೆಗೆ ಚಾಲನೆ

ಬೆಂಗಳೂರು: ಬಹುನಿರೀಕ್ಷಿತ ವೈಟ್‌ಫೀಲ್ಡ್ ಮೆಟ್ರೊ ರೈಲು ಮಾರ್ಗಕ್ಕೆ ಪ್ರಧಾನಿ ನರೇಂದ್ರ ಮೋದಿ ಶನಿವಾರ ಚಾಲನೆ ನೀಡಿದರು.

ಉದ್ಘಾಟನೆ ಬಳಿಕ ಅವರು ಮೆಟ್ರೊ ಸಿಬ್ಬಂದಿಯಿಂದ ರಾಷ್ಟ್ರೀಯ ಸಾಮಾನ್ಯ ಮೊಬಿಲಿಟಿ ಕಾರ್ಡ್ (ಎನ್‌ಸಿಎಂಸಿ) ಪಡೆದು ಪ್ರಯಾಣಿಸಿದರು. ಸಿಬ್ಬಂದಿ, ವಿದ್ಯಾರ್ಥಿಗಳೊಂದಿಗೆ ಕುಳಿತು ಮಾತುಕತೆ ನಡೆಸಿದರು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಜತೆಯಲ್ಲಿದ್ದರು.

ಸತ್ಯಸಾಯಿ ಗ್ರಾಮ ದೇಶಕ್ಕೆ ಮಾದರಿ: ಪ್ರಧಾನಿ ಶ್ಲಾಘನೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಮುದ್ದೇನಹಳ್ಳಿ ಸತ್ಯಸಾಯಿ ಗ್ರಾಮದಲ್ಲಿ ₹ 400 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಮಧುಸೂದನ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯನ್ನು ಶನಿವಾರ ಪ್ರಧಾನಿ ನರೇಂದ್ರ ಮೋದಿ ಲೋಕಾರ್ಪಣೆ ಮಾಡಿದರು.

'ಸಂಪೂರ್ಣ ಉಚಿತವಾಗಿ ವೈದ್ಯಕೀಯ ಶಿಕ್ಷಣ ನೀಡುವ ದೇಶದ ಮೊದಲ ವೈದ್ಯಕೀಯ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿರುವ ಈ ಕಾಲೇಜು ಗ್ರಾಮೀಣ ಭಾಗದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶಗಳ ಬಾಗಿಲು ತೆರೆಯಲಿದೆ.ಉಚಿತ ಶಿಕ್ಷಣದ ಮೂಲಕ ದೇಶದಲ್ಲಿ ಆಮೂಲಾಗ್ರ ಪರಿವರ್ತನೆ ತರಲಿದೆ' ಎಂದು ಪ್ರಧಾನಿ ಆಶಿಸಿದರು. ಇದಕ್ಕೂ ಮುನ್ನ ಮುದ್ದೇನಹಳ್ಳಿಯ ಸರ್ ಎಂ.ವಿಶ್ವೇಶ್ವರಯ್ಯ ಸಮಾಧಿ ಸ್ಥಳ, ಮನೆ ಹಾಗೂ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದರು.

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು

ಮುಂಬೈನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭವೊಂದರಲ್ಲಿ ನಟ ರಶ್ಮಿಕಾ ಮಂದಣ್ಣ ಪಾಲ್ಗೊಂಡಿದ್ದರು



ಅನರ್ಹತೆ: ಬಿಜೆಪಿ–ಕಾಂಗ್ರೆಸ್ ಜಟಾಪಟಿ ಬಿರುಸು

ಮಾನನಷ್ಟ ಪ್ರಕರಣವೊಂದರಲ್ಲಿ ಸೂರತ್ ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾಗಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಸಂಸತ್ ಸದಸ್ಯತ್ವ ಅನರ್ಹಗೊಂಡಿದೆ. ಅದಾನಿ ಕುರಿತು ಸಂಸತ್‌ನಲ್ಲಿ ತಾವು ಆಡಿರುವ ಮಾತಿನಿಂದಾಗಿಯೇ ತಮ್ಮನ್ನು ಅನರ್ಹಗೊಳಿಸಲಾಗಿದೆ ಎಂದು ರಾಹುಲ್ ಆಪಾದಿಸಿದ್ದಾರೆ. ಆಡಳಿತಾರೂಢ ಬಿಜೆಪಿ ಇದಕ್ಕೆ ತಿರುಗೇಟು ನೀಡಿದೆ. ಶಿಕ್ಷೆಗೆ ತಡೆಯಾಜ್ಞೆ ತರುವ ಪ್ರಯತ್ನವನ್ನೂ ಕಾಂಗ್ರೆಸ್ ಮಾಡಿಲ್ಲ, ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಲಾಭ ಮಾಡಿಕೊಳ್ಳಲು ರಾಹುಲ್ ಅನರ್ಹತೆಯನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ

‘ಅದಾನಿ ಕುರಿತ ಮಾತಿನಿಂದ ಸರ್ಕಾರಕ್ಕೆ ದಿಗಿಲು’

ನವದೆಹಲಿ (ಪಿಟಿಐ): ಸಂಸತ್ ಸದಸ್ಯತ್ವದಿಂದ ಜೀವನಪೂರ್ತಿ ಅನರ್ಹಗೊಳಿಸಿ ಅಥವಾ ಜೀವನವಿಡೀ ಜೈಲಿಗೆ ತಳ್ಳಿದರೂ ದೇಶದ ಪ್ರಜಾಸತ್ತಾತ್ಮಕ ಸ್ವರೂಪದ ರಕ್ಷಣೆಗೆ ಹೋರಾಡುವುದನ್ನು ಬಿಡುವುದಿಲ್ಲ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ದಿಗಿಲುಗೊಂಡಿರುವ ಸರ್ಕಾರವು ತಮ್ಮನ್ನು ಅನರ್ಹಗೊಳಿಸುವ ಮೂಲಕ ವಿರೋಧ ಪಕ್ಷಗಳ ಕೈಗೆ ಅಸ್ತ್ರವೊಂದನ್ನು ನೀಡಿದೆ ಎಂದೂ ಅವರು ಹೇಳಿದ್ದಾರೆ.

ಲೋಕಸಭೆಯಿಂದ ಅನರ್ಹಗೊಂಡ ಬಳಿಕ ಮೊದಲ ಬಾರಿ ಮಾಧ್ಯಮಗೋಷ್ಠಿ ಉದ್ದೇಶಿಸಿ ರಾಹುಲ್ ಅವರು ಶನಿವಾರ ಮಾತನಾಡಿದರು. ಅದಾನಿ ಪ್ರಕರಣ ಕುರಿತು ತಾವು ಮುಂದೆ ಮಾಡಬಹುದಾಗಿದ್ದ ಭಾಷಣಕ್ಕೆ ಹೆದರಿ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮನ್ನು ಅನರ್ಹಗೊಳಿಸಿದ್ದಾರೆ. ಅದಾನಿ ಪ್ರಕರಣದಲ್ಲಿ ಸರ್ಕಾರಕ್ಕೆ ಆಗಿರುವ ದಿಗಿಲಿನಿಂದ ಜನರ ಗಮನವನ್ನು ಬೇರೆಡೆ ಸೆಳೆಯುವುದಕ್ಕಾಗಿ ಈ ಇಡೀ ಆಟ ನಡೆದಿದೆ ಎಂದೂ ರಾಹುಲ್ ಆರೋಪಿಸಿದ್ದಾರೆ.

ಅದಾನಿ ಷೆಲ್ ಕಂಪನಿಗಳಲ್ಲಿ ₹20 ಸಾವಿರ ಕೋಟಿ ಹೂಡಿಕೆ ಮಾಡಿದವರು ಯಾರು ಎಂಬ ಪ್ರಶ್ನೆಯನ್ನು ಕೇಳುತ್ತಲೇ ಇರುವುದಾಗಿಯೂ ರಾಹುಲ್ ಹೇಳಿದ್ದಾರೆ.

‘ಭಾರತದ ಜನರ ಪ್ರಜಾಸತ್ತಾತ್ಮಕ ಧ್ವನಿಯನ್ನು ರಕ್ಷಿಸುವುದಕ್ಕಾಗಿ ನಾನು ಇಲ್ಲಿ ಇದ್ದೇನೆ. ಈ ಕೆಲಸವನ್ನು ಮುಂದುವರಿಸುತ್ತೇನೆ. ಅನರ್ಹತೆ, ಆರೋಪಗಳು, ಶಿಕ್ಷೆ ಮುಂತಾದ ಬೆದರಿಕೆಗಳಿಗೆ ನಾನು ಹೆದರುವುದಿಲ್ಲ. ಈ ಜನರಿಗೆ ನಾನು ಇನ್ನೂ ಅರ್ಥ ಆಗಿಲ್ಲ. ನಾನು ಅವರ ಕುರಿತು ಭೀತಿ ಹೊಂದಿಲ್ಲ’ ಎಂದು ಬಿಜೆಪಿಯ ಮೇಲೆ ವಾಗ್ದಾಳಿ ನಡೆಸಿದ್ದಾರೆ.


ರಾಹುಲ್ ಗಾಂಧಿ ಅವರು ಮಾಧ್ಯಮಗೋಷ್ಠಿ ಉದ್ದೇಶಿಸಿ ಶನಿವಾರ ಮಾತನಾಡಿದರು. ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಜೊತೆಗಿದ್ದರು —ಪಿಟಿಐ ಚಿತ್ರ

ಪ್ರಧಾನಿ ನರೇಂದ್ರ ಮೋದಿ ಮತ್ತು ಉದ್ಯಮಿ ಗೌತಮ್ ಅದಾನಿ ನಡುವಣ ನಂಟು ಏನು ಎಂಬ ಪ್ರಶ್ನೆ ಕೇಳುವುದನ್ನು ನಿಲ್ಲಿಸುವುದಿಲ್ಲ ಎಂದು ಹೇಳಿದ್ದಾರೆ.

ನನ್ನ ಮುಂದಿನ ಭಾಷಣದ ಕುರಿತು ಪ್ರಧಾನಿಗೆ ಭಯವಾಗಿದೆ. ಆ ಭಯವನ್ನು ಅವರ ಕಣ್ಣಿನಲ್ಲಿ ನಾನು ಕಂಡಿದ್ದೇನೆ. ನಾನು ಸಂಸತ್ತಿನಲ್ಲಿ ಆ ಭಾಷಣ ಮಾಡುವುದು ಅವರಿಗೆ ಬೇಕಿಲ್ಲ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

‘ಅತ್ಯಂತ ದೊಡ್ಡ ಅಸ್ತ್ರವನ್ನು ವಿರೋಧ ಪಕ್ಷಗಳಿಗೆ ಸರ್ಕಾರವು ಕೊಟ್ಟಿದೆ. ಏಕೆಂದರೆ, ಜನರ ಮನಸ್ಸಿನಲ್ಲಿ ಪ್ರಶ್ನೆ ಇದೆ. ಅದಾನಿ ಭ್ರಷ್ಟ ಎಂಬುದು ಜನರಿಗೆ ತಿಳಿದಿದೆ. ಪ್ರಶ್ನೆ ಏನು ಎಂದರೆ, ಭ್ರಷ್ಟ ವ್ಯಕ್ತಿಯನ್ನು ಪ್ರಧಾನಿ ರಕ್ಷಿಸುತ್ತಿರುವುದು ಏಕೆ ಎಂಬುದಾಗಿದೆ’ ಎಂದು ರಾಹುಲ್ ಹೇಳಿದ್ದಾರೆ.

ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಅದಾನಿಯೇ ದೇಶ, ದೇಶವೇ ಅದಾನಿ ಎಂದೂ ಅವರು ಆರೋಪಿಸಿದ್ದಾರೆ.

2019ರಲ್ಲಿ ರಾಹುಲ್ ನೀಡಿದ್ದ ಹೇಳಿಕೆಯು ಒಬಿಸಿಗಳಿಗೆ ಮಾಡಿದ ಅವಮಾನ ಎಂಬ ಬಿಜೆಪಿಯ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಅವರು, ತಾವು ಸದಾ ಭ್ರಾತೃತ್ವದ ಕುರಿತು ಮಾತನಾಡಿದ್ದೇನೆ. ಇಲ್ಲಿರುವ ವಿಷಯವು ಒಬಿಸಿ ಅಲ್ಲ, ಅದಾನಿ ಮತ್ತು ಸರ್ಕಾರದ ನಡುವಣ ನಂಟು ಎಂದು ಹೇಳಿದರು.

ನನ್ನ ಹೆಸರು ಸಾವರ್ಕರ್ ಅಲ್ಲ, ಗಾಂಧಿ ಎಂಬುದಾಗಿದೆ. ಗಾಂಧಿ ಎಂದಿಗೂ ಕ್ಷಮೆ ಯಾಚಿಸುವುದಿಲ್ಲ ಎಂದು ಹೇಳಿದ್ದಾರೆ.

ಚುನಾವಣಾ ಲಾಭಕ್ಕೆ ಅನರ್ಹತೆ ಬಳಕೆ: ಬಿಜೆಪಿ

ಪಟ್ನಾ (ಪಿಟಿಐ): ಅದಾನಿ ಪ್ರಕರಣದ ಕುರಿತು ತಾವು ಕೇಳಿದ ಪ್ರಶ್ನೆಯಿಂದ ಪ್ರಧಾನಿ ನರೇಂದ್ರ ಮೋದಿ ಭೀತರಾಗಿದ್ದಾರೆ. ಹಾಗಾಗಿ ತಮ್ಮನ್ನು ಲೋಕಸಭೆಯಿಂದ ಅನರ್ಹಗೊಳಿಸಲಾಗಿದೆ ಎಂದು ರಾಹುಲ್ ಗಾಂಧಿ ಮಾಡಿರುವ ಆರೋಪವನ್ನು ಬಿಜೆಪಿ ಮುಖಂಡ ರವಿಶಂಕರ್ ಪ್ರಸಾದ್ ಅವರು ಅಲ್ಲಗಳೆದಿದ್ದಾರೆ.

ರಾಹುಲ್ ಅವರ ಮಾಧ್ಯಮಗೋಷ್ಠಿಯ ಬಳಿಕ ರವಿಶಂಕರ್ ಪ್ರಸಾದ್ ಅವರು ಮಾಧ್ಯಮ ಪ್ರತಿನಿಧಿಗಳ ಜೊತೆಗೆ ಮಾತನಾಡಿದರು.

ಮಾನನಷ್ಟ ಪ್ರಕರಣದಲ್ಲಿ ತಪ್ಪಿತಸ್ಥ ಎಂದು ನ್ಯಾಯಾಲಯವು ತೀರ್ಪು ಪ್ರಕಟಿಸಿದ ತಕ್ಷಣವೇ ಅದಕ್ಕೆ ತಡೆಯಾಜ್ಞೆ ತರುವ ಪ್ರಯತ್ನವನ್ನು ಕಾಂಗ್ರೆಸ್ ಮಾಡಲಿಲ್ಲ. ವಿಧಾನಸಭೆಗೆ ಚುನಾವಣೆ ನಡೆಯಲಿರುವ ಕರ್ನಾಟಕದಲ್ಲಿ ಇದನ್ನು ಚುನಾವಣಾ ಲಾಭಕ್ಕೆ ಬಳಸಿಕೊಳ್ಳುವುದಕ್ಕಾಗಿ ಹೀಗೆ ಮಾಡಲಾಗಿದೆ ಎಂದು ರವಿಶಂಕರ್ ಪ್ರಸಾದ್ ಆರೋಪಿಸಿದ್ದಾರೆ.

‘ಕಾಂಗ್ರೆಸ್‌ನ ಸುಪ್ರಸಿದ್ಧ ಕಾನೂನು ತಜ್ಞರ ತಂಡದ ಸೇವೆಯನ್ನು ಉದ್ದೇಶಪೂರ್ವಕವಾಗಿಯೇ ಬಳಸಿಕೊಂಡಿಲ್ಲ ಎಂಬುದು ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಹೇಳಿಕೆಯಿಂದ ದೃಢವಾಗುತ್ತದೆ. ಕರ್ನಾಟಕದ ಚುನಾವಣೆಯನ್ನು ದೃಷ್ಟಿಯಲ್ಲಿ ಇರಿಸಿಕೊಂಡು ಹೀಗೆ ಮಾಡಲಾಗಿದೆ. ಪವನ್ ಖೇರಾ ಪ್ರಕರಣದಲ್ಲಿ ಅತ್ಯಂತ ಚುರುಕಿನಿಂದ ಕೆಲಸ ಮಾಡಿದ್ದವರು ಈ ಬಾರಿ ಹೀಗೆ ಮಾಡಿದ್ದನ್ನು ಬೇರೆ ಹೇಗೆ ಅರ್ಥ ಮಾಡಿಕೊಳ್ಳಲು ಸಾಧ್ಯ’ ಎಂದು ಅವರು ಪ್ರಶ್ನಿಸಿದ್ದಾರೆ.


ರವಿಶಂಕರ್ ಪ್ರಸಾದ್ ಅವರು ಪಟ್ನಾದಲ್ಲಿ ಮಾಧ್ಯಮ ಪ್ರತಿನಿಧಿಗಳ ಜೊತೆಗೆ ಮಾತನಾಡಿದರು —ಪಿಟಿಐ ಚಿತ್ರ

‘ನಾವು ಅದಾನಿ ಪರವಾಗಿ ಮಾಡನಾಡಲು ಇಲ್ಲಿಗೆ ಬಂದಿಲ್ಲ. ಆದರೆ, ಅನರ್ಹತೆ ಮತ್ತು ಅದಾನಿ ನಡುವೆ ನಂಟು ಇದೆ ಎಂದು ಹೇಳುವ ಮೂಲಕ ರಾಹುಲ್ ಅವರು ಜನರ ದಾರಿ ತಪ್ಪಿಸುತ್ತಿದ್ದಾರೆ. 2019ರಲ್ಲಿ ಅವರು ನೀಡಿದ್ದ ಮಾನಹಾನಿಕರ ಹೇಳಿಕೆಗೆ ಶಿಕ್ಷೆಯಾದ ಕಾರಣ ಅವರನ್ನು ಅನರ್ಹಗೊಳಿಸಲಾಗಿದೆ’ ಎಂದು ಅವರು ಹೇಳಿದ್ದಾರೆ.

ವಿರೋಧ ಪಕ್ಷದ ನಾಯಕರಾಗಿ ರಾಹುಲ್‌ಗೆ ಟೀಕಿಸುವ ಹಕ್ಕಿದೆ, ಆದರೆ ನಿಂದಿಸುವಂತಿಲ್ಲ. ಅವರ ಹೇಳಿಕೆ ವಿಮರ್ಶಾತ್ಮಕವಾಗಿರಲಿಲ್ಲ, ನಿಂದನಾತ್ಮಕವಾಗಿತ್ತು
ರವಿಶಂಕರ್ ಪ್ರಸಾದ್, ಬಿಜೆಪಿ ಮುಖಂಡ

ಅದಾನಿ ಕುರಿತು ರಾಹುಲ್ ಅವರು ಸಂಸತ್ತಿನಲ್ಲಿ ಮಾತನಾಡಿದ್ದಕ್ಕೆ ಸರ್ಕಾರ ಆತಂಕಗೊಂಡಿದೆ ಎಂಬುದನ್ನು ಅವರು ತಿರಸ್ಕರಿಸಿದ್ದಾರೆ. ರಾಹುಲ್ ಅವರ ಭಾಷಣವು ಆಧಾರರಹಿತವೂ ಅಸಂಬದ್ಧವೂ ಆಗಿತ್ತು ಎಂದು ಅವರು ಆರೋಪಿಸಿದ್ದಾರೆ.

ಅನರ್ಹಗೊಳಿಸಿರುವುದು ರಾಜಕೀಯ ದ್ವೇಷದ ನಡೆ ಎಂಬುದನ್ನು ಅವರು ತಳ್ಳಿ ಹಾಕಿದ್ದಾರೆ. ಶಿಕ್ಷೆಗೆ ಒಳಗಾದ ಹಲವು ಮುಖಂಡರು ಈ ಹಿಂದೆಯೂ ಅನರ್ಹಗೊಂಡಿದ್ದಾರೆ. ಅವರಲ್ಲಿ ಬಿಜೆಪಿಯವರೂ ಇದ್ದಾರೆ ಎಂದು ರವಿಶಂಕರ್ ಹೇಳಿದ್ದಾರೆ.

‘ತಕ್ಷಣವೇ ಮೇಲ್ಮನವಿ ಸಲ್ಲಿಸದೇ ಇರುವುದಕ್ಕೆ ಕಾಂಗ್ರೆಸ್‌ನ ಒಳ ರಾಜಕೀಯವೂ ಕಾರಣ ಆಗಿರಬಹುದು. ರಾಹುಲ್ ತೊಲಗಲಿ ಎಂಬ ಇಚ್ಛೆ ಅಲ್ಲಿ ಹಲವರಿಗೆ ಇದೆ’ ಎಂದು ಅವರು ಹೇಳಿದ್ದಾರೆ.

ರಾಹುಲ್ ಗಾಂಧಿ ಅವರನ್ನು ಸಂಸತ್ತಿನಿಂದ ಕಿತ್ತುಹಾಕಿದ್ದು ಗಾಂಧೀಜಿ ಸಿದ್ಧಾಂತಗಳು ಹಾಗೂ ಭಾರತದ ಮೌಲ್ಯಗಳಿಗೆ ಮಾಡಿದ ದೊಡ್ಡ ವಂಚನೆ
ರೋ ಖನ್ನಾ, ಭಾರತ ಮೂಲದ, ಅಮೆರಿಕದ ಸಂಸತ್ ಸದಸ್ಯ

ರಾಹುಲ್ ಬಗ್ಗೆ ಕೇರಳದ ಸಿಪಿಎಂ ಹಾಗೂ ಮುಖ್ಯಮಂತ್ರಿಯಿಂದ ದ್ವಂದ್ವ ನಿಲುವು ವ್ಯಕ್ತವಾಗಿದೆ. ರಾಹುಲ್ ಅನರ್ಹತೆ ಖಂಡಿಸಿದವರೇ ಪ್ರತಿಭಟನಕಾರರ ಮೇಲೆ ಪೊಲೀಸ್ ಕ್ರಮಕ್ಕೆ ಆದೇಶ ನೀಡಿದ್ದಾರೆ
ವಿ.ಡಿ. ಸತೀಶನ್, ಕೇರಳ ವಿಧಾನಸಭೆ ಪ್ರತಿಪಕ್ಷ ನಾಯಕ

ರಾಹುಲ್ ಅವರನ್ನು ಅನರ್ಹಗೊಳಿಸುವ ಮೂಲಕ ಭಾರತೀಯರ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮೋದಿ ಸರ್ಕಾರ ಮರಣಶಾಸನ ಬರೆದಿದೆ
ಜಾರ್ಜ್ ಅಬ್ರಹಾಂ, ಉಪಾಧ್ಯಕ್ಷ, ಕಾಂಗ್ರೆಸ್ ಸಾಗರೋತ್ತರ ಘಟಕ, ಅಮೆರಿಕ

ರಾಜಕೀಯ ದ್ವೇಷದಿಂದ ಹಿಂದೆಯೂ ದೇಶಕ್ಕೆ ಲಾಭವಾಗಿಲ್ಲ, ಈಗಲೂ ಆಗುವುದಿಲ್ಲ. ತುರ್ತುಸ್ಥಿತಿಯ ಕಾಲದಲ್ಲಿ ಏನಾಯಿತು ಎಂದು ಕಾಂಗ್ರೆಸ್, ಈಗ ಏನಾಗುತ್ತಿದೆ ಎಂದು ಬಿಜೆಪಿ ಯೋಚಿಸಬೇಕು
ಮಾಯಾವತಿ, ಬಿಎಸ್‌ಪಿ ಮುಖ್ಯಸ್ಥೆ

2 ವರ್ಷದ ಶಿಕ್ಷೆ ಅಧಿಕ. ಸಣ್ಣ ಮನಸ್ಸಿನಿಂದ ಯಾರೂ ದೊಡ್ಡವರಾಗುವುದಿಲ್ಲ ಎಂಬ ವಾಜಪೇಯಿ ಮಾತನ್ನು ಕೇಂದ್ರದ ನಾಯಕರಿಗೆ ನೆನಪಿಸಲು ಬಯಸುತ್ತೇನೆ
ಪ್ರಶಾಂತ್ ಕಿಶೋರ್, ಚುನಾವಣಾ ಕಾರ್ಯತಂತ್ರ ನಿಪುಣ

ಒಬಿಸಿ ಸಮುದಾಯಕ್ಕೆ ಅಪಮಾನ ಮಾಡಲಾಗಿದೆ ಎಂಬ ಅಸಂಬದ್ಧ ಆರೋಪಗಳ ಮೂಲಕ ಜನರ ಬುದ್ಧಿಮತ್ತೆಯನ್ನು ಅಣಕಿಸಲಾಗಿದೆ
ಕಪಿಲ್ ಸಿಬಲ್, ರಾಜ್ಯಸಭಾ ಸದಸ್ಯ

ರಾಹುಲ್ ಅವರನ್ನು ಅನರ್ಹಗೊಳಿಸುವುದು ಬಿಜೆಪಿಯ ‘ಹಳೆಯ ಗುರಿ’. ಇದರಿಂದ ಕಾಂಗ್ರೆಸ್‌ಗೆ ಲಾಭವೇ ಆಗಲಿದೆ. ಪ್ರತಿಪಕ್ಷಗಳ ಒಗ್ಗಟ್ಟಿಗೆ ಇದು ಕಾರಣವಾಗಿದೆ
ಶಶಿ ತರೂರ್, ಕಾಂಗ್ರೆಸ್ ಸಂಸದ

ಬಾಯಿ ತಪ್ಪಿ ಮಾತನಾಡುವುದು ಸಾಮಾನ್ಯ. ನಮಗೂ ಕೆಲವೊಮ್ಮೆ ಹೀಗಾಗಿದೆ. ರಾಹುಲ್ ಅವರು ತಮ್ಮ ಮಾತಿಗೆ ಕ್ಷಮೆ ಕೇಳಿದರೆ ಪ್ರಕರಣ ಮುಗಿದು ಹೋಗುತ್ತದೆ
ಹಿಮಂತ ಬಿಸ್ವ ಶರ್ಮಾ, ಅಸ್ಸಾಂ ಮುಖ್ಯಮಂತ್ರಿ

ರಾಹುಲ್ ಗಾಂಧಿ ಅವರು ನ್ಯಾಯಾಲಯದ ತೀರ್ಪು ಹಾಗೂ ಚುನಾವಣಾ ಆಯೋಗದ ನಿಯಮಗಳನ್ನು ಒಪ್ಪಿಕೊಳ್ಳದೇ ಇರುವುದು ದುರದೃಷ್ಟಕರ
ಕಾನ್ರಾಡ್ ಸಂಗ್ಮಾ, ಮೇಘಾಲಯ ಮುಖ್ಯಮಂತ್ರಿ

‘ಕೈ’ ಕಾರ್ಯಕರ್ತರ ವ್ಯಾಪಕ ಆಕ್ರೋಶ: ಬಿಜೆಪಿಯಿಂದಲೂ ಪ್ರತಿಭಟನೆ

ವಯನಾಡ್/ನಾಸಿಕ್/ಪುಣೆ/ಮುಂಬೈ (ಪಿಟಿಐ): ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರನ್ನು ಸಂಸತ್‌ನಿಂದ ಅನರ್ಹಗೊಳಿಸಿರುವುದಕ್ಕೆ ದೇಶದ ಹಲವು ಕಡೆಗಳಲ್ಲಿ ತೀವ್ರ ಖಂಡನೆ ವ್ಯಕ್ತವಾಗಿದ್ದು, ಕಾಂಗ್ರೆಸ್ ಕಾರ್ಯಕರ್ತರು ಬೀದಿಗಿಳಿದು ಶನಿವಾರ ಪ್ರತಿಭಟನೆ ನಡೆಸಿದ್ದಾರೆ. ಕೇರಳ, ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳಲ್ಲಿ ವ್ಯಾಪಕ ಪ್ರತಿಭಟನೆ ನಡೆದಿದೆ. ಕಾಂಗ್ರೆಸ್‌ಗೆ ತಿರುಗೇಟು ನೀಡಿದ ಬಿಜೆಪಿ ಹಾಗೂ ಶಿವಸೇನಾ (ಶಿಂದೆ ಬಣ) ಕಾರ್ಯಕರ್ತರು ‘ಒಬಿಸಿ’ ಸಮುದಾಯಕ್ಕೆ (ಇತರ ಹಿಂದುಳಿದ ವರ್ಗ) ರಾಹುಲ್ ಗಾಂಧಿ ಅಪಮಾನ ಮಾಡಿದ್ದಾರೆ ಎಂದು ಆರೋಪಿಸಿ ಪ್ರತಿಭಟನೆ ನಡೆಸಿದರು.

ರಾಹುಲ್ ಅವರು ಲೋಕಸಭೆಯಲ್ಲಿ ಪ್ರತಿನಿಧಿಸುತ್ತಿದ್ದ ಕೇರಳದ ವಯನಾಡ್‌ನ ಕಾಂಗ್ರೆಸ್ ಪಕ್ಷದ ಯುವ ಹಾಗೂ ವಿದ್ಯಾರ್ಥಿ ಘಟಕದ ಕಾರ್ಯಕರ್ತರು ಭಾರಿ ಪ್ರತಿಭಟನೆ ನಡೆಸಿದರು. ಪ್ರಧಾನಿ ನರೇಂದ್ರ ಮೋದಿ ಅವರ ಪ್ರತಿಕೃತಿಯನ್ನು ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ಕೇರಳ ರಾಜಭವನಕ್ಕೆ ಸೋಮವಾರ ಪ್ರತಿಭಟನಾ ಜಾಥಾ ಹಮ್ಮಿಕೊಳ್ಳಲಾಗಿದೆ.



ರಾಹುಲ್ ಅನರ್ಹತೆ ಖಂಡಿಸಿ ಭೋಪಾಲ್‌ನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಮಹಾರಾಷ್ಟ್ರದ ಮುಂಬೈ, ನಾಸಿಕ್, ಪುಣೆ, ಠಾಣೆ ನಗರಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಶನಿವಾರ ಪ್ರತಿಭಟನೆ ನಡೆಸಿದರು. ನಾಸಿಕ್‌ನ ಶಿವಾಜಿ ರಸ್ತೆಯ ಅಂಬೇಡ್ಕರ್ ಪ್ರತಿಮೆಯ ಎದುರು ಘೋಷಣೆಗಳನ್ನು ಕೂಗಲಾಯಿತು. ಪುಣೆಯ ಕಾಂಗ್ರೆಸ್ ಘಟಕದಿಂದ ಸಹಿ ಸಂಗ್ರಹ ನಡೆಯಿತು. ಒಬಿಸಿ ಸಮುದಾಯಗಳಿಗೆ ನೋವಾಗುವ ಹೇಳಿಕೆ ನೀಡಿರುವ ರಾಹುಲ್ ಗಾಂಧಿ ಅವರು ಕ್ಷಮೆ ಕೇಳಬೇಕು ಎಂದು ಆಗ್ರಹಿಸಿ ಮುಂಬೈನ ಬಿಜೆಪಿ ಘಟಕ ಪ್ರತಿಭಟನೆ ನಡೆಸಿತು.

ಪ್ರಧಾನಿ ನರೇಂದ್ರ ಮೋದಿ ಅವರು ಒಬಿಸಿ ಸಮುದಾಯಕ್ಕೆ ಸೇರಿದವರು.

ಅನರ್ಹತೆ ತಕ್ಷಣ ಜಾರಿ ಪ್ರಶ್ನಿಸಿ ಅರ್ಜಿ

ಪ್ರಜಾಪ್ರಾತಿನಿಧ್ಯ ಕಾಯ್ದೆಯಡಿ ತಪ್ಪಿತಸ್ಥನಾದ ಜನಪ್ರತಿನಿಧಿಯು ತಕ್ಷಣ ಅನರ್ಹತೆಗೆ ಒಳಗಾಗುವುದನ್ನು ಪ್ರಶ್ನಿಸಿ ಕೇರಳದ ಸಾಮಾಜಿಕ ಕಾರ್ಯಕರ್ತೆ ಅಭಾ ಮುರಳೀಧರನ್ ಅವರು ಶನಿವಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ರಾಹುಲ್ ಗಾಂಧಿ ಅವರ ವಿರುದ್ಧ ಪ್ರಕಟವಾದ ತೀರ್ಪು ಹಾಗೂ ತಕ್ಷಣ ಅವರ ಸಂಸತ್ ಸದಸ್ಯತ್ವ ರದ್ದು ಮಾಡಿದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕೋರ್ಟ್‌ಗೆ ತುರ್ತಾಗಿ ಅರ್ಜಿ ಸಲ್ಲಿಸಲಾಗಿದೆ ಎಂದು ಅರ್ಜಿದಾರರು ಹೇಳಿದ್ದಾರೆ.

ತಕ್ಷಣ ಅನರ್ಹತೆಗೆ ಕಾರಣವಾಗುವ 1951ರ ಪ್ರಜಾಪ್ರಾತಿನಿಧ್ಯ ಕಾಯ್ದೆ ಸೆಕ್ಷನ್ 8 (3) ಅಕ್ರಮ ಎಂದು ಘೋಷಿಸಬೇಕು ಎಂದು ಅರ್ಜಿದಾರರು ಕೋರಿದ್ದಾರೆ. ತಕ್ಷಣಕ್ಕೆ ಅನರ್ಹಗೊಳಿಸುವುದರಿಂದ ಮತ ಹಾಕಿದ ಕ್ಷೇತ್ರದ ಜನರ ಪರವಾಗಿ ಕೆಲಸ ಮಾಡುವುದಕ್ಕೆ ಅಡ್ಡಿ ಆಗುತ್ತದೆ. ಇದು ಪ್ರಜಾಪ್ರಭುತ್ವದ ತತ್ವಗಳಿಗೆ ವಿರುದ್ಧವಾದುದು ಎಂದು ಅವರು ಪ್ರತಿಪಾದಿಸಿದ್ದಾರೆ.

ಕಾಂಗ್ರೆಸ್‌ನಿಂದ ದಿನವಿಡೀ ಸತ್ಯಾಗ್ರಹ ಇಂದು

ರಾಹುಲ್ ಗಾಂಧಿ ಅವರಿಗೆ ಬೆಂಬಲ ಸೂಚಿಸಲು ದೇಶದಾದ್ಯಂತ ಭಾನುವಾರ ಇಡೀ ದಿನ ಸತ್ಯಾಗ್ರಹ ನಡೆಸಲು ಕಾಂಗ್ರೆಸ್ ಮುಂದಾಗಿದೆ. ಎಲ್ಲ ರಾಜ್ಯಗಳು ಹಾಗೂ ಎಲ್ಲ ಜಿಲ್ಲಾ ಕೇಂದ್ರಗಳ ಗಾಂಧಿ ಪ್ರತಿಮೆ ಬಳಿ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಸತ್ಯಾಗ್ರಹ ನಡೆಯಲಿದೆ. ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ದೆಹಲಿಯ ರಾಜ್‌ಘಾಟ್‌ನ ಸತ್ಯಾಗ್ರಹದಲ್ಲಿ ಭಾಗಿಯಾಗಲಿದ್ದಾರೆ.

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ
ಮುಂಬೈನಲ್ಲಿ ಶನಿವಾರ ನಡೆದ ಪ್ರಚಾರ ಕಾರ್ಯಕ್ರಮವೊಂದರಲ್ಲಿ ಬಾಲಿವುಡ್ ನಟಿ ಕರೀನಾ ಕಪೂರ್ ಪಾಲ್ಗೊಂಡಿದ್ದರು



ಬೆಂಗಳೂರು ಇನ್ನು ದೇಶದ ಎರಡನೇ ದೊಡ್ಡ ಮೆಟ್ರೊ ಜಾಲ • ಒಟ್ಟು 69.66 ಕಿ.ಮೀ. ಉದ್ದದ ಮಾರ್ಗ

ವೈಟ್‌ಫೀಲ್ಡ್‌ಗೆ ಮೆಟ್ರೊ ರೈಲು ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿರುವ ವೈಟ್‌ಫೀಲ್ಡ್ ಮೆಟ್ರೊ ರೈಲು ಮಾರ್ಗದಲ್ಲಿ ಭಾನುವಾರದಿಂದ ಸಂಚಾರ ಆರಂಭವಾಗಲಿದೆ.

ವೈಟ್‌ಫೀಲ್ಡ್ ನಿಲ್ದಾಣದಲ್ಲಿ ಉದ್ಘಾಟನೆ ಮಾಡಿದ ಮೋದಿ ಅವರು, ಅಲ್ಲಿಂದ ಹೋಪ್ ಫಾರ್ಮ್ ಚನ್ನಸಂದ್ರ, ಕಾಡುಗೋಡಿ ಟ್ರೀ ಪಾರ್ಕ್, ಪಟ್ಟಂದೂರು ಅಗ್ರಹಾರದ ಮೂಲಕ ಸಾಗಿ ಸತ್ಯಸಾಯಿ ಹಾಸ್ಪಿಟಲ್ ತನಕ ಪ್ರಯಾಣ ಮಾಡಿದರು. ಲೋಕೊ ಪೈಲೆಟ್ ಪಿ.ಪ್ರಿಯಾಂಕಾ ಅವರು ಪ್ರಧಾನಿ ಪ್ರಯಾಣಿಸಿದ ಮೆಟ್ರೊ ರೈಲು ಚಾಲನೆ ಮಾಡಿದರು.


ಅಲ್ಲಿಂದ ಮತ್ತೆ ವೈಟ್‌ಫೀಲ್ಡ್ ತನಕ ರೈಲಿನಲ್ಲೇ ಮರಳಿದರು. ಆ ರೈಲನ್ನು ಲೋಕೊ ಪೈಲೆಟ್ ಪ್ರಿಯಾಂಕಾ ಬಳ್ಳಾರಿ ಅವರು ಚಾಲನೆ ಮಾಡಿದರು. ಎರಡೂ ರೈಲನ್ನೂ ಮಹಿಳಾ ಲೋಕೊ ಪೈಲೆಟ್‌ಗಳೇ ಚಾಲನೆ ಮಾಡಿದ್ದು ವಿಶೇಷ.

ನೇರಳೆ ಮಾರ್ಗದ ಪೂರ್ವ ಭಾಗದ ವಿಸ್ತರಿತ ಮಾರ್ಗ ಇದಾಗಿದ್ದು, 13.71 ಕಿಮೀ ಉದ್ದದ ಮಾರ್ಗವು ಐಟಿ ಕಾರಿಡಾರ್‌ಗೆ ನಗರವನ್ನು ಬೆಸೆಯುತ್ತದೆ. ನಿತ್ಯ ಒಂದೂವರೆ ಲಕ್ಷ ಪ್ರಯಾಣಿಕರು ಈ ಮಾರ್ಗವನ್ನು ಬಳಕೆ ಮಾಡಬಹುದು ಎಂದ ನಿರೀಕ್ಷೆ ಮಾಡಲಾಗಿದೆ.

ಹಸಿರು ಮಾರ್ಗ 30 ಕಿಲೋ ಮೀಟರ್ ಇದ್ದರೆ, ನೇರಳ ಮಾರ್ಗ 25.60 ಕಿ.ಮೀ ಇತ್ತು. ಶನಿವಾರ ವೈಟ್‌ಫೀಲ್ಡ್ ತನಕ ಮೆಟ್ರೊ ರೈಲು ಸಂಚರಿಸಿದ್ದರಿಂದ ಮೆಟ್ರೊ ಮಾರ್ಗದ ಜಾಲ 69.66 ಕಿಲೋ ಮೀಟರ್ ಆದಂತಾಗಿದೆ.

ದೇಶದಲ್ಲೇ ಅತಿ ದೊಡ್ಡ ಮೆಟ್ರೊ ಜಾಲ ಹೊಂದಿರುವ ನಗರ ಎಂದರೆ ದೆಹಲಿಯಾಗಿದ್ದು, ಎರಡನೇ ಸ್ಥಾನದಲ್ಲಿ ಹೈದರಾಬಾದ್ ಇತ್ತು. ಈಗ ಬೆಂಗಳೂರಿನ 'ನಮ್ಮ ಮೆಟ್ರೊ' ಹೈದರಾಬಾದ್ ಅನ್ನು ಹಿಂದಿಕ್ಕಿ ಎರಡನೇ ಸ್ಥಾನಕ್ಕೆ ಜಿಗಿದಿದೆ.





ಮೆಟ್ರೊ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಮೆಟ್ರೊ ಮಾರ್ಗ ನಿರ್ಮಾಣ ಕೆಲಸ ಮಾಡಿದ್ದ ಕಾರ್ಮಿಕರೊಂದಿಗೆ ಕುಶಲೋಪರಿ ನಡೆಸಿದರು (ಎಡ ಚಿತ್ರ) ವೈಟ್‌ಫೀಲ್ಡ್ ಮೆಟ್ರೊ ರೈಲು ಮಾರ್ಗದಲ್ಲಿ ಶನಿವಾರ ಸಂಚರಿಸಿದ ಮೊದಲ ರೈಲು –ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ನಿರ್ಮಾಣ ಕಾರ್ಮಿಕರೊಂದಿಗೆ ಕುಶಲೋಪರಿ

ಮೆಟ್ರೊ ರೈಲು ಮಾರ್ಗದ ನಿರ್ಮಾಣ ಕಾಮಗಾರಿ ನಿರ್ವಹಿಸಿದ ಕಾರ್ಮಿಕರ ಜೊತೆಯಲ್ಲೇ ಕುಳಿತು ಪ್ರಧಾನಿ ಪ್ರಯಾಣ ಮಾಡಿದರು.

ಐವರು ಕಾರ್ಮಿಕರ ಮಧ್ಯದಲ್ಲಿ ಕುಳಿತು ಅವರೊಂದಿಗೆ ಕುಶಲೋಪರಿ ನಡೆಸಿದರು. ಪ್ರಧಾನಿಯೊಂದಿಗೆ ಪ್ರಯಾಣಿಸಿದ ಕಾರ್ಮಿಕರು ಪುಳಕಿತರಾದರು. ಮಹಿಳಾ ಲೋಕೊ ಪೈಲೆಟ್‌ಗಳ ಜತೆಯೂ ಪ್ರಧಾನಿ ಸಮಾಲೋಚನೆ ನಡೆಸಿದರು. ವಿದ್ಯಾರ್ಥಿಗಳೊಂದಿಗೆ ನಿಂತು ಪ್ರಧಾನಿ ಪ್ರಯಾಣಿಸಿದರು.

ವೈಟ್‌ಫೀಲ್ಡ್ ನಿಲ್ದಾಣದ ಬಳಿ ನೆರೆದಿದ್ದ ಸಾವಿರಾರು ಮಂದಿ ಬಿಜೆಪಿ ಬೆಂಬಲಿಗರು ಪ್ರಧಾನಿ ಅವರನ್ನು ಸ್ವಾಗತಿಸಿದರು.

ಬಿಎಂಟಿಸಿಯಿಂದ 195 ಫೀಡರ್ ಬಸ್

ನೇರಳೆ ಮಾರ್ಗವನ್ನು ವೈಟ್‌ಫೀಲ್ಡ್ ತನಕ ವಿಸ್ತರಣೆ ಮಾಡಿದ್ದರೂ ಪೂರ್ಣಪ್ರಮಾಣದಲ್ಲಿ ಈ ಮಾರ್ಗದ ಕಾಮಗಾರಿ ಪೂರ್ಣಗೊಂಡಿಲ್ಲ.

ಬೈಯಪ್ಪನಹಳ್ಳಿಯಿಂದ ಕೆ.ಆರ್.ಪುರ ನಡುವೆ ಮೂರು ಕಿಲೋ ಮೀಟರ್‌ನಷ್ಟು ಕಾಮಗಾರಿ ಪ್ರಗತಿಯಲ್ಲಿದೆ. 195 ಬಸ್‌ಗಳನ್ನು ಈ ಮಾರ್ಗದಲ್ಲಿ ಫೀಡರ್ ಸೇವೆಯಾಗಿ ಬಿಎಂಟಿಸಿ ಒದಗಿಸಿದೆ.

ಬೈಯಪ್ಪನಹಳ್ಳಿ ಮತ್ತು ಕೆ.ಆರ್.ಪುರ ನಡುವೆ ಬೆನ್ನಿಗಾನಹಳ್ಳಿ ನಿಲ್ದಾಣ ಇದೆ. ಉಳಿಕೆ ಕಾಮಗಾರಿ ಇನ್ನು ಮೂರು ತಿಂಗಳಲ್ಲಿ ಪೂರ್ಣಗೊಳಿಸಲು ಬಿಎಂಆರ್‌ಸಿಎಲ್ ತಯಾರಿ ಮಾಡಿಕೊಂಡಿದೆ.



ವೈಟ್‌ಫೀಲ್ಡ್ ಮೆಟ್ರೊ ರೈಲು ನಿಲ್ದಾಣದಿಂದ ಹೊರಟ ಮೊದಲ ರೈಲು

ಬೆಂಗಳೂರಿಗೆ ಎನ್‌ಸಿಎಂಸಿ ಕಾರ್ಡ್

ರಾಷ್ಟ್ರೀಯ ಸಾಮಾನ್ಯ ಮೊಬಿಲಿಟಿ ಕಾರ್ಡ್ (ಎನ್‌ಸಿಎಂಸಿ) ಬಳಕೆಗೆ ಈ ಮಾರ್ಗದಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಮಾರ್ಚ್ 30ರಿಂದ ಈ ಕಾರ್ಡ್ ಬಳಸಬಹುದಾಗಿದೆ.

ಬೆಂಗಳೂರಿನಲ್ಲಿ ಮೊದಲ ಬಾರಿಗೆ ಈ ಕಾರ್ಡ್ ಪರಿಚಯಿಸಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರು ಶನಿವಾರ ಮೊದಲ ಕಾರ್ಡ್ ಬಳಸಿ ಪ್ರಯಾಣ ಮಾಡಿದರು.

ಈ ಕಾರ್ಡ್ ಪಡೆಯದೇ ಬಂದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಇನ್ನೇನು ಪ್ರವೇಶ ದಾಟಬೇಕು ಎನ್ನುವಷ್ಟರಲ್ಲಿ ಅದರ ರೆಕ್ಕೆಗಳು ಬಿಚ್ಚಿಕೊಂಡು, ತಡೆಯೊಡ್ಡಿದವು. ಹಿಂದೆ ಇದ್ದ ಅಧಿಕಾರಿಗಳು ಬೇರೆ ಕಡೆಯಿಂದ ಗೇಟ್ ತೆಗೆದು ಅವರನ್ನು ಕರೆದುಕೊಂಡು ಹೋದರು.

ಪ್ರಯಾಣಿಕರು ಈ ಕಾರ್ಡ್ ಬಳಕೆ ಮಾಡಲು ಕೌಂಟರ್‌ಗಳನ್ನು ತೆರೆಯಬೇಕಿದ್ದು, ಮೂರ್ನಾಲ್ಕು ದಿನಗಳ ಕಾಲಾವಕಾಶ ಬೇಕು ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ತಿಳಿಸಿದರು.

ವಾಣಿಜ್ಯ ಸಂಚಾರ ಇಂದಿನಿಂದ

ಬೆಳಿಗ್ಗೆ 7 ಗಂಟೆಯಿಂದ ವೈಟ್‌ಫೀಲ್ಡ್ ಮತ್ತು ಕೆ.ಆರ್.ಪುರ ನಡುವೆ ರೈಲುಗಳ ಕಾರ್ಯಾಚರಣೆ ಮಾಡಲಿವೆ. ಕೊನೆಯ ರೈಲು ಎರಡೂ ನಿಲ್ದಾಣಗಳಿಂದ ರಾತ್ರಿ 11 ಗಂಟೆಗೆ ಹೊರಡಲಿವೆ. ಸೋಮವಾರದಿಂದ ಬೆಳಿಗ್ಗೆ 5 ಗಂಟೆಯಿಂದಲೇ ಕಾರ್ಯಾಚರಣೆ ಆರಂಭವಾಗಲಿದೆ.

ಈ ಭಾಗದಲ್ಲಿ ಪ್ರಯಾಣಿಸುವ ಜನ ಪ್ರತ್ಯೇಕ ಟೋಕನ್‌ಗಳು, ಮೊಬೈಲ್ ಕ್ಯೂಆರ್ ಟಿಕೆಟ್‌ಗಳನ್ನು ಖರೀದಿಸಿ ಪಯಣಿಸಬಹುದು. ಸ್ಮಾರ್ಟ್ ಕಾರ್ಡ್ ಹೊಂದಿರುವವರು ಕೂಡ ಪ್ರಯಾಣ ಮಾಡಬಹುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಬದಲಿ ಮಾರ್ಗದಲ್ಲಿ ದಟ್ಟಣೆ

ಬೆಂಗಳೂರು: ವೈಟ್‌ಫೀಲ್ಡ್–ಕೆ.ಆರ್.ಪುರ ಮೆಟ್ರೊ ರೈಲು ಮಾರ್ಗದ ಉದ್ಘಾಟನೆಗೆ ಆಗಮಿಸಿದ್ದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸಂಚರಿಸುತ್ತಿದ್ದ ರಸ್ತೆಯಲ್ಲಿ ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಿದ್ದರಿಂದ, ಬದಲಿ ಮಾರ್ಗದಲ್ಲಿ ಕೆಲ ಹೊತ್ತು ದಟ್ಟಣೆ ಉಂಟಾಯಿತು.

ವರ್ತೂರು ಕೋಡಿಯಿಂದ ಕನ್ನಮಂಗಲ ಗೇಟ್, ಚನ್ನಸಂದ್ರದಿಂದ ಹೂಡಿ ವೃತ್ತ, ಕುಂದಲಹಳ್ಳಿ ರಸ್ತೆಯಿಂದ ಬಿಗ್ ಬಜಾರ್ ಜಂಕ್ಷನ್‌ವರೆಗೆ ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ನಿರ್ಬಂಧಿಸಲಾಗಿತ್ತು.

ವರ್ತೂರು ಕೋಡಿಯಿಂದ ಕುಂದಲಹಳ್ಳಿ ಸೇತುವೆ ಮಾರ್ಗವಾಗಿ ಹಳೇ ಏರ್‌ಪೋರ್ಟ್ ರಸ್ತೆ, ಚನ್ನಸಂದ್ರ ವೃತ್ತದಿಂದ ಇಮ್ಮಡಿಹಳ್ಳಿ– ಹಗದೂರು ಮಾರ್ಗವಾಗಿ ವರ್ತೂರು ಕೋಡಿ, ಕಾಟಂನಲ್ಲೂರು ಕ್ರಾಸ್‌ನಿಂದ ಕಾಡುಗೋಡಿ ನಾಲಾ ರಸ್ತೆ ಮೂಲಕ ಚನ್ನಸಂದ್ರ, ಹೂಡಿಯಿಂದ ಕುಂದಲಹಳ್ಳಿ, ಅಯ್ಯಪ್ಪ ನಗರ– ಕಾಟಂನಲ್ಲೂರು ಕ್ರಾಸ್‌ವರೆಗೆ ಪರ್ಯಾಯ ಮಾರ್ಗ ನಿಗದಿಪಡಿಸಲಾಗಿತ್ತು. ಈ ಪರ್ಯಾಯ ಮಾರ್ಗಗಳಲ್ಲಿ ದಟ್ಟಣೆ ಕಂಡುಬಂತು.

ಪ್ರತಿ ರಸ್ತೆಯಲ್ಲೂ ಭದ್ರತೆಗೆ ಪೊಲೀಸರನ್ನು ನಿಯೋಜಿಸಲಾಗಿತ್ತು. ಮೋದಿ ಆಗಮನ ಹಾಗೂ ನಿರ್ಗಮನದ ವೇಳೆ ಒಳರಸ್ತೆಗಳಲ್ಲಿ ಜನರ ವಾಹನಗಳನ್ನು ತಡೆದು ನಿಲ್ಲಿಸಲಾಯಿತು. ಈ ಸಂದರ್ಭದಲ್ಲೂ ದಟ್ಟಣೆ ಹೆಚ್ಚಿತ್ತು. ಮೋದಿ ನಿರ್ಗಮನದ ನಂತರ, ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಯಿತು.

ಭಾರಿ ವಾಹನಗಳ ಸಂಚಾರವನ್ನು ಬೆಳಿಗ್ಗೆಯಿಂದ ಸಂಜೆಯವರೆಗೆ ನಿರ್ಬಂಧಿಸಿದ್ದ-ರಿಂದ ಕೆಲ ಮಾರ್ಗಗಳಲ್ಲಿ ದಟ್ಟಣೆ ಸ್ವಲ್ಪ ಕಡಿಮೆ ಇತ್ತು.

ಅಮಿತ್ ಶಾ ಭೇಟಿ: ದಟ್ಟಣೆ ಸಾಧ್ಯತೆ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾನುವಾರ (ಮಾರ್ಚ್ 26) ನಗರಕ್ಕೆ ಭೇಟಿ ನೀಡಲಿದ್ದು, ಅವರು ಸಂಚರಿಸುವ ಮಾರ್ಗದಲ್ಲಿ ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ದಟ್ಟಣೆ ಉಂಟಾಗುವ ಸಾಧ್ಯತೆ ಇದೆ.

'ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 8 ಗಂಟೆವರೆಗಿನ ಅವಧಿಯಲ್ಲಿ ಬಳ್ಳಾರಿ ರಸ್ತೆ, ಹೆಬ್ಬಾಳ ವೃತ್ತ, ಮೇಖ್ರಿ ವೃತ್ತ, ಕಾವೇರಿ ಚಿತ್ರಮಂದಿರ ವೃತ್ತ, ರಾಜಭವನ ರಸ್ತೆ, ಇನ್ಫೆಂಟ್ರಿ ರಸ್ತೆ, ಕಬ್ಬನ್ ರಸ್ತೆ, ನೃಪತುಂಗ ರಸ್ತೆ, ಕ್ವೀನ್ಸ್ ರಸ್ತೆ, ಕೆ.ಆರ್. ವೃತ್ತ, ಹಡ್ಸನ್ ವೃತ್ತ, ಎನ್. ಆರ್. ವೃತ್ತ, ಪುರಭವನ ಎದುರು, ಹಳೇ ಏರ್‌ಪೋರ್ಟ್ ರಸ್ತೆ, ಎಎಸ್‌ಸಿ ಕೇಂದ್ರ ಹಾಗೂ ಇಸ್ರೊ ಜಂಕ್ಷನ್ ರಸ್ತೆಯಲ್ಲಿ ಅಮಿತ್ ಶಾ ಸಂಚರಿಸಲಿದ್ದಾರೆ.'

'ಸಚಿವರು ಹಾದು ಹೋಗುವ ಸಂದರ್ಭದಲ್ಲಿ ಪ್ರಮುಖ ರಸ್ತೆ ಹಾಗೂ ಕೆಲ ಒಳರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ಸಂಚಾರ ತಡೆಯಲಾಗುವುದು. ಹೀಗಾಗಿ, ದಟ್ಟಣೆ ಉಂಟಾಗುವ ಸಾಧ್ಯತೆ ಇದೆ. ಸಾರ್ವಜನಿಕರು ಬದಲಿ ಮಾರ್ಗದಲ್ಲಿ ಸಂಚರಿಸಬೇಕು' ಎಂದು ಪೊಲೀಸರು ಹೇಳಿದ್ದಾರೆ.



ಪ್ರಶಸ್ತಿ ಪ್ರದಾನ

ನಗರದಲ್ಲಿ ಶನಿವಾರ ತೆಲುಗು ವಿಜ್ಞಾನ ಸಮಿತಿ ಹಮ್ಮಿಕೊಂಡಿದ್ದ 70ನೇ ಯುಗಾದಿ ಆಚರಣೆ ಸಮಾರಂಭದಲ್ಲಿ ಕನ್ನಡದ ನಟ ಶ್ರೀನಾಥ್ ಮತ್ತು ತೆಲುಗು ಕಲಾವಿದ ದಂಪತಿ ಡಾ.ರಾಜಶೇಖರ್ ಹಾಗೂ ಜೀವಿತಾ ರಾಜಶೇಖರ್ ಅವರಿಗೆ ಶ್ರೀಕೃಷ್ಣದೇವರಾಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ, ತೆಲುಗು ವಿಜ್ಞಾನ ಸಮಿತಿ ಅಧ್ಯಕ್ಷ ಡಾ.ಎ. ರಾಧಾಕೃಷ್ಣರಾಜು, ಉಪಾಧ್ಯಕ್ಷ ಆದಿಕೇಶವುಲು ನಾಯ್ಡು ಇದ್ದಾರೆ

ಐಪಿಎಲ್ ಅಭ್ಯಾಸ ಪಂದ್ಯ: ವಾಹನ ನಿಲುಗಡೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಟಾಟಾ ಐಪಿಎಲ್ ಕ್ರಿಕೆಟ್ ಅಭ್ಯಾಸ ಪಂದ್ಯ ನಡೆಯಲಿದ್ದು, ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ ಮಾರ್ಚ್ 26ರಂದು ಹಲವು ರಸ್ತೆಗಳಲ್ಲಿ ಸಾರ್ವಜನಿಕರ ವಾಹನ ನಿಲುಗಡೆ ನಿರ್ಬಂಧಿಸಲಾಗಿದೆ.

'ಕ್ವೀನ್ಸ್ ರಸ್ತೆ, ಎಂ.ಜಿ. ರಸ್ತೆ, ರಾಜಭವನ ರಸ್ತೆ, ಸೆಂಟ್ರಲ್ ಸ್ಟ್ರೀಟ್, ಸೇಂಟ್ ಮಾರ್ಕ್ಸ್ ರಸ್ತೆ, ಮ್ಯೂಸಿಯಂ ರಸ್ತೆ, ಕಸ್ತೂರಬಾ ರಸ್ತೆ, ವಿಧಾನಸೌಧ–ಹೈಕೋರ್ಟ್ ಎದುರಿನ ರಸ್ತೆ, ಟ್ರಿನಿಟಿ ರಸ್ತೆ, ಲ್ಯಾವೆಲ್ಲೆ ರಸ್ತೆ, ವಿಠ್ಠಲ್ ಮಲ್ಯ ರಸ್ತೆ, ನೃಪತುಂಗ ರಸ್ತೆಯಲ್ಲಿ ಸಂಜೆ 4 ಗಂಟೆಯಿಂದ ರಾತ್ರಿ 10 ಗಂಟೆವರೆಗೆ ವಾಹನಗಳ ನಿಲುಗಡೆ ನಿರ್ಬಂಧಿಸಲಾಗಿದೆ' ಎಂದು ಸಂಚಾರ ಪೊಲೀಸರು ಹೇಳಿದ್ದಾರೆ.

'ಪಂದ್ಯ ವೀಕ್ಷಿಸಲು ಬರುವ ಜನರು ತಮ್ಮ ವಾಹನಗಳನ್ನು ಸೇಂಟ್ ಜೋಸೆಫ್ ಇಂಡಿಯಾ ಸ್ಕೂಲ್ ಮೈದಾನ್, ಯು.ಬಿ ಸಿಟಿ ಹಾಗೂ ಶಾಂತಿನಗರ ಬಿಎಂಟಿಸಿ ಬಸ್ ನಿಲ್ದಾಣದ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಬಹುದು' ಎಂದಿದ್ದಾರೆ.

ಭವಿಷ್ಯ ನಿಧಿಯ ಅದಾಲತ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭವಿಷ್ಯ ನಿಧಿಯ 'ನಿಧಿ ಆಪ್ ಕೆ ನಿಕಟ್' ಅದಾಲತ್' ಕೇಂದ್ರೀಯ ಸದನದ ಶ್ರುತಿ ಆಡಿಟೋರಿಯಂನಲ್ಲಿ ಮಾರ್ಚ್ 27ರಂದು ಬೆಳಿಗ್ಗೆ 9 ಗಂಟೆಗೆ ನಡೆಯಲಿದೆ.

ನೋಂದಣಿದಾರರು, ಉದ್ಯೋಗದಾತರು ಮತ್ತು ವಿನಾಯಿತಿ ಪಡೆದ ಸಂಸ್ಥೆಗಳು, ಕಂಪನಿಗಳು ಭವಿಷ್ಯ ನಿಧಿ ಮತ್ತು ಪಿಂಚಣಿಯ ಕುರಿತು ದೀರ್ಘಕಾಲದಿಂದ ಎದುರಿಸುತ್ತಿ-ರುವ ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.



ತಮಿಳುನಾಡಿನ ಸೇಲಂ ಸೆಂಟ್ರಲ್ ಕಾನೂನು ಕಾಲೇಜಿನಲ್ಲಿ ನಡೆದ ಪ್ರೊ.ಆರ್‌ವಿ. ಧನಪಾಲನ್ ರಾಷ್ಟ್ರೀಯ ಅಣುಕು ನ್ಯಾಯಾಲಯ ಸ್ಪರ್ಧೆಯಲ್ಲಿ ಭಾಗವಹಿಸಿ ಅಂತಿಮ ಸುತ್ತಿನ ರನ್ನರ್ ಆಫ್ ಪ್ರಶಸ್ತಿ ಪಡೆದಿದ್ದ ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜಿನ ವಿದ್ಯಾರ್ಥಿಗಳಾದ ಆಶಲ್ ಮೆನೆಜಸ್, ಕೆ ಎಂ. ನವೋದಿತ, ಹಪ್ಸಾ ಎಂ.ಜೆಡ್ ಅವರನ್ನು ಪ್ರಾಂಶುಪಾಲ ಪ್ರೊ. ಡಾ. ಸುರೇಶ್ ವಿ. ನಾಡಗೌಡರ, ವಿಭಾಗದ ಮುಖ್ಯಸ್ಥ ಪ್ರೊ.ವಿ. ಸುದೇಶ, ಪ್ರಾಧ್ಯಾಪಕರಾದ ಪ್ರೊ.ಡಾ. ಎನ್ ದಶರಥ್, ಡಾ.ಎನ್ ಸತೀಶ್‌ಗೌಡ, ಡಾ.ಜ್ಯೋತಿ ವಿಶ್ವನಾಥ್, ಡಾ. ಎಲ್ ಚಂದ್ರ ಕಾಂತಿ ಅಭಿನಂದಿಸಿದರು

'ಛಾಯಾಗ್ರಾಹಕ ತಂತ್ರಜ್ಞಾನಕ್ಕೆ ಹೊಂದಿಕೊಳ್ಳಬೇಕು'

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಸಂವಾದದಲ್ಲಿ ಸೆಂಥಿಲ್ ಕುಮಾರ್ ಅಭಿಮತ

• ವಿನಾಯಕ್ ಕೆ.ಎಸ್.

ಬೆಂಗಳೂರು: ಚಲನಚಿತ್ರ ಛಾಯಾಗ್ರಹಣ 'ಸೆಲ್ಯುಲಾಯ್ಡ್'ನಿಂದ 'ಡಾಲ್ಬಿ ವಿಷನ್ಸ್‌ಗೆ' ಬಂದು ನಿಂತಿದೆ. ಕ್ಯಾಮೆರಾ ಕೆಲಸವಿಂದು ಸಂಪೂರ್ಣವಾಗಿ ಡಿಜಿಟಲ್ ಆಗಿದ್ದು, ಛಾಯಾಗ್ರಾಹಕ ಕಾಲಕ್ಕೆ ತಕ್ಕಂತೆ ತಂತ್ರಜ್ಞಾನದೊಂದಿಗೆ ಹೊಂದಿಕೊಂಡು ಹೋಗಬೇಕು ಎಂದು 'ಆರ್‌ಆರ್‌ಆರ್' ಚಿತ್ರದ ಛಾಯಾಗ್ರಾಹಕ ಕೆ.ಕೆ.ಸೆಂಥಿಲ್ ಕುಮಾರ್ ಹೇಳಿದರು.

ಬೆಂಗಳೂರು 14ನೇ ಅಂತರ ರಾಷ್ಟ್ರೀಯ ಚಲನಚಿತ್ರೋತ್ಸ-ವದ ಸಂವಾದದಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಡಾಲ್ಬಿ ವಿಷನ್ಸ್ ಎಂದರೆ ಲಂಡನ್‌ನ ಡಾಲ್ಬಿ ಸಂಸ್ಥೆ ಅಭಿ-ವೃದ್ಧಿಗೊಳಿಸಿದ ವಿಡಿಯೊ ತಂತ್ರಜ್ಞಾನ. ಇದರಲ್ಲಿ ಸಿನಿಮಾದ ದೃಶ್ಯಗಳು ಈಗಿನ 4ಕೆ, 6ಕೆ ತಂತ್ರಜ್ಞಾನಗಳಿಗಿಂತ ಭಿನ್ನ ಅನುಭವ ನೀಡುತ್ತವೆ. ಆಸ್ಕರ್ ಪ್ರಶಸ್ತಿ ವಿಜೇತ 'ಆರ್‌ಆರ್‌ಆರ್' ಈ ತಂತ್ರಜ್ಞಾ-ನದಲ್ಲಿ ಚಿತ್ರೀಕರಣಗೊಂಡ ಭಾರತದ ಮೊದಲ ಚಿತ್ರ' ಎಂದರು.

ಅದ್ದೂರಿ ಸಿನಿಮಾದ ಚಿತ್ರೀಕರಣದ ವೇಳೆ ಒಬ್ಬ ಛಾಯಾಗ್ರಾಹಕ ಎದುರಿಸುವ ಸವಾಲು, ಮಾಡಿಕೊಳ್ಳ-ಬೇಕಾದ ಸಿದ್ಧತೆಗಳ ಕುರಿತು ಅವರು ಮಾತನಾಡಿದರು.

'ಆರ್‌ಆರ್‌ಆರ್' ಚಿತ್ರದ ದೃಶ್ಯಗಳನ್ನು ಅನೇಕ ವಿದೇಶಿ ಛಾಯಾಗ್ರಾಹಕರು ಮೆಚ್ಚಿಕೊಂಡಿ-ರುವುದನ್ನು ಉಲ್ಲೇಖಿಸಿದ ಅವರು, 'ಒಂದು ಕಾಲಕ್ಕೆ ಹಾಲಿವುಡ್‌ನ ಲೈಟಿಂಗ್, ಕ್ಯಾಮೆರಾಗಳು ನಮಗೆ ಮಾದರಿಯಾಗಿತ್ತು. ನಮ್ಮಲ್ಲಿಯೂ ಈಗ ಅಲ್ಲಿನ ಎಲ್ಲ ತಂತ್ರಜ್ಞಾನಗಳು ಲಭ್ಯವಿದ್ದು, ಅಲ್ಲಿನವರು ನಮ್ಮನ್ನು ಗಮನಿಸುವ ರೀತಿಯ ಕೆಲಸ ಮಾಡಬೇಕು. 'ಆರ್‌ಆರ್‌ಆರ್'ಗೆ ಆಸ್ಕರ್ ಬಂದಿರುವುದು ಅವರೆಲ್ಲರೂ ಭಾರತೀಯ ಚಿತ್ರರಂಗದತ್ತ ತಿರುಗಿನೋಡುವಂತಾಗಿ-ದೆ' ಎಂದರು.

'ನಿರ್ದೇಶಕನ ದೃಷ್ಟಿಕೋನಕ್ಕೆ ಹೊಂದಿಕೊಂಡು ದೃಶ್ಯಗಳನ್ನು ಸೆರೆ ಹಿಡಿಯುವುದು ಛಾಯಾಗ್ರಾಹಕನ ಎದುರಿಗಿರುವ ಸವಾಲು. ವಿಎಫ್‌ಎಕ್ಸ್, ಕಲರ್ ಗ್ರೇಡಿಂಗ್‌ನಂತಹ ತಂತ್ರಜ್ಞಾನ-ಗಳು ಇಂದು ಚಿತ್ರೀಕರಣದ ಪ್ರಕ್ರಿಯೆ-ಯನ್ನು ಮೊದಲಿಗಿಂತ ಸುಲಭವಾಗಿಸಿವೆ. ಮೊದಲಿನಂತೆ ರೀಲುಗಳನ್ನು ಹಿಡಿದುಕೊಂಡು ಸ್ಟುಡಿಯೊಗಳಿಗೆ ಸುತ್ತಾಡಬೇಕಿಲ್ಲ' ಎಂದರು.

ಬಾಲಿವುಡ್ ಛಾಯಾಗ್ರಾಹಕ ರವಿ ಕೆ.ಚಂದರ್ ಅವರು ಬಾಲಿವುಡ್ ಛಾಯಾಗ್ರಾಹಕ ರವಿ ಕೆ.ಚಂದರ್ ಅವರು, 20 ವರ್ಷಗಳ ಹಿಂದಿನ ಕ್ಯಾಮೆರಾ ತಂತ್ರಜ್ಞಾನಕ್ಕೂ, ಇಂದಿನ ತಂತ್ರಜ್ಞಾನಕ್ಕೂ ಇರುವ ವ್ಯತ್ಯಾಸ, ದೃಶ್ಯಗಳ ಬೆಳಕಿನ ಸಂಯೋಜನೆಯಲ್ಲಿ ಮಾಡಿಕೊಳ್ಳಬೇಕಾದ ಬದಲಾವಣೆಗಳ ಕುರಿತು ವಿವರಿಸಿದರು. ಕಲರ್ ಗ್ರೇಡಿಂಗ್ ಎಂಬುದು ಹೇಗೆ ದೃಶ್ಯಗಳ ನೋಟ ಮತ್ತು ಅನುಭವವನ್ನು ಬದಲಿಸಬಹುದು ಎಂಬ ಮಾಹಿತಿ ನೀಡಿದರು.

ಹಿರಿಯ ಛಾಯಾಗ್ರಾಹಕ ಜಿ.ಎಸ್. ಭಾಸ್ಕರ್ ಅವರು, 'ಭಾರತೀಯ ಛಾಯಾಗ್ರಹಣ ಇತಿಹಾಸದಲ್ಲಿ ವಿ.ಕೆ. ಮೂರ್ತಿ, ಸುಬ್ರತ ಮಿತ್ರ ಅವರ ಕೊಡುಗೆ ಸ್ಮರಿಸಿದರು.



ಬೆಂಗಳೂರು 14ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ವಿಚಾರಗೋಷ್ಠಿಯಲ್ಲಿ ಛಾಯಾಗ್ರಾಹಕರಾದ ಜಿ.ಎಸ್.ಭಾಸ್ಕರ್, ಕೆ.ಕೆ. ಸೆಂಥಿಲ್ ಕುಮಾರ್, ರವಿ ಕೆ. ಚಂದರ್, ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾದ ಅಶೋಕ್ ಕಶ್ಯಪ್ ಭಾಗವಹಿಸಿ ಮಾತನಾಡಿದರು

ಕನಸಿನ ನಗರ ಕಟ್ಟಲು ಕೆಪಿಸಿಸಿ ಅಪಾರ್ಟ್‌ಮೆಂಟ್ ಘಟಕ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಸ್ಥಿರ ಮತ್ತು ವಿಶ್ವ ದರ್ಜೆಯ ನಗರವಾಗಿ ಬೆಂಗಳೂರನ್ನು ಪರಿವರ್ತಿಸುವ ಗುರಿ ಸೇರಿದಂತೆ, ಕನಸಿನ ನಗರ ಕಟ್ಟಲು ಕೆಪಿಸಿಸಿ ಅಪಾರ್ಟ್‌ಮೆಂಟ್ ಘಟಕ ಕೆಲಸ ಮಾಡಲಿದೆ. ಆ ಮೂಲಕ ಅಪಾರ್ಟ್‌ಮೆಂಟ್ ನಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಗಟ್ಟಿ ದನಿಯಾಗಲಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಹೋಟೆಲ್ ಶಾಂಗ್ರಿ- ಲಾದಲ್ಲಿ ಶನಿವಾರ ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಶನ್‌ಗಳು ಮತ್ತು ಕೆಪಿಸಿಸಿ ಅಪಾರ್ಟ್‌ಮೆಂಟ್ ಘಟಕ ಆಯೋಜಿಸಿದ್ದ ಅಪಾರ್ಟ್‌ಮೆಂಟ್ ನಿವಾಸಿಗಳು ಮತ್ತು ಮಾಲೀಕರ ಜೊತೆಗಿನ ಸಂವಾದ ಕಾರ್ಯಕ್ರಮದ-ಲ್ಲಿ ಅವರು ಮಾತನಾಡಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ, ಕಾಂಗ್ರೆಸ್ ಸರ್ಕಾರ ಬೆಂಗಳೂರಿಗೆ ನೀಡಿದ ಕೊಡುಗೆಗಳ ಬಗ್ಗೆ ವಿವರಿಸಿದರು. ಮುಂಬರುವ ಚುನಾವಣೆಗೆ ಬೆಂಗಳೂರಿಗೆ ಪ್ರತ್ಯೇಕ ಪ್ರಣಾಳಿಕೆ ನೀಡುವುದಾಗಿ ತಿಳಿಸಿದರು.

'ಉತ್ತಮ ತ್ಯಾಜ್ಯ ನಿರ್ವಹಣಾ ವ್ಯವಸ್ಥೆ, ವೈಜ್ಞಾನಿಕ ಕಸ ವಿಲೇವಾರಿ, ಮೆಟ್ರೋ ಸೇರಿದಂತೆ ಇತರ ಸಾರಿಗೆ ವ್ಯವಸ್ಥೆಗಳಿಗೆ ಲಿಂಕ್ ವ್ಯವಸ್ಥೆ, ಅಪಾರ್ಟ್‌ಮೆಂಟ್ ಸಂಕೀರ್ಣಗಳ ಸುತ್ತ ಮೂಲಸೌಕರ್ಯ ವ್ಯವಸ್ಥೆ ಸುಧಾರಿಸಲು ಈ ಘಟಕವು ಸ್ಥಳೀಯ ಅಧಿಕಾರಿಗಳ ಜೊತೆ ಸೇರಿ ಕೆಲಸ ಮಾಡಲಿದೆ. ಅಪಾರ್ಟ್‌ಮೆಂಟ್ ಕುರಿತಂತೆ ಸರ್ಕಾರದ ಕಾನೂನುಗಳು, ನೀತಿ ನಿರೂಪಣೆ ವೇಳೆ ಸಲಹೆ ಸೂಚನೆಗಳನ್ನು ನೀಡುವ ಕೆಲಸವನ್ನೂ ಮಾಡಲಿದೆ. ಈ ಉದ್ದೇಶದಿಂದ 'ಅಪಾರ್ಟ್‌ಮೆಂಟ್ ಮಿತ್ರ' ಎಂಬ ಮುಕ್ತ ಸಂವಾದ ಕಾರ್ಯಕ್ರಮವನ್ನು ಆರಂಭಿಸಲಾಗಿದೆ' ಎಂದರು.

ಶಾಸಕರಾದ ರಾಮಲಿಂಗಾ ರೆಡ್ಡಿ, ಕೃಷ್ಣ ಬೈರೇಗೌಡ, ರಿಜ್ವಾನ್ ಅರ್ಷದ್, ಕೆಪಿಸಿಸಿ ಮಾಧ್ಯಮ ವಿಭಾಗದ ಸಹ ಅಧ್ಯಕ್ಷ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷ ಮನ್ಸೂರ್ ಅಲಿಖಾನ್, ವಿಧಾನ ಪರಿಷತ್ ಸದಸ್ಯ ಗೋವಿಂದರಾಜು, ಕೆಪಿಸಿಸಿ ಸಂಶೋಧನಾ ವಿಭಾಗದ ಸಹ ಅಧ್ಯಕ್ಷ ರಘು ದೊಡ್ಡೇರಿ, ಮಾಜಿ ಮೇಯರ್ ಸಂಪತ್ ಕುಮಾರ್ ಮುಂತಾದವರು ಸಂವಾದದಲ್ಲಿ ಭಾಗವಹಿಸಿದರು.

ಕೆಪಿಸಿಸಿ ಅಪಾರ್ಟ್‌ಮೆಂಟ್ ಘಟಕ ಅಧ್ಯಕ್ಷರಾದ ಪ್ರೊ. ಎಂ.ವಿ. ರಾಜೀವ್ ಗೌಡ ಸಂವಾದ ಕಾರ್ಯಕ್ರಮ ನಡೆಸಿಕೊಟ್ಟರು.

11 ಜಿಲ್ಲೆ ಮಕ್ಕಳಿಗೆ 'ಕ್ಷೀರ ಭಾಗ್ಯ' ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಷೀರಭಾಗ್ಯ ಯೋಜನೆಯಲ್ಲಿ ನೀಡುವ ಹಾಲು ರಾಜ್ಯದ 11 ಜಿಲ್ಲೆಗಳ ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ ಜನವರಿಯಿಂದ ವಿತರಣೆಯಾಗಿಲ್ಲ.

ದಕ್ಷಿಣ ಕನ್ನಡ, ಉಡುಪಿ, ಬೆಳಗಾವಿ, ವಿಜಯಪುರ, ಗದಗ, ಉತ್ತರ ಕನ್ನಡ, ಬೀದರ್, ಯಾದಗಿರಿ, ಬಳ್ಳಾರಿ, ವಿಜಯನಗರ, ಕೊಪ್ಪಳ ಜಿಲ್ಲೆಗಳ ಮಕ್ಕಳಿಗೆ ಹಾಲು ಸರಬರಾಜಿನಲ್ಲಿ ವ್ಯತ್ಯಯವಾಗಿದೆ. ಪ್ರತಿ ಕೆ.ಜಿ. ಹಾಲಿನ ಪುಡಿಗೆ ಸರ್ಕಾರ ₹ 275 ನಿಗದಿ ಮಾಡಿತ್ತು. ಬೆಲೆ ಹೆಚ್ಚಿಸಬೇಕು ಎಂಬ ಕೆಎಂಎಫ್‌ನ ಬೇಡಿಕೆಗೆ ಸ್ಪಂದಿಸಿದ್ದ ಸರ್ಕಾರ ₹ 25 ಹೆಚ್ಚಳ ಮಾಡಿತ್ತು. ಆದರೂ, ಶಾಲೆಗಳಿಗೆ ವಿತರಿಸಬೇಕಿದ್ದ ಹಾಲಿನ ಪುಡಿಯನ್ನು ಸಿಹಿತಿಂಡಿಗಳು, ಐಸ್‌ಕ್ರೀಂ ಮತ್ತು ಇತರ ಉತ್ಪನ್ನ-ಗಳನ್ನು ತಯಾರಿಸಲು ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್) ಬಳಕೆ ಮಾಡಿಕೊಂಡಿದೆ ಎಂಬ ದೂರುಗಳೂ ಇವೆ.

'ಸಿಹಿ ಪದಾರ್ಥಗಳ ತಯಾರಿಕೆಗೆ ಬಳಸಿಕೊಂಡಿಲ್ಲ. ಸ್ಥಳೀಯ ಮಟ್ಟದಲ್ಲಿ ಹಾಲು ಸಂಗ್ರಹಣೆಯ ಕೊರತೆಯಿದೆ. ದಿನಕ್ಕೆ ಸುಮಾರು 18 ಲಕ್ಷ ಲೀಟರ್‌ಗೆ ಬೇಡಿಕೆ ಇದೆ. 14 ಲಕ್ಷ ಲೀಟರ್ ಪೂರೈಸಲು ಸಾಧ್ಯವಾಗುತ್ತಿದೆ' ಎಂದು ಕೆಎಂಎಫ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಬೆಲೆ ಏರಿಕೆಯ ನಂತರವೂ ನಿರೀಕ್ಷೆಗೆ ತಕ್ಕಂತೆ ಹಾಲು ಪೂರೈಕೆ ಯಾಗುತ್ತಿಲ್ಲ. ತಕ್ಷಣ ಪೂರೈಕೆಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೇವೆ. ಸ್ಥಳೀಯ ಮಟ್ಟದಲ್ಲಿ ಸರಿದೂಗಿಸಲು ಪ್ರಯತ್ನಿಸುತ್ತಿದ್ದೇವೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತ ಆರ್.ವಿಶಾಲ್ ಪ್ರತಿಕ್ರಿ-ಯಿಸಿದರು.

'ಫೆಬ್ರುವರಿವರೆಗೆ ಶೇ 70ರಷ್ಟು ಬೇಡಿಕೆಯನ್ನು ಪೂರೈಸಿದ್ದೇವೆ. ಈಗ ಹಾಲಿನ ಸಂಗ್ರಹಣೆಯಲ್ಲಿ 2 ಲಕ್ಷ ಲೀಟರ್‌ಗಳಷ್ಟು ಹೆಚ್ಚಳವಾಗಿದೆ. ಸರಬರಾಜು ಮುಂದುವರಿಸುತ್ತೇವೆ' ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ.ಸತೀಶ್ ಹೇಳಿದರು.

ಕಮಲ ಪಾಳಯಕ್ಕೆ ಸೇರಿದ ಜೆಡಿಎಸ್ ವಾರ್ಡ್‌ನ ಮಾಜಿ ಅಧ್ಯಕ್ಷ ಆನಂದ್ ಮತ್ತು ಸಂಗಡಿಗರು

ಮಲ್ಲಸಂದ್ರ: ಬಿಜೆಪಿಗೆ ನೂರಕ್ಕೂ ಹೆಚ್ಚು ಜನರು ಸೇರ್ಪಡೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಮಲ್ಲಸಂದ್ರದ ಯದುನಂದನ ಬಯಲು ರಂಗಮಂ-ದಿರದಲ್ಲಿ ಜೆಡಿಎಸ್ ವಾರ್ಡ್‌ನ ಮಾಜಿ ಅಧ್ಯಕ್ಷ ಆನಂದ್ ಮತ್ತು ಸಂಗಡಿಗರು ಬೃಹತ್ ಬಿಜೆಪಿ ಸೇರ್ಪಡೆ ಕಾರ್ಯಕ್ರಮ ಆಯೋಜಿಸಿದ್ದರು.

ಈ ಸಂದರ್ಭದಲ್ಲಿ ಜೆಡಿಎಸ್‌ನ ಆನಂದ್ ಸೆರಿದಂತೆ ನೂರಕ್ಕೂ ಹೆಚ್ಚು ಜನರು ಬಿಜೆಪಿಗೆ ಸೇರ್ಪಡೆಯಾದರು.

'ಅಭಿವೃದ್ಧಿ ಹೆಸರಲ್ಲಿ ಲೂಟಿ ಮಾಡುತ್ತಿರುವ ಜೆಡಿಎಸ್ ಶಾಸಕನನ್ನು ಜನತೆ ಮನೆ ಕಡೆ ಮಂಜಣ್ಣ ಮಾಡಲಿದ್ದಾರೆ. ಕ್ಷೇತ್ರದ ಬೇಸತ್ತ ಜೆಡಿಎಸ್ ಕಾರ್ಯಕರ್ತರು ಬಿಜೆಪಿ ಸೇರ್ಪಡೆಯಾಗುತ್ತಿದ್ದಾರೆ' ಎಂದು ಮಾಜಿ ಶಾಸಕ ಎಸ್. ಮುನಿರಾಜು ತಿಳಿಸಿದರು.

ಕ್ಷೇತ್ರಕ್ಕೆ ಕಾವೇರಿ ನೀರು ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದೂ ಸೇರಿದಂತೆ ಹಲವು ಕೆಲಸಗಳನ್ನು ತಾವು ಮಾಡಿರುವುದಾಗಿ ಹೇಳಿಕೊಂಡರು.

ಬಿಬಿಎಂಪಿ ಮಾಜಿ ಸದಸ್ಯೆ ಶಶಿ ಶಿವಕುಮಾರ್, ಟಿಎಸ್ ಗಂಗರಾಜು, ದಾಸರಹಳ್ಳಿ ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಟಿ. ಶಿವಕುಮಾರ್, ಡಿ.ಕೆ ಮಹೇಶ್, ವಿನೋದ್ ಗೌಡ, ಎಂ.ಆರ್. ಶ್ರೀನಿವಾಸ್, ಮಲ್ಲಸಂದ್ರ ವಾರ್ಡ್ ಬಿಜೆಪಿ ಅಧ್ಯಕ್ಷರಾದ ಗಂಗರಾಜು, ನಾಗಭೂಷಣ್, ರಘು, ಮಾರುತಿ, ಲಕ್ಕಪ್ಪ, ನಾಗರಾಜ್, ಅಶೋಕ್, ನವೀನ್, ಮಹೇಶ್, ಗಿರೀಶ್, ಮಾರಣ್ಣ ಅವರೂ ಇದ್ದರು.



ಮಲ್ಲಸಂದ್ರದ ಯದುನಂದನ ಬಯಲು ರಂಗಮಂದಿರದಲ್ಲಿ ಜೆಡಿಎಸ್ ವಾರ್ಡ್‌ನ ಮಾಜಿ ಅಧ್ಯಕ್ಷ ಆನಂದ್ ಮತ್ತು ಸಂಗಡಿಗರು ಏರ್ಪಡಿಸಿದ್ದ ಬೃಹತ್ ಬಿಜೆಪಿ ಸೇರ್ಪಡೆ ಕಾರ್ಯಕ್ರಮದಲ್ಲಿ ಶಶಿ ಶಿವಕುಮಾರ್, ಟಿಎಸ್ ಗಂಗರಾಜು, ದಾಸರಹಳ್ಳಿ ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಟಿ ಶಿವಕುಮಾರ್, ಡಿ.ಕೆ ಮಹೇಶ್, ವಿನೋದ್ ಗೌಡ, ಎಂ.ಆರ್ ಶ್ರೀನಿವಾಸ್, ಮಲ್ಲಸಂದ್ರ ವಾರ್ಡ್ ಬಿಜೆಪಿ ಅಧ್ಯಕ್ಷರಾದ ಗಂಗರಾಜು, ನಾಗಭೂಷಣ್, ರಘು, ಮಾರುತಿ, ಲಕ್ಕಪ್ಪ, ನಾಗರಾಜ್, ಅಶೋಕ್, ನವೀನ್, ಮಹೇಶ್, ಗಿರೀಶ್ ಇದ್ದರು.

ಭಾನುವಾರ, ಮಾರ್ಚ್ 26, 2023 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 84 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭಾನುವಾರದ ಪುರವಣಿ
ಸುಗಮ ಸಂಗೀತದ ಮೇರು ಪ್ರತಿಭೆ ಎಚ್.ಆರ್. ಲೀಲಾವತಿ ಅವರು ಕನ್ನಡದ ಸಾಹಿತ್ಯ ದಿಗ್ಗಜರ ಜತೆ ಒಡನಾಡಿದ ನೆನಪುಗಳು 'ಹಾಡಾಗಿ ಹರಿದಾಗ'...

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ಆರೋಗ್ಯಕ್ಕೆ ಕುತ್ತು ಚೈನಾಸಾಲ್ಟ್

• ಬಿ.ಎಸ್.ಷಣ್ಮುಖಪ್ಪ

ಒಳನೋಟ

ನಿಧಾನವಿಷ

ಪ್ರತಿಕ್ರಿಯಿಸಿ: 9606038256
feedback@prajavani.co.in



ವೀಕೆಂಡ್‌ನಲ್ಲಿ ಪ್ರಶಾಂತನಿಗೆ ಸಿಟಿಯಲ್ಲಿ ಸುತ್ತಾಡಿ ಅಮ್ಮನ ಜೊತೆ ಎಲ್ಲಾದರೂ ಒಳ್ಳೆಯ ಹೋಟೆಲ್‌ನಲ್ಲಿ ಕೋಳಿ ಮಾಂಸದ ಖಾದ್ಯ ತಿನ್ನದೇ ವಾಪಸಾದರೆ ಅದು ಅಂದಿನ ಸುತ್ತಾಟವು ಸುತ್ತಾಟ ಅಂತಲೇ ಅನಿಸುವುದಿಲ್ಲ. ಆವತ್ತೂ ಅವನು ಬೆಂಗಳೂರಿನ ಪ್ರತಿಷ್ಠಿತ ಹೋಟೆಲ್ ಒಂದರಲ್ಲಿ ತನಗೆ ಇಷ್ಟವಾದ ಖಾದ್ಯವನ್ನು ಸವಿದೇ ಮನೆಗೆ ಬಂದಿದ್ದ. ಏಕೋ ಏನೊ ಮರುದಿನ ಬೆಳಗ್ಗೆ ಸಿಕ್ಕಾಪಟ್ಟೆ ತಲೆಸುತ್ತು ಅಂತಾ ಕೈಹೊತ್ತು ಕುಳಿತ. ಹತ್ತೊಂಬತ್ತರ ತರುಣನಿಗೆ ಹೀಗೆ ಏಕಾಏಕಿ ಏಕೆ ತಲೆಸುತ್ತು ಎಂದು ತಾಯಿ ಡಾಕ್ಟರ್ ಬಳಿ ಕರೆದುಕೊಂಡು ಹೋದರೆ, ಡಾಕ್ಟರ್ ಕೇಳಿದ ಮೊದಲ ಪ್ರಶ್ನೆಯೇ, 'ರಾತ್ರಿ ಏನು ತಿಂದಿದ್ದಿರಿ' ಅಂತಾ. ಪ್ರಶಾಂತ್ ಚಿಕನ್ ತಿಂದಿದ್ದನ್ನು ವಿವರಿಸಿದ.


ಡಾಕ್ಟರ್ ಎಲ್ಲಾ ಪರೀಕ್ಷಿಸಿ ಒಂದಷ್ಟು ಮಾತ್ರೆಗಳನ್ನು ಬರೆಯುತ್ತಾ ಅವರ ಅಮ್ಮನಿಗೆ ಹೇಳಿದ್ದು; 'ಇನ್ನು ಮೇಲೆ ನೀವು ಹೊರಗಿನ ಖಾದ್ಯಗಳನ್ನು ಮಗನಿಗೆ ಕೊಡಿಸುವುದನ್ನು ನಿಲ್ಲಿಸಿ. ಅನಿವಾರ್ಯ ಎನಿಸಿದರೆ ಮಾತ್ರವೇ ಕೊಡಿಸಿ' ಎಂದು ಸಲಹೆ ಇತ್ತರು. ಅಮ್ಮ ಪ್ರಶ್ನಾರ್ಥಕವಾಗಿ ಡಾಕ್ಟರ್ ಅನ್ನು ನೋಡುತ್ತಾ, 'ಏನು ಡಾಕ್ಟ್ರೇ ಏನಾಗಿದೆ' ಎಂದರು.

ಡಾಕ್ಟರ್ ಹೇಳುತ್ತಾ ಹೋದರು. 'ನೋಡಿ, ನೀವು ನಿನ್ನೆ ನಿಮ್ಮ ಮಗನಿಗೆ ರುಚಿಯಾಗಿದೆ ಎಂದು ಚಿಕನ್ ತಿನ್ನಿಸಿದಿರಲ್ಲಾ ಅದರ ಹಿಂದಿನ ರುಚಿಯ ರಹಸ್ಯವೇ ತಲೆನೋವಿನ ಮೂಲ' ಎಂದು ಚೈನಾ ಸಾಲ್ಟ್ ಪ್ರಭಾವವನ್ನು ತಮ್ಮದೇ ಮಾತುಗಳಲ್ಲಿ ಸವಿವರವಾಗಿ ತೆರೆದಿಟ್ಟರು.

'ಮೊನೊ ಸೋಡಿಯಂ ಗ್ಲುಟಾಮೇಟ್' (ಎಂಎಸ್‌ಜಿ) ಎಂಬುದು ರುಚಿ ವರ್ಧಕ, ವಾಸನೆರಹಿತ ಲವಣ. ಇದೊಂದು ಅಮೈನೊ ಆಮ್ಲವಾದ ನೈಸರ್ಗಿಕ ಧಾತು. ಹಲವಾರು ಆಹಾರ ಪದಾರ್ಥಗಳಲ್ಲಿ ಸಹಜವಾಗಿಯೇ ಇರುವಂಥದ್ದು. 1908ರ ಸುಮಾರಿಗೆ ಜಪಾನಿನ ಟೊಕಿಯೊ ವಿಶ್ವ ವಿದ್ಯಾಲಯದ ರಸಾಯನ ವಿಜ್ಞಾನ ವಿಭಾಗದ ಪ್ರೊ. ಕಿಕುನೆ ಇಕೇಡಾ ಇದನ್ನು ಅಧಿಕೃತವಾಗಿ ಕಂಡು ಹಿಡಿದು ಇದರ ಪೇಟೆಂಟ್ ಗಾಗಿ ಅರ್ಜಿ ಸಲ್ಲಿಸಿದ್ದರು. ಇದರ ಹುಟ್ಟು ಜಪಾನಿನಲ್ಲಾದರೂ ಅತ್ಯಂತ ಹೆಚ್ಚಿನ ಬಳಕೆ ಆಗತೊಡಗಿದ್ದು ಚೀನಾದಲ್ಲಿ. ಹಾಗಾಗಿ, ಇದು 'ಚೈನೀಸ್ ಸಾಲ್ಟ್' ಎಂದೇ ಜನಜನಿತ. ಮೊದಲಿಗೆ ಇದನ್ನು ಜಪಾನ್‌ನ ಅಜಿನೊಮೊಟೊ ಎಂಬ ಸಂಸ್ಥೆ ಅಧಿಕೃತವಾಗಿ ಉತ್ಪಾದಿಸಲು ಪ್ರಾರಂಭಿಸಿತು. ಅದಕ್ಕಾಗಿಯೇ ಇದಕ್ಕೆ ಅಜಿನೊಮೊಟೊ ಎಂಬ ರೂಢಿ ನಾಮವೂ ಅಂಟಿಕೊಂಡಿತು. ಪ್ರಸ್ತುತ ಇದರ ಬಳಕೆ ಪ್ರಪಂಚದಾದ್ಯಂತ ಸಾವಿರಾರು ಟನ್‌ಗಳಲ್ಲಿ ಆಗುತ್ತಿದ್ದು ಭಾರತವೂ ಇದಕ್ಕೆ ಹೊರತಾಗಿಲ್ಲ.

4ನೇ ಪುಟ ನೋಡಿ

ಬಾಕ್ಸಿಂಗ್: ನೀತು, ಸ್ವೀಟಿಗೆ ವಿಶ್ವ ಕಿರೀಟ



ನೀತು ಗಂಗಾಸ್



ಸ್ವೀಟಿ ಬೂರಾ

ನವದೆಹಲಿ (ಪಿಟಿಐ): ಭಾರತದ ಸ್ವೀಟಿ ಬೂರಾ ಮತ್ತು ನೀತು ಗಂಗಾಸ್ ಅವರು ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದು ಐತಿಹಾಸಿಕ ಸಾಧನೆ ಪ್ರದರ್ಶಿಸಿದರು.

ಕೆ.ಡಿ.ಜಾಧವ್ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಲೈಟ್ ಹೆವಿವೇಟ್ (81 ಕೆ.ಜಿ.) ವಿಭಾಗದ ಫೈನಲ್‌ನಲ್ಲಿ ಸ್ಪರ್ಧಿಸಿದ ಸ್ವೀಟಿ, ಚೀನಾದ ವಾಂಗ್ ಲಿ ನಾ ಅವರನ್ನು ಮಣಿಸಿದರು.

ಬರ್ಮಿಂಗ್‌ಹ್ಯಾಂ ಕಾಮನ್‌ವೆಲ್ತ್ ಕೂಟದ ಚಿನ್ನದ ಪದಕ ವಿಜೇತೆ ನೀತು ಅವರು 48 ಕೆ.ಜಿ. ವಿಭಾಗದ ಫೈನಲ್‌ನಲ್ಲಿ 5–0 ರಲ್ಲಿ ಮಂಗೋಲಿಯದ ಲುತ್ಸಾಯಿಖಾನ್ ಅಲ್ಟಾನ್‌ಸೆತ್ಸೆಗ್ ವಿರುದ್ಧ ಗೆದ್ದರು. ಈ ಇಬ್ಬರು ಬಾಕ್ಸರ್‌ಗಳು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಗೆದ್ದ ಚೊಚ್ಚಲ ಪದಕ ಇದು.

ಮತ್ತೆರಡು ಚಿನ್ನದ ನಿರೀಕ್ಷೆ: ಭಾರತದ ಲವ್ಲಿನಾ ಬೊರ್ಗೊಹೈನ್ ಮತ್ತು ನಿಖತ್ ಜರೀನ್ ಅವರು ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಕಣಕ್ಕಿಳಿಯಲಿದ್ದು, ಮತ್ತೆರಡು ಚಿನ್ನದ ಪದಕದ ನಿರೀಕ್ಷೆ ಮೂಡಿಸಿದ್ದಾರೆ.

ವಿವರ 10



ಬಿಜೆಪಿಯ ವಿಜಯ ಸಂಕಲ್ಪ ಯಾತ್ರೆ ಅಂಗವಾಗಿ ದಾವಣಗೆರೆಯಲ್ಲಿ ಶನಿವಾರ ನಡೆದ ಮಹಾಸಂಗಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ತೆರೆದ ವಾಹನದಲ್ಲಿ ಜನರ ನಡುವೆ ಸಾಗಿದರು. ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದ್ದಾರೆ ಪ್ರಜಾವಾಣಿ ಚಿತ್ರ/ ವಿಜಯ್ ಜಾಧವ್

ಮಧ್ಯ ಕರ್ನಾಟಕದಲ್ಲಿ ಪ್ರಧಾನಿ ಮೋದಿ ಮೋಡಿ

ದಾವಣಗೆರೆ: ಬಿಜೆಪಿ ಬಲ ಪ್ರದರ್ಶನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ವಿಜಯ ಸಂಕಲ್ಪ ಯಾತ್ರೆ'ಯ ಸಮಾರೋಪದ ಅಂಗವಾಗಿ ಬಿಜೆಪಿಯು ಮಧ್ಯ ಕರ್ನಾಟಕದ ದಾವಣಗೆರೆಯಲ್ಲಿ ಶನಿವಾರ ಆಯೋಜಿಸಿದ್ದ 'ಮಹಾಸಂಗಮ' ಕಾರ್ಯಕ್ರಮ ಪಕ್ಷದ ಶಕ್ತಿ ಪ್ರದರ್ಶನಕ್ಕೆ ವೇದಿಕೆ ಒದಗಿಸಿತು.

ದಕ್ಷಿಣ ರಾಜ್ಯದಲ್ಲಿನ ತನ್ನ ಏಕೈಕ ಅಧಿಕಾರ ಕೇಂದ್ರವನ್ನು ಬಿಟ್ಟುಕೊಡ-ಕೂಡದು ಎಂಬ ಉದ್ದೇಶದೊಂದಿಗೆ ತಿಂಗಳುಗಳ ಹಿಂದೆಯೇ ಯಾತ್ರೆಗಳ ಮೂಲಕ ವಿಧಾನಸಭೆ ಚುನಾವಣೆಯ ಪ್ರಚಾರ ಆರಂಭಿಸಿರುವ ಪಕ್ಷಕ್ಕೆ, 'ಪ್ರಧಾನಿ ನರೇಂದ್ರ ಮೋದಿ ಅವರ ನಾಮಬಲವೇ ಆಸರೆ' ಎಂಬುದನ್ನು ಇಲ್ಲಿ ನೆರೆದಿದ್ದ ಲಕ್ಷಾಂತರ ಜನರ ಕರತಾಡನ ಮತ್ತೆ ಸಾಬೀತುಪಡಿಸಿತು.

ಕಾರ್ಯಕ್ರಮಕ್ಕೆ ಸಿದ್ಧಗೊಂಡಿದ್ದ ಪೆಂಡಾಲ್ ನಡುವೆ ಇದೇ ಮೊದಲ ಬಾರಿಗೆ ತೆರೆದ ವಾಹನದಲ್ಲಿ ಜನರ ಮಧ್ಯೆ ಭವ್ಯ 'ಮೆರವಣಿಗೆ' ಮೂಲಕ ಸಾಗಿದ ಮೋದಿ, ಹೂಮಳೆ ಮೂಲಕ ಸ್ವಾಗತ ಕೋರಿದ ಪಕ್ಷದ ಕಾರ್ಯಕರ್ತರ ಉತ್ಸಾಹವನ್ನು ಕಂಡು ಪುಳಕಿತರಾದರು.

ಉರಿ ಬಿಸಿಲನ್ನೂ ಲೆಕ್ಕಿಸದೆ ಪಾಲ್ಗೊಂಡಿದ್ದ ಲಕ್ಷಾಂತರ ಕಾರ್ಯಕರ್ತರ ಪ್ರತಿಕ್ರಿಯೆ ಕೋರಿದ ಪ್ರಧಾನಿ, ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಶ್ರಮಿಸುವಂತೆ ಮನವಿ ಮಾಡಿದರು.

ತಮ್ಮ ಭಾಷಣದ ಬಹುತೇಕ ಸಮಯವನ್ನು ಕಾಂಗ್ರೆಸ್ ವಿರುದ್ಧದ ಟೀಕೆಗೆ ಮೀಸಲಿರಿಸಿದ ಅವರು, 'ಅವಕಾಶವಾದಿ, ಸ್ವಾರ್ಥ ರಾಜಕಾರಣಕ್ಕೆ ಹೆಸರಾಗಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ಕರ್ನಾಟಕಕ್ಕೆ ಅನುಕೂಲ ಮಾಡಿದ್ದಕ್ಕಿಂತ ನಷ್ಟ ಉಂಟು ಮಾಡಿದ್ದೇ ಹೆಚ್ಚು' ಎಂದು ಆರೋಪಿಸಿದರು.



ಕಬ್ಬನ್ ಪಾರ್ಕ್‌ನಲ್ಲಿ ನವೀಕರಣಗೊಂಡ ಬಾಲಭವನ ಲೋಕಾರ್ಪಣೆ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಕ್ಕಳ ಪುಟಾಣಿ ರೈಲು ಸಂಚಾರಕ್ಕೆ ಶನಿವಾರ ಹಸಿರು ನಿಶಾನೆ ತೋರಿದರು. ಸಚಿವ ಹಾಲಪ್ಪ ಆಚಾರ್, ಬಾಲಭವನದ ಅಧ್ಯಕ್ಷೆ ಪೂರ್ಣಿಮಾ ಪ್ರಕಾಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯದರ್ಶಿ ಎನ್‌.ಮಂಜುಳಾ, ಸಚಿವ ಆರ್‌.ಅಶೋಕ ಇದ್ದರು

ಕೆ.ಎಂ.ಮುನ್ಷಿ ಪ್ರತಿಮೆ ಅನಾವರಣ ಮಾಡಿದ ರಾಜ್ಯಪಾಲ ಗೆಹಲೋತ್

ಪರಿಸರ ಅಸಮತೋಲನ ವಿಶ್ವದ ಗಂಭೀರ ಸಮಸ್ಯೆ

ಪ್ರಜಾವಾಣಿ ವಾರ್ತೆ



ಥಾವರಚಂದ್ ಗೆಹಲೋತ್

ಬೆಂಗಳೂರು: 'ಪರಿಸರ ಅಸಮತೋಲನವು ವಿಶ್ವದ ಗಂಭೀರ ಸಮಸ್ಯೆಯಾಗಿದೆ. ಪರಿಸರ ವರ್ಧನೆ ಹಾಗೂ ನೀರು, ಅರಣ್ಯ, ವಾಯು ಸಂರಕ್ಷಣೆಗೆ ಸಮುದಾಯವೇ ಒಟ್ಟಾಗಿ ಕೆಲಸ ಮಾಡಬೇಕು' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ಭಾರತೀಯ ವಿದ್ಯಾಭವನದ ಸಂಸ್ಥಾಪಕ ಕೆ.ಎಂ.ಮುನ್ಷಿ ಅವರ ಪ್ರತಿಮೆ ಅನಾವರಣಗೊಳಿಸಿ, ನವೀಕೃತ ಇಎಸ್‌ವಿ ಸಭಾಂಗಣ ಉದ್ಘಾಟಿಸಿ ಅವರು ಮಾತನಾಡಿದರು.

'ಭವ್ಯವಾದ ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸಲು ಮುಂದಿನ 25 ವರ್ಷಗಳು ಅಮೃತ ಕಾಲವಾಗಿದೆ. ಸ್ವಾತಂತ್ರ್ಯ ಮಹೋತ್ಸವದ ಶತಮಾನೋತ್ಸವದ ವೇಳೆಗೆ ಭಾರತವನ್ನು ವಿಶ್ವದ ಅತ್ಯುತ್ತಮ ದೇಶವಾಗಿ ರೂಪಿಸುವ ಕರ್ತವ್ಯ ಎಲ್ಲರದೂ ಆಗಿದೆ' ಎಂದರು.

'ಭಾರತೀಯ ವಿದ್ಯಾಭವನ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಉನ್ನತಿಗಾಗಿ ಕೆಲಸ ಮಾಡುತ್ತಿದೆ. ಇದರ ಸಂಸ್ಥಾಪಕ ಡಾ.ಮುನ್ಷಿ ಅವರು ಹೊಸ ಪೀಳಿಗೆಗೆ ನೈತಿಕ ಮೌಲ್ಯಗಳು ಮತ್ತು ಶ್ರೀಮಂತ ಸಾಂಸ್ಕೃತಿಕ ಪರಂಪರೆ ಪರಿಚಯಿಸಲು ಕಾರಣಕರ್ತರಾಗಿದ್ದಾರೆ. ವಿದ್ಯಾಭವನ ದೇಶದ ಪ್ರಗತಿ ಮತ್ತು ಅಭಿವೃದ್ಧಿಗೆ ಗಮನಾರ್ಹ ಕೊಡುಗೆ ನೀಡುತ್ತಿದೆ' ಎಂದು ಶ್ಲಾಘಿಸಿದರು.

'ರಾಷ್ಟ್ರಪಿತ ಮಹಾತ್ಮ ಗಾಂಧೀಜಿ, ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಾಯಿ ಪಟೇಲ್ ಅವರು ಭಾರತದ ರಾಜಕೀಯ ಸ್ವಾತಂತ್ರ್ಯ ಭದ್ರಪಡಿಸುವತ್ತ ಗಮನಹರಿಸುತ್ತಿದ್ದಾಗ ಮುನ್ಷಿ ಅವರು ಭಾರತೀಯ ಸಾಂಸ್ಕೃತಿಕ ಚೈತನ್ಯವನ್ನು ಉತ್ತೇಜಿಸುವತ್ತ ತಮ್ಮ ಗಮನ ಕೇಂದ್ರೀಕರಿಸಿದ್ದರು' ಎಂದು ಅವರು ಈ ವೇಳೆ ಸ್ಮರಿಸಿದರು.

ಭಾರತೀಯ ವಿದ್ಯಾಭವನದ ಅಧ್ಯಕ್ಷ ಕೆ.ಜಿ. ರಾಘವನ್, ಮುಂಬೈ ವಿಭಾಗದ ಜಂಟಿ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಜಗದೀಶ್ ಲಖಾನಿ, ಕಾರ್ಯದರ್ಶಿ ಮಾನಂದಿ ಸುರೇಶ್, ನಿರ್ದೇಶಕ ಎಚ್.ಎನ್.ಸುರೇಶ್ ಉಪಸ್ಥಿತರಿದ್ದರು.

ರಾಹುಲ್ ಅನರ್ಹ: ಎಸ್‌ಯುಸಿಐ ಖಂಡನೆ

ಬೆಂಗಳೂರು: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಸಂಸತ್ ಸದಸ್ಯ ಸ್ಥಾನದಿಂದ ಅನರ್ಹಗೊಳಿಸಿರುವ ಸಂಸದೀಯ ಸಚಿವಾಲಯದ ನಡೆಯನ್ನು ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಕಮ್ಯುನಿಸ್ಟ್) ಖಂಡಿಸಿದೆ.

'ಇದು ಅತ್ಯಂತ ಅಪ್ರಜಾತಾಂತ್ರಿಕ, ಅನಾಗರಿಕ ಮತ್ತು ಸೇಡಿನ ಕ್ರಮವಾಗಿದೆ. ಸಚಿವಾಲಯದ ತರಾತುರಿ ನೋಡಿದರೆ ಸೂರತ್ ನ್ಯಾಯಾಲಯದ ತೀರ್ಪಿಗೆ ಕಾಯುತ್ತಿದ್ದಂತಿದೆ' ಎಂದು ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಕೆ.ಉಮಾ ಹೇಳಿದ್ದಾರೆ.

ನಗರದಲ್ಲಿ ಇಂದು



ಸಿದ್ಧಲಿಂಗ ಸ್ವಾಮೀಜಿ

'ಅವ್ವ ಪ್ರಶಸ್ತಿ' ಪ್ರದಾನ ಸಮಾರಂಭ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಉದ್ಘಾಟನೆ: ರಾಜ್ಯಪಾಲ ಥಾವರಚಂದ್ ಗೆಹಲೋತ್, ಪ್ರಶಸ್ತಿ ಪ್ರದಾನ: ಕೃಷ್ಣ ಎಸ್. ದೀಕ್ಷಿತ್, ಅಧ್ಯಕ್ಷತೆ: ಬಸವರಾಜ ಹೊರಟ್ಟಿ, ಮುಖ್ಯ ಅತಿಥಿ: ಎಚ್.ಎಲ್. ಪುಷ್ಪಾ, ಆಯೋಜನೆ: ಅವ್ವ ಸೇವಾ ಟ್ರಸ್ಟ್, ಸ್ಥಳ: ಅನುಭವ ಮಂಟಪ, ಬಸವ ಸಮಿತಿ, ಬಸವೇಶ್ವರ ರಸ್ತೆ, ಬೆಳಿಗ್ಗೆ 10.30

ಬ್ರಹ್ಮರಥೋತ್ಸವ: ಗರುಡೋತ್ಸವ, ಅಷ್ಟಾವಧಾನ, ಧೂಳಿಕೋತ್ಸವ, ಆಯೋಜನೆ: ಕಾಕೋಳು ವೇಣುಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್, ಸ್ಥಳ: ರಾಜಾನುಕುಂಟೆ ಸಮೀಪದ ಕಾಕೋಳು, ಯಲಹಂಕ, ಬೆಳಿಗ್ಗೆ 9ರಿಂದ

'ಎಸ್.ವಿ. ನಾರಾಯಣಸ್ವಾಮಿ ರಾವ್ ಸಂಗೀತ ಉತ್ಸವ': ಸಂಗೀತ ಕಲಾವಿದರು: ಆರ್.ಎನ್. ತ್ಯಾಗರಾಜನ್, ಆರ್.ಎನ್. ತಾರಾನಾಥನ್, ಅನುರಾಧಾ ಮಧುಸೂದನ್, ಸುಚೇತನಾ ರಂಗಸ್ವಾಮಿ, ಎಸ್. ಸೌಮ್ಯಾ, ಮೈಸೂರು ಮಂಜುನಾಥ್, ಸುಮಂತ್ ಮಂಜುನಾಥ್, ಟಿ.ಕೆ.ವಿ. ರಾಮಾನುಜಾಚಾರಲು, ತುಮಕೂರು ಬಿ. ರವಿಶಂಕರ್, ಶರತ್ ಕೌಶಿಕ್, ಜ್ಯೋತ್ಸ್ನಾ ಶ್ರೀಕಾಂತ್, ಬಿ.ಎಸ್. ಆನಂದ್, ಸುಕನ್ಯಾ ರಾಮಗೋಪಾಲ್, ಬಿ.ಆರ್. ಕುಶಾಲ್, ಎಸ್.ವಿ. ಬಾಲಕೃಷ್ಣ, ಪ್ರಣವ್ ಎಸ್. ಬಾಲಕೃಷ್ಣ, ಚಾರುಲತಾ ರಾಮಾನುಜಂ, ಬಿ.ಸಿ. ಮಂಜುನಾಥ್, ಬಿ.ಆರ್. ರವಿಕುಮಾರ್, ಯೆಲ್ಲಾ ವೆಂಕಟೇಶ್ವರ ರಾವ್, ಎನ್. ಅಮೃತ್, ಅರುಣ್ ಕುಮಾರ್ ಬಿ.ಎಸ್., ಆಯೋಜನೆ: ಶ್ರೀ ರಾಮಸೇವಾ ಮಂಡಳಿ ಟ್ರಸ್ಟ್, ಸ್ಥಳ: ಗಾಯನ ಸಮಾಜ ಸಭಾಂಗಣ, ಕೆ.ಆರ್. ರಸ್ತೆ, ಬೆಳಿಗ್ಗೆ 9.30ರಿಂದ

ಗಾಯನ, ಹಾಸ್ಯ, ರಸಪ್ರಶ್ನೆ, ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಮುಖ್ಯ ಅತಿಥಿ: ಶೈಲಜಾ, ಉಪಸ್ಥಿತಿ: ಎಂ. ವೀಣಾ, ಆಯೋಜನೆ: ಸಹಮತ, ಸ್ಥಳ: ನಂ.323, ಹೇಮ ಸದನ, 7ನೇ ಮುಖ್ಯರಸ್ತೆ, ಸಹಕಾರನಗರ, ಬೆಳಿಗ್ಗೆ 10

'ಶ್ರೀರಾಮೋತ್ಸವ' ಸಂಗೀತ ಕಾರ್ಯಕ್ರಮ: ಪ್ರವಚನ: ಸತ್ಯಧ್ಯಾನಾಚಾರ್ ಕಟ್ಟಿ, ಗಾಯನ: ಫಣೀಂದ್ರ ಶರ್ಮ ಆನೂರು, ಪಿಟೀಲು: ಕೃತಿಕ್ ಕೌಶಿಕ್, ಮೃದಂಗ: ಪವನ್ ಮಾಧವ್ ಮಸೂರ್, ಯಕ್ಷಗಾನ: ಮಾರುತಿ ಪ್ರತಾಪ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಮಲ್ಲೇಶ್ವರ, ಬೆಳಿಗ್ಗೆ 10ರಿಂದ ಸಂಜೆ 6.30

ಎಚ್.ಆರ್. ಲೀಲಾವತಿ ಅವರಿಗೆ ಗೌರವ ಸಮರ್ಪಣೆ: ಜೀವನಚರಿತ್ರೆ, ಕಿರುಚಿತ್ರ ಅನಾವರಣ, ಮುಖ್ಯ ಅತಿಥಿಗಳು: ಎಚ್.ಎಸ್. ವೆಂಕಟೇಶಮೂರ್ತಿ, ಟಿ.ಎನ್. ಸೀತಾರಾಂ, ರವೀಂದ್ರ ಭಟ್ಟ, ಆರ್. ಪೂರ್ಣಿಮಾ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10.30

'ಭಾರತೀಯ ಕಾಲಗಣನ ಪದ್ಧತಿ' ಉಪನ್ಯಾಸ: ರೋಹಿತ್ ಚಕ್ರತೀರ್ಥ, ಉಪಸ್ಥಿತಿ: ಹಾದಿಗಲ್ಲು ಲಕ್ಷ್ಮೀನಾರಾಯಣ, ಪ್ರೊ.ಕೃ. ನರಹರಿ, ವಿ. ನಾಗರಾಜ್, ವರುಣ್ ಬಿ.ಎಂ., ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಮಹಿಳಾ ದಿನಾಚರಣೆ: ಅಶೋಕ್ ಹಾರನಹಳ್ಳಿ, ಶುಭಮಂಗಳ ಸುನೀಲ್, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಮಹಿಳಾ ವಿಭಾಗ, ಸ್ಥಳ: ಆಚಾರ್ಯ ಪಾಠಶಾಲೆ ಕಾಲೇಜು ಸಭಾಂಗಣ, ಎನ್.ಆರ್. ಕಾಲೊನಿ, ಮಧ್ಯಾಹ್ನ 2.30

'ಅಪ್ಪು ಹ್ಯಾಟ್ಸ್ ಆಫ್' ಸಂಗೀತ ಕಾರ್ಯಕ್ರಮ: ಮುಖ್ಯ ಅತಿಥಿಗಳು: ರಾಘವೇಂದ್ರ ರಾಜ್‌ಕುಮಾರ್, ಅಶ್ವಿನಿ ಪುನೀತ್ ರಾಜ್‌ಕುಮಾರ್, ಶ್ರುತಿ, ಪ್ರಮೋದ್ ಶೆಟ್ಟಿ, ಪ್ರಥಮ್, ಆಯೋಜನೆ: ಮಧು ಮ್ಯೂಸಿಕ್ ಇವೆಂಟ್ಸ್, ಸ್ಥಳ: ಪುರಭವನ, ಮಧ್ಯಾಹ್ನ 3

ರಾಮಾಯಣ ಸಪ್ತಾಹ: ಪ್ರವಚನ: ಅಮೀ ದೇಶಪಾಂಡೆ, ಆಯೋಜನೆ: ಶ್ರೀಸತ್ಯಸಾಯಿ ಆರ್ಗನೈಸೇಶನ್ ಕರ್ನಾಟಕ ಸೌತ್, ಸ್ಥಳ: ಸತ್ಯಸಾಯಿ ಆಶ್ರಮ, ಕಾಡುಗೋಡಿ, ಸಂಜೆ 5

ಭರತನಾಟ್ಯ ಪ್ರದರ್ಶನ: ಮಂಜುಳಾ ಅಮರೇಶ್, ಮುಖ್ಯ ಅತಿಥಿ: ಎಂ. ಸೂರ್ಯಪ್ರಸಾದ್, ಆಯೋಜನೆ ಹಾಗೂ ಸ್ಥಳ: ಭರತಾನುನಾದ, ಬನಶಂಕರಿ 2ನೇ ಹಂತ, ಸಂಜೆ 6

ಶ್ರೀರಾಮ ನವಮಿ ಉತ್ಸವ: ಗಾಯನ: ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ, ಪಿಟೀಲು: ನಳಿನಾ ಮೋಹನ್, ಮೃದಂಗ: ಬಿ.ಆರ್. ಶ್ರೀನಿವಾಸ್, ಘಟ: ಬಿ.ಎಸ್. ರಘುನಂದನ್, ಆಯೋಜನೆ: ವೈಯಾಲಿ ಕಾವಲ್ ಎಕ್ಸ್‌ಟೆನ್ಷನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, ವೈಯಾಲಿ ಕಾವಲ್, ಸಂಜೆ 6.30

ರಾಮನವಮಿ ಕಾರ್ಯಕ್ರಮ: ಭರತನಾಟ್ಯ: ನೃತ್ಯ ಲಹರಿ ಕಲಾ ಕೇಂದ್ರ ಟ್ರಸ್ಟ್ ವಿದ್ಯಾರ್ಥಿಗಳಿಂದ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಪ್ರವಚನ ವಾಹಿನಿ: 'ಚಿರಂಜೀವಿ ಚಿಂತನೆ' ಕುರಿತು ಪ್ರವಚನ: ಎಚ್. ಸತ್ಯನಾರಾಯಣಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್‌ನ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಶ್ರೀರಾಮ ನವಮಿ ಸಂಗೀತೋತ್ಸವ: ಗಾಯನ: ಅಂಜಲಿ ಶ್ರೀರಾಮ್ ಮತ್ತು ತಂಡ, ಆಯೋಜನೆ ಹಾಗೂ ಸ್ಥಳ: ಶ್ರೀ ರಾಘವೇಂದ್ರ ಮತ್ತು ಶ್ರೀ ಆಂಜನೇಯ ಸ್ವಾಮಿಗಳ ದೇವಾಲಯದ ಆವರಣ, 8ನೇ ಕ್ರಾಸ್, ಮಲ್ಲೇಶ್ವರ, 6.30

'ನಮ್ಮ ಬೆಂಗಳೂರು ಹಬ್ಬ' ಸಮಾರೋಪ: ಮುಖ್ಯ ಅತಿಥಿಗಳು– ಅಮಿತ್ ಶಾ, ಬಸವರಾಜ ಬೊಮ್ಮಾಯಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ವಿಧಾನಸೌಧದ ಪೂರ್ವದ್ವಾರ, ಸಂಜೆ 6.30

ಅಂತರರಾಷ್ಟ್ರೀಯ ದಾಖಲೆಗೆ ಕಿರಿಯ ಕವಯಿತ್ರಿ ಅಮನ



ಪ್ರಮಾಣ ಪತ್ರ ಮತ್ತು ಪದಕಗಳೊಂದಿಗೆ ಅಮನ

ಬೆಂಗಳೂರು: ಕಿರಿಯ ಕವಯಿತ್ರಿ ಮತ್ತು ಲೇಖಕಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಅಮನ ಜೆ.ಕುಮಾರ್, ಹೊಸದಾಗಿ ಎರಡು ಅಂತರರಾಷ್ಟ್ರೀಯ ದಾಖಲೆಗೆ ಸೇರ್ಪಡೆಯಾಗಿದ್ದಾರೆ.

14 ವರ್ಷ 6 ತಿಂಗಳು ವಯಸ್ಸಿನ ಅಮನ ಮೂರು ವರ್ಷಗಳಲ್ಲಿ ಮೂರು ಪುಸ್ತಕಗಳನ್ನು ಎರಡು ಭಾಷೆಗಳಲ್ಲಿ ಬರೆಯುವ ಮೂಲಕ ಅಂತರರಾಷ್ಟ್ರೀಯ ವಿಶ್ವ ದಾಖಲೆಯಲ್ಲಿ 'ಅತ್ಯಂತ ಕಿರಿಯ ಕವಯಿತ್ರಿ' ಹಾಗೂ ವಂಡರ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ 'ಕಿರಿಯ ಲೇಖಕಿ' ಎಂಬ ದಾಖಲೆಗೆ ಸೇರ್ಪಡೆಯಾಗಿದ್ದಾರೆ. ಕೆಎಸ್‌ಆರ್‌ಟಿಸಿ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಲತಾ ಟಿ.ಎಸ್. ಮತ್ತು ಜೈವಂತ್‌ಕುಮಾರ್ ಅವರ ಮಗಳು ಅಮನ, ಬಿಷಪ್ ಕಾಟನ್ ಶಾಲೆ`ಯಲ್ಲಿ 10ನೇ ತರಗತಿಯಲ್ಲಿ ಕಲಿಯುತ್ತಿದ್ದಾರೆ. ಹಾವರ್ಡ್ ವಿಶ್ವವಿದ್ಯಾಲಯದಿಂದ 'ಮಾಸ್ಟರ್ ಪೀಸಸ್ ಆಫ್ ವರ್ಲ್ಡ್ ಲಿಟರೇಚರ್' ಎಂಬ ಸಾಹಿತ್ಯ ಕೋರ್ಸ್ ಕೂಡ ಮುಗಿಸಿದ್ದಾರೆ.

ಇಂಗ್ಲಿಷ್‌ನಲ್ಲಿ ಎರಡು ಪುಸ್ತಕ ಮತ್ತು ಹಿಂದಿಯಲ್ಲಿ ಒಂದು ಪುಸ್ತಕ ಪ್ರಕಟವಾಗಿದ್ದು, ನಾಲ್ಕನೇ ಪುಸ್ತಕ ಪ್ರಕಟಕ್ಕೆ ಸಿದ್ಧವಾಗಿದೆ ಎಂದು ಲತಾ ಟಿ.ಎಸ್. ತಿಳಿಸಿದ್ದಾರೆ.

ಮಾತೃಭಾಷೆಯಲ್ಲೇ ಮಕ್ಕಳ ಕಲಿಕೆಗೆ ಒತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರರಿಂದ ಎಂಟು ವರ್ಷದವರೆಗಿನ ಮಕ್ಕಳ ಶಿಕ್ಷಣಕ್ಕಾಗಿ ರೂಪಿಸಿದ ಪೂರ್ವ ಪ್ರಾಥಮಿಕ ಶಿಕ್ಷಣದ ರಾಜ್ಯ ಪಠ್ಯಕ್ರಮ ಚೌಕಟ್ಟನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ಬಿಡುಗಡೆ ಮಾಡಿದರು.

ಹೊಸದಾಗಿ ರೂಪಿಸಿದ ಈ ಶಿಕ್ಷಣ ನೀತಿಯಲ್ಲಿ ಆಯಾ ಮಾತೃಭಾಷೆಯಲ್ಲೇ ಮಕ್ಕಳ ಕಲಿಕೆಗೆ ಒತ್ತು ನೀಡಲಾಗಿದೆ. ಮಾತೃ ಭಾಷೆಯಲ್ಲಿ ಕಲಿಯುವುದು ವೈಜ್ಞಾನಿಕ, ಶೈಕ್ಷಣಿಕ ಅನಿವಾರ್ಯತೆ ಎಂದು ವಿವರಿಸಲಾಗಿದೆ.

ಮಕ್ಕಳ ಆಟ, ಶಿಶು ಕೇಂದ್ರಿತ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಆರು ಶೈಕ್ಷಣಿಕ ಕ್ಷೇತ್ರ, 13 ಶೈಕ್ಷಣಿಕ ಗುರಿಗಳು, 68 ಸಾಮರ್ಥ್ಯಗಳು, 128 ಕಲಿವಿನ ಫಲಗಳನ್ನು ಪಠ್ಯಕ್ರಮ ಚೌಕಟ್ಟು ಹೊಂದಿದೆ.

ಪ್ರತಿ ಮಗುವೂ ವಿಶೇಷ ಕೌಶಲ ಹೊಂದಿದ್ದು, ಕಲಿಯಲು ಶಕ್ತವಾಗಿರುತ್ತದೆ. ಮಕ್ಕಳ ಕಲಿಕಾಂಶವು ಆ ಮಕ್ಕಳ ಅನುಭವ, ಸುತ್ತಲಿನ ಪರಿಸರದೊಟ್ಟಿಗೆ ಒಡನಾಟದಿಂದ ಹುಟ್ಟಿಕೊಳ್ಳಬೇಕಾಗುತ್ತದೆ ಎಂಬ ಅಂಶಗಳ ಆಧಾರದಲ್ಲಿ ಕಲಿಕಾ ಕ್ರಮವನ್ನು ರೂಪಿಸಲಾಗಿದೆ. ಪ್ರಸ್ತುತ ರಾಜ್ಯದ ಅಂಗನವಾಡಿಗಳಲ್ಲಿ ಅನುಷ್ಠಾನದಲ್ಲಿರುವ ಚಿಲಿಪಿಲಿ ಹಾಗೂ ಪ್ರಾಥಮಿಕ ಶಾಲೆಗಳ ನಲಿಕಲಿ ಪದ್ಧತಿಯ ಪಠ್ಯಕ್ರಮದಲ್ಲಿ ಮಾರ್ಪಾಡುಗಳನ್ನು ಮಾಡಲಾಗಿದೆ.

'ಮಕ್ಕಳ ಶಿಕ್ಷಣಕ್ಕಾಗಿ ರಚಿತವಾದ ರಾಷ್ಟ್ರೀಯ ಶಿಕ್ಷಣ ನೀತಿಯ ಹೊಸ ಪಠ್ಯಕ್ರಮ ಚೌಕಟ್ಟನ್ನು ಕಳೆದ ಅಕ್ಟೋಬರ್‌ನಲ್ಲಿ ಬಿಡುಗಡೆ ಮಾಡಲಾಗಿತ್ತು. ಅದರ ಆಧಾರದ ಮೇಲೆ ಮಕ್ಕಳ ಬುನಾದಿ ಶಿಕ್ಷಣವನ್ನು ರೂಪಿಸಲಾಗಿದೆ. ಆಮೂಲಕ ಮಕ್ಕಳ ಶಿಕ್ಷಣಕ್ಕಾಗಿ ಬುನಾದಿ ಹಂತದ ರಾಜ್ಯ ಪಠ್ಯಕ್ರಮ ಚೌಕಟ್ಟನ್ನು ರಚಿಸಿದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಿದೆ. ರಾಜ್ಯದ ಪೂರ್ವ ಪ್ರಾಥಮಿಕ ಶಿಕ್ಷಣ ಮತ್ತು ಆರೈಕೆ ವ್ಯವಸ್ಥೆಯನ್ನು ಸುಧಾರಿಸಲು ರಚಿತವಾದ ಆರು ತಂಡಗಳಲ್ಲಿ ಇಂದು ತಂಡದ ವರದಿ ನೀಡಿದ್ದು, ಇತರೆ ತಂಡಗಳ ವರದಿಯನ್ನು ಶೀಘ್ರ ಬಿಡುಗಡೆ ಮಾಡಲಾಗುವುದು' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ. ನಾಗೇಶ್ ಅವರು ಪ್ರತಿಕ್ರಿಯಿಸಿದರು.




ಬೆಂಗಳೂರು ಹಬ್ಬದ ಅಂಗವಾಗಿ ಕಬ್ಬನ್ ಉದ್ಯಾನದಲ್ಲಿ ಮರಗಾಲು ಕಲಾವಿದರು ಮಾಧ್ಯಮಗಳಿಗೆ ಪೋಸ್ ನೀಡಿದ್ದು ಹೀಗೆ (ಎಡ ಚಿತ್ರ). ಯುವಕ–ಯುವತಿಯರು ನೃತ್ಯ ಮಾಡಿದರು

ಬೆಂಗಳೂರು ಹಬ್ಬ: ಮೇಳೈಸಿದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿ ಶನಿವಾರ ಕಲಾಮೇಳಗಳ ಸಂಭ್ರಮ ಮೇಳೈಸಿದ್ದರೆ, ಚಿತ್ರಕಲಾ ಸಂತೆ ತೆರೆದುಕೊಂಡಿತ್ತು. ಒಂದೆಡೆ ಪುಸ್ತಕಗಳ ಓದು, ಮತ್ತೊಂದೆಡೆ ಹುಲಿವೇಷಧಾರಿಗಳ ಕುಣಿತ, ಇಡೀ ಉದ್ಯಾನದಲ್ಲಿ ಸುತ್ತಾಡುವ ಮರಗಾಲು ಕಲಾವಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ 'ನಮ್ಮ ಬೆಂಗಳೂರು ಹಬ್ಬ-2023' ಅಂಗವಾಗಿ ಕಬ್ಬನ್ ಉದ್ಯಾನ ಕಳೆಗಟ್ಟಿತ್ತು. ಕಿಂಗ್ ಎಡ್ವರ್ಡ್ ಪ್ರತಿಮೆ ಬಳಿಯ ರಸ್ತೆಯಲ್ಲಿ ಚಿತ್ರ ಸಂತೆ, ವಿಶ್ವೇಶ್ವರಯ್ಯ ಮ್ಯೂಸಿಯಂ ಹಿಂಭಾಗದ ರಸ್ತೆಯಲ್ಲಿ ಆಹಾರ ಮೇಳ, ಹಾಗೇ ಮುಂದೆ ಸಾಗಿದರೆ ಕಾರಂಜಿ ಬಳಿ ಶಿಲ್ಪಕಲಾ ಸಂತೆ, ಗ್ರಂಥಾಲಯದ ಬಳಿ ಪುಸ್ತಕ ಸಂತೆ, ದ್ರಾಕ್ಷಿ ಮಂಡಳಿ ಎದುರು ಕರಕುಶಲ ವಸ್ತುಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

ಹೀಗೆ ಇಡೀ ಕಬ್ಬನ್ ಉದ್ಯಾನ ಸುತ್ತಲೂ ಒಂದೊಂದು ವಿಭಾಗ ತೆರೆಯಲಾಗಿತ್ತು. ಉದ್ಯಾನದ ಮಧ್ಯಭಾಗದಲ್ಲಿರುವ ವಾದ್ಯ ರಂಗದಲ್ಲಿ (ಬ್ಯಾಂಡ್ ಸ್ಟ್ಯಾಂಡ್) ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ನಾಡಿನ ಹಲವೆಡೆಯಿಂದ ಬಂದಿದ್ದ ಕಲಾವಿದರು ಮತ್ತು ಹೊರ ರಾಜ್ಯದ ತಂಡಗಳು ಸಾಂಸ್ಕೃತಿಕ ಕಲೆಗಳನ್ನು ಪ್ರದರ್ಶಿಸಿದರು. ಮರಗಾಲು ತೊಟ್ಟ ಕಲಾವಿದರು ಉದ್ಯಾನದಲ್ಲಿ ನಡೆದಾಡುವ ಮೂಲಕ ಗಮನ ಸೆಳೆದರು. ಹುಲಿ ಕುಣಿತದ ಕಲಾವಿದರು ಅಲ್ಲಲ್ಲಿ ತಮ್ಮ ಕಲೆ ಪ್ರದರ್ಶಿಸಿದರು.

ಕಸ ನಿರ್ವಹಣೆ ಮತ್ತು ಪರಿಸರ ಜಾಗೃತಿ ಮೂಡಿಸುವ ಬೀದಿ ನಾಟಕಗಳ ಪ್ರದರ್ಶನಗೊಂಡವು. ರಂಗಶಂಕರ ಮತ್ತು ನೀನಾಸಂ ಕಲಾವಿದರಿಂದ ನಾಟಕ ಪ್ರದರ್ಶನಗಳು ಕೂಡ ನಡೆದವು.

ಪುಸ್ತಕ ಸಂತೆಯಲ್ಲಿ ಸಾಹಿತಿಗಳು ಬಿಡಿಬಿಡಿ ಕಥೆಗಳನ್ನು ಓದಿದರು. ಇಡೀ ಉದ್ಯಾನ ವೈವಿಧ್ಯಮಯವಾಗಿ ಕಂಡಿತು. ಮಧ್ಯಾಹ್ನದ ತನಕ ಬಿಸಿಲು ಹೆಚ್ಚಾಗಿ ಇದ್ದುದರಿಂದ ಜನ ಕಡಿಮೆ ಸಂಖ್ಯೆಯಲ್ಲಿದ್ದರು. ಮಧ್ಯಾಹ್ನದ ನಂತರ ಸಾವಿರಾರು ಜನ ವೀಕ್ಷಣೆ ಮಾಡಿದರು.

'ಬೆಂಗಳೂರು ಹಬ್ಬ ಎರಡು ದಿನ ನಡೆಯುತ್ತಿದ್ದು, ಕಬ್ಬನ್ ಉದ್ಯಾನದಲ್ಲಿ ಶನಿವಾರ ಮಾತ್ರ ಈ ಮೇಳಗಳು ಇರಲಿವೆ. ಭಾನುವಾರ ಸಂಜೆ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸಮಾರೋಪ ಸಮಾರಂಭ ನಡೆಯಲಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಲಿದ್ದಾರೆ' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಮಹೇಶ್ ಕರ್ಜಗಿ ತಿಳಿಸಿದರು.

ಬೆಂಗಳೂರಿನಲ್ಲಿ ಕಾಸ್ಮೊಪಾಲಿಟನ್ ಸಂಸ್ಕೃತಿ ಹೆಚ್ಚುತ್ತಿದ್ದು, ಅದನ್ನು ಮೆಟ್ಟಿ ಈ ನಾಡಿನ ಸಂಸ್ಕೃತಿಯನ್ನು ಪರಿಚಯಿಸಲು ಬೆಂಗಳೂರು ಹಬ್ಬ ಆಚರಿಸಲಾಗುತ್ತಿದೆ ಎಂದರು.



ಕೀಲುಕುದುರೆ ನೃತ್ಯ ಪ್ರದರ್ಶನ ನಡೆಯಿತು –ಪ್ರಜಾವಾಣಿ ಚಿತ್ರ

ಸಂಕ್ರಾಂತಿ ವೇಳೆ ಪ್ರತಿವರ್ಷ ಬೆಂಗಳೂರು ಹಬ್ಬ

ಬೆಂಗಳೂರು ಹಬ್ಬವನ್ನು ಮುಂದಿನ ವರ್ಷದಿಂದ ಸಂಕ್ರಾಂತಿ ಸಂದರ್ಭದ ಶನಿವಾರ ಮತ್ತು ಭಾನುವಾರ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ಉತ್ಸವ ಸಮಿತಿ ಅಧ್ಯಕ್ಷರೂ ಆಗಿರುವ ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಬೆಂಗಳೂರು ಹಬ್ಬಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ಕೆಂಪೇಗೌಡರು ಕಟ್ಟಿದ ಬೆಂಗಳೂರು ಈಗ ವಿಶ್ವವಿಖ್ಯಾತವಾಗಿ ಬೆಳೆದಿದೆ. ಬೇರೆ ದೇಶ ಮತ್ತು ರಾಜ್ಯಗಳ ಜನ ಇಲ್ಲಿದ್ದಾರೆ. ಅವರಿಗೂ ಇಲ್ಲಿನ ಕಲೆ, ಆಹಾರ ಸಂಸ್ಕೃತಿ, ಸಂಸ್ಕಾರ ಗೊತ್ತಾಗಬೇಕು. ಪರಿಚಯಿಸಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದು ಹೇಳಿದರು.

ಸಾಹಿತಿ ಚಂದ್ರಶೇಖರ ಕಂಬಾರ ಮಾತನಾಡಿ, 'ಬೆಂಗಳೂರಿನ ಕೀರ್ತಿ ಜಗತ್ತಿನ ಎಲ್ಲೆಡೆ ಹರಡಿದೆ. ಬೆಂಗಳೂರು ಹಬ್ಬ ಆಚರಣೆಒಳ್ಳೆಯ ಬೆಳವಣಿಗೆ' ಎಂದರು.

ಫ್ಲೆಕ್ಸ್, ಪೋಸ್ಟರ್ ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅಂದ ಕೆಡಿಸುತ್ತಿರುವ ಫ್ಲೆಕ್ಸ್, ಪೋಸ್ಟರ್‌ಗಳನ್ನು ತೆರವುಗೊಳಿಸಿ, ಬಿಬಿಎಂಪಿ 2020 ಕಾಯ್ದೆಯಂತೆ ಕಾನೂನು ಕ್ರಮ ಕೈಗೊಳ್ಳಬೇಕು. ಪ್ರತಿದಿನವೂ ಇದರ ಮಾಹಿತಿಯನ್ನು ಸಲ್ಲಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಎಲ್ಲ ವಲಯಗಳ ಆಯುಕ್ತರಿಗೆ ಸೂಚನೆ ನೀಡಿದ್ದಾರೆ.

ವಿಧಾನಸಭೆ ಚುನಾವಣೆಯೂ ಹತ್ತಿರವಾಗುತ್ತಿದ್ದು, ಇದರ ಮೇಲೆ ಈ ಫ್ಲೆಕ್ಸ್ ಹಾಗೂ ಪೋಸ್ಟರ್‌ಗಳ ಪರಿಣಾಮ ಬೀರಬಾರದು. ಹೀಗಾಗಿ, ಎಲ್ಲ ರೀತಿಯ ಪತ್ರಗಳನ್ನು ತೆರವುಗೊಳಿಸಬೇಕು ಎಂದು ಜಿಲ್ಲಾ ಚುನಾವಣೆ ಅಧಿಕಾರಿಯೂ ಆಗಿರುವ ತುಷಾರ್ ಗಿರಿನಾಥ್ ಸುತ್ತೋಲೆ ಹೊರಡಿಸಿದ್ದಾರೆ.

ಎಲ್ಲ ವಲಯ ಆಯುಕ್ತರು ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಿ, ಸಾರ್ವಜನಿಕ ಸ್ಥಳಗಳ ಅಂದಗೆಡಿಸಿರುತ್ತಿರುವವರ ಮೇಲೆ ಕ್ರಮ ಕೈಗೊಳ್ಳಬೇಕು. ವಿಶೇಷ ತಂಡವನ್ನು ರಚನೆ ಮಾಡಿ, ಹೋರ್ಡಿಂಗ್, ಬ್ಯಾನರ್ಸ್ ಮತ್ತು ಬಂಟಿಂಗ್ ಇತ್ಯಾದಿಗಳನ್ನು ತೆರವು ಮಾಡಿ, ಅದನ್ನು ಹಾಕಿದವರಿಗೆ ದಂಡ ವಿಧಿಸಬೇಕು. ಬೆಂಗಳೂರು ನಗರದ ಜಿಲ್ಲಾಧಿಕಾರಿ ಹಾಗೂ ಬೆಂಗಳೂರು ನಗರದ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್‌ನ ಸಿಇಒ ತಮ್ಮ ವ್ಯಾಪ್ತಿಯಲ್ಲಿ ಕಾನೂನುಬದ್ಧವಾಗಿ ಕ್ರಮ ಕೈಗೊಳ್ಳಬೇಕು ಎಂದು ಆದೇಶಿಸಿದ್ದಾರೆ.

ಬೆಂಗಳೂರು ಚುನಾವಣೆ ಜಿಲ್ಲೆಗಳಾದ ಕೇಂದ್ರ, ಉತ್ತರ, ದಕ್ಷಿಣ, ಬೆಂಗಳೂರು ನಗರ ಹಾಗೂ ಹೆಚ್ಚುವರಿ ಜಿಲ್ಲಾ ಚುನಾವಣೆ ಅಧಿಕಾರಿಗಳು, ಜಿಲ್ಲಾ ಚುನಾವಣೆ ಅಧಿಕಾರಿಗಳು ಪ್ರತಿ ದಿನವೂ ಸೂಚಿಸಿದ ಮಾದರಿಯಲ್ಲಿ ಕ್ರಮ ಕೈಗೊಂಡ ವರದಿಯನ್ನು ಸಲ್ಲಿಸಲು ಸೂಚಿಸಿದ್ದಾರೆ.



ಹೆಸರಘಟ್ಟ ಮುಖ್ಯರಸ್ತೆಯ ಕಟ್ಟಡಗಳಲ್ಲಿ ಪೌರಕಾರ್ಮಿಕರು ಪೋಸ್ಟರ್‌ಗಳನ್ನು ತೆರವುಗೊಳಿಸಿದರು



ಮೈಸೂರಿನಲ್ಲಿ ಶನಿವಾರ ಅಜಕ್ಕಳ ಗಿರೀಶ ಭಟ್ (ಬಲದಿಂದ ಮೊದಲನೆಯವರು) ಅವರ 'ಬಹುವಚನಕ್ಕೊಂದೇ ತತ್ತ್ವ' ಕೃತಿಯನ್ನು ಕಾದಂಬರಿಕಾರ ಎಸ್‌.ಎಲ್‌. ಭೈರಪ್ಪ ಬಿಡುಗಡೆ ಮಾಡಿದರು. ಡಾ.ಎಸ್‌.ಮುರಳಿ, ರೋಹಿತ್ ಚಕ್ರತೀರ್ಥ, ಒ.ಶಾಮಭಟ್ ಇದ್ದಾರೆ.

'ಆರ್ಯರ ವಲಸೆ: ಬ್ರಿಟಿಷರ ಸೃಷ್ಟಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ದೇಶದಲ್ಲಿ ಆಡಳಿತ ಸುಗಮವಾಗಿ ನಡೆಸಲು ಆರ್ಯರು ಹೊರಗಿನಿಂದ ಬಂದರು ಎಂಬ ವಾದವನ್ನು ಬ್ರಿಟಿಷರು ಹುಟ್ಟು ಹಾಕಿದರು' ಎಂದು ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಪ್ರತಿಪಾದಿಸಿದರು.

ಸಾಮಾಜಿಕ ನ್ಯಾಯ ವೇದಿಕೆ ಹಾಗೂ ಸಾಹಿತ್ಯ ಪ್ರಕಾಶನ ಶನಿವಾರ ನಗರದಲ್ಲಿಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಅಜಕ್ಕಳ ಗಿರೀಶ ಭಟ್ ಅವರ 'ಬಹುವಚನಕ್ಕೊಂದೇ ತತ್ತ್ವ' ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

'ಕ್ವಿಟ್ ಇಂಡಿಯಾ ಚಳವಳಿ ತೀವ್ರವಾಗಿದ್ದಾಗ ಆರ್ಯರ ವಾದ ಮುನ್ನಲೆಗೆ ಬಂದಿತು. ಅದನ್ನೇ ಜವಾಹರ ಲಾಲ್ ನೆಹರೂ ಅವರು ಡಿಸ್ಕವರಿ ಆಫ್ ಇಂಡಿಯಾದಲ್ಲಿ ಹೇಳಿದರು' ಎಂದರು.

'ಸಾವರ್ಕರ್ ಹಾಗೂ ನೆಹರೂ ಇಬ್ಬರೂ ಜೈಲು ಅನುಭವಿಸಿದ್ದಾರೆ. ನೆಹರ ಅವರನ್ನು ಐಷಾರಾಮಿಯ ನೈನಿತಾಲ್ ಜೈಲಿಗೆ ಕಳುಹಿಸಿದರೆ, ಸಾವರ್ಕರ್ ಅಂಡಮಾನ್ ಜೈಲಿನಲ್ಲಿ ದೀರ್ಘಕಾಲ ನರಕಯಾತನೆ ಅನುಭವಿಸಿದರು. ರಾಜಕೀಯ ವ್ಯಕ್ತಿಯಾಗಿ ಗುರುತಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಬ್ರಿಟಿಷರಿಗೆ ಪತ್ರ ಬರೆದು ಬಿಡುಗಡೆಯಾದರು. ಅದನ್ನೇ ಕ್ಷಮೆಯಾಚಿಸಿದರು ಎಂದು ಟೀಕಿಸಲಾಗುತ್ತದೆ. ನೆಹರೂ ಹಾಗೂ ಸಾವರ್ಕರ್ ಅವರಿಗೆ ಹೋಲಿಕೆ ಸಾಧ್ಯವೇ' ಎಂದು ಪ್ರಶ್ನಿಸಿದರು.

ಲೇಖಕ ರೋಹಿತ್ ಚಕ್ರತೀರ್ಥ, 'ವಲಸಿಗರಾದ ಆರ್ಯರು ಸ್ಥಳೀಯರ ಮೇಲೆ ಆಕ್ರಮಣ ಮಾಡಿದರು ಎಂಬ ಸುಳ್ಳುಗಳನ್ನು ಬಿತ್ತಲಾಗಿದೆ. ಇದೀಗ ನಿಜವಾದ ಇತಿಹಾಸ ಏನು ಎಂಬುದು ಭಾರತೀಯರಿಗೆ ಅರ್ಥವಾಗಿದೆ' ಎಂದರು.

ಕಾರ್ಯಕ್ರಮದಲ್ಲಿ ವಕೀಲ ಒ.ಶಾಮ ಭಟ್, ಮಹಾರಾಜ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ.ಎಸ್. ಮುರಳಿ ಇದ್ದರು.

ಕೆರೆಯಲ್ಲಿ ಬಾಲಕನ ಶವಕ್ಕಾಗಿ ಶೋಧ

ಹಾರೋಹಳ್ಳಿ: ವಕೀಲರೊಬ್ಬರ ಸಲಿಂಗ ಕಾಮಕ್ಕೆ ಬಲಿಯಾದ ಬಾಲಕನ ಮೃತದೇಹದ ಪತ್ತೆಗಾಗಿ ಮಂಗಳೂರಿನ ಮುಳುಗು ತಜ್ಞರಿಂದ ಶನಿವಾರ ಗಬ್ಬಾಡಿ ಕೆರೆಯಲ್ಲಿ ಶೋಧ ಕಾರ್ಯಾಚರಣೆ ನಡೆಯಿತು.

ಮಗ ಕಾಣೆಯಾಗಿರುವ ಬಗ್ಗೆ ತಾಯಿ ಹತ್ತು ತಿಂಗಳ ಹಿಂದೆ ಕನಕಪುರ ಟೌನ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ವಕೀಲ ಶಂಕರೇಗೌಡ ಮತ್ತು ಆತನ ಸ್ನೇಹಿತ ಅರುಣ್ ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ಬಾಲಕನನ್ನು ಸಲಿಂಗ ಕಾಮಕ್ಕೆ ಬಳಸಿಕೊಂಡಿರುವ ವಿಷಯವನ್ನು ತಿಳಿಸಿ ದ್ದರು. ಕೃತ್ಯದ ನಂತರ ಬಾಲಕನನ್ನು ಮನೆಗೆ ಕಳಿಸಿದ್ದೇವೆ ಮುಂದೆ ಏನಾಯಿತು ಗೊತ್ತಿಲ್ಲ ಎಂದು ಆರೋಪಿಗಳು ಹೇಳಿಕೆ ನೀಡಿದ್ದರು.

ಬಾಲಕನ ಬಗ್ಗೆ ಸುಳಿವು ಸಿಗದ ಹಿನ್ನೆಲೆಯಲ್ಲಿ ಇಬ್ಬರನ್ನೂ ಮಂಪರು ಪರೀಕ್ಷೆಗೆ ಒಳಪಡಿಸಲಾಗಿತ್ತು. ಕೊಲೆ ಮಾಡಿ ಸಾಕ್ಷ್ಯ ನಾಶಪಡಿಸಲು ಗಬ್ಬಾಡಿ ಕೆರೆ ಮತ್ತು ಸಾತನೂರಿನ ದಾಳಿಂಬ ಬಾವಿಗೆ ಎಸೆದಿರುವ ಸಂಗತಿಯು ಮಂಪರು ಪರೀಕ್ಷೆ ವೇಳೆ ಬಯಲಾಗಿದೆ.

ಸಿಪಿಐ ಕೃಷ್ಣ ಲಮಾಣಿ ನೇತೃತ್ವದಲ್ಲಿ ಶೋಧ ಕಾರ್ಯ ನಡೆಯುತ್ತಿದೆ.

'ಮಹಿಳಾ ಪ್ರಾತಿನಿಧ್ಯ ಕಾನೂನಾಗಲಿ'

ಸಂವಾದದಲ್ಲಿ ಮಹಿಳಾ ಹೋರಾಟಗಾರ್ತಿ ಮೀನಾಕ್ಷಿ ಬಾಳಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಕೀಯ ಪಕ್ಷಗಳು ಮಹಿಳಾ ಪ್ರಾತಿನಿಧ್ಯ ಹೆಚ್ಚಿಸುವುದಕ್ಕಾಗಿ ಮಹಿಳಾ ಮೀಸಲಾತಿ ನೀಡಿಕೆಯು ಕಾನೂನಾಗಿ ರೂಪುಗೊಳ್ಳಬೇಕು' ಎಂದು ಮಹಿಳಾ ಹೋರಾಟಗಾರ್ತಿ ಮೀನಾಕ್ಷಿ ಬಾಳಿ ಆಗ್ರಹಿಸಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಸಮಿತಿ ಆಶ್ರಯದಲ್ಲಿ ಶನಿವಾರ ಇಲ್ಲಿ ನಡೆದ, '16ನೇ ವಿಧಾನಸಭೆ ಚುನಾವಣೆಯಲ್ಲಿ ಮಹಿಳೆಯರ ಪಾತ್ರ– ಪ್ರಾತಿನಿಧ್ಯ' ಕುರಿತಂತೆ ನಡೆದ ಮುಕ್ತ ಸಂವಾದದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

'ಈಗಾಗಲೇ ಹಲವು ರಾಜಕೀಯ ಪಕ್ಷಗಳು ಮತದಾರರಿಗೆ ಅದರಲ್ಲೂ ಪ್ರಮುಖವಾಗಿ ಮಹಿಳೆಯರಿಗೆ ಸೀರೆ, ಕುಕ್ಕರ್, ಗಡಿಯಾರ, ನಿವೇಶನ ನೀಡಿಕೆಯಂತಹ ಆಮಿಷವೊಡ್ಡುವ ಮೂಲಕ ಅವರ ಮತ ಖರೀದಿಗೆ ತೊಡಗಿವೆ. ಮಹಿಳೆಯರು ಈ ಬಗ್ಗೆ ಎಚ್ಚರ ವಹಿಸಿ ಮಹಿಳೆಯರ ಮತಗಳು ಮಾರಾಟಕ್ಕಿಲ್ಲ ಎಂಬುದನ್ನು ಮನದಟ್ಟು ಮಾಡಿಸಬೇಕು' ಎಂದರು.

'ರಾಜಕಾರಣಿಗಳು ಶೇ 40ರ ಕಮಿಷನ್ ಹಣದಲ್ಲಿಯೇ ಇಂತಹ ಆಮಿಷಗಳನ್ನು ಮತದಾರರಿಗೆ ಒಡ್ಡುತ್ತಿದ್ದಾರೆ. ಇದು ಮತದಾರರ ಬಡತನಕ್ಕೆ ಮಾಡುತ್ತಿರುವ ಅಪಮಾನ. ಅವರ ಸ್ವಾಭಿಮಾನವನ್ನು ಧ್ವಂಸ ಮಾಡುತ್ತಿರುವ ಕೆಲಸ. ಶರಣರು, ದಾರ್ಶನಿಕರು ಹುಟ್ಟಿ ಬಾಳಿದ ಈ ನಾಡಿನಲ್ಲಿ ಮತದಾರರು ಇಂತಹ ಆಮಿಷವೊಡ್ಡುವ ರಾಜಕಾರಣಿಗಳಿಗೆ ನಡುಕ ಹುಟ್ಟಿಸುವಂತಹ ಪ್ರಜ್ಞೆ ಮೆರೆಯಬೇಕಿದೆ' ಎಂದರು.



ಕಾರ್ಯಕ್ರಮದಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಕೆ.ಎಸ್‌. ವಿಮಲಾ ಮಾತನಾಡಿದರು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಗೌರಮ್ಮ, ರಾಜ್ಯ ಪ್ರಧಾನ ಕಾರ್ಯದರ್ಶಿ ದೇವಿ, ರಾಜ್ಯ ಘಟಕದ ಅಧ್ಯಕ್ಷೆ ಮೀನಾಕ್ಷಿ ಬಾಳಿ ಇದ್ದರು – ಪ್ರಜಾವಾಣಿ ಚಿತ್ರ

ನಿರ್ಣಯಗಳ ಕುರಿತಂತೆ ಮಾತನಾಡಿದ ಸಿಪಿಐ (ಎಂ) ಕಾರ್ಯದರ್ಶಿ ಮಂಡಳಿ ಸದಸ್ಯೆ ಎಸ್.ವರಲಕ್ಷ್ಮಿ, 'ಇತ್ತೀಚಿಗೆ ನಾನು ಗಂಗಾವತಿಯ ಬೀದಿಗಳಲ್ಲಿ ಮಹಿಳೆಯರು, ಮಕ್ಕಳು, ವೃದ್ಧರು ಒಂದೆಡೆ ಸೇರಿ ಗುಂಪುಗೂಡಿಕೊಂಡು ಅಭ್ಯರ್ಥಿ ಪರವಾಗಿ ಜೈಕಾರ ಹಾಕುತ್ತಾ ಹಳ್ಳಿ, ಪಟ್ಟಣ, ನಗರಗಳ ಬೀದಿಗಳಲ್ಲಿ ಸುತ್ತುವುದನ್ನು ನೋಡಿದೆ. ಈ ಜನರಿಗೆಲ್ಲಾ ದಿನವೊಂದಕ್ಕೆ ₹ 300ರಿಂದ ₹ 2 ಸಾವಿರದವರೆಗೂ ಹಣ ನೀಡಿ ಕರೆದುಕೊಂಡು ಬರಲಾಗುತ್ತಿದೆ ಎಂದು ಗೊತ್ತಾಯಿತು. ಜನಾರ್ದನ ರೆಡ್ಡಿ ಅವರ ಪರವಾಗಿ ಘೋಷಣೆ ಕೂಗುತ್ತಿದ್ದ ಈ ಹೊಸ ಟ್ರೆಂಡ್ ಅಘಾತಕಾರಿಯಾದದ್ದು' ಎಂದರು.

ಸಂವಾದದಲ್ಲಿ ಜೆಡಿಎಸ್‌ನ ಮಹಿಳಾ ಘಟಕದ ಕಾರ್ಯಾಧ್ಯಕ್ಷೆ ನಜ್ಮಾ ನಜೀರ್, ಬಿಎಸ್‌ಪಿಯ ಅವನಿಕಾ, ಸಿಪಿಐಎಂಎಲ್‌ನ ಗಾಂಧಿಮತಿ, ಮಹಿಳಾ ಸಂಘಟನೆಯ ಕಮಲಾ, ಶಗೂನ್, ಜನವಾದಿ ಸಂಘಟನೆಯ ಕೆ.ಎಸ್.ಲಕ್ಷ್ಮಿ, ಪತ್ರಕರ್ತೆ ಸಿ.ಜಿ. ಮಂಜುಳಾ, ಸಿಐಟಿಯು ಸಂಘಟನೆಯ ಮಾಲಿನಿ ಮಸ್ತಿ, ವಕೀಲೆ ಮಹಿಮಾ ಅವರು ಸಾರ್ವಜನಿಕ ಕ್ಷೇತ್ರ, ದುಡಿಯುವ ಸ್ಥಳ, ಕುಟುಂಬ ಸೇರಿದಂತೆ ಎಲ್ಲೆಡೆ ಮಹಿಳೆಯರ ಮೇಲೆ ನಡೆಯುತ್ತಿರುವ ಶೋಷಣೆಗಳ ಬಗ್ಗೆ ವಿವರಿಸಿದರು.

ಪಿಯು ಉತ್ತರ ಪತ್ರಿಕೆಗಳ ಮಾದರಿ ಪ್ರಕಟ

ಬೆಂಗಳೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ (ಕೆಎಸ್‌ಇಎಬಿ) ದ್ವಿತೀಯ ಪಿಯು ಪರೀಕ್ಷೆಗಳ ಮಾದರಿ ಉತ್ತರ ಪತ್ರಿಕೆಗಳನ್ನು ಶನಿವಾರ ವೆಬ್‌ಸೈಟ್‌ನಲ್ಲಿ ಪ್ರಕಟ ಮಾಡಿದೆ.

ಪರೀಕ್ಷೆಗಳು ಮುಗಿದ ವಿಷಯಗಳ ಮಾದರಿ ಉತ್ತರಗಳನ್ನು ಪ್ರಕಟಿಸಲಾಗಿದೆ. ವಿದ್ಯಾರ್ಥಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು http://kseab.karnataka.gov.in ಗೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.



ನಗರದಲ್ಲಿ ಕನ್ನಡ ಸಂಘರ್ಷ ಸಮಿತಿ ಆಯೋಜಿಸಿದ್ದ ರಾಷ್ಟ್ರಕವಿ ಎಂ. ಗೋವಿಂದ ಪೈ ಅವರ ಜನ್ಮ ದಿನದ ಕಾರ್ಯಕ್ರಮದಲ್ಲಿ ಕವನ ಸ್ಪರ್ಧೆ ವಿಜೇತರಾದ ಶೈಲೇಶ್ ಶಿವಕುಮಾರ್, ಗಿ. ಚನ್ನಬಸವಸ್ವಾಮಿ ಹಾಗೂ ಉದಯಕುಮಾರ್ ಎಸ್ ಆಲ್ವಿ ಅವರಿಗೆ ಬಹುಮಾನ ವಿತರಿಸಲಾಯಿತು. ತಾ.ಸಿ.ತಿಮ್ಮಯ್ಯ, ರಾಮಣ್ಣ ಎಚ್‌. ಕೋಡಿಹೊಸಹಳ್ಳಿ, ಡಾ. ಆರ್‌. ಲಕ್ಷ್ಮೀನಾರಾಯಣ, ಡಾ.ಬೈರಮಂಗಲ ರಾಮೇಗೌಡ, ಎ.ಎಸ್‌. ನಾಗರಾಜಸ್ವಾಮಿ, ಇಂದಿರಾ ಶರಣ್ ಜಮ್ಮಲದಿನ್ನಿ ಇದ್ದಾರೆ.

ರಾಜ್ಯ ರಾಜಕಾರಣಕ್ಕೆ ಕೆ.ಎಚ್‌. ಮುನಿಯಪ್ಪ

● ಕೆ.ಓಂಕಾರ ಮೂರ್ತಿ

ಕೋಲಾರ: ಸತತ ಏಳು ಬಾರಿ ಸಂಸದರಾಗಿ, ಯುಪಿಎ ಸರ್ಕಾರದ ಅವಧಿಯಲ್ಲಿ ಹತ್ತು ವರ್ಷ ಕೇಂದ್ರ ಸಚಿವರಾಗಿ ಕಾರ್ಯನಿರ್ವಹಿಸಿದ್ದ ಕೆ.ಎಚ್.ಮುನಿಯಪ್ಪ ಮೊದಲ ಬಾರಿಗೆ ರಾಜ್ಯ ರಾಜಕಾರಣ ಪ್ರವೇಶಿಸಿದ್ದಾರೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಕೋಲಾರದಿಂದ ಸೋಲು ಕಂಡಿದ್ದ ಅವರಿಗೆ ದೇವನಹಳ್ಳಿ ಮೀಸಲು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ಲಭಿಸಿದೆ. ಕಾಂಗ್ರೆಸ್ ಹಿರಿಯ ರಾಜಕಾರಣಿಗಳಲ್ಲಿ ಒಬ್ಬರಾದ ಮುನಿಯಪ್ಪ ಅವರು 30 ವರ್ಷಗಳ ಬಳಿಕ ರಾಜ್ಯ ರಾಜಕಾರಣ ಪ್ರವೇಶಿಸಿರುವುದು ಕುತೂಹಲ ಮೂಡಿಸಿದೆ.

ಪರಿಶಿಷ್ಟ ಜಾತಿಯ ಎಡಗೈ ಸಮುದಾಯಕ್ಕೆ ಸೇರಿರುವ ಅವರು 1991ರಲ್ಲಿ ಮೊದಲ ಬಾರಿ ಕೋಲಾರ ಕ್ಷೇತ್ರದಿಂದ ಕಣಕ್ಕಿಳಿದು ಲೋಕಸಭೆ ಪ್ರವೇಶಿಸಿದ್ದರು. 7 ಬಾರಿ ಗೆದ್ದಿದ್ದ ಅವರು ಮನಮೋಹನ್ ಸಿಂಗ್ ಪ್ರಧಾನಿ ಆಗಿದ್ದ ಅವಧಿಯಲ್ಲಿ ಭೂಸಾರಿಗೆ ಮತ್ತು ಹೆದ್ದಾರಿ ಖಾತೆ ರಾಜ್ಯ ಸಚಿವ, ರೈಲ್ವೆ ಖಾತೆ ರಾಜ್ಯ ಸಚಿವ ಹಾಗೂ ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ಖಾತೆ ರಾಜ್ಯ ಸಚಿವರಾಗಿ ಕೆಲಸ ಮಾಡಿದ್ದಾರೆ.



ಕೆ.ಎಚ್‌. ಮುನಿಯಪ್ಪ

2019ರ ಲೋಕಸಭಾ ಚುನಾವಣೆಯಲ್ಲಿ ಕೋಲಾರದಲ್ಲಿ ಘಟಬಂಧನ್ ಹೆಸರಿನಲ್ಲಿ ಕೆಲ ಕಾಂಗ್ರೆಸ್ ಶಾಸಕರು ಹಾಗೂ ಮುಖಂಡರು ಮುನಿಯಪ್ಪ ಸೋಲಿಗೆ ಕಾರಣರಾಗಿದ್ದರು ಎಂಬ ಆರೋಪ ಕೇಳಿ ಬಂದಿತ್ತು. ಹೀಗಾಗಿ, ಜಿಲ್ಲೆಯಲ್ಲಿ ಕೆ.ಆರ್. ರಮೇಶ್ ಕುಮಾರ್ ಹಾಗೂ ಮುನಿಯಪ್ಪ ನೇತೃತ್ವದಲ್ಲಿ ಎರಡು ಬಣಗಳು ಸೃಷ್ಟಿಯಾಗಿ ಪದೇ ಪದೇ ಕಿತ್ತಾಟ ನಡೆಯುತಿತ್ತು.

ಕೋಲಾರದಲ್ಲಿ ಸಿದ್ದರಾಮಯ್ಯ ಸ್ಪರ್ಧೆ ವಿಚಾರವಾಗಿಯೂ ಎರಡು ಬಣಗಳ ನಡುವೆ ವೈಮನಸು ಜೋರಾಗಿತ್ತು. ಈ ಎಲ್ಲಾ ರಾಜಕೀಯ ವಿದ್ಯಮಾನಗಳಿಂದ ಮುನಿಸಿಕೊಂಡ ಮುನಿಯಪ್ಪ ಒಂದು ಹಂತದಲ್ಲಿ ಕಾಂಗ್ರೆಸ್ ತೊರೆಯುತ್ತಾರೆ ಎಂಬ ವದಂತಿ ದಟ್ಟವಾಗಿತ್ತು.

ಈಚೆಗೆ ಸಿದ್ದರಾಮಯ್ಯ ಖುದ್ದಾಗಿ ಎರಡು ಬಾರಿ ಮುನಿಯಪ್ಪ ಅವರನ್ನು ಭೇಟಿಯಾಗಿ ಸಂಧಾನ ಮಾಡಿಕೊಂಡಿದ್ದರು. ಕೋಲಾರದಲ್ಲಿ ಸಹಕರಿಸಿದರೆ, ದೇವನಹಳ್ಳಿಯಲ್ಲಿ ಸ್ಪರ್ಧಿಸಲು ಸಹಾಯ ಮಾಡುವ ಒಡಂಬಡಿಕೆ ನಡೆದಿತ್ತು ಎಂಬ ಸುದ್ದಿ ರಾಜಕೀಯ ವಲಯದಲ್ಲಿ ಹರಿದಾಡುತ್ತಿತ್ತು. ಸಿದ್ದರಾಮಯ್ಯ ಭೇಟಿಯ ಬಳಿಕ ಮುನಿಯಪ್ಪ ಮಾತಿನ ವರಸೆಯೇ ಬದಲಾಯಿತು.

'ಕಲ್ಲು ನೆಟ್ಟಿದ್ದೇ ಬಿಜೆಪಿ ಸಾಧನೆ'

ಪ್ರಜಾವಾಣಿ ವಾರ್ತೆ

ರಾಮನಗರ: ಚುನಾವಣೆ ಹೊಸ್ತಿಲಲ್ಲಿ ಬರೀ ಕಲ್ಲು ನೆಡುವುದೇ (ಶಂಕುಸ್ಥಾಪನೆ) ಬಿಜೆಪಿ ಸಾಧನೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ವ್ಯಂಗ್ಯವಾಡಿದರು.

ತಾಲ್ಲೂಕಿನ ಜಾಲಮಂಗಲ ಗ್ರಾಮದಲ್ಲಿ ಶನಿವಾರ ನಡೆದ ಜೆಡಿಎಸ್ ಸಮಾವೇಶದಲ್ಲಿ ಮಾತನಾಡಿದರು. ಬಿಜೆಪಿ ಸರ್ಕಾರ ಕಳೆದ ಮೂರು ವರ್ಷಗಳಿಂದ ಜಿಲ್ಲೆಗೆ ಏನೂ ಮಾಡಿಲ್ಲ. ಹೀಗಿರುವಾಗ ರಾಮನಗರದಲ್ಲಿ ಸೋಮವಾರ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆಗೆಂದು ಮುಖ್ಯಮಂತ್ರಿ ಬರುತ್ತಿದ್ದಾರೆ ಎಂದು ಹೇಳಿದರು.

ರಾಜೀವ್ ಗಾಂಧಿ ಆರೋಗ್ಯ ವಿ.ವಿ. ಕ್ಯಾಂಪಸ್ 2006ರಲ್ಲಿ ನಾನೇ ಘೋಷಿಸಿದ ಯೋಜನೆ. ಮಾವು ಸಂಸ್ಕರಣ ಘಟಕ, ಹೈಟೆಕ್ ಮಾರುಕಟ್ಟೆ ನಿರ್ಮಾಣಕ್ಕೆ ಈಗ ಕೇವಲ ಒಂದು ಕಲ್ಲು ಮಾತ್ರ ಇರಲಿದೆ. ನಂತರ ಬರುವ ಸರ್ಕಾರಗಳೇ ಆ ಕೆಲಸಗಳನ್ನು ಮಾಡಬೇಕು ಎಂದರು.

ಈ ಬಾರಿಯೂ ಜಿಲ್ಲೆಯ ಚನ್ನಪಟ್ಟಣ, ಮಾಗಡಿ, ರಾಮನಗರದಲ್ಲಿ ಜೆಡಿಎಸ್ ಅಭ್ಯರ್ಥಿಗಳು ಗೆಲ್ಲಲಿದ್ದಾರೆ. ಕನಕಪುರದಲ್ಲೂ ಇದು ಸಾಧ್ಯವಿದೆ. 2028ಕ್ಕೆ ನಿಶ್ಚಿತವಾಗಿ ಕನಕಪುರದಲ್ಲಿ ಜೆಡಿಎಸ್ ಅಭ್ಯರ್ಥಿ ಗೆಲ್ಲಲಿದ್ದಾರೆ ಎಂದರು.

₹30 ಕೋಟಿ ಆಮಿಷ: ಹಿಂದೆ ಸಮ್ಮಿಶ್ರ ಸರ್ಕಾರವನ್ನು ಅಧಿಕಾರದಿಂದ ತೆಗೆಯುವ ವೇಳೆ ಮಾಗಡಿ ಶಾಸಕ ಎ.ಮಂಜುನಾಥ್ ಅವರಿಗೂ ಬಿಜೆಪಿ ₹30 ಕೋಟಿ ಆಮಿಷ ಒಡ್ಡಿತ್ತು. ಆದರೆ ಅವರು ಇದನ್ನು ತಿರಸ್ಕರಿಸಿದ್ದರು. ಇವರನ್ನು ಮತ್ತೊಮ್ಮೆ ನನ್ನ ಜೊತೆ ಕೆಲಸ ಮಾಡಲು ವಿಧಾನಸೌಧಕ್ಕೆ ಕಳುಹಿಸಿಕೊಡಿ ಎಂದು ಮತದಾರರಲ್ಲಿ ಮನವಿ ಮಾಡಿದರು. ರಾಮನಗರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಮಾತನಾಡಿದರು. ಶಾಸಕ ಎ. ಮಂಜುನಾಥ್, ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ಅಭಿಮತ

'ಕನ್ನಡದ ಸೀಮಾರೇಖೆ ವಿಸ್ತರಿಸುವ ಹಳಗನ್ನಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊಸ ತಲೆಮಾರಿನ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳಿಗೆ ಹಳಗನ್ನಡದ ರುಚಿ ಹಿಡಿಸಬೇಕು. ಹಳಗನ್ನಡ ಕಾವ್ಯಗಳ ಅಭ್ಯಾಸದಿಂದ ಕನ್ನಡದ ಸೀಮಾರೇಖೆ ವಿಸ್ತರಣೆ ಆಗಲಿದೆ' ಎಂದು ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ತಿಳಿಸಿದರು.

ಕಮಲಾ ಹಂಪನಾ ಸಾಹಿತ್ಯ ವೇದಿಕೆ ಹಾಗೂ ಕರ್ನಾಟಕ ಜೈನ್ ಅಸೋಸಿಯೇಷನ್ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡ 'ಅಕ್ಕರಗೊಟ್ಟಿಯ ಅಲಂಪಿನ ಇಂಪು ಚಂಪೂ ಕಬ್ಬಗಳ ಹಬ್ಬ'ದಲ್ಲಿ ಭಾಗವಹಿಸಿ, ಮಾತನಾಡಿದರು.

'ಹಳತನ್ನು ಕಳೆದುಕೊಂಡರೆ ಹೊಸದನ್ನು ಸೃಷ್ಟಿಸುವುದು ಅಸಾಧ್ಯ. ಆದ್ದರಿಂದ ಹೊಸ ಕಣ್ಣು, ಹೊಸ ಮನಸ್ಸಿನಿಂದ ಹಳಗನ್ನಡ ಸಾಹಿತ್ಯವನ್ನು ಪ್ರವೇಶ ಮಾಡಬೇಕು' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಪ್ರೊ.ಸಿ. ಮಹಾದೇವಪ್ಪ ಅವರಿಗೆ ಗುರುವಂದನೆ ಸಲ್ಲಿಸಲಾಯಿತು. (ಎಡದಿಂದ) ಶಿಕ್ಷಣ ತಜ್ಞ ಗುರುರಾಜ ಕರಜಗಿ, ವೈದ್ಯ ಸಾಹಿತಿ ಡಾ.ನಾ. ಸೋಮೇಶ್ವರ, ಸಾಹಿತಿಗಳಾದ ಹಂ.ಪ. ನಾಗರಾಜಯ್ಯ, ಕಮಲಾ ಹಂಪನಾ ಹಾಗೂ ಕರ್ನಾಟಕ ಜೈನ ಸಂಘದ ಅಧ್ಯಕ್ಷ ಬಿ. ಪ್ರಸನ್ನಯ್ಯ ಇದ್ದಾರೆ. – ಪ್ರಜಾವಾಣಿ ಚಿತ್ರ

'ಪ್ರಾಚೀನ ಕನ್ನಡ ಕಾವ್ಯ ಸಂದರ್ಭ ನೋಡಿದರೆ ಅಧಿಕಾರ ಮತ್ತು ಕಾವ್ಯದ ಸಂಬಂಧ ಬಹಳ ಸಂಕೀರ್ಣವಾಗಿದೆ. ಪಂಪ ಹಾಕಿದ ಮಾರ್ಗದಲ್ಲಿ ಮುಂದಿನ ಕವಿಗಳು ನಡೆದಿದ್ದಾರೆ. ರಾಜನನ್ನು ಕೀರ್ತಿಸುವುದಕ್ಕೆ ಮಾತ್ರ ಪ್ರಾಚೀನ ಕವಿಗಳು ಕಾವ್ಯ ರಚಿಸಲಿಲ್ಲ. ಆಗಿನ ಕಾವ್ಯಗಳಲ್ಲಿ ಸೃಜನಶೀಲತೆ ಮತ್ತು ಅನುವಾದದ ನಡುವಿನ ಗೆರೆ ತಿಳಿಯಾಗಿತ್ತು. ಈಗ ಪಾಶ್ಚಿಮಾತ್ಯ ಸಾಹಿತ್ಯದ ಪ್ರಭಾವದಿಂದ ಅನುವಾದವು ಸೃಜನಶೀಲತೆಯನ್ನು ಕಳೆದುಕೊಳ್ಳುತ್ತಿದೆ' ಎಂದು ಕವಿ ಎಚ್.ಎಸ್. ಶಿವಪ್ರಕಾಶ್ ಅಭಿಪ್ರಾಯಪಟ್ಟರು.

ಶ್ರವಣಬೆಳಗೊಳದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರನ್ನು ಸ್ಮರಿಸಿ ಭಾವುಕರಾದ ಸಾಹಿತಿ ಹಂ.ಪ. ನಾಗರಾಜಯ್ಯ, 'ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಹಳಗನ್ನಡದ ಬಗ್ಗೆ ಅಗಾಧ ಪ್ರಭುತ್ವ ಹೊಂದಿದ್ದರು. ಸಾಹಿತ್ಯದ ಬಗ್ಗೆ ಅವರು ವಿಶೇಷ ಆಸಕ್ತಿ ಹೊಂದಿದ್ದರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಆದಿಕವಿ ಪಂಪನ ಸಹೋದರ ಜಿನವಲ್ಲಭನಿಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸೂಕ್ತ ಸ್ಥಾನಮಾನ ಸಿಗಲಿಲ್ಲ. ಜಿನವಲ್ಲಭ ತ್ರಿಭಾಷಾ ಕವಿ ಯಾಗಿದ್ದು, ಅವನು ತೆಲುಗು ಭಾಷೆಯ ಆದಿಕವಿಯಾಗಿದ್ದಾನೆ' ಎಂದರು.

ಇದಕ್ಕೂ ಮೊದಲು ಪ್ರೊ.ಸಿ. ಮಹಾದೇವಪ್ಪ ಅವರಿಗೆ ಗುರುವಂದನೆ ಸಲ್ಲಿಸಲಾಯಿತು.

ಸಾರ್ವಜನಿಕರ ಸಮಯ ಪ್ರಜ್ಞೆ • ಹೆತ್ತವರ ಮಡಿಲು ಸೇರಿದ ಕಂದಮ್ಮ

ಮೊಬೈಲ್ ಜೊತೆ ಮಗು ಕದ್ದೊಯ್ದಿದ್ದ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯೊಂದಕ್ಕೆ ನುಗ್ಗಿ ಮೊಬೈಲ್ ಜೊತೆ ಮಗು ಕದ್ದೊಯ್ದಿದ್ದ ಆರೋಪಿ ನಂದಿನಿ ಅಲಿಯಾಸ್ ಆಯೇಷಾ ಎಂಬುವವರನ್ನು ಕಲಾಸಿಪಾಳ್ಯ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.

‘ಮುಳಬಾಗಿಲಿನ ಆಯೇಷಾ, ಶಿವಾಜಿನಗರದಲ್ಲಿ ವಾಸವಿದ್ದರು. ತಮ್ಮ ಹೆಸರು ನಂದಿನಿ ಎಂಬುದಾಗಿ ಸುಳ್ಳು ಹೇಳಿಕೊಂಡು ಓಡಾಡುತ್ತಿದ್ದರು. ಮಗು ಕದ್ದೊಯ್ದಿದ್ದ ಆರೋಪದಡಿ ಇವರನ್ನು ಬಂಧಿಸಲಾಗಿದೆ. ಇವರ ಬಳಿ 5 ಮೊಬೈಲ್ ಜಪ್ತಿ ಮಾಡಲಾಗಿದೆ. ಮಗುವನ್ನು ಸುರಕ್ಷಿತವಾಗಿ ಪೋಷಕರ ಸುಪರ್ದಿಗೆ ಒಪ್ಪಿಸಲಾಗಿದೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

ನಿದ್ರೆಗೆ ಜಾರಿದ್ದ ತಾಯಿ: ‘ಕಲಾಸಿಪಾಳ್ಯ ದುರ್ಗಮ್ಮ ದೇವಸ್ಥಾನ ರಸ್ತೆಯ ನಿವಾಸಿ ಫಾರ್ಹೀನಾ ಬೇಗಂ ಅವರನ್ನು ಬನಶಂಕರಿಯ ಸರಬಂಡೆಪಾಳ್ಯದ ನದೀಮ್ ಎಂಬುವವರ ಜೊತೆ ಮದುವೆ ಮಾಡಿಕೊಡಲಾಗಿದೆ. 42 ದಿನಗಳ ಹಿಂದೆ ಹೆಣ್ಣು ಮಗುವಿಗೆ ಜನ್ಮ ನೀಡಿದ್ದ ಫಾರ್ಹೀನಾ, ತವರು ಮನೆಯಲ್ಲಿ ಉಳಿದುಕೊಂಡಿದ್ದರು. ಮಗುವಿಗೆ ಶೇಕ್ ಆಯತ್ ಎಂಬುದಾಗಿ ಹೆಸರಿಡಲಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ



ಆಯೆಷಾ

‘ಶನಿವಾರ ಬೆಳಿಗ್ಗೆ 7.30 ಗಂಟೆ ಸುಮಾರಿಗೆ ಮಗುವಿಗೆ ಎದೆ ಹಾಲು ಕುಡಿಸಿದ್ದ ತಾಯಿ ಫಾರ್ಹೀನಾ, ಕೆಲ ನಿಮಿಷಗಳ ನಂತರ ನಿದ್ರೆಗೆ ಜಾರಿದ್ದರು. ಮಗು ಮಾತ್ರ ಎಚ್ಚರವಿತ್ತು. ಬಾಗಿಲು ತೆರೆದಿರುವುದನ್ನು ಗಮನಿಸಿದ್ದ ಆರೋಪಿ ಆಯೇಷಾ, ಒಳಗೆ ನುಗ್ಗಿದ್ದರು. ಫಾರ್ಹೀನಾ ಮೊಬೈಲ್ ತೆಗೆದುಕೊಂಡಿದ್ದರು. ಮಗುವನ್ನೂ ಎತ್ತಿಕೊಂಡಿದ್ದ ಆರೋಪಿ, ಯಾರಿಗಾದರೂ ಮಾರಿದರೆ ಹಣ ಬರುವುದಾಗಿ ತಿಳಿದು ಅದರ ಸಮೇತ ಸ್ಥಳದಿಂದ ಪರಾರಿಯಾಗಿದ್ದರು. ಈ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು’ ಎಂದು ಮೂಲಗಳು ತಿಳಿಸಿವೆ.

‘ಎಚ್ಚರಗೊಂಡಿದ್ದ ತಾಯಿ, ಮಗು ಕಾಣಿಸದಿದ್ದರಿಂದ ಗಾಬರಿಗೊಂಡಿದ್ದರು. ಸಂಬಂಧಿಕರೆಲ್ಲರೂ ಮಗುವಿಗಾಗಿ ಹುಡುಕಾಟ ಆರಂಭಿಸಿದ್ದರು. ಠಾಣೆಗೂ ಮಾಹಿತಿ ನೀಡಿದ್ದರು’ ಎಂದು ಹೇಳಿವೆ.



ಕಲಾಸಿಪಾಳ್ಯ ಪೊಲೀಸರು ಮಗುವನ್ನು ಸುಪರ್ದಿಗೆ ನೀಡುತ್ತಿದ್ದಂತೆ ತಂದೆ–ತಾಯಿ ಭಾವುಕರಾದರು

ಮಗು ತನ್ನದೆಂದು ನಾಟಕ: ‘ಮಾಗಡಿ ರಸ್ತೆಯ ರೈಲ್ವೆ ಕ್ವಾರ್ಟರ್ಸ್ ಬಳಿ ಆಯೇಷಾ ಮಗುವನ್ನು ಎತ್ತಿಕೊಂಡು ಹೊರಟಿದ್ದರು. ಬಾಟಲಿಯೊಂದರಲ್ಲಿ ಹಾಲು ಹಾಕಿಕೊಂಡು ಮಗುವಿಗೆ ಕುಡಿಸಲು ಯತ್ನಿಸುತ್ತಿದ್ದರು. ಆದರೆ, ಮಗು ಹಾಲು ಕುಡಿದಿರಲಿಲ್ಲ. ಹಸಿವಿನಿಂದ ಹೆಚ್ಚು ಅಳುತ್ತಿತ್ತು’ ಎಂದು ಸ್ಥಳೀಯ ನಿವಾಸಿ ಹೇಮಾವತಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೆಲ ಜನರ ಬಳಿ ಹೋಗಿದ್ದ ಆಯೇಷಾ, ತನ್ನ ಹೆಸರು ನಂದಿನಿ ಎಂದಿದ್ದರು. ‘ಮಗು ಅಳುತ್ತಿದೆ. ನನ್ನ ಬಳಿ ಹಣವಿಲ್ಲ. ಹೊಟ್ಟೆಗೆ ಏನು ಕೊಟ್ಟಿಲ್ಲ. ಬಟ್ಟೆ ಸಹ ಇಲ್ಲ. ದಯವಿಟ್ಟು ಸಹಾಯ ಮಾಡಿ’ ಎಂದು ಅತ್ತಿದ್ದಳು. ಸ್ಥಳೀಯರೊಬ್ಬರು, ತಿನ್ನಲು ಆಹಾರ ಕೊಟ್ಟಿದ್ದರು. ಅಲ್ಲಿಯವರೆಗೂ ಮಗು ತನ್ನದೆಂದು ಆರೋಪಿ ನಾಟಕವಾಡಿದ್ದರು.’

‘ಆರೋಪಿ ಮುಖದ ಬಣ್ಣ ಕಪ್ಪಾಗಿತ್ತು. ಮಗು ನೋಡಲು ಚೆನ್ನಾಗಿತ್ತು. ಮಗು ಕೈಯಲ್ಲಿ ಚಿನ್ನದ ಕೈಗಡಗ ಇತ್ತು. ಅಷ್ಟಾದರೂ ಮಹಿಳೆ ತಿನ್ನಲು ಕೇಳುತ್ತಿದ್ದರು. ಹೀಗಾಗಿ, ಅವರ ಮೇಲೆ ಅನುಮಾನ ಬಂತು. ಹೆಚ್ಚು ವಿಚಾರಿಸುತ್ತಿದ್ದಂತೆ ಉತ್ತರಿಸಲು ತಡವರಿಸಿದ್ದ ಆರೋಪಿ, ಸ್ಥಳದಿಂದ ಓಡಲಾರಂಭಿಸಿದ್ದರು. ಮಗು ಪಡೆಯಲು ಹೋಗಿದ್ದವರ ಕೈ ಪರಚಿದ್ದರು’ ಎಂದರು.

‘ಆರೋಪಿಯನ್ನು ಹಿಡಿದು ಠಾಣೆಗೆ ಮಾಹಿತಿ ನೀಡಲಾಯಿತು. ಸ್ಥಳಕ್ಕೆ ಬಂದು ಪೊಲೀಸರು, ಮಹಿಳೆಯನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ ತಪ್ಪೊಪ್ಪಿಕೊಂಡರು. ಬಳಿಕ, ಪೊಲೀಸರು ಮಗುವನ್ನು ಸುರಕ್ಷಿತವಾಗಿ ಪೋಷಕರಿಗೆ ಒಪ್ಪಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಮೊಬೈಲ್ ಕಳ್ಳತನ ವೃತ್ತಿ: ‘ಆರೋಪಿ ಆಯೇಷಾ, ಮೊಬೈಲ್ ಕಳ್ಳತನ ಮಾಡುವುದನ್ನೇ ವೃತ್ತಿ ಮಾಡಿಕೊಂಡಿದ್ದರು. ಹಲವು ಠಾಣೆ ವ್ಯಾಪ್ತಿಯಲ್ಲಿ ಮೊಬೈಲ್ ಕದ್ದಿರುವ ಅವರು, ಅವುಗಳನ್ನು ಮಾರಿ ಬಂದ ಹಣದಲ್ಲಿ ಜೀವನ ನಡೆಸುತ್ತಿದ್ದರು. ಮಗುವನ್ನೂ ಮೊಬೈಲ್ ರೀತಿಯಲ್ಲಿ ಯಾರಿಗಾದರೂ ಮಾರಬಹುದೆಂದು ತಿಳಿದಿದ್ದರು. ಸಾರ್ವಜನಿಕರ ಸಮಯ ಪ್ರಜ್ಞೆಯಿಂದ ಮಗು ಹೆತ್ತವರ ಮಡಿಲು ಸೇರಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಎದೆಹಾಲು ಉಣಿಸಿದ ತಾಯಿ ಹೃದಯ’

‘ಆರೋಪಿತ ಮಹಿಳೆ ಕೈಯಲ್ಲಿದ್ದ ಮಗುವನ್ನು ಸಿಬ್ಬಂದಿ ಸುಪರ್ದಿಗೆ ಪಡೆದಿದ್ದರು. ಹಸಿವಿನಿಂದಾಗಿ ಮಗು ಅಳು ನಿಲ್ಲಿಸಿರಲಿಲ್ಲ. ಮಗುವಿನ ಯಾತನೆ ಕಂಡ ಸ್ಥಳೀಯ ನಿವಾಸಿ ಕವಿತಾ, ಅದನ್ನು ಎತ್ತಿಕೊಂಡು ಎರಡು ಬಾರಿ ಎದೆಹಾಲು ಉಣಿಸಿದರು. ಮಗುವನ್ನು ಠಾಣೆಗೆ ಕರೆದೊಯ್ದು ಪೋಷಕರಿಗೆ ಒಪ್ಪಿಸುವವರೆಗೂ ಅದರ ಜೊತೆಗಿದ್ದರು’ ಎಂದು ಪೊಲೀಸರು ಹೇಳಿದರು.

‘ಕವಿತಾ ಕೆಲಸಕ್ಕೆ ಕೃತಜ್ಞತೆ ಸಲ್ಲಿಸಿದ ತಾಯಿ ಫಾರ್ಹೀನಾ ಅವರು, ‘ಧರ್ಮದ ಹಂಗು ಮೀರಿದ ತಾಯಿ ಹೃದಯ ನಿಮ್ಮದು. ಮಗುವನ್ನು ಹುಡುಕಿಕೊಟ್ಟ ನಿಮ್ಮೆಲ್ಲರ ಸಹಾಯವನ್ನು ಜೀವನಪರ್ಯಂತ ಮರೆಯುವುದಿಲ್ಲ’ ಎಂದು ಹೊಗಳಿದರು.

ಮಗು ಹಸ್ತಾಂತರ ವೇಳೆ ಹಿಂದೂ–ಮುಸ್ಲಿಂ ಮುಖಂಡರೂ ಠಾಣೆಯಲ್ಲಿದ್ದರು’ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಒಳಮೀಸಲಾತಿ ಗೊಂದಲಕ್ಕೆ ತೆರೆ: ಛಲವಾದಿ ನಾರಾಯಣಸ್ವಾಮಿ

ಬೆಂಗಳೂರು: ಪರಿಶಿಷ್ಟ ಜಾತಿಗಳ ಹೋರಾಟಕ್ಕೆ ಮನ್ನಣೆ ನೀಡಿ, ಸದಾಶಿವ ಆಯೋಗದ ವರದಿಯ ಶಿಫಾರಸಿನಂತೆ ಒಳಮೀಸಲಾತಿ ನೀಡಲು ದೃಢ ನಿರ್ಧಾರ ತೆಗೆದುಕೊಂಡ ರಾಜ್ಯ ಸರ್ಕಾರದ ಕ್ರಮವನ್ನು ವಿಧಾನಪರಿಷತ್ ಸದಸ್ಯ, ರಾಜ್ಯ ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಸ್ವಾಗತಿಸಿದ್ದಾರೆ.

ದಲಿತರ ಹೋರಾಟಕ್ಕೆ ಬಿಜೆಪಿ ಗೌರವ ಕೊಟ್ಟಿದೆ. ಮೀಸಲಾತಿ ವರ್ಗೀಕರಣದಿಂದ ಸಮುದಾಯಗಳಲ್ಲಿದ್ದ ಗೊಂದಲ ನಿವಾರಣೆಯಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಲ್ಲರನ್ನೂ ಖುಷಿಯಾಗಿಡುವ ನಿರ್ಧಾರ ಕೈಗೊಂಡಿದ್ದಾರೆ. ಸಮುದಾಯ ಗೊಂದಲಕ್ಕೆ ಒಳಗಾಗದೆ, ಸಹೋದರರಂತೆ ಬಾಳುವ ವಾತಾವರಣ ನಿರ್ಮಾಣವಾಗಬೇಕು ಎಂದು ಹೇಳಿದ್ದಾರೆ.



‘ವಾಲ್ಮೀಕಿ ಜನಾಂಗದ 20 ಅಭ್ಯರ್ಥಿಗಳಿಗೆ ಟಿಕೆಟ್ ನೀಡಿ’

ಬೆಂಗಳೂರು: ‘ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ವಾಲ್ಮೀಕಿ ನಾಯಕ ಸಮುದಾಯದ 20 ಅಭ್ಯರ್ಥಿಗಳಿಗೆ ಟಿಕೆಟ್ ನೀಡಬೇಕು’ ಎಂದು ರಾಜಕೀಯ ಪಕ್ಷಗಳಿಗೆ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಒತ್ತಾಯಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ಅಧ್ಯಕ್ಷ ಜಿ.ಟಿ.ಚಂದ್ರಶೇಖರ್, ‘ರಾಜ್ಯದಲ್ಲಿ 60 ಲಕ್ಷಕ್ಕೂ ಅಧಿಕ ಜನಸಂಖ್ಯೆಯನ್ನು ನಮ್ಮ ಸಮುದಾಯ ಹೊಂದಿದೆ. ಸದ್ಯ 15 ಮೀಸಲು ಕ್ಷೇತ್ರಗಳಲ್ಲಿ ಸಮುದಾಯದ ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ. ಹೆಚ್ಚುವರಿಯಾಗಿ 5 ಕ್ಷೇತ್ರಗಳಲ್ಲಿ ನಮ್ಮ ಸಮುದಾಯದ ಅಭ್ಯರ್ಥಿಗಳಿಗೆ ಟಿಕೆಟ್ ನೀಡಬೇಕು. ಸಮುದಾಯದ ಮಹಿಳಾ ಅಭ್ಯರ್ಥಿಗಳನ್ನೂ ಪರಿಗಣಿಸಬೇಕು’ ಎಂದು ಆಗ್ರಹಿಸಿದರು.

‘80 ಕ್ಷೇತ್ರಗಳಲ್ಲಿ ವಾಲ್ಮೀಕಿ ನಾಯಕ ಸಮುದಾಯ ನಿರ್ಣಾಯಕ ಪಾತ್ರ ವಹಿಸಲಿದೆ. ಆದ್ದರಿಂದ ಎಲ್ಲಾ ಪಕ್ಷಗಳಿಂದಲೂ ನಮ್ಮ ಜನಾಂಗದ ಅಭ್ಯರ್ಥಿಗಳಿಗೆ ಸ್ಪರ್ಧಿಸಲು ಅವಕಾಶ ಕಲ್ಪಿಸಿಕೊಡಬೇಕು. ನಮ್ಮ ಸಮುದಾಯದವರನ್ನು ಅಭ್ಯರ್ಥಿಗಳನ್ನಾಗಿ ಘೋಷಣೆ ಮಾಡಿದ ಪಕ್ಷಕ್ಕೆ ಬೆಂಬಲ ನೀಡಲಾಗುವುದು’ ಎಂದು ಹೇಳಿದರು.

2 ತಿಂಗಳಿಗೊಮ್ಮೆ ಸನ್ನಡತೆ ಅರ್ಜಿ ಪರಿಶೀಲಿಸಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೀವಾವಧಿ ಶಿಕ್ಷೆಗೆ ಗುರಿಯಾದ ಅಪರಾಧಿಗಳನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆಗೆ ಶಿಫಾರಸು ಮಾಡುವ ಸಮಿತಿಯು ಎರಡು ತಿಂಗಳಿಗೊಮ್ಮೆ ಸಭೆ ನಡೆಸಬೇಕು. ಈ ಸಂಬಂಧ ರಾಜ್ಯ ಸರ್ಕಾರವು ಸಮಿತಿಗೆ ಸೂಕ್ತ ನಿರ್ದೇಶನ ನೀಡಬೇಕು’ ಎಂದು ಹೈಕೋರ್ಟ್ ಆದೇಶಿಸಿದೆ.

ಕೊಲೆ ಪ್ರಕರಣವೊಂದರಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿ ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ 17 ವರ್ಷಗಳಿಂದ ಶಿಕ್ಷೆ ಅನುಭವಿಸುತ್ತಿರುವ ತುಮಕೂರಿನ ಓಂಕಾರ ಮೂರ್ತಿ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು; ಅರ್ಜಿದಾರರನ್ನು ಪೆರೋಲ್ ಮೇಲೆ ಬಿಡುಗಡೆ ಮಾಡುವಂತೆ ಸಕ್ಷಮ ಪ್ರಾಧಿಕಾರಕ್ಕೆ ನಿರ್ದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ್ದ ಕೆ.ಬಿ. ಮೋನೇಶ್ ಕುಮಾರ್, ‘ಜೀವಾವಧಿ ಅಪರಾಧಿಗಳ ಬಿಡುಗಡೆ ಸಮಿತಿ’ ಎರಡು ತಿಂಗಳಿಗೊಮ್ಮೆ ಸಭೆ ನಡೆಸಬೇಕು. ಆದರೆ, ಕಳೆದ ಆರು ತಿಂಗಳಿಂದ ಸಮಿತಿಯು ಸಭೆ ನಡೆಸಿಲ್ಲ. ಹೀಗಾಗಿ ಅರ್ಜಿದಾರರ ಮನವಿಪತ್ರವನ್ನು ಸಮಿತಿಯ ಮುಂದಿರಿಸಲು ಸಾಧ್ಯವಾಗಿಲ್ಲ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದಿದ್ದರು.

ಇದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದ ನ್ಯಾಯಪೀಠ, ‘ಸಮಿತಿಯು ವಿಳಂಬ ಧೋರಣೆ ಅನುಸರಿಸುತ್ತಿರುವುದು ಸಲ್ಲದು. ಸಮಿತಿಯು, 2023ರ ಏಪ್ರಿಲ್ 10ರೊಳಗೆ ಸಭೆ ನಡೆಸಬೇಕು. ಅರ್ಜಿದಾರರ ಮನವಿ ಪತ್ರ ಮತ್ತು ಕ್ಷಮದಾನದ ಮೇಲೆ ಬಿಡುಗಡೆಗೆ ಕೋರಿದ ಅರ್ಜಿಗಳನ್ನು ಪರಿಗಣಿಸಬೇಕು’ ಎಂದು ನಿರ್ದೇಶಿಸಿದೆ.

‘ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಸಮಿತಿ ಎರಡು ತಿಂಗಳಿಗೆ ಒಂದು ಮತ್ತು ವರ್ಷಕ್ಕೆ ಆರು ಬಾರಿ ಸಭೆ ನಡೆಸಬೇಕು. ಈ ಕುರಿತು ರಾಜ್ಯ ಸರ್ಕಾರ ಸೂಕ್ತ ನಿರ್ದೇಶನ ನೀಡಬೇಕು’ ಎಂದು ಸೂಚಿಸಿ ಅರ್ಜಿ ವಿಲೇವಾರಿ ಮಾಡಿದೆ.

ಆತ್ಮಹತ್ಯೆ:ಒತ್ತಡ ಹೇರಿದ್ದ ಮೂವರ ವಿರುದ್ಧ ಪ್ರಕರಣ

ಸಿದ್ದಾಪುರ: ತಾಲ್ಲೂಕಿನ ನಡಿಮನ ಬಳಿ ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡ ನೆಲೆಮಾವಿನ ಗಣಪತಿ ಭಟ್ ಬರೆದಿಟ್ಟಿದ್ದರು ಎನ್ನಲಾದ ಡೆತ್ ನೋಟ್ ಆಧರಿಸಿ ಸಿದ್ದಾಪುರ ಠಾಣೆ ಪೊಲೀಸರು ಮೂವರ ವಿರುದ್ಧ ಪ್ರಕರಣ ದಾಖಲಿಕೊಂಡಿದ್ದಾರೆ.

ಹುಬ್ಬಳ್ಳಿಯ ಈರಬಸಪ್ಪಾ ವಾಲಿಕಾರ, ಧಾರವಾಡದ ಚಂದ್ರಶೇಖರ ಪೂಜಾರ ಮತ್ತು ಶಿವಶಂಕರಪ್ಪಾ ಕುರಿ ವಿರುದ್ಧ ಪ್ರಕರಣ ದಾಖಲಾಗಿದೆ.

‘ಮೂವರು ಕಳೆದ ಮೂರ್ನಾಲ್ಕು ತಿಂಗಳಿನಿಂದ ಹಣಕಾಸು ವಿಚಾರವಾಗಿ ಒತ್ತಡ ಹೇರುತ್ತಿದ್ದರು ಎಂದು ಡೆತ್‌ನೋಟ್‌ನಲ್ಲಿ ಉಲ್ಲೇಖಿಸಲಾಗಿತ್ತು. ಈ ಬಗ್ಗೆ ಮೃತರ ಮಗ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಪಿ.ಎಸ್.ಐ ಹುದ್ದೆಗೆ ಹಣ ನೀಡಿ ಅಕ್ರಮ ನೇಮಕಾತಿಯಾಗಿದ್ದ ಪ್ರಕರಣದಲ್ಲಿ ಇಬ್ಬರು ಅಭ್ಯರ್ಥಿಗಳು ಗಣಪತಿ ಹೆಸರನ್ನು ವಿಚಾರಣೆ ವೇಳೆ ಉಲ್ಲೇಖಿಸಿದ್ದರು. ಈ ಹಿನ್ನೆಲೆಯಲ್ಲಿ ಕಳೆದ ಜುಲೈ 13 ರಂದು ಸಿ.ಐ.ಡಿ. ಪೊಲೀಸರು ಗಣಪತಿ ಅವರನ್ನು ಬೆಂಗಳೂರಿಗೆ ಕರೆದೊಯ್ದು ವಿಚಾರಣೆ ನಡೆಸಿದ್ದರು.

ಪರ ಪುರುಷನ ಜೊತೆ ಪತ್ನಿ ಸಲುಗೆ: ಜಿಪಿಎಸ್ ಸುಳಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರ ಪುರುಷನ ಜೊತೆ ನನ್ನ ಪತ್ನಿ ಸಲುಗೆ ಇಟ್ಟುಕೊಂಡಿದ್ದಾಳೆ. ಕಾರಿನಲ್ಲಿ ಅಳವಡಿಸಿದ್ದ ಜಿಪಿಎಸ್ ಉಪಕರಣದಿಂದ ಈ ಸಂಗತಿ ಗೊತ್ತಾಗಿದ್ದು, ಸಲುಗೆ ಪ್ರಶ್ನಿಸಿದ್ದಕ್ಕೆ ಜೀವ ಬೆದರಿಕೆಯೊಡ್ಡಿದ್ದಾಳೆ’ ಎಂದು ಆರೋಪಿಸಿ ವ್ಯಕ್ತಿಯೊಬ್ಬರು ಮಹಾಲಕ್ಷ್ಮಿ ಲೇಔಟ್ ಠಾಣೆಗೆ ದೂರು ನೀಡಿದ್ದಾರೆ.

‘ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರು ಪತ್ನಿ ಹಾಗೂ ಅವರ ಸ್ನೇಹಿತನ ವಿರುದ್ಧ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿ ಕೊಳ್ಳಲಾಗಿದ್ದು, ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ಖಾಸಗಿ ಕಂಪನಿ ಉದ್ಯೋಗಿ ಆಗಿರುವ ದೂರುದಾರರಿಗೆ 2014ರಲ್ಲಿ ಮದುವೆಯಾಗಿದೆ. 6 ವರ್ಷದ ಮಗುಜೊತೆ ದಂಪತಿ ವಾಸವಿದ್ದಾರೆ. ದೂರುದಾರ ರಾತ್ರಿ ಕೆಲಸಕ್ಕೆ ಹೋದರೆ, ಬೆಳಿಗ್ಗೆಯೇ ಮನೆಗೆ ವಾಪಸು ಬರುತ್ತಿದ್ದರು. ಹಗಲಿನಲ್ಲಿ ಮಾತ್ರ ಮನೆಯಲ್ಲಿರುತ್ತಿದ್ದರು’ ಎಂದು ತಿಳಿಸಿವೆ.

‘ವರ್ಷದ ಹಿಂದೆಯಷ್ಟೇ ದೂರುದಾರ ಹೊಸ ಕಾರು ಖರೀದಿಸಿದ್ದರು. ಅದರಲ್ಲಿ ಜಿಪಿಎಸ್ ಉಪಕರಣ ಅಳವಡಿಸಲಾಗಿತ್ತು. ಕಾರು ಎಲ್ಲಿದೆ ಎಂಬುದು ಮೊಬೈಲ್‌ನಲ್ಲಿರುವ ಆ್ಯಪ್ ಮೂಲಕ ತಿಳಿಯುತ್ತಿತ್ತು. ಈ ವಿಷಯ ಪತ್ನಿಗೆ ಗೊತ್ತಿರಲಿಲ್ಲ. ಇತ್ತೀಚೆಗೆ ದೂರುದಾರ ಎಂದಿನಂತೆ ಕಚೇರಿ ಕೆಲಸಕ್ಕೆ ಹೋಗಿದ್ದರು. ರಾತ್ರಿ ಸ್ನೇಹಿತನನ್ನು ಮನೆಗೆ ಕರೆಸಿದ್ದ ಪತ್ನಿ, ಆತನ ಜೊತೆ ಕಾರಿನಲ್ಲಿ ಹೊರಗಡೆ ಹೋಗಿದ್ದರು.’

‘ವಿಮಾನ ನಿಲ್ದಾಣ ರಸ್ತೆಯ ಲಾಡ್ಜ್ ಹಾಗೂ ಹೋಟೆಲ್ ಎದುರು ಕಾರು ನಿಲುಗಡೆ ಆಗಿತ್ತು. ಈ ಸಂಗತಿ ಜಿಪಿಎಸ್ ಮೂಲಕ ದೂರುದಾರರಿಗೆ ಗೊತ್ತಾಗಿತ್ತು. ಕಚೇರಿ ಕೆಲಸ ಮುಗಿಸಿ ಲಾಡ್ಜ್‌ಗೆ ಹೋಗಿದ್ದ ದೂರುದಾರ, ಅಲ್ಲಿಯ ಸಿಬ್ಬಂದಿಯನ್ನು ವಿಚಾರಿಸಿದ್ದ. ಪತ್ನಿ– ಸ್ನೇಹಿತ ಇಬ್ಬರೂ ಗುರುತಿನ ಚೀಟಿ ನೀಡಿ ಲಾಡ್ಜ್‌ನ ಕೊಠಡಿಯಲ್ಲಿ ಉಳಿದುಕೊಂಡಿದ್ದ ಸಂಗತಿ ಗೊತ್ತಾಗಿತ್ತು. ಸಿಟ್ಟಾಗಿದ್ದ ದೂರುದಾರ, ಪತ್ನಿಯನ್ನು ತರಾಟೆಗೆ ತೆಗೆದುಕೊಂಡಿದ್ದ. ಆದರೆ, ಪತ್ನಿಯೇ ಪತಿಗೆ ಜೀವ ಬೆದರಿಕೆಯೊಡ್ಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಭವಿಷ್ಯ ಹೇಳಿ ರೇಗಿಸಿದ್ದಕ್ಕೆ ಕೊಲೆ

ಬೆಂಗಳೂರು: ಗೋವಿಂದರಾಜನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕಾರ್ಮಿಕ ನರೇಶ್ (25) ಕೊಲೆ ಪ್ರಕರಣ ಸಂಬಂಧ ಆರೋಪಿ ಮಾರಿಮುತ್ತುನನ್ನು ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿ ನರೇಶ್ ಅವರನ್ನು ಮಾರ್ಚ್ 24ರಂದು ಬೆಳಿಗ್ಗೆ ಕೊಲೆ ಮಾಡಲಾಗಿತ್ತು. ಪತ್ನಿ ಮಹಾದೇವಿ ನೀಡಿದ್ದ ದೂರು ಆಧರಿಸಿ ಮಾರಿಮುತ್ತುನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು. ‘ಆರೋಪಿ ಮಾರಿಮುತ್ತು, ಅಪರಾಧ ಹಿನ್ನೆಲೆಯುಳ್ಳವ. ವಿಜಯನಗರ ಠಾಣೆ ವ್ಯಾಪ್ತಿಯಲ್ಲಿ ವ್ಯಕ್ತಿಯೊಬ್ಬರನ್ನು ಕೊಲೆ ಮಾಡಿ ಜೈಲು ವಾಸ ಅನುಭವಿಸಿ ಬಂದಿದ್ದ’ ಎಂದರು.

‘ಮಾರಿಮುತ್ತು, ನರೇಶ್ ನಡುವೆ ಸ್ನೇಹವಿತ್ತು. ಇಬ್ಬರೂ ನಾಗರಬಾವಿ ಮುಖ್ಯರಸ್ತೆಯಲ್ಲಿರುವ ಬಾರ್‌ಗೆ ಹೋಗಿದ್ದರು. ಭವಿಷ್ಯ ಹೇಳುವುದಾಗಿ ಮಾರಿಮುತ್ತು ಕೈ ಹಿಡಿದುಕೊಂಡಿದ್ದ ನರೇಶ್, ‘ನಿನಗೆ ಹೆಚ್ಚು ಚಟಗಳಿವೆ. ಹುಡುಗಿಯರ ಸಹವಾಸ ಹೆಚ್ಚಿದೆ. ಕೆಲವರ್ಷಗಳಲ್ಲಿಯೇ ನೀನು ಸಾಯುತ್ತೀಯಾ’ ಎಂದಿದ್ದ. ಸಿಟ್ಟಾದ ಮಾರಿಮುತ್ತು ಜಗಳ ತೆಗೆದಿದ್ದ.’

‘ಜಗಳ ಮಾಡುತ್ತಲೇ ಇಬ್ಬರೂ ಬಾರ್‌ನಿಂದ ಹೊರಗೆ ಬಂದಿದ್ದರು. ಪಾದಚಾರಿ ಮಾರ್ಗದಲ್ಲಿ ನರೇಶ್ ಮೇಲೆ ಹಲ್ಲೆ ಮಾಡಿದ್ದ ಮಾರಿಮುತ್ತು, ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಂದು ಪರಾರಿಯಾಗಿದ್ದ. ದೂರು ದಾಖಲಾದ ಕೆಲವೇ ಗಂಟೆಗಳಲ್ಲಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಹೇಳಿದರು.

ಅತ್ಯಾಚಾರ ಸಂತ್ರಸ್ತೆ ಜೊತೆ ಆಸ್ಪತ್ರೆಗಳಿಗೆ ಅಲೆದಿದ್ದ ಆರೋಪಿ!

ರಾಮನಗರ: ಕಗ್ಗಲೀಪುರ ಠಾಣೆ ವ್ಯಾಪ್ತಿಯಲ್ಲಿ ಶುಕ್ರವಾರ ನಡೆದ ಬಾಲಕಿ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಆರೋಪಿ ವೆಂಕಟೇಶ್ ವಿರುದ್ಧ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ. ಆರೋಪಿಯೇ ಸಂತ್ರಸ್ತೆಯನ್ನು ಕರೆದುಕೊಂಡು ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ಅಲೆದಾಡಿದ್ದ ಸಂಗತಿಯೂ ಬೆಳಕಿಗೆ ಬಂದಿದೆ.

ಆರೋಪಿಯು ಪಿ.ಯು. ವಿದ್ಯಾರ್ಥಿನಿಯಾದ ಸಂತ್ರಸ್ಥೆಯನ್ನು ಪುಸಲಾಯಿಸಿ ಲೇಔಟ್ ಒಂದರ ಬಳಿ ಕರೆದುಕೊಂಡು ಹೋಗಿ ಹಲ್ಲೆ ನಡೆಸಿ, ಅತ್ಯಾಚಾರ ಎಸಗಿದ್ದ. ಇದರಿಂದ ಆಕೆ ತೀವ್ರ ರಕ್ತಸ್ರಾವಕ್ಕೆ ಒಳಗಾಗಿದ್ದಳು. ಇದರಿಂದ ಬೆದರಿದ ಆರೋಪಿಯು ಸಂತ್ರಸ್ಥೆಯ ತಂದೆಗೆ ಕರೆ ಮಾಡಿ, ನಿಮ್ಮ ಮಗಳು ಇದ್ದಕ್ಕಿದ್ದ ಹಾಗೇ ಅಸ್ವಸ್ಥಗೊಂಡಿದ್ದು, ಪ್ರಜ್ಞೆ ಸಹ ಇಲ್ಲ ಎಂದು ಕಥೆ ಕಟ್ಟಿದ್ದ. ಕೂಡಲೇ ಆಕೆಯನ್ನು ಆಸ್ಪತ್ರೆಗೆ ಕರೆದೊಯ್ಯುವಂತೆ ತಂದೆ ಮನವಿ ಮಾಡಿದ್ದರು. ನಂತರ ಆರೋಪಿಯು ಬಾಲಕಿಯನ್ನು ಅಗರ, ತಾತಗುಣಿ ಮೊದಲಾದ ಕಡೆಗಳಲ್ಲಿನ ಆಸ್ಪತ್ರೆಗೆ ಕರೆದೊಯ್ದಿದ್ದ. ಅಲ್ಲಿ ವೈದ್ಯರು ಸಿಕ್ಕಿರಲಿಲ್ಲ. ಬಯ್ಯನಪಾಳ್ಯದ ಖಾಸಗಿ ಆಸ್ಪತ್ರೆಯೊಂದಕ್ಕೆ ಕರೆದೊಯ್ದ ವೇಳೆ, ಸಂತ್ರಸ್ಥೆಯನ್ನು ಪರೀಕ್ಷಿಸಿದ್ದ ವೈದ್ಯರು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವಂತೆ ಸೂಚಿಸಿದ್ದರು.

ಅಷ್ಟರಲ್ಲಿ ಸಂತ್ರಸ್ತೆಯ ತಾಯಿ ಸಹ ಬಂದಿದ್ದು, ಆಕೆಯನ್ನು ಆಂಬುಲೆನ್ಸ್ ಮೂಲಕ ಕೋಣನಕುಂಟೆ ಆಸ್ಪತ್ರೆಗೆ ಒಯ್ದಿದ್ದರು. ಅಲ್ಲಿ ಸರ್ಕಾರಿ ವೈದ್ಯರು ಸಿಗದ ಕಾರಣ ಕುಮಾರಸ್ವಾಮಿ ಲೇಔಟ್ ಬಳಿಯ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿ ಯುವತಿ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ಬಾಲಕಿಯ ಮರಣೋತ್ತರ ಪರೀಕ್ಷೆ ನಡೆಸಿ, ಪೋಷಕರಿಗೆ ಒಪ್ಪಿಸಲಾಯಿತು.

ಮೀಸಲಾತಿ: ಸರ್ಕಾರದ ಅಪ್ರಾಮಾಣಿಕತೆಗೆ ಸಾಕ್ಷಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಕ್ಕಲಿಗರು ಮತ್ತು ಲಿಂಗಾಯತರಿಗೆ ಮೀಸಲಾತಿ ಹೆಚ್ಚಿಸುವ ನಿರ್ಧಾರವು ಈ ವಿಚಾರದಲ್ಲಿ ಸರ್ಕಾರವು ಹೊಂದಿರುವ ಅಪ್ರಾಮಾಣಿಕತೆಗೆ ಸಾಕ್ಷಿ ಎಂದು ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಣ್ಣೆಗೆರೆ ಆರ್. ವೆಂಕಟರಾಮಯ್ಯ ಟೀಕಿಸಿದ್ದಾರೆ.

ಮೀಸಲಾತಿ ಪ್ರಮಾಣ ಪರಿಷ್ಕರಣೆಗೆ ಸಂಬಂಧಿಸಿದಂತೆ ಸಂಪುಟ ಸಭೆಯಲ್ಲಿ ಕೈಗೊಂಡಿರುವ ನಿರ್ಧಾರದ ಕುರಿತು ಶನಿವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಒಕ್ಕಲಿಗರು ಮತ್ತು ಲಿಂಗಾಯತರ ಮೀಸಲಾತಿ ಹೆಚ್ಚಳದ ಬೇಡಿಕೆಗಳ ಕುರಿತು ವರದಿ ಸಲ್ಲಿಸಲು ಇನ್ನಷ್ಟು ಕಾಲಾವಕಾಶ ಬೇಕು ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಇತ್ತೀಚೆಗೆ ಹೇಳಿಕೆ ನೀಡಿದ್ದರು. ಈ ಸಮುದಾಯಗಳ ಹಿಂದುಳಿದಿರುವಿಕೆಯನ್ನು ಗುರುತಿಸಲು ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳ ಕುರಿತು ಅಧ್ಯಯನ ಅಗತ್ಯ ಎಂದು ಆಯೋಗ ತಿಳಿಸಿದ್ದರೂ ಸರ್ಕಾರ ಯಾವ ಆಧಾರದಲ್ಲಿ ಮೀಸಲಾತಿ ಹೆಚ್ಚಳದ ನಿರ್ಧಾರ ಕೈಗೊಂಡಿದೆ’ ಎಂದಿದ್ದಾರೆ.

ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2ಎ ಪಟ್ಟಿಯಲ್ಲಿರುವ ಜಾತಿಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಿಸಬೇಕೆಂಬ ಬೇಡಿಕೆ ಹಲವು ವರ್ಷಗಳಿಂದಲೂ ಇದೆ. ಈ ಸಮುದಾಯಗಳ ಬೇಡಿಕೆ ಕುರಿತು ಯಾವುದೇ ತೀರ್ಮಾನ ಕೈಗೊಳ್ಳದ ಸರ್ಕಾರ, ಪ್ರವರ್ಗ-1 ಮತ್ತು ಪ್ರವರ್ಗ-2ಎ ಪಟ್ಟಿಯಲ್ಲಿರುವ ಜಾತಿಗಳ ಜನರಿಗೆ ಅನ್ಯಾಯ ಮಾಡಿದೆ. ಸಾಮಾಜಿಕ ನ್ಯಾಯದ ಪರ ಇರುವುದಾಗಿ ಹೇಳಿಕೊಳ್ಳುವ ಸರ್ಕಾರ, ಅದಕ್ಕೆ ತಕ್ಕಂತೆ ನಡೆದುಕೊಳ್ಳದೆ ಅಪ್ರಾಮಾಣಿಕತೆ ಪ್ರದರ್ಶಿಸಿದೆ ಎಂದು ಹೇಳಿದ್ದಾರೆ.

ಹಿಂದುಳಿದ ವರ್ಗಗಳ ಆಯೋಗ ವೈಜ್ಞಾನಿಕವಾಗಿ ಅಧ್ಯಯನ ನಡೆಸಿದ ಆಧಾರದಲ್ಲಿ ಮೀಸಲಾತಿ ನಿಗದಿಪಡಿಸಬೇಕು. ಪ್ರತೀ ಹತ್ತು ವರ್ಷಗಳಿಗೊಮ್ಮೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಎಲ್ಲ ಜಾತಿಗಳ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಹಿಂದುಳಿದಿರುವಿಕೆಯ ಕುರಿತು ಅಧ್ಯಯನ ನಡೆಸಬೇಕು. ಅದರ ಆಧಾರದಲ್ಲಿ ಪಟ್ಟಿಯನ್ನು ಪರಿಷ್ಕರಿಸಬೇಕು ಎಂಬುದನ್ನು ಸಂವಿಧಾನವೇ ಹೇಳುತ್ತದೆ. ಆದರೆ, ರಾಜ್ಯದಲ್ಲಿ 2002ರ ಬಳಿಕ ಹಿಂದುಳಿದ ವರ್ಗಗಳ ಆಯೋಗದ ವರದಿ ಪಡೆದು ಪಟ್ಟಿ ಪರಿಷ್ಕರಣೆಯನ್ನೇ ಮಾಡಿಲ್ಲ ಎಂದಿದ್ದಾರೆ.

ನಿಜವಾಗಿಯೂ ಹಿಂದುಳಿದಿರುವ ಸಮುದಾಯಗಳ ಕೂಗಿಗೆ ಮಣಿಯಬೇಕಾದ ಸರ್ಕಾರ, ಪ್ರಬಲ ಸಮುದಾಯಗಳನ್ನು ಓಲೈಸುತ್ತಿದೆ. ಪ್ರಬಲರಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಲು ಸರ್ಕಾರದ ಈ ತೀರ್ಮಾನ ದಾರಿ ಮಾಡಿಕೊಡುತ್ತಿದೆ ಎಂದು ದೂರಿದ್ದಾರೆ.

ಚಕ್ರ ಸ್ಫೋಟ: ಅತಿ ವೇಗವಾಗಿ ಕಾರು ಚಾಲನೆ

ಬೆಂಗಳೂರು: ಚಕ್ರ ಸ್ಫೋಟಗೊಂಡರೂ ರಿಮ್‌ನಲ್ಲೇ ಅತಿ ವೇಗವಾಗಿ ಕಾರು ಚಲಾಯಿಸಿ ಸಾರ್ವಜನಿಕರ ಜೀವಕ್ಕೆ ಕುತ್ತು ತರಲು ಯತ್ನಿಸಿದ್ದ ಆರೋಪದಡಿ ಚಾಲಕ ನಿತಿನ್ ಯಾದವ್ (26) ಎಂಬುವವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ಸ್ಥಳೀಯ ನಿವಾಸಿ ನಿತಿನ್, ಮದ್ಯ ಕುಡಿದು ಕಾರು ಚಲಾಯಿಸುತ್ತಿದ್ದ. ಕಾರಿನಲ್ಲಿದ್ದ ಈತನ ಸ್ನೇಹಿತರೂ ಮದ್ಯ ಕುಡಿದಿದ್ದರು. ಅತಿ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆ ಆರೋಪದಡಿ ನಿತಿನ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಾರು ಹಾಗೂ ಚಾಲನಾ ಪರವಾನಗಿ (ಡಿ.ಎಲ್) ಜಪ್ತಿ ಮಾಡಲಾಗಿದೆ’ ಎಂದು ಬಾಣಸವಾಡಿ ಸಂಚಾರ ಪೊಲೀಸರು ಹೇಳಿದರು.

‘ನಿತಿನ್ ಹಾಗೂ ಸ್ನೇಹಿತರು ಶುಕ್ರವಾರ ರಾತ್ರಿ ಮದ್ಯದ ಪಾರ್ಟಿ ಮಾಡಿದ್ದರು. ಶನಿವಾರ ನಸುಕಿನಲ್ಲಿ 3 ಗಂಟೆ ಸುಮಾರಿಗೆ ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿ ಕಾರಿನಲ್ಲಿ ಹೊರಟಿದ್ದರು. ಮಾರ್ಗಮಧ್ಯೆಯೇ ಕಾರಿನ ಮುಂಭಾಗದ ಎಡಬದಿಯ ಚಕ್ರ ಸ್ಫೋಟಗೊಂಡು ಬೆಂಕಿ ಹೊತ್ತಿಕೊಂಡಿತ್ತು. ಟೈರ್ ಸಂಪೂರ್ಣ ಸುಟ್ಟಿತ್ತು. ರಿಮ್ ಮಾತ್ರ ಉಳಿದಿತ್ತು.’

‘ಕಾರು ನಿಲ್ಲಿಸದ ನಿತಿನ್, ರಿಮ್‌ನಲ್ಲೇ ಅತಿ ವೇಗವಾಗಿ ಕಾರು ಚಲಾಯಿಸಿಕೊಂಡು 2 ಕಿ.ಮೀ.ವರೆಗೂ ಸಾಗಿದ್ದ. ರಸ್ತೆ ಅಕ್ಕ– ಪಕ್ಕದಲ್ಲಿದ್ದ ಜನ ಕಾರಿನ ವೇಗ ಕಂಡು ಆತಂಕಗೊಂಡಿದ್ದರು. ಠಾಣೆಗೂ ಮಾಹಿತಿ ನೀಡಿದ್ದರು. ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಕಾರು ಬೆನ್ನಟ್ಟಿ ತಡೆದಿದ್ದರು. ಬಳಿಕ ಸಂಚಾರ ಠಾಣೆಗೆ ಮಾಹಿತಿ ನೀಡಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಮದ್ಯದ ಅಮಲಿನಲ್ಲಿದ್ದಿದ್ದರಿಂದ ಸ್ಫೋಟದ ಸಂಗತಿ ಗಮನಕ್ಕೆ ಬಂದಿರಲಿಲ್ಲವೆಂದು ಚಾಲಕ ನಿತಿನ್ ಹೇಳಿಕೆ ನೀಡಿದ್ದಾನೆ. ಘಟನೆಯಲ್ಲಿ ಅದೃಷ್ಟವಶಾತ್ ಯಾವುದೇ ಜೀವಹಾನಿ ಸಂಭವಿಸಿಲ್ಲ’ ಎಂದು ಹೇಳಿದರು.

‘ಸರ್ಕಾರದ ಒಳ ಮೀಸಲಾತಿ ಪ್ರಸ್ತಾವ– ಪರಿಶಿಷ್ಟರ ಅಪಹಾಸ್ಯ ಪ್ರಯತ್ನ’

ಬೆಂಗಳೂರು: ‘ಪರಿಶಿಷ್ಟ ಜಾತಿಗೆ ಒಳ ಮೀಸಲಾತಿ ನೀಡುವ ಬಗ್ಗೆ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸುವ ರಾಜ್ಯ ಸರ್ಕಾರದ ತೀರ್ಮಾನ ಪರಿಶಿಷ್ಟ ಜಾತಿಯನ್ನು ಅಪಹಾಸ್ಯ ಮಾಡುವ ಪ್ರಯತ್ನ’ ಎಂದು ದಲಿತ ಮುಖಂಡರಾದ ಸುದಾಮ್ ದಾಸ್,ಬಿ.ಗೋಪಾಲ್, ಹೆಣ್ಣೂರು ಶ್ರೀನಿವಾಸ್ ಅವರು ಹೇಳಿದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸರ್ಕಾರದ ತೀರ್ಮಾನ ಸದಾಶಿವ ಆಯೋಗದ ಶಿಫಾರಸಿಗೆ ಅನುಗುಣವಾಗಿಲ್ಲ. ರಾಜ್ಯ ಸರ್ಕಾರ ಕೇಂದ್ರಕ್ಕೆ ಕಳುಹಿಸಿರುವ ಪ್ರಸ್ತಾವ ಸದ್ಯದ ಪರಿಸ್ಥಿತಿಯಲ್ಲಿ ಯಾವುದೇ ಕಾರಣಕ್ಕೂ ಸರ್ಕಾರಿ ಆದೇಶವಾಗಿ ಜಾರಿಯಾಗಲು ಸಾಧ್ಯವಿಲ್ಲ. ಮುಂಬರುವ ಚುನಾವಣೆಯಲ್ಲಿ ಪರಿಶಿಷ್ಟ ಜಾತಿಯವರಿಗೆ ಮಂಕುಬೂದಿ ಎರಚುವ ಪ್ರಯತ್ನ ಇದಾಗಿದೆ’ ಎಂದರು. ‘ಪರಿಶಿಷ್ಟ ಜಾತಿ ಸಮುದಾಯದವರು ಬೀದಿಗಿಳಿದು ಹೋರಾಟ ಮಾಡುತ್ತಾ ಬಂದರೂ ಯಾವುದೇ ಕ್ರಮ ಕೈಗೊಳ್ಳದ ಬಿಜೆಪಿ ಸರ್ಕಾರ, ಚುನಾವಣೆಗೆ ಕೆಲವೇ ದಿನಗಳು ಬಾಕಿ ಇರುವಾಗ ಕೊನೆಯ ಸಂಪುಟ ಸಭೆಯಲ್ಲಿ ಪ್ರಸ್ತಾವನೆ ಕಳುಹಿಸುವ ನಾಟಕವಾಡುತ್ತಿದೆ. ಹೀಗಾಗಿ, ರಾಜ್ಯದ ಪರಿಶಿಷ್ಟ ಜಾತಿ ಸಮುದಾಯದವರು ಬಿಜೆಪಿಯನ್ನು ನಂಬಬಾರದು’ ಎಂದರು.

‘ಪರಿಶಿಷ್ಟ ಜಾತಿಯವರಿಗೆ ಶೇ 15 ರಿಂದ 17ಕ್ಕೆ, ಪರಿಶಿಷ್ಟ ವರ್ಗದವರ ಮೀಸಲಾತಿಯನ್ನು ಶೇ 3ರಿಂದ 7ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಿ 3 ತಿಂಗಳಾದರೂ ಆ ಪ್ರಸ್ತಾವವನ್ನು ರಾಜ್ಯ ಸರ್ಕಾರ ಕೇಂದ್ರಕ್ಕೆ ಕಳುಹಿಸಿಲ್ಲ. ಆ ಮೂಲಕ, ಮೀಸಲಾತಿ ಹೆಚ್ಚಳವನ್ನು ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರಿಸಲು ಮುಂದಾಗಿಲ್ಲ. ಕಾಂಗ್ರೆಸ್ ಈ ವಿಚಾರವಾಗಿ ಹೋರಾಟಕ್ಕೆ ಮುಂದಾದ ಬಳಿಕ ಮುಖ್ಯ ಕಾರ್ಯದರ್ಶಿ ಮೂಲಕ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ, ಈ ಮೀಸಲಾತಿ ಹೆಚ್ಚಳ ಕಾರ್ಯಸಾಧು ಅಲ್ಲ’ ಎಂದರು.



ಪ್ರಶಸ್ತಿ ಪ್ರದಾನ

‘ಪ್ರಜಾವಾಣಿ’ ಮಾಧ್ಯಮ ಸಹಯೋಗದಲ್ಲಿ ನಗರದ ಗಾಯನ ಸಮಾಜದಲ್ಲಿ ಶ್ರೀ ರಾಮಸೇವಾ ಮಂಡಳಿ ಟ್ರಸ್ಟ್ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎ.ಕನ್ಯಾಕುಮಾರಿ ಮತ್ತು ಯೆಲ್ಲಾ ವೆಂಕಟೇಶ್ವರ ರಾವ್ ಅವರಿಗೆ ‘ಎಸ್.ವಿ. ನಾರಾಯಣಸ್ವಾಮಿ ರಾವ್ ರಾಷ್ಟ್ರೀಯ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಸಿಎಂಆರ್ ವಿಶ್ವವಿದ್ಯಾಲಯದ ಅಧ್ಯಕ್ಷ ಕೆ.ಸಿ.ರಾಮಮೂರ್ತಿ, ಶ್ರೀರಾಮ ಸೇವಾ ಮಂಡಳಿ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಎಸ್.ಎನ್. ರಾಮಪ್ರಸಾದ್, ಉತ್ಥಾನ ಪತ್ರಿಕೆಯ ಮುಖ್ಯ ಸಂಪಾದಕ ಎಸ್.ಆರ್.ರಾಮಸ್ವಾಮಿ, ವಿಜ್ಞಾನಿ ಕೆ. ರಾಧಾಕೃಷ್ಣನ್, ಸಂಗೀತ ತಜ್ಞ ಎಂ.ಸೂರ್ಯ ಪ್ರಸಾದ್, ಶ್ರೀರಾಮ ಸೇವಾ ಮಂಡಳಿ ಟ್ರಸ್ಟ್ ಅಧ್ಯಕ್ಷ ಎ.ರವೀಂದ್ರ ಮತ್ತು ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ (ಎಸ್‌ವ್ಯಾಸ್) ವಿಶ್ವವಿದ್ಯಾಲಯದ ಕುಲಪತಿ ಎಚ್.ಆರ್.ನಾಗೇಂದ್ರ ಇದ್ದಾರೆ. ಪ್ರಶಸ್ತಿಯು ತಲಾ 50 ಸಾವಿರ ನಗದು ಒಳಗೊಂಡಿವೆ. - ಪ್ರಜಾವಾಣಿ ಚಿತ್ರ



ಸಂಪಂಗಿರಾಮ ನಗರದಲ್ಲಿ ಐಬಿಐಎಸ್ ಹೋಟೆಲ್ ಸಮೀಪದಲ್ಲಿರುವ ಅಂಬೇಡ್ಕರ್ ಕಿಡ್ಸ್ ಉದ್ಯಾನದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಯನ್ನು ಶಾಸಕ ರಿಜ್ವಾನ್ ಅರ್ಷದ್ ಅವರು ಶುಕ್ರವಾರ ಅನಾವರಣಗೊಳಿಸಿದರು

ಪರಿಹಾರ ಪಡೆದ 45 ವರ್ಷಗಳ ನಂತರ ಜಮೀನು ಹಕ್ಕು ಸಾಧಿಸಲು ವ್ಯಾಜ್ಯ

ಅರ್ಜಿದಾರರಿಗೆ ₹27 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಿವೃದ್ಧಿ ಯೋಜನೆಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಜಮೀನು ನೀಡಿ, ಪರಿಹಾರ ಪಡೆದ 45 ವರ್ಷಗಳ ನಂತರ ಅದರ ಮೇಲೆ ಪುನಃ ಹಕ್ಕು ಸಾಧಿಸಲು ಮುಂದಾಗಿದ್ದ ಅರ್ಜಿದಾರರ ಮನವಿಯನ್ನು ತಿರಸ್ಕರಿಸಿರುವ ಹೈಕೋರ್ಟ್, ಅರ್ಜಿದಾರರಿಗೆ ₹ 27.60 ಲಕ್ಷ ದಂಡ ಪಾವತಿಸುವಂತೆ ಆದೇಶಿಸಿದೆ.

ಈ ಸಂಬಂಧ ಜೀವನಹಳ್ಳಿಯ ಕಾಕ್ಸ್‌ಟೌನ್ ನಿವಾಸಿ ಎ.ರಾಮಮೂರ್ತಿ, ಎ.ಅಶ್ವತ್ಥ ಮೂರ್ತಿ ಮತ್ತು ಕೆ.ಉಮಾಶಂಕರ್ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದ್ದು, ಮೂವರೂ ಅರ್ಜಿದಾರರು ಪ್ರಕರಣದ 138 ಜನ ಪ್ರತಿವಾದಿಗಳಿಗೆ ತಲಾ ₹ 20 ಸಾವಿರದಂತೆ ಒಟ್ಟು 27.60 ಲಕ್ಷ ಮೊತ್ತವನ್ನು ಪಾವತಿಸಬೇಕು’ ಎಂದು ಆದೇಶಿಸಿದೆ.

‘ಭೂಸ್ವಾಧೀನ, ಪುನರ್ವಸತಿ, ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ ಕಾಯ್ದೆ–2013ರ ಕಲಂ 24 (2) ರದ್ದಾಗಿರುವುದರಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಯ ಅಡಿ 1980ರಲ್ಲಿ ಹೊರಡಿಸಿರುವ ಅಂತಿಮ ಅಧಿಸೂಚನೆ ರದ್ದುಪಡಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

ಆದರೆ, ಈ ಮನವಿಯನ್ನು ತಿರಸ್ಕರಿಸಿರುವ ನ್ಯಾಯಪೀಠ, ‘ಪ್ರಕರಣಕ್ಕೆ ಸಂಬಂಧಿಸಿದ ಜಮೀನನ್ನು 1978ರ ಜೂನ್ 2ರಂದು ಪ್ರಾಥಮಿಕ ಅಧಿಸೂಚನೆಯ ಮೂಲಕ ವಶಪಡಿಸಿಕೊಳ್ಳಲಾಗಿದೆ. 1980ರಲ್ಲಿ ಕಲಂ 17(1) ಮತ್ತು 19 (1) ರ ಅಡಿ ಅಂತಿಮ ಅಧಿಸೂಚನೆ ಹೊರಡಿಸಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ. ಮೂರನೇ ಅರ್ಜಿದಾರ ಉಮಾಶಂಕರ್ ಅವರ ತಂದೆ ಎ. ಕೃಷ್ಣಮೂರ್ತಿ ಅವರಿಗೆ ಈ ಸಂಬಂಧ ನೋಟಿಸ್ ಸಹ ನೀಡಲಾಗಿದೆ. ಅಂತೆಯೇ, 1990ರ ಮೇ 30ರಂದು ಜಮೀನನ್ನು ವಶಕ್ಕೆ ಪಡೆದು ಅಭಿವೃದ್ಧಿಪಡಿಸಲಾಗಿದೆ. ಈ ಭೂಸ್ವಾಧೀನ ಪ್ರಕ್ರಿಯೆ ಪ್ರಶ್ನಿಸಿದ ಮನವಿಯನ್ನು ವಿಭಾಗೀಯ ನ್ಯಾಯಪೀಠವೂ ಈಗಾಗಲೇ ತಿರಸ್ಕರಿಸಿದೆ. ಹೀಗಾಗಿ, ಅರ್ಜಿದಾರರು ನ್ಯಾಯಾಲಯಕ್ಕೆ ಸುಳ್ಳು ಹೇಳುತ್ತಿದ್ದಾರೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ನಲವತ್ತು ವರ್ಷಗಳ ಹಿಂದೆಯೇ ಪ್ರಕರಣಕ್ಕೆ ಸಂಬಂಧಿಸಿದ ಜಮೀನನ್ನು ವಶಪಡಿಸಿಕೊಂಡು ಅದನ್ನು ಕೊಳಗೇರಿ ಅಭಿವೃದ್ಧಿ ಮಂಡಳಿಗೆ ವಹಿಸಲಾಗಿದೆ. ಇದರಲ್ಲಿ ಲೇ ಔಟ್ ಅಭಿವೃದ್ಧಿಪಡಿಸಿ, ತಳಸಮುದಾಯಕ್ಕೆ ಸೇರಿದ 138 ಅರ್ಹರಿಗೆ ಇಲ್ಲಿ ನಿವೇಶನ ಅಥವಾ ಮನೆ ಹಂಚಿಕೆ ಮಾಡಲಾಗಿದೆ. ಫಲಾನುಭವಿಗಳಿಗೆ ಮೊದಲನೇ ಅರ್ಜಿದಾರ ಎ.ರಾಮಮೂರ್ತಿ ನಿವೇಶನ ಹಂಚಿಕೆ ಮಾಡಿರುವ ಪತ್ರವನ್ನೂ ಈ ಅರ್ಜಿಯಲ್ಲಿ ಲಗತ್ತಿಸಲಾಗಿದೆ. ಹೀಗಿರುವಾಗ 45 ವರ್ಷಗಳ ಬಳಿಕ 2017ರ ಫೆಬ್ರುವರಿ 3ರಂದು ಪುನಃ ಹೊಸದಾಗಿ ಅರ್ಜಿ ಸಲ್ಲಿಸಿರುವ ಅರ್ಜಿದಾರರ ಧೋರಣೆ ಸಕಾರಣಗಳಿಂದ ಹೊರತಾಗಿದೆ’ ಎಂದು ದಂಡಕ್ಕೆ ಕಾರಣ ನೀಡಿದೆ.

‘ಅರ್ಜಿದಾರರು ಆದೇಶ ಹೊರಬಿದ್ದ ಆರು ವಾರಗಳ ಒಳಗಾಗಿ ದಂಡ ಪಾವತಿಸಬೇಕು. ತಡವಾದಲ್ಲಿ ವಾರಕ್ಕೆ ಒಂದು ಸಾವಿರ ರೂಪಾಯಿಯಂತೆ ಹೆಚ್ಚುವರಿ ದಂಡ ತೆರಬೇಕಾಗುತ್ತದೆ’ ಎಂದೂ ನ್ಯಾಯಪೀಠ ತಾಕೀತು ಮಾಡಿದೆ. ಬಿಡಿಎ ಪರವಾಗಿ ಆರ್.ಶ್ರೀಧರ ಹೆಗಡೆ ವಾದ ಮಂಡಿಸಿದ್ದರು.

‘ಸರ್ವೋತ್ತಮ ಸೇವಾ ಪ್ರಶಸ್ತಿ’ಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಅಧಿಕಾರಿ ಮತ್ತು ನೌಕರರಿಗೆ ನೀಡುವ ‘ಸರ್ವೋತ್ತಮ ಸೇವಾ ಪ್ರಶಸ್ತಿ’ಗೆ ಅರ್ಜಿ ಆಹ್ವಾನಿಸಲಾಗಿದೆ.

ವಿನೂತನ ಪದ್ಧತಿ, ಯೋಜನೆ ಜಾರಿಗೆ ತಂದವರು, ಕಾರ್ಯವೃಂದ-ದಲ್ಲಿ ಬದಲಾವಣೆ ಮತ್ತು ಸಂಸ್ಥೆಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದವರು, ನಾಗರಿಕ ಸೇವಾ ವ್ಯವಸ್ಥೆಯಲ್ಲಿ ಗುಣಾತ್ಮಕ, ನಾಗರಿಕ ಸ್ನೇಹಿ, ಭ್ರಷ್ಟಾಚಾರ ರಹಿತ ವಾತಾವರಣ ನಿರ್ಮಿಸಿದವರು, ನೈಸರ್ಗಿಕ ವಿಕೋಪದ ಸಮಯದಲ್ಲಿ ಅತ್ಯುನ್ನತ ಕಾರ್ಯ ಸಾಧನೆ ಮಾಡಿದವರು, ಸಾರ್ವಜನಿಕ ಹಣ ಉಳಿತಾಯ ಮಾಡಿದ ಎಲ್ಲ ವೃಂದದ ನೌಕರರೂ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಮಾರ್ಚ್ 31 ಕೊನೆಯ ದಿನ.

ಅರ್ಜಿ ಸಲ್ಲಿಸುವಾಗ ತಾಂತ್ರಿಕ ಸಮಸ್ಯೆಗಳಿದ್ದರೆ 080-22230060 ಸಂಪರ್ಕಿಸಬಹುದು.

ಪ್ರತಿ ಜಿಲ್ಲೆಗೆ ನೀಡುವ 10 ಪ್ರಶಸ್ತಿಗಳು ತಲಾ ₹ 25 ಸಾವಿರ ನಗದು, ರಾಜ್ಯಮಟ್ಟದಲ್ಲಿ ನೀಡುವ 30 ಪ್ರಶಸ್ತಿಗಳು ತಲಾ ₹ 50 ಸಾವಿರ ನಗದು ಪುರಸ್ಕಾರ ಒಳಗೊಂಡಿವೆ.

ಏಪ್ರಿಲ್ 21ರಂದು ನಡೆಯುವ ಸರ್ಕಾರಿ ನೌಕರರ ದಿನಾಚರಣೆಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಸ್ವಾಭಿಮಾನ ಪುಸ್ತಕ ಪ್ರಶಸ್ತಿಗೆ ಕೃತಿಗಳ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾಭಿಮಾನಿ ಕರ್ನಾಟಕ ವೇದಿಕೆಯು ‘ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ’ಗೆ 2022ರಲ್ಲಿ ಪ್ರಕಟಗೊಂಡ ಸಾಹಿತ್ಯ ಕೃತಿಗಳನ್ನು ಲೇಖಕರು ಹಾಗೂ ಪ್ರಕಾಶಕರಿಂದ ಆಹ್ವಾನಿಸಿದೆ.

ಆಯ್ಕೆಯಾದ 5 ಪ್ರಕಾರದ 5 ಕೃತಿಗಳಿಗೆ ತಲಾ ₹ 5 ಸಾವಿರ ನಗದು ಬಹುಮಾನ ನೀಡಲಾಗುತ್ತದೆ.

ಪುಸ್ತಕದ ಮೂರು ಪ್ರತಿಗಳನ್ನು ಏಪ್ರಿಲ್ 30ರೊಳಗೆ ದ್ವಾರನಕುಂಟೆ ಪಾತಣ್ಣ, ಅಧ್ಯಕ್ಷರು ಸ್ವಾಭಿಮಾನಿ ಕರ್ನಾಟಕ ವೇದಿಕೆ, ನಂ.118, ಹೊಂಬೆಳಕು, 5ನೇ ಕ್ರಾಸ್, 1ನೇ ಬ್ಲಾಕ್, ಎಚ್‌ಎಂಟಿ ಲೇಔಟ್, ನಾಗಸಂದ್ರ ಅಂಚೆ, ಬೆಂಗಳೂರು-560073 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 9686073837

ದೇವೇಗೌಡರ ವಿರುದ್ಧ ಮಾನಹಾನಿಕರ ಪೋಸ್ಟ್: ಸಂಬರಗಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಾಮಾಜಿಕ ಮಾಧ್ಯಮದಲ್ಲಿ ಮಾನಹಾನಿಕರ ಪೋಸ್ಟ್
- ನಗರ ಪೊಲೀಸ್ ಕಮಿಷನರ್‌ಗೆ ದೂರು
- ಪ್ರಶಾಂತ ಸಂಬರಗಿ ಗಡೀಪಾರಿಗೆ ಆಗ್ರಹ

ಬೆಂಗಳೂರು: ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರ ಸ್ವಾಮಿ ಮತ್ತು ಇತರ ಮುಖಂಡರ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಮಾನಹಾನಿಕರ ಪೋಸ್ಟ್ ಪ್ರಕಟಿಸು-ತ್ತಿರುವ ಬಿಜೆಪಿ ಮುಖಂಡ ಪ್ರಶಾಂತ್ ಸಂಬರಗಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಜೆಡಿಎಸ್ ರಾಜ್ಯ ಕಾನೂನು ವಿಭಾಗದ ಅಧ್ಯಕ್ಷ ಎ.ಪಿ. ರಂಗನಾಥ್ ಅವರು ನಗರ ಪೊಲೀಸ್ ಕಮಿಷನರ್ ಅವರಿಗೆ ದೂರು ಸಲ್ಲಿಸಿದ್ದಾರೆ.

ಎಚ್.ಡಿ. ದೇವೇಗೌಡ, ಕುಮಾರ ಸ್ವಾಮಿ, ಪಕ್ಷದ ಇತರ ನಾಯಕರು, ಶಾಸಕರ ವಿರುದ್ಧ ಪ್ರಶಾಂತ್ ಸಂಬರಗಿ ಅವರ ಫೇಸ್ ಬುಕ್, ಇನ್ಸ್ಟಾಗ್ರಾಮ್, ಟ್ವಿಟರ್ ಖಾತೆಗಳಲ್ಲಿ ನಿರಂತರವಾಗಿ ಅವಹೇಳನಕಾರಿ ಪೋಸ್ಟ್ ಹಾಕಲಾಗುತ್ತಿದೆ. ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ, ಬಂಧಿಸಬೇಕು. ರಾಜ್ಯದಿಂದ ಗಡೀಪಾರು ಮಾಡಬೇಕು. ಅವರ ಹೆಸರಿನಲ್ಲಿರುವ ಎಲ್ಲ ಸಾಮಾಜಿಕ ಮಾಧ್ಯಮಗಳ ಖಾತೆಗಳನ್ನು ಸ್ಥಗಿತಗೊಳಿಸಬೇಕು ಎಂದು ದೂರಿನಲ್ಲಿ ಒತ್ತಾಯಿಸಿದ್ದಾರೆ.

‘ಸಂಬರಗಿ ಅವರ ಫೇಸ್ ಬುಕ್ ಖಾತೆಯಲ್ಲಿ ಶನಿವಾರ ಪೋಸ್ಟ್ ಒಂದನ್ನು ಹಾಕಿದ್ದು, ‘ದೇವೇಗೌಡ ಕಳ್ಳ ಅನ್ನೋದಕ್ಕೂ, ಗೌಡರು ಅನ್ನೋರೆಲ್ಲ ಕಳ್ಳರೇ ಯಾಕಿರ್ತಾರೆ? ಅನ್ನೋದಕ್ಕೂ ವ್ಯತ್ಯಾಸ ಇದೆ. ಮೊದಲನೆಯದಕ್ಕೆ ದೇವೇಗೌಡರು ಕೇಸು ಹಾಕಬಹುದು. ಎರಡನೆಯದಕ್ಕೆ ಅವರ ಮಗನೋ, ಮೊಮ್ಮಗನೋ ಅಥವಾ ಗೌಡ ಕೇಸು ಹಾಕಬಹುದು’ ಎಂದು ನಿಂದಿಸಿದ್ದಾರೆ’ ಎಂದು ರಂಗನಾಥ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ದ ಎಲಿಫೆಂಟ್ ವಿಸ್ಪರರ್ಸ್’ ಸಾಕ್ಷ್ಯಚಿತ್ರದ ಕುರಿತು ಮಾರ್ಚ್ 15ರಂದು ಪೋಸ್ಟ್ ಒಂದನ್ನು ಹಾಕಿರುವ ಸಂಬರಗಿ, ‘ಎಲ್ಲೇ ಕೂಸು ಹುಟ್ಟಲಿ ನಾನೇ ಅಪ್ಪ’ ಎಂಬುದಾಗಿ ಬರೆದು ದೇವೇಗೌಡ ಅವರನ್ನು ನಿಂದಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಕುಮಾರಸ್ವಾಮಿ ಮತ್ತು ಜೆಡಿಎಸ್ ಪಕ್ಷದ ಇತರ ನಾಯಕರನ್ನು ನಿಂದಿಸಿರುವ ಪೋಸ್ಟ್‌ಗಳ ವಿವರಗಳನ್ನೂ ರಂಗನಾಥ್ ದೂರಿನಲ್ಲಿ ನೀಡಿದ್ದಾರೆ.



ಆರೋಗ್ಯಕ್ಕೆ ಕುತ್ತು ಚೈನಾಸಾಲ್ಟ್

ಮುಖ್ಯಾಂಶಗಳು
- ಎಂಎಸ್‌ಜಿ: ಸಿದ್ಧ ಅಡುಗೆಗಳಲ್ಲಿ ನಿಷಿದ್ಧ
- ಪೊಟ್ಟಣದಲ್ಲಿಡುವ ಆಹಾರಗಳಲ್ಲಿ ಬಳಕೆಗೆ ಅವಕಾಶ
- ಜನರಲ್ಲಿ ಜಾಗೃತಿ ಮೂಡಿಸುವುದು ಅಗತ್ಯ

ಒಂದನೇ ಪುಟದಿಂದ...

ಎಂಎಸ್‌ಜಿ ರುಚಿವರ್ಧಕವನ್ನು ಸಾಮಾನ್ಯವಾಗಿ, ಸಂಸ್ಕರಿಸಿ ಶೇಖರಿಸಿ ಇಡಲಾಗುವ ತರಕಾರಿ, ಸೂಪ್, ಮಾಂಸದ ಪದಾರ್ಥ, ಡಿಢೀರ್ ಅಡುಗೆ ಮಿಶ್ರಣಗಳಲ್ಲಿ ಸೇರ್ಪಡೆ ಮಾಡಿ ಪ್ಯಾಕ್ ಮಾಡಲಾಗಿರುತ್ತದೆ. ಭಾರತದ ಅಡುಗೆ ಮನೆಯೊಳಗೆ ಇದು ಅಷ್ಟೊಂದು ಗಾಢವಾಗಿ ನುಸುಳಿಲ್ಲವಾದರೂ ಇಲ್ಲಿನ ರೆಸ್ಟೊರೆಂಟ್‌ಗಳು, ಉಪಾಹಾರ ಗೃಹಗಳಿಗೆ ಹೊಕ್ಕು ದಶಕಗಳೇ ಕಳೆದಿವೆ. ಹಾಗಾಗಿಯೇ, ಹೋಟೆಲ್ ಉಪಾಹಾರ ಗೃಹಗಳಲ್ಲಿ ನಮ್ಮ ಅನುಭವಕ್ಕೆ ಸಿಗುವ ವಿಲಕ್ಷಣ ರುಚಿಯೊಂದು ಮನೆಯ ಅಡುಗೆಗಳಲ್ಲಿ ಗೈರಾಗಿರುತ್ತದೆ.

ಮಿದುಳಿನ ರುಚಿ ಸಂವೇದನೆಗೆ ಒಳಗಾಗುವ ಹಲವು ಕ್ರಿಯೆಗಳ ವಿಶ್ಲೇಷಣೆಯಲ್ಲಿ ಯಾವ ರುಚಿಯು ಯಾವ ರೀತಿಯ ಪ್ರಭಾವ ಮತ್ತು ಉಲ್ಲಾಸ ಉಂಟು ಮಾಡುತ್ತದೆ ಎಂಬುದನ್ನು ಗ್ರಹಿಸುತ್ತದೆ. ಆಹಾರ ಪದಾರ್ಥಗಳಲ್ಲಿರುವ ಹಲವು ನೈಸರ್ಗಿಕ ರಸಾಯನ ಧಾತುಗಳು ನಮಗೆ ಈ ರುಚಿ ಸಂವೇದನೆಯನ್ನು ಉಂಟು ಮಾಡುತ್ತವೆ. ಷಡ್‌ರಸಗಳಲ್ಲಿ ಸಿಹಿ (ಮಧುರ), ಹುಳಿ (ಆಮ್ಲ), ಉಪ್ಪು (ಲವಣ), ಖಾರ (ಕಟು), ಕಹಿ (ತಿಕ್ತ) ಮತ್ತು ಒಗರು (ಕಷಾಯ) ಇವೆಲ್ಲಾ ಈಗಾಗಲೇ ಪರಿಚಯ ಇರುವಂಥವು. ಮೂಲ ರುಚಿಗಳಾದ ಸಿಹಿ, ಹುಳಿ, ಉಪ್ಪು ಮತ್ತು ಕಹಿ ಇವುಗಳಿಗೆ ಕಾಲಕ್ರಮೇಣ ಉಮಾಮಿ (ಸಾಮಾನ್ಯವಾಗಿ, ಇದು ಪ್ರೋಟೀನ್‌ಯುಕ್ತ ಆಹಾರಗಳಲ್ಲಿ ಇರುತ್ತದೆ) ಎಂಬ ರುಚಿ ಪ್ರಾಯಶಃ 2002ರಿಂದ ಸೇರ್ಪಡೆಯಾಗಿದೆ.

ನೈಸರ್ಗಿಕವಾಗಿ ಉಮಾಮಿ ಸ್ವಾದವನ್ನು ಹೊಂದಿರುವ ಪದಾರ್ಥಗಳನ್ನು ಉಪಯೋಗಿಸುವಾಗ ಕೃತ್ರಿಮ ಎಂಎಸ್‌ಜಿಯನ್ನು ಸೇರಿಸುವ ಅವಶ್ಯಕತೆ ಇರುವುದಿಲ್ಲ. ಮೀನು, ಮಾಂಸ, ಗಿಣ್ಣು, ಸೋಯಾ, ಅಣಬೆ, ಟೊಮೆಟೊ ಮುಂತಾದವುಗಳಲ್ಲಿ ನೈಸರ್ಗಿಕವಾಗಿ ಉಮಾಮಿ ಸ್ವಾದ ಇರುತ್ತದೆ. ಆದರೆ, ಈ ಸ್ವಾದವನ್ನು ವರ್ಧಿಸಲು ಉಪಯೋಗಿಸುವ ಕೃತಕ ರಾಸಾಯನಿಕವೇ ಎಂಎಸ್‌ಜಿ ಅಥವಾ ಉಮಾಮಿ ಉಪ್ಪು.

ಉಮಾಮಿ ರುಚಿಯು ಒಂದು ರೀತಿಯ ಮಾಂಸದ ರುಚಿಯನ್ನು ಹೋಲುವಂಥದ್ದಾಗಿರುತ್ತದೆ. ಇದರ ರುಚಿಯು ಆಹಾರ ಪದಾರ್ಥಗಳಲ್ಲಿ (ಸಿಹಿ ಆಹಾರ ಪದಾರ್ಥಗಳನ್ನು ಹೊರತುಪಡಿಸಿ) ನಮ್ಮ ಅನುಭವಕ್ಕೆ ದಕ್ಕುವುದರಿಂದ ವರ್ಧಿತ ರುಚಿಯ ಅನುಭವವಾಗುವುದರಲ್ಲಿ ಸಂದೇಹವಿಲ್ಲ. ನೀವೆಂದಾದರೂ ಗಾಯಗೊಂಡು ರಕ್ತ ಸ್ರವಿಸುವ ಬೆರಳನ್ನು ಬಾಯಲ್ಲಿ ಇಟ್ಟುಕೊಂಡಿದ್ದರೆ ಆಗ ಸಿಗುವ ವಿಲಕ್ಷಣ ರುಚಿಯೇ ಇದರಲ್ಲೂ ಕಂಡು ಬರುತ್ತದೆ!. ನಮ್ಮ ನಾಲಗೆಯಲ್ಲಿರುವ ನಾಲ್ಕು ಮೂಲ ರುಚಿಗ್ರಾಹಿಗಳ ಜೊತೆಗೆ ಉಮಾಮಿ ರುಚಿ ಗ್ರಾಹಿಗಳು ಪ್ರತ್ಯೇಕವಾಗಿ ಇವೆ ಎಂಬುದನ್ನು ಸಂಶೋಧನೆಗಳು ದೃಢಪಡಿಸಿವೆ.

ನಮ್ಮ ಸಂಬಾರ ಪದಾರ್ಥಗಳ ರುಚಿಗಳು ಈ ಹಿಂದೆ ಪಾಶ್ಚಾತ್ಯ ರಾಷ್ಟ್ರಗಳಿಗೆ ತಲುಪಿ ಆವರಿಸಿಕೊಂಡಿರುವಷ್ಟೇ ಸಹಜವಾಗಿ ಎಂಎಸ್‌ಜಿಯ ಉಮಾಮಿ ರುಚಿ ಕೂಡಾ ನಮ್ಮ ಪಾಕಶಾಲೆಗಳಲ್ಲಿ ಬಂದು ಸೇರುತ್ತಿದೆ.

ಎಂಎಸ್‌ಜಿ ಆಕ್ಷೇಪಿತ ರಾಸಾಯನಿಕ ಎಂಬ ಖಂಡನೆಗೆ ಈಡಾಗಿದ್ದರೂ ಇದು ಕ್ಲೇಶಕಾರಕವೆಂಬ ಬಗ್ಗೆ ಈತನಕ ಯಾವುದೇ ಬಲವಾದ ವೈಜ್ಞಾನಿಕ ಸಾಕ್ಷ್ಯಾಧಾರಗಳಿಲ್ಲ. ಕೆಲವು ಸಂಶೋಧನೆಗಳ ಅನುಸಾರ ಇದರ ಬಳಕೆಯಿಂದ ತಲೆನೋವು, ಬಸುರಿಯರಿಗೆ ಮಾರಕವಾಗಿ ಪರಿಣಮಿಸಬಹುದು ಎಂದು ಹೇಳಲಾಗಿದೆ. ಹಾಗೆ ನೋಡುವುದಾದರೆ ಎಲ್ಲಾ ರುಚಿವರ್ಧಕಗಳೂ ಅಂದರೆ ಉಪ್ಪು, ಸಕ್ಕರೆ, ಆಮ್ಲಗಳು ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗುವಾಗ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವುದರಲ್ಲಿ ಸಂದೇಹವೇ ಇಲ್ಲ.

ಪ್ರಾಧಿಕಾರಗಳ ನಿರ್ಲಕ್ಷ್ಯ: 'ಹೋಟೆಲ್‌ಗಳಲ್ಲಿ ಬಳಸುವ ರುಚಿವೃದ್ಧಿಯ ಪದಾರ್ಥಗಳ ಬಗ್ಗೆ ನಿಗಾ ವಹಿಸುವ ವ್ಯವಸ್ಥೆ ದುರ್ಬಲವಾಗಿದೆ. ಈಗಿರುವ ಪ್ರಾಧಿಕಾರಗಳು ಆಹಾರದ ಗುಣಮಟ್ಟ ಮತ್ತು ಸ್ವಚ್ಛತೆ ಮುಂತಾದ ವಿಷಯಗಳ ಬಗ್ಗೆ ಮಾತ್ರ ಕ್ರಮ ಕೈಗೊಳ್ಳುತ್ತಿವೆಯೇ ಹೊರತು ರುಚಿ ವೃದ್ಧಿಸಲು ಬಳಸುವ ಪದಾರ್ಥಗಳ ಬಗ್ಗೆ ಗಮನಹರಿಸುತ್ತಿಲ್ಲ. ಆಹಾರ ಪದಾರ್ಥಗಳನ್ನು ಪರೀಕ್ಷೆಗೆ ಕಳುಹಿಸಿ ವಿಶ್ಲೇಷಣೆ ನಡೆಸಿದರೆ ಮಾತ್ರ ಇಂತಹ ಪದಾರ್ಥಗಳ ಬಳಕೆಯನ್ನು ಪತ್ತೆ ಮಾಡಲು ಸಾಧ್ಯ' ಎಂಬುದು ಸಕ್ಷಮ ಪ್ರಾಧಿಕಾರದ ಅಧಿಕಾರಿಗಳ ಅನಿಸಿಕೆ.

'ಇದುವರೆಗೆ ಅಜಿನೊಮೊಟೊ ಸೇರಿದಂತೆ ರುಚಿ ವೃದ್ಧಿಸುವ ಆಹಾರ ಪದಾರ್ಥಗಳ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿಲ್ಲ. ಆಹಾರ ಸುರಕ್ಷತಾ ಇಲಾಖೆ ಆಹಾರ ಗುಣಮಟ್ಟದ ಬಗ್ಗೆ ಮತ್ತು ಆರೋಗ್ಯ ನಿರೀಕ್ಷಕರು ಸ್ವಚ್ಛತೆ ಬಗ್ಗೆ ಮಾತ್ರ ಗಮನಹರಿಸುತ್ತಾರೆ. ಆದರೆ, ಆಹಾರದಲ್ಲಿ ಏನು ಮತ್ತು ಯಾವ ಪದಾರ್ಥಗಳನ್ನು ಬಳಸಲಾಗಿದೆ ಎನ್ನುವ ಬಗ್ಗೆ ಪರಿಶೀಲಿಸುವ ಗೋಜಿಗೆ ಹೋಗುವುದಿಲ್ಲ. ಈ ಬಗ್ಗೆ ಸ್ಪಷ್ಟ ಕಾನೂನುಗಳು ಸಹ ಇಲ್ಲ. ಹೀಗಾಗಿ, ಇದುವರೆಗೆ ಒಂದೇ ಒಂದು ಪ್ರಕರಣ ದಾಖಲಾದ ಉದಾಹರಣೆ ಇಲ್ಲ' ಎಂದು ಈ ಅಧಿಕಾರಿಗಳು ಹೇಳುತ್ತಾರೆ.

ಎಂಎಸ್‌ಜಿ ಪತ್ತೆ ಹೇಗೆ: ಪ್ರಾಧಿಕಾರ ಅಧಿಕಾರಿಗಳ ಪ್ರಕಾರ, ಆಹಾರದಲ್ಲಿ ಎಂಎಸ್‌ಜಿ ಬಳಕೆಯನ್ನು ಕಣ್ಣೋಟದಲ್ಲಿ, ಪರಿಮಳ ಆಸ್ವಾದಿಸಿ ಅಥವಾ ಇನ್ನಾವುದೋ ಭೌತಿಕ ವಿಧಾನದಲ್ಲಿ ಪತ್ತೆ ಮಾಡುವುದು ಅಸಾಧ್ಯ. ಅದೇನಿದ್ದರೂ, ಆಹಾರವನ್ನು ಪ್ರಯೋಗಾಲಯಗಳಲ್ಲಿ ಪರೀಕ್ಷೆ ಮಾಡಿಸಿಯೇ ತಿಳಿಯಬೇಕು. ಈಗಾಗಲೇ ತಾಜಾ ಆಹಾರಗಳಲ್ಲಿ ಎಂಎಸ್‌ಜಿ ನಿಷೇಧಿಸುವ ಕಾನೂನಿದೆ. ಇದರ ಜತೆ, ಕೆಲವೊಂದು ನಿರ್ಬಂಧಗಳನ್ನು ಕೂಡ ವಿಧಿಸಲಾಗಿದೆ. ಆಹಾರ ತಯಾರಿಕಾ ಘಟಕಗಳಿಂದ ಬಳಕೆಗೆ ಸಂಬಂಧಿಸಿದಂತೆ ಕಾನೂನು ಪರಿಪಾಲನೆ ಮತ್ತು ಇಲಾಖೆಗಳಿಂದ ಪರಿಶೀಲನೆ ಹಾಗೂ ಕಾನೂನು ಕ್ರಮಗಳು ಸಮರ್ಪಕ ರೀತಿಯಲ್ಲಿ ಆಗುತ್ತಿಲ್ಲ.

ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ನಿಯಮದ ಪ್ರಕಾರ, ತಾಜಾ ಆಹಾರ ತಯಾರಿಸುವ ಹೋಟೆಲ್, ಕೇಟರಿಂಗ್, ರೆಸ್ಟೋರೆಂಟ್, ಫಾಸ್ಟ್‌ಫುಡ್, ಬೀದಿ ಬದಿ ಹೋಟೆಲ್‌ಗಳಲ್ಲಿ ಎಂಎಸ್‌ಜಿ ಬಳಸುವುದನ್ನು ನಿಷೇಧಿಸಲಾಗಿದೆ. ಆದರೆ, ಈ ವಿಷಯ ಬಹುಮಂದಿಗೆ ಗೊತ್ತಿಲ್ಲ ಮತ್ತು ಈ ಬಗ್ಗೆ ತಿಳಿವಳಿಕೆಯೂ ಇಲ್ಲ. ಜನರಿಗೆ ತಿಳಿವಳಿಕೆ ಮೂಡಿಸುವ ಕಾರ್ಯವನ್ನು ಎಫ್‌ಎಸ್‌ಎಸ್‌ಎಐ ಸಹ ಸಮರ್ಪಕವಾಗಿ ಮಾಡುತ್ತಿಲ್ಲ ಎಂದು ಸ್ವತಂತ್ರ ಆಹಾರ ಸುರಕ್ಷತೆಯ ಆಡಿಟರ್, ಟ್ರೈನರ್ ಮತ್ತು ಕನ್ಸಲ್ಟೆಂಟ್ ಸವಿತಾ ದೇ. ಭರಮಗೌಡ್ರ ಅಭಿಪ್ರಾಯಪಡುತ್ತಾರೆ.

ಆದರೆ, 'ರೆಡಿ ಟು ಕುಕ್'ನಂತಹ ಕೆಲ ಆಹಾರಗಳಲ್ಲಿ (ಪಾಸ್ತಾ, ನೂಡಲ್ಸ್ ವರ್ಗಕ್ಕೆ ಸೇರುವ ಆಹಾರಗಳಲ್ಲಿ) ಎಂಎಸ್‌ಜಿ ಬಳಸಲು ಅನುಮತಿ ಇದೆ. ಅದು ಕಲಬೆರಕೆ ರಹಿತವಾಗಿರಬೇಕು ಹಾಗೂ ಬೇಕಾದ ರುಚಿ ಮತ್ತು ವಾಸನೆ ಪಡೆಯಲು ಎಷ್ಟು ಬೇಕೋ ಅಷ್ಟನ್ನೇ ಮಾತ್ರ ಬಳಸಬೇಕು. ಆದರೆ, ಅದನ್ನು ಎಷ್ಟು ಬಳಸಬೇಕು ಎನ್ನುವ ಗರಿಷ್ಠ ಮಿತಿಯನ್ನು ನಿಗದಿ ಪಡಿಸಿಲ್ಲ. 'ಎಂಎಸ್‌ಜಿ ಬಳಸಿದ ಆಹಾರ ಪೊಟ್ಟಣದ ಮೇಲೆ (ಲೇಬಲ್) 'ಗರ್ಭಿಣಿಯರಿಗೆ ಮತ್ತು 12 ತಿಂಗಳ ಒಳಗಿನ ಹಸುಗೂಸುಗಳಿಗೆ ಈ ಆಹಾರ ಬಳಸುವುದು ಸೂಕ್ತವಲ್ಲ' ಎಂದು ಬರೆಯುವುದು ಕಡ್ಡಾಯ. ಅಮೆರಿಕದ ಕೃಷಿ ಆಹಾರ ಇಲಾಖೆ (ಎಫ್‌ಡಿಎ) ಕೂಡ ನಿಷೇಧ ಮಾಡಿಲ್ಲ. ಆದರೆ, ಎಂಎಸ್‌ಜಿ ಬಳಸಿದ ಆಹಾರ ಪೊಟ್ಟಣದ ಮೇಲೆ, ಎಷ್ಟು ಎಂಎಸ್‌ಜಿ ಬಳಸಿದ್ದೇವೆಂದು ನಮೂದಿಸಬೇಕೆಂಬ ನಿಯಮವನ್ನು ಜಾರಿಗೆ ತಂದಿದೆ.

'ಗ್ರಾಹಕರು, ಯಾವುದಾದರೂ ಆಹಾರ ತಯಾರಿಕಾ ಘಟಕಗಳಲ್ಲಿ ತಯಾರಾಗುವ ಆಹಾರಗಳಲ್ಲಿ ಎಂಎಸ್‌ಜಿ ಬಳಸಿದ್ದಾರೆ ಎನ್ನುವ ಅನುಮಾನ ಮೂಡಿದರೆ, ಎಫ್‌ಎಸ್‌ಎಸ್‌ಎಐಗೆ ದೂರು ನೀಡಬಹುದು. ಅಷ್ಟೇ ಅಲ್ಲ, ನಾಗರಿಕರು ಅಥವಾ ಸಂಘಟನೆಗಳು, ಅನುಮಾನ ಮೂಡಿಸುವ ಆಹಾರವನ್ನು ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋಗಿ, ಪರೀಕ್ಷೆ ಕೂಡ ಮಾಡಿಸಿ, ವರದಿ ತೆಗೆದುಕೊಂಡು ಬಂದು ಎಫ್‌ಎಸ್‌ಎಸ್‌ಎಐಗೆ ದೂರು ನೀಡಬಹುದು. ಅಕ್ರಮಗಳು ಉಂಟಾದಾಗ ಕಾನೂನು ಕ್ರಮ ಜರುಗಿಸಿ ಜನರಲ್ಲಿ, ಹೋಟೆಲ್ ಉದ್ಯಮದವರಲ್ಲಿ ಜಾಗೃತಿ ಮೂಡಿಸಬಹುದು. ಇದರಿಂದ ಎಂಎಸ್‌ಜಿ ಬಳಕೆ ಕಡಿಮೆಯಾಗಬಹುದು' ಎನ್ನುತ್ತಾರೆ ಸವಿತಾ.

ನಿಯಮಿತ ಸೇವನೆಯಿಂದ ಅಪಾಯ: 'ಮೊನೊಸೋಡಿಯಮ್ ಗ್ಲುಟಾಮೇಟ್' ಬಳಕೆಗೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಅನುಮೋದನೆ ನೀಡಿದ್ದರೂ, ಅತಿಯಾದ ಸೇವನೆ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಇದು ಹೆಚ್ಚಿನ ಪ್ರಮಾಣದಲ್ಲಿ ಸೋಡಿಯಂ ಒಳಗೊಂಡಿರುತ್ತದೆ. ಪ್ರತಿ ಟೀ ಚಮಚದಷ್ಟು ಅಜಿನೊಮೊಟೊದಲ್ಲಿ 800 ಎಂ.ಜಿಯಷ್ಟು ಸೋಡಿಯಂ ಇರುತ್ತದೆ. ಇದನ್ನು ಸೇರಿಸುವ ಆಹಾರ ಪದಾರ್ಥಗಳ ಸೇವನೆಯಿಂದ ರಕ್ತದೊತ್ತಡ ಹೆಚ್ಚಳವಾಗಲಿದೆ. ಇದರ ವ್ಯಾಪಕ ಬಳಕೆಯು ಬೊಜ್ಜು, ಅಸ್ತಮಾ, ಮಧುಮೇಹ, ನರಸಂಬಂಧಿ ಸಮಸ್ಯೆಗಳೂ ಸೇರಿದಂತೆ ವಿವಿಧ ಅನಾರೋಗ್ಯಗಳಿಗೆ ಕಾರಣವಾಗುತ್ತದೆ. ಪ್ರಾಣಿಗಳ ಮೇಲೆ ನಡೆಸಲಾದ ಅಧ್ಯಯನಗಳಿಂದ ಇದು ದೃಢಪಟ್ಟಿದೆ' ಎನ್ನುತ್ತಾರೆ ನಾರಾಯಣ ಹೆಲ್ತ್ ಸಿಟಿಯ ಹಿರಿಯ ಆಹಾರ ತಜ್ಞೆ ಸುಪರ್ಣಾ ಮುಖರ್ಜಿ.

'ಆಹಾರ ಪೊಟ್ಟಣ ಖರೀದಿಸುವಾಗ ಅದರ ಮೇಲಿರುವ ಮಾಹಿತಿಯನ್ನು ಓದಬೇಕು. ಸಾಧ್ಯವಾದಷ್ಟು ಪ್ಯಾಕಿಂಗ್ ಮಾಡಿದ ಆಹಾರ ಸೇವನೆ ತ್ಯಜಿಸಬೇಕು. ಚಿಪ್ಸ್, ನೂಡಲ್ಸ್ ಹಾಗೂ ಕೆಲವೇ ನಿಮಿಷಗಳಲ್ಲಿ ಸಿದ್ಧಪಡಿಸಬಹುದಾದ ಪೊಟ್ಟಣ ಆಹಾರಗಳನ್ನು ಮಿತವಾಗಿ ಬಳಸಬೇಕು' ಎಂಬುದು ಮುಖರ್ಜಿ ಅವರ ಅಭಿಪ್ರಾಯ.

ಆರೋಗ್ಯದ ಮೇಲೆ ದುಷ್ಪರಿಣಾಮ: ಎಂಎಸ್‌ಜಿಯನ್ನು ಪ್ಯಾಕೇಜ್ಡ್ ಆಹಾರಗಳಲ್ಲಿ ಮಾತ್ರ ಬಳಸಬೇಕೆಂಬ ನಿಯಮ ಉಲ್ಲಂಘಿಸಿ, ಬಹುತೇಕ ಆಹಾರಗಳಲ್ಲಿ ನಿತ್ಯವೂ ಅತಿಯಾಗಿ ಬಳಸುತ್ತಿರುವುದರಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ' ಎಂಬುದು ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ (ಸಿಎಫ್‌ಟಿಆರ್‌ಐ) ತಜ್ಞರ ಸ್ಪಷ್ಟ ನುಡಿ.

'ಸಂಸ್ಥೆಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ವಿಶ್ಲೇಷಣಾ ಪ್ರಯೋಗಶಾಲೆ ಮುಖ್ಯಸ್ಥ ಡಾ.ಎ. ಜಯದೀಪ್ ಹೇಳುವಂತೆ, 'ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ ಪ್ರಕಾರ, ಎಂಎಸ್‌ಜಿಯನ್ನು ಪೊಟ್ಟಣಗಳಲ್ಲಿರಿಸಿದ ಆಹಾರದಲ್ಲಷ್ಟೇ ಬಳಸಬಹುದು. ರಾಸಾಯನಿಕ, ಅದರ ಪ್ರಮಾಣ ಉಲ್ಲೇಖಿಸುವುದು ಕಡ್ಡಾಯ. ಗರ್ಭಿಣಿಯರು ಹಾಗು 12 ತಿಂಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ನೀಡುವಂತಿಲ್ಲ ಎಂದು ಲೇಬಲ್‌ನಲ್ಲೂ ಉಲ್ಲೇಖಿಸಬೇಕು' ಎಂದು ಅವರು ಹೇಳುತ್ತಾರೆ.

ಜಿಎಂಪಿ (ಗುಡ್ ಮ್ಯಾನ್ಯುಫ್ಯಾಕ್ಚರಿಂಗ್ ಪ್ರಾಕ್ಟೀಸ್) ಪ್ರಕಾರ ಕೆಲವು ರಾಸಾಯನಿಕಗಳನ್ನು ಸ್ವಲ್ಪವಷ್ಟೇ ಬಳಸಬೇಕು. ಆದರೆ, ಹೋಟೆಲ್, ಸಮಾರಂಭಗಳ ಅಡುಗೆ ತಯಾರಿಯಲ್ಲಿ ಎಗ್ಗಿಲ್ಲದೆ ಬಳಸಲಾಗುತ್ತಿದೆ. 'ಬಿರಿಯಾನಿ, ಪುಲಾವ್ ಸೇರಿದಂತೆ ಅಡುಗೆ ಮಾಡುವಾಗ ಎಂಎಸ್‌ಜಿ ಸೇರಿದಂತೆ 23 ರಾಸಾಯನಿಕಗಳನ್ನು ಬಳಸುವಂತಿಲ್ಲ. ಹಾಲು, ಮೊಸರು, ಸೊಪ್ಪು- ತರಕಾರಿಗಳು, ಹಣ್ಣುಗಳು, ಮಾಂಸ, ಮೊಟ್ಟೆ, ಚಾಕೊಲೇಟ್, ಹಾಲಿನ ಉತ್ಪನ್ನಗಳು, ಸಾಂಬಾರು ಪುಡಿಗಳಲ್ಲಿ ಹಾಕುವಂತಿಲ್ಲ' ಎಂದು ಅವರು ಸ್ಪಷ್ಟಪಡಿಸುತ್ತಾರೆ.

ನೈಸರ್ಗಿಕ ರುಚಿಕಾರಕವೇ ಒಳಿತು: 'ಟೊಮೆಟೊ, ಮಾಂಸದಲ್ಲೂ ನೈಸರ್ಗಿಕವಾಗಿ ಗ್ಲುಟಾಮೇಟ್ ಅಮ್ಲವಿರುತ್ತದೆ. ಪುಲಾವ್‌ಗೆ ಮಾಂಸದ ಚೂರು ಹಾಕಿದಾಗ ರುಚಿ ಹೆಚ್ಚುತ್ತದೆ. ವಿಶ್ವಸಂಸ್ಥೆಯ ಜೆಇಸಿಎಫ್ಎ ಸಮಿತಿ ಪ್ರಕಾರ, ಯಾವುದೇ ರಾಸಾಯನಿಕ ಸೇರಿಸಿದ ಆಹಾರವನ್ನು ಪ್ರಾಣಿಗಳಿಗೆ ನೀಡಿದರೆ ಅದರ 100ರಷ್ಟು ಪ್ರಮಾಣವನ್ನು ಕಡಿಮೆ ಮಾಡಿ ಮನುಷ್ಯರು ಸೇವಿಸಬಹುದು. ಇಲಿಗೆ ನೀಡುವ ಆಹಾರದಲ್ಲಿ 1 ಗ್ರಾಂ ರಾಸಾಯನಿಕವಿದ್ದರೆ, ಮನುಷ್ಯರಿಗೆ ನೀಡುವ ಆಹಾರದಲ್ಲಿ 0.03ರಷ್ಟಿರಬೇಕು' ಎಂದು ಆಹಾರ ವಿಜ್ಞಾನಿ ಅರುಣ್ ಕುಮಾರ್ ಹೇಳುತ್ತಾರೆ.

'ವಿಜ್ಞಾನಿಗಳ ಪ್ರಕಾರ, ದೇಹದ ತೂಕಕ್ಕೆ ತಕ್ಕಂತೆ 3 ಮಿಲಿ ಗ್ರಾಂಗಿಂತ ಹೆಚ್ಚು ಗ್ಲುಟಾಮೇಟ್ ಬಳಸಬಾರದು. ಅತಿಯಾದರೆ ಎದೆ ಉರಿ, ಹೊಟ್ಟೆ ಭಾರವೆನ್ನಿಸುವ ಚೈನೀಸ್ ಸಿಂಡ್ರೋಮ್ ಬರುತ್ತದೆ. ನ್ಯೂಡಲ್ಸ್, ಗೋಬಿ ಮಂಚೂರಿಯಂಥ ಕುರುಕಲು ತಿಂಡಿಗಳಲ್ಲಿ ಹೆಚ್ಚೇ ರಾಸಾಯನಿಕ ಹಾಕುತ್ತಾರೆ. ಮನೆಯಲ್ಲೂ ಕೃತಕ ಬಣ್ಣ ಬಳಸುತ್ತಾರೆ. ಮೈಸೂರು ಪಾಕ್, ಕೇಸರಿ ಬಾತ್, ಸಿಹಿ ತಯಾರಿಕೆಯಲ್ಲಿ ಬೇಡವಾದರೂ ಬಳಕೆಯಾಗುತ್ತಿದೆ. ಜನರಲ್ಲಿ ಜಾಗೃತಿ ಅಗತ್ಯ. ಎಂಎಸ್‌ಜಿ ಹೆಚ್ಚು ತಿನ್ನುವಂತೆಯೂ ಉದ್ದೀಪಿಸುತ್ತದೆ. ಅವುಗಳ ಬದಲು ನೈಸರ್ಗಿಕ ರುಚಿಕಾರಕಗಳನ್ನು ಬಳಸುವುದೇ ಒಳಿತು' ಎನ್ನುತ್ತಾರೆ.

ಪೂರಕ ಮಾಹಿತಿ: ಸಚ್ಚಿದಾನಂದ ಕುರಗುಂದ, ವರುಣ ಹೆಗಡೆ, ಮಂಜುಶ್ರೀ ಕಡಕೋಳ, ಮೋಹನ್‌ಕುಮಾರ್ ಸಿ.



ಚೈನಾ ಸಾಲ್ಟ್ ಇಲ್ಲದೆಯೇ ರುಚಿ ಹೆಚ್ಚಿಸಲು ನೈಸರ್ಗಿಕ, ಆರೋಗ್ಯಕರವಾದ ಟೊಮೆಟೊ, ಕಡಲೆ, ಗೋಡಂಬಿ, ಅವರೆ, ಬಟಾಣಿ ಬಳಸಬಹುದು.

ಡಾ.ಅರುಣ್ ಕುಮಾರ್, ವಿಜ್ಞಾನಿ, ಸಿಎಫ್‌ಟಿಆರ್‌ಐ



ಚೈನಾ ಸಾಲ್ಟ್ ಅನ್ನು ಹೆಚ್ಚು ಬಳಸುವುದರಿಂದ ರುಚಿಕಾರಕಗಳು ಭಾರತಕ್ಕೆ ಹೆಚ್ಚು ಆಮದಾಗುತ್ತಿವೆ. ಇದು ಸ್ಫಟಿಕ ರೂಪದಲ್ಲಿದ್ದು, ಸುಲಭವಾಗಿಯೂ ಸಿಗುತ್ತಿದೆ.

ಡಾ.ಎ.ಜಯದೀಪ್, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ವಿಶ್ಲೇಷಣಾ ಪ್ರಯೋಗಶಾಲೆ ಮುಖ್ಯಸ್ಥ, ಸಿಎಫ್‌ಟಿಆರ್‌ಐ

ಸಾಂಪ್ರದಾಯಿಕ ವಿಧಾನವೇ ರುಚಿಗೆ ಕಾರಣ



ಚೈನಾಸಾಲ್ಟ್ ಬಳಸದೆಯೇ ಖಂಡಿತವಾಗಿಯೂ ರುಚಿಕರವಾಗಿ ಆಹಾರ ತಯಾರಿಸಬಹುದು. ನೈಸರ್ಗಿಕವಾಗಿ ದೊರೆಯುವ ಆಹಾರ ಸಾಮಗ್ರಿಗಳನ್ನು ಬಳಸಿ ಅಡುಗೆ ಮಾಡಿದರೆ ಅದು ರುಚಿಕರವಾಗಿಯೇ ಇರುತ್ತದೆ.

ನಮ್ಮದು ನೂರು ವರ್ಷಗಳಷ್ಟು ಇತಿಹಾಸವಿರುವ ಹೋಟೆಲ್. ನಮ್ಮ ತಾತನ ಕಾಲದಿಂದಲೂ ಇಂದಿನವರೆಗೆ ಸಾಂಪ್ರದಾಯಿಕ ಆಹಾರ ತಯಾರಿಕಾ ವಿಧಾನವನ್ನೇ ಉಳಿಸಿಕೊಂಡಿದ್ದೇವೆ. ನಮ್ಮಲ್ಲಿ ಮಾಂಸದ ಖಾದ್ಯಗಳಿಗೆ ಮನೆಯಲ್ಲಿ ತಯಾರಿಸುವಂತೆಯೇ ಮಸಾಲೆಯನ್ನು ತಯಾರಿಸುತ್ತೇವೆ. ನೈಸರ್ಗಿಕವಾಗಿ ದೊರೆಯುವ ಆಹಾರ ಪದಾರ್ಥಗಳ ಬಳಕೆಯೇ ನಮ್ಮ ಹೋಟೆಲಿನ ಆಹಾರಗಳ ರುಚಿಯ ಹಿಂದಿರುವ ಗುಟ್ಟು.

ರಾಜೀವ್, ಶಿವಾಜಿ ಮಿಲ್ಟ್ರಿ ಹೋಟೆಲ್, ಬೆಂಗಳೂರು

ತಟ್ಟೆ ಇಡ್ಲಿಗೂ ಚೈನಾಸಾಲ್ಟ್!



ಹದಿಹರೆಯದವರು ಹೆಚ್ಚಾಗಿ ಇಷ್ಟಪಟ್ಟು ತಿನ್ನುವ ಗೋಬಿಮಂಚೂರಿ, ಪಾನಿಪೂರಿ, ಚೈನೀಸ್ ಫುಡ್‌ಗಳಲ್ಲಿ ನಿಮಗೆ ಗೊತ್ತಿಲ್ಲದಂತೆ ರುಚಿ ಹೆಚ್ಚಿಸಲು ಚೈನಾಸಾಲ್ಟ್ ಬಳಸುತ್ತಾರೆ. ತಟ್ಟೆ ಇಡ್ಲಿಗೆ ಜನಪ್ರಿಯವಾಗಿರುವ ಹೋಟೆಲ್‌ಗಳಲ್ಲೂ ಚೈನಾಸಾಲ್ಟ್‌ನ ಕರಾಮತ್ತು ಇದೆ. ಗ್ರಾಹಕರಿಗೆ ಇದರ ಅರಿವು ಇರುವುದೇ ಇಲ್ಲ. ಆಹಾರ ಸುರಕ್ಷತಾ ಅಧಿಕಾರಿಗಳು ಹೋಟೆಲ್‌ಗಳಲ್ಲಿ ಚೈನಾಸಾಲ್ಟ್ ಬಳಸುವ ಬಗ್ಗೆ ಪರೀಕ್ಷಿಸಬೇಕು.

ಪ್ರಮಾಣೀಕೃತ ಆಹಾರದ ಬಣ್ಣಗಳನ್ನಷ್ಟೇ ಬಳಸಬೇಕು ಎನ್ನುವ ನಿಯಮವಿದೆ. ಕೆಲವು ಹೋಟೆಲ್‌ಗಳಲ್ಲಿ ಪನ್ನೀರ್ ಬಟರ್ ಮಸಾಲಾ ಅಥವಾ ಬಣ್ಣ ಹಾಕಿ ಮಾಡಿರುವ ಆಹಾರ ತಿಂದರೆ ನಿಮ್ಮ ಕೈಯಲ್ಲಿ ಬಣ್ಣ ಹಾಗೆ ಉಳಿದುಕೊಳ್ಳುತ್ತದೆ. ಅಲ್ಲೆಲ್ಲಾ ಕೃತಕ ಬಣ್ಣಗಳನ್ನು ಬಳಸಿರುತ್ತಾರೆ. ಗ್ರಾಹಕರಿಗೆ ಇದರ ಅರಿವು ಇರುವುದಿಲ್ಲ. ನೋಡಲು ಗಾಢ ಬಣ್ಣವಿರುವ ಮತ್ತು ರುಚಿ ಹೆಚ್ಚಿರುವ ಆಹಾರಗಳನ್ನು ತಿನ್ನಲು ಜನರೂ ಬಯಸುವುದರಿಂದ ಚೈನಾಸಾಲ್ಟ್ ಮತ್ತು ಕೃತಕ ಬಣ್ಣಗಳ ಬಳಕೆ ಹೆಚ್ಚಾಗಿದೆ.

ಗಿರಿಶೇಖರ್, ಶಿವಳ್ಳಿ ಹೋಟೆಲ್, ಚನ್ನಪಟ್ಟಣ

ನರಸಂಬಂಧಿ ಸಮಸ್ಯೆಗೆ ಆಹ್ವಾನ



ಆಹಾರ ಪದಾರ್ಥ ಹಾಗೂ ಸಿದ್ಧ ತಿಂಡಿ ತಿನಿಸುಗಳ ಪರಿಮಳ ಹಾಗೂ ರುಚಿಯನ್ನು ಹೆಚ್ಚಿಸಲು ಅಜಿನೊಮೊಟೊ ಬಳಸಲಾಗುತ್ತಿದೆ. ಈ ಅಜಿನೊಮೊಟೊದಲ್ಲಿ ಅನಾರೋಗ್ಯಕರ ಅಂಶಗಳು ಸಾಕಷ್ಟಿವೆ. ಇದನ್ನು ಅಲ್ಪ ಪ್ರಮಾಣದಲ್ಲಿ ಬಳಸಬೇಕು. ಇದನ್ನು ಬೆರೆಸಿದ ಆಹಾರವನ್ನು ನಿರಂತರ ಸೇವಿಸಿದಲ್ಲಿ ನರಸಂಬಂಧಿ ಸೇರಿ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳಲಿವೆ.

ಅಜಿನೊಮೊಟೊ ಮಿಶ್ರಿತ ಆಹಾರವು ದೇಹಕ್ಕೆ ವಿಷಕಾರಿಯಾಗುವ ಸಾಧ್ಯತೆ ಇರುತ್ತದೆ. ಬುದ್ಧಿಯ ವಿಕಾಸದ ಮೇಲೆಯೂ ಪರಿಣಾಮ ಬೀರುತ್ತದೆ. ಕೆಲವರಿಗೆ ತೀವ್ರ ತಲೆಶೂಲೆ ಕಾಣಿಸಿಕೊಳ್ಳುತ್ತದೆ. ಜಂಕ್ ಫುಡ್‌ಗಳ ಸೇವನೆಯಿಂದ ಏಕಾಏಕಿ ದೇಹದ ತೂಕವೂ ಹೆಚ್ಚಾಗುತ್ತದೆ. ಇದು ನರ ಕೋಶಗಳನ್ನೂ ಹಾನಿಗೊಳಿಸುತ್ತದೆ. ಉಸಿರಾಟದ ಸಮಸ್ಯೆ, ಕೀಲು ಮತ್ತು ಸ್ನಾಯು ನೋವು, ರಕ್ತದೊತ್ತಡದ ಏರಿಳಿತ ಸೇರಿ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಪಾರ್ಕಿನ್‌ಸನ್, ಅಲ್ಜಮೈರ್‌ನಂತಹ ಕಾಯಿಲೆಗಳು ಸಹ ಬರುವ ಸಾಧ್ಯತೆ ಇದೆ ಎನ್ನಲಾಗುತ್ತದೆ. ಆದರೆ, ಈ ಬಗ್ಗೆ ವೈಜ್ಞಾನಿಕ ಅಧ್ಯಯನದ ಅಧಿಕೃತ ವರದಿಗಳಿಲ್ಲ. ಆದಾಗ್ಯೂ, ಆರೋಗ್ಯದ ದೃಷ್ಟಿಯಿಂದ ಸಾಧ್ಯವಾದಷ್ಟು ಹೊರಗಡೆ ತಿನಿಸುಗಳಿಗೆ ಕಡಿವಾಣ ಹಾಕಿ, ಮನೆಯಲ್ಲಿ ತಯಾರಿಸಿದ ಆಹಾರವನ್ನು ಸೇವಿಸಬೇಕು.

ಡಾ. ಕೆ.ಎಸ್.ಸಂಜಯ್
ನಿರ್ದೇಶಕರು, ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ

ಬೇಕಿದೆ ಕಾನೂನಿನ ಕುಣಿಕೆ



ಎಂಎಸ್‌ಜಿ ನಿರ್ಬಂಧಕ್ಕೆ ಯಾವುದೇ ಕಾನೂನುಗಳು ಇಲ್ಲವಾದರೂ, ಎಫ್‌ಎಸ್‌ಎಸ್‌ಎಐ ಅಧಿನಿಯಮ ಸಂಖ್ಯೆ 3.1.11ರ ಅಡಿಯಲ್ಲಿ ಎಂಎಸ್‌ಜಿಯನ್ನು ರುಚಿವರ್ಧಕ ಐಎನ್‌ಎಸ್ ಸಂಖ್ಯೆ 621ರಲ್ಲಿ ನಮೂದಿಸಿ ಅನುಮತಿ ನೀಡಲಾಗಿದೆ. ಬಳಿಕ ನಿರ್ಬಂಧ ಕೋರಿ ಕರ್ನಾಟಕ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದನ್ನು ದಾಖಲಿಸಲಾಗಿತ್ತಾದರೂ ಅರ್ಜಿದಾರರು ಪ್ರಕರಣ ನಡೆಸದೇ ಹೋದರು. ಸದ್ಯ ಇದರ ಉತ್ಪನ್ನಗಳ ಮೇಲೆ ಎಂಎಸ್‌ಜಿಯ ಪ್ರಮಾಣ ಮತ್ತು ಎಂಎಸ್‌ಜಿ ಸಹಿತ ಅಥವಾ ಎಂಎಸ್‌ಜಿ ರಹಿತ ಎಂಬುದನ್ನು ನಮೂದಿಸಬೇಕಾಗುತ್ತದೆ. ಗ್ಲುಟಾಮೇಟ್ ಅನ್ನು ಕೃತ್ರಿಮವಾಗಿ ಸೇರ್ಪಡೆಗೊಳಿಸಿದಾಗ ಮಾತ್ರ ಇದನ್ನು ನಮೂದು ಮಾಡಬೇಕಾಗಿರುತ್ತದೆ. ಸದ್ಯ, ಇದನ್ನು ಶರೀರದ ಆಂತರಿಕ ಅಲರ್ಜಿಗೆ ಕಾರಣವಾಗಬಹುದಾದ ಪಟ್ಟಿಯಲ್ಲಿ ಇರಿಸಲಾಗಿದೆ. ಪಾಕಿಸ್ಥಾನವೊಂದನ್ನು ಹೊರತುಪಡಿಸಿ ಪ್ರಪಂಚದ ಬೇರಾವುದೇ ಭಾಗದಲ್ಲೂ ಎಂಎಸ್‌ಜಿಯನ್ನು ನಿರ್ಬಂಧಿಸಿಲ್ಲ.

ಎಂ.ಎಸ್.ಶ್ಯಾಮಸುಂದರ್, ಹಿರಿಯ ವಕೀಲ, ಹೈಕೋರ್ಟ್



ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 26-3-1998

• ತೆಂಡೂಲ್ಕರ್ ಮಿಂಚಿನ ಶತಕ

ಬೆಂಗಳೂರು, ಮಾರ್ಚ್ 25– ಸಚಿನ್ ತೆಂಡೂಲ್ಕರ್ ಅವರ ಮಿಂಚಿನ ಅಜೇಯ ಶತಕದ (117)ನೆರವಿನಿಂದ ಭಾರತ ಇಂದು ಆಸ್ಟ್ರೇಲಿಯ ವಿರುದ್ಧ ಆರಂಭವಾದ ಮೂರನೇ ಹಾಗೂ ಅಂತಿಮ ಕ್ರಿಕೆಟ್ ಟೆಸ್ಟ್ ಪಂದ್ಯದ ಮೊದಲ ದಿನ ನಾಲ್ಕು ವಿಕೆಟ್‌ಗೆ 290 ರನ್‌ಗಳ ಉತ್ತಮ ಮೊತ್ತ ಗಳಿಸಿತು.

ಸಚಿನ್ ಮತ್ತು ಅಜರುದ್ದೀನ್ ನಾಲ್ಕನೇ ವಿಕೆಟ್‌ಗೆ 139 ರನ್ ಸೇರಿಸಿದ್ದರು.

50 ವರ್ಷಗಳ ಹಿಂದೆ

ಸೋಮವಾರ, 26-3-1973

• ಕೇಂದ್ರ ನೌಕರರಿಗೆ ಮೂಲವೇತನ ಜತೆ ತುಟ್ಟಿಭತ್ಯೆ ವಿಲೀನ

ನವದೆಹಲಿ, ಮಾರ್ಚ್ 25– ಮೂರನೇ ವೇತನ ಆಯೋಗವು ಕೇಂದ್ರ ಸರ್ಕಾರಿ ನೌಕರರ ವೇತನಗಳನ್ನು ಪುನರ್ ವಿಮರ್ಶಿಸುವಾಗ ತುಟ್ಟಿಭತ್ಯೆಯನ್ನು ಮೂಲ ವೇತನದೊಂದಿಗೆ ವಿಲೀನಗೊಳಿಸಿ, ಬೆಲೆ ಸೂಚ್ಯಂಕ ಏರಿಕೆಯಲ್ಲಿ ಪ್ರತಿ ಹತ್ತು ಪಾಯಿಂಟುಗಳ ಏರಿಕೆಯ ಆಧಾರದ ಮೇಲೆ ಶೇಕಡಾವಾರು ವೇತನ ಏರಿಸುವ ಸೂತ್ರವೊಂದನ್ನು ಶಿಫಾರಸು ಮಾಡಿದೆ.

1973ರ ಜನವರಿ 1ರಂತೆ ಸೂಚ್ಯಂಕದ ಮಟ್ಟ 200 ಪಾಯಿಂಟು. ಈ ಸೂಚ್ಯಂಕ ಮಟ್ಟವನ್ನು ಹೊಸ ವೇತನ ಸ್ವರೂಪ ರಚನೆಯಲ್ಲಿ ಗಣನೆಗೆ ತೆಗೆದುಕೊಳ್ಳಲಾಗುವುದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಮಾರ್ಚ್ 26, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಶುದ್ಧ ಪಂಚಮಿ ಗಂ. 16-33 ನಕ್ಷತ್ರ: ಕೃತ್ತಿಕಾ ಗಂ. 14-01 ಯೋಗ: ಪ್ರೀತಿ ಗಂ. 23-32, ಕರಣ: ಬಾಲವ ಗಂ. 16-33, ಮೀನ ಮಾಸದ 11 ನೇ ದಿನ.
ರಾಹುಕಾಲ : ಸಾಯಂಕಾಲ 04-30 –06-00
ಸೂರ್ಯೋದಯ: 06-34 ಸೂರ್ಯಾಸ್ತ : 06-38,
ಮುಸ್ಲಿಂ ದಿನಾಂಕ: 03 ರಂಜಾನ್, ದಿನ ವಿಶೇಷ: ಶ್ರೀ ಲಕ್ಷ್ಮೀ ಪಂಚಮಿ,
ಅದೃಷ್ಟ ಸಂಖ್ಯೆ : 8, 10

ಮೇಷ: ಕಷ್ಟ ಕೋಟಲೆಗಳಿಂದ ನಿರ್ಮುಕ್ತರಾಗುವ ಸುಸಂದರ್ಭ ತುಂಬಾ ಸನಿಹವಾಗಿದೆ. ನಿಮ್ಮ ನಿರ್ಲಕ್ಷ್ಯತನ ನಿಮ್ಮ ಮಕ್ಕಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಲೋಭಿಗಳ ರೀತಿ ವರ್ತಿಸಬೇಡಿ.

ವೃಷಭ: ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಿ, ಧನ್ಯತಾ ಭಾವ ಉಂಟಾಗುತ್ತದೆ. ಬಂಧು ಮಿತ್ರರ ಜೊತೆಯ ಒಡನಾಟ ಸಂತೋಷ ತರುವುದು. ನೀರಿಗೆ ಸಂಬಂಧಪಟ್ಟ ಅಪಾಯಗಳು ಸಂಭವಿಸುವ ಸಾಧ್ಯತೆ ಇರುವುದು.

ಮಿಥುನ: ವಿದ್ಯಾರ್ಥಿಗಳು ಹಟ ಹಾಗು ಸೋಂಬೇರಿತನವನ್ನು ಬಿಟ್ಟು ಅಧ್ಯಯನವನ್ನು ಮಾಡುವುದು ಶ್ರೇಯಸ್ಸಿನ ಪಥದಲ್ಲಿ ನಿಮ್ಮನ್ನು ಕರೆದುಕೊಂಡು ಹೋಗುತ್ತದೆ. ನಿರಂತರ ಪ್ರಯತ್ನದಿಂದ ಕಾರ್ಯಸಿದ್ಧಿ ಆಗುತ್ತದೆ.

ಕರ್ಕಾಟಕ: ಅನೇಕ ವಿಚಾರಗಳನ್ನು ಒಂದೇ ಬಾರಿಗೆ ಸಮರ್ಥವಾಗಿ ನಿರ್ವಹಿಸುವ ನಿಮ್ಮ ಕಾರ್ಯನಿರ್ವಹಣಾ ವೈಖರಿಗೆ ಉತ್ತಮ ಮಾತು ಕೇಳುವಿರಿ. ಮಕ್ಕಳ ಸಣ್ಣ ಪುಟ್ಟ ಜಗಳಗಳನ್ನು ಬಗೆಹರಿಸಲು ನೀವು ಭಾಗಿಯಾಗದಿರಿ.

ಸಿಂಹ: ಬದಲಾಗದೆ ಇರುವ ನಿಮ್ಮ ಕೆಲವೊಂದು ಮೊಂಡು ತೀರ್ಮಾನಗಳ ಬಗ್ಗೆ ಕುಟುಂಬದವರ ಅಸಮಧಾನ ವ್ಯಕ್ತವಾಗಬಹುದು. ಬಟ್ಟೆ ಅಂಗಡಿಯವರಿಗೆ ಇಂದು ಅತ್ಯಂತ ಲಾಭದಾಯಕ ದಿನವಾಗಲಿದೆ.

ಕನ್ಯಾ: ಕೆಲಸದ ಗಡಿಬಿಡಿಯಿಂದಾಗಿ ಇಂದು ಹಲವಾರು ಬಾರಿ ಕೈಕಾಲಿಗೆ ಪೆಟ್ಟು ಮಾಡಿಕೊಳ್ಳುವ ಸಂಭವವಿದೆ. ಉತ್ತಮ ವಿಚಾರಗಳು ಜಾರಿಗೆ ಬರಬೇಕೆಂದು ನೀವು ಮಾಡುತ್ತಿರುವ ಪ್ರಯತ್ನವು ಶೀಘ್ರವಾಗಿ ಶುಭಫಲ ನೀಡುವುದು.

ತುಲಾ: ಇಷ್ಟು ದಿನಗಳವರೆಗೂ ತಾಳ್ಮೆಯಿಂದಿದ್ದ ನಿಮ್ಮ ಮನಸ್ಸು ಅನಿವಾರ್ಯ ಕಾರಣದಿಂದಾಗಿ ನಿಮ್ಮ ಕಾರ್ಯಕ್ಷೇತ್ರದಲ್ಲಿ ಸ್ಫೋಟಗೊಳ್ಳುವ ಸಾಧ್ಯತೆ ಇದೆ. ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ದೊರಕಿ ಸಂತಸ ಹೊಂದುವಿರಿ.

ವೃಶ್ಚಿಕ: ಮಕ್ಕಳ ಎಲ್ಲಾ ವಿಚಾರಗಳಲ್ಲೂ ನಿಮ್ಮ ಮೃದು ಮನಸ್ಸಿನ ಆಲೋಚನೆಗಳನ್ನೇ ಮಾಡಿದಲ್ಲಿ ಫಲಿತಾಂಶವು ನೀವಂದುಕೊಂಡ ರೀತಿಯಲ್ಲಿ ಇರುವುದಿಲ್ಲ. ಕಾರ್ಯಕ್ಷೇತ್ರದ ಸಮಸ್ಯೆಗಳನ್ನು ಮನೆಗೆ ತರವುದು ಸರಿಯಲ್ಲ.

ಧನು: ಹಲವು ದಿನಗಳ ನಿರೀಕ್ಷೆಯ ವಾಹನ ಖರೀದಿ ವಿಚಾರಕ್ಕೆ ಇಂದು ಶುಭಾಂತ್ಯ ದೊರೆಯಲಿದೆ. ಪೂರ್ವಿಕರ ಸಂಪಾದನೆಯ ಆಸ್ತಿಯ ಮಾರಾಟ ವಿಚಾರದಲ್ಲಿ ಅನೇಕ ಅನಿರೀಕ್ಷಿತ ತೊಂದರೆಗಳು ಎದುರಾಗುವ ಸಾಧ್ಯತೆಗಳಿವೆ.

ಮಕರ: ತೃಪ್ತಿಕರ ರೀತಿಯ ಜೀವನ ಶೈಲಿ ಇತರರಿಗೆ ಮಾದರಿಯಾಗುವ ತರಹದಲ್ಲಿದೆ ಎನ್ನುವ ಮಾತು ನಿಮಗೆ ಕೇಳಿಬರುತ್ತದೆ. ಉಡುಪು ವಿನ್ಯಾಸಗಾರರು ಕಂಡುಕೊಂಡ ಹೊಸ ಮಾದರಿ ಜನಮಾನಸವನ್ನು ಗೆಲ್ಲಲಿದೆ.

ಕುಂಭ: ಭಾರ ಕಡಿಮೆ ಮಾಡಿಕೊಳ್ಳುವ ನೆಪದಲ್ಲಿ ಇತರರ ಮೇಲೆ ಜವಬ್ದಾರಿ ಹೊರಿಸುವಂತಹ ಕೆಲಸವನ್ನು ಮಾಡಬೇಡಿ. ಮಹನೀಯರ ಸಂದೇಶ ವಾಣಿಗಳ ಪಾಲನೆ ಮಾಡುವ ಯೋಚನೆ ಬರಲಿದೆ.


ಮೀನ: ದಿನಗೂಲಿ ಲೆಕ್ಕದಲ್ಲಿ ದುಡಿಮೆ ಮಾಡುತ್ತಿರುವವರಿಗೆ ಜೀವನದಲ್ಲಿ ಒಂದು ತರಹದ ಅಸ್ಥಿರತೆ ಭಾವನೆ ಕಾಡಲು ಶುರುವಾಗುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ನಿಮ್ಮ ಮನೆಯ ವಿಚಾರಗಳನ್ನು ಚರ್ಚಿಸುವಂತಹ ಕೆಲಸ ಮಾಡದಿರಿ.

ಪದಬಂಧ 5269

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಸಮುದ್ರ ಅಥವಾ ನದಿಯ ಉಬ್ಬರ (3)
5. ಒಂದೇ ಕಾಲದಲ್ಲಿದ್ದವನು (5)
7. ವರನ ಹತ್ತಿರ ಕಾಣಿಸಿದ ಹಂದಿ (3)
9. ಮನಸ್ಸನ್ನು ಸಂತೋಷಗೊಳಿಸುವುದು (5)
14. ಗಂಡುವ್ಯಕ್ತಿಯನ್ನು ಹೀಗೂ ಕರೆವರು (3)
15. ಈಕೆ ಸವತಿಯ ಪುತ್ರಿ (5)
18. ದೊಡ್ಡ ಹಾರೆ ಇಲ್ಲಿದೆ (3)

ಮೇಲಿಂದ ಕೆಳಕ್ಕೆ
1. ನಡುವೆ ಧ್ವನಿ ತೂರಿಸಿ ನೀಡಿದ ಆಶ್ವಾಸನೆ (4)
2. ವಿಷಮ ಸಂಖ್ಯೆ (2)
3. ಉತ್ತರದವರ ಚಿಕ್ಕಪ್ಪ (2)
4. ದನಕರುಗಳನ್ನು ಕಾಯುವವನು (4)
8. ಯುನಾನಿ ವೈದ್ಯ (3)
10. ಮಂದಸ್ಮಿತ ವದನ (4)
11. ಒನಪು ತೋರಿದಾಗ ಬಂದಿರುವ ಸ್ಮರಣೆ (3)
12. ಮತಿ ಇಟ್ಟುಕೊಂಡು ನೀಡಿದ ಒಪ್ಪಿಗೆ (4)
13. ವೇಷ ಮರೆಸಿಕೊಂಡವನು (4)
16. ಮಸಲತ್ತು ಹೂಡುವಾಗ ಏರಿದ ಅಮಲು (2)
17. ಆಕಳು ಹೊಡೆದುಕೊಂಡು ಬಂದಿರುವ ಚಾರ ತಿರುಗಿದ್ದಾನೆ (2)



5268ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಭವಬಂಧನ 5.ಕೋರಿಕೆ
7.ಮಟ್ಟಸ 9.ರಮಣ
10.ಮಾರುತ 11.ಚಂದನ
12.ಮಧುರ 14.ರದನ
15.ರಜತೋತ್ಸವ

ಮೇಲಿಂದ ಕೆಳಕ್ಕೆ:
1.ನವಸುಮ 2.ಮೌನ
3.ಪರಿಮಾಣ 6.ತರತಮ
8.ಸಮಾನತೆ
11.ಚಂದ್ರೋದಯ
13.ರಥೋತ್ಸವ 15.ರಕ್ತ

ಸುಡೊಕು 5655

3					8	2		6
			4	9				3
		8			2		5	
	3			4				1
		1	7		5	6	2	
	6			1				
6			5	2		1		7
	1				4		6	
9		5		7		3		8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5654 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3

ಕಾವೇರಿ ಪಾತ್ರದ ಅಣೆಕಟ್ಟೆಗಳು: 99 ಅಡಿಗೆ ಕುಸಿದ ಕೆಆರ್‌ಎಸ್ ಮಟ್ಟ

ಜಲಾಶಯಗಳಲ್ಲಿ ಕುಸಿದ ಜಲಮಟ್ಟ

ಪ್ರಜಾವಾಣಿ ವಾರ್ತೆ

ಮೈಸೂರು: ಕಾವೇರಿ ಜಲಾನಯನ ಪ್ರದೇಶದ ಪ್ರಮುಖ ಜಲಾಶಯಗಳಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ನೀರಿನ ಸಂಗ್ರಹವು ದಾಖಲೆ ಪ್ರಮಾಣದಲ್ಲಿ ಕುಸಿದಿದೆ.

ಕೃಷ್ಣರಾಜಸಾಗರ, ಹಾರಂಗಿ, ಕಬಿನಿ ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿತವಾಗಿದ್ದರೆ, ಹೇಮಾವತಿ ಜಲಾಶಯದ ನೀರಿನ ಮಟ್ಟ ಕಳೆದ ವರ್ಷಕ್ಕೆ ಹೋಲಿಸಿದರೆ ಒಂದು ಅಡಿ (2,901.1) ಕಡಿಮೆ ಇದೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಶನಿವಾರ 99.60 ಅಡಿಗೆ ಇಳಿದಿತ್ತು. ವಿಶ್ವೇಶ್ವರಯ್ಯ, ಇತರ ನಾಲೆಗಳು ಹಾಗೂ ನದಿಗೆ 4,416 ಕ್ಯುಸೆಕ್ ನೀರು ಹರಿಸಲಾಗುತ್ತಿದೆ.


ಜಲಾಶಯಕ್ಕೆ 226 ಕ್ಯುಸೆಕ್ ಒಳ ಹರಿವಿತ್ತು, 2022ರ ಮಾರ್ಚ್ 25ರಂದು ಜಲಾಶಯದಲ್ಲಿ 108.36 ಅಡಿ ನೀರು ಸಂಗ್ರಹವಾಗಿತ್ತು. 4,284 ಕ್ಯುಸೆಕ್ ಹೊರ ಹರಿವು, 177 ಕ್ಯುಸೆಕ್ ಒಳ ಹರಿವು ದಾಖಲಾಗಿತ್ತು.

ಕೊಡಗು ಜಿಲ್ಲೆಯ ಹಾರಂಗಿ ಜಲಾಶಯದ ನೀರಿನ ಮಟ್ಟ 2823.85 ಅಡಿ ಇದ್ದು, ಗರಿಷ್ಠ ಮಟ್ಟ 2,859 ಅಡಿ ಆಗಿದೆ. ಒಳ ಹರಿವು 231 ಕ್ಯುಸೆಕ್ ಇದ್ದರೆ, ಹೊರ ಹರಿವು 709 ಕ್ಯುಸೆಕ್ ಇದೆ.

ಕಳೆದ ವರ್ಷ ಇದೇ ದಿನ ಜಲಾಶಯದ ಮಟ್ಟ 2848.73 ಅಡಿ ಇತ್ತು.

ಹಾಸನದ ಗೊರೂರಿನ ಹೇಮಾವತಿ ಅಣೆಕಟ್ಟೆಯ ಜಲಾಶಯದ ಇಂದಿನ ಮಟ್ಟ 2901.02 ಅಡಿ (ಗರಿಷ್ಠ ಮಟ್ಟ 2,922 ಅಡಿ) ಇದ್ದು, 20.36 ಟಿಎಂಸಿ ನೀರು ಸಂಗ್ರಹವಿದೆ. ಜಲಾಶಯದ ಒಳಹರಿವು 70 ಕ್ಯುಸೆಕ್ ಇದ್ದರೆ, ಹೊರ ಹರಿವು 900 ಕ್ಯುಸೆಕ್ ಇದೆ. ಕಳೆದ ವರ್ಷ ನೀರಿನ ಮಟ್ಟ 2902.67 ಅಡಿಯಿದ್ದು, 21.50 ಟಿಎಂಸಿ ನೀರು ಸಂಗ್ರಹವಿತ್ತು. 33 ಕ್ಯುಸೆಕ್ ಒಳಹರಿವು, ಹೊರಹರಿವು 350 ಕ್ಯುಸೆಕ್ ಇತ್ತು.

ಮೈಸೂರಿನ ಎಚ್.ಡಿ.ಕೋಟೆ ತಾಲ್ಲೂಕಿನಲ್ಲಿರುವ ಕಬಿನಿ ಜಲಾಶಯದ ನೀರಿನ ಮಟ್ಟವು 2260.99 ಅಡಿಯಿದ್ದು, ಕಳೆದ ವರ್ಷ 2270.01 ಅಡಿ ನೀರು ಇತ್ತು. ಗರಿಷ್ಠ ಮಟ್ಟ 2,284 ಅಡಿಗಳಾಗಿವೆ. ಸದ್ಯ 7.69 ಟಿಎಂಸಿ ನೀರು ಸಂಗ್ರಹವಿದೆ. ಒಳ ಹರಿವು 78 ಕ್ಯುಸೆಕ್ ಇದ್ದರೆ, ಹೊರ ಹರಿವು 854 ಕ್ಯುಸೆಕ್ ಇದೆ.



ಕೆಆರ್‌ಎಸ್ ಜಲಾಶಯದ ನೀರು ಶನಿವಾರ 99 ಅಡಿಗೆ ಕುಸಿದಿತ್ತು

‘ಕಟ್ಟು ಪದ್ಧತಿಯಲ್ಲಿ ಬೆಳೆಗೆ ನೀರು’

‘ಕೃಷ್ಣರಾಜಸಾಗರ ಜಲಾಶಯದ ಅಚ್ಚುಕಟ್ಟು ಪ್ರದೇಶದಲ್ಲಿನ ಭತ್ತ ಮೊದಲಾದ ಬೆಳೆಗಳಿಗೆ ಕಟ್ಟು ಪದ್ಧತಿಯಲ್ಲಿ ನೀರು ಹರಿಸಲಾಗುತ್ತಿದೆ. ಅದೇ ಮಾದರಿ ನೀರು ಹರಿಸಿದರೆ ಮೇ ಅಂತ್ಯದವರೆಗೆ ಬೆಳೆಗಳಿಗೆ ನೀರು ಕೊಡಬಹುದು‘ ಎಂದು ಕಾವೇರಿ ನೀರಾವರಿ ನಿಗಮದ ಸೂಪರಿಂಟೆಂಡಿಂಗ್‌ಎಂಜಿನಿಯರ್ ಆನಂದ್ ತಿಳಿಸಿದರು.

’ಕುಡಿಯುವ ಉದ್ದೇಶಕ್ಕೆ ಜುಲೈ ಅಂತ್ಯದವರೆಗೂ ನೀರು ಸಿಗಲಿದೆ. ಮೇ ಅಂತ್ಯ ಅಥವಾ ಜೂನ್ ಮೊದಲ ವಾರ ಮುಂಗಾರು ಮಳೆ ಬೀಳುವ ಸಾಧ್ಯತೆ ಇದೆ. ಹಾಗಾಗಿ ನೀರಿಗೆ ಅಭಾವವಾಗದು‘ ಎಂದು ಹೇಳಿದರು.



ಜನಸ್ತೋಮ...

ದಾವಣಗೆರೆಯ ಜಿಎಂಐಟಿ ಬಳಿ ಶನಿವಾರ ನಡೆದ ಬಿಜೆಪಿಯ ವಿಜಯ ಸಂಕಲ್ಪ ಮಹಾಸಂಗಮ ಸಮಾರೋಪ ಸಮಾರಂಭದಲ್ಲಿ ಲಕ್ಷಾಂತರ ಜನರು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ/ ಸತೀಶ್ ಬಡಿಗೇರ್

28ಕ್ಕೆ ಅಗ್ನಿವೀರರ ನಿರ್ಗಮನ ಪಥಸಂಚಲನ

ನವದೆಹಲಿ (ಪಿಟಿಐ): ಅಗ್ನಿವೀರರ ಮೊದಲ ಬ್ಯಾಚ್‌ನ ನಿರ್ಗಮನ ಪಥ ಸಂಚಲನವು ಮಾರ್ಚ್ 28ರಂದು ಐಎನ್‌ಎಸ್ ಚಿಲ್ಕಾದಲ್ಲಿ ನಡೆಯಲಿದೆ ಎಂದು ನೌಕಾಪಡೆಯು ಶನಿವಾರ ತಿಳಿಸಿದೆ.

ಸಾಂಪ್ರದಾಯಿಕವಾಗಿ ನಿರ್ಗಮನ ಪಥಸಂಚಲನವು (ಪಿಒಪಿ) ಬೆಳಿಗ್ಗೆ ನಡೆಯುತ್ತದೆ. ಆದರೆ, ಭಾರತೀಯ ಸಶಸ್ತ್ರ ಪಡೆಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ನಿರ್ಗಮನ ಪಥಸಂಚಲನವು ಸೂರ್ಯಾಸ್ತದ ಬಳಿಕ ನಡೆಯಲಿದೆ ಎಂದೂ ನೌಕಾಪಡೆಯ ಅಧಿಕಾರಿಗಳು ತಿಳಿಸಿದ್ದಾರೆ.

ನೌಕಾಪಡೆಯ ಮುಖ್ಯಸ್ಥ ಆಡ್ಮಿರಲ್ ಆರ್. ಹರಿಕುಮಾರ್ ಅವರು ಮುಖ್ಯ ಅತಿಥಿಯಾಗಿ ಹಾಗೂ ನಿರ್ಗಮನ ಪಥಸಂಚಲನದ ಪರಿಶೀಲನಾ ಅಧಿಕಾರಿಯಾಗಿ ಭಾಗವಹಿಸುವರು ಎಂದು ಅವರು ಶನಿವಾರ ಮಾಹಿತಿ ನೀಡಿದ್ದಾರೆ.

ಮೊದಲ ತಂಡದಲ್ಲಿ 273 ಮಹಿಳಾ ಅಗ್ನಿವೀರರು ಸೇರಿದಂತೆ ಒಟ್ಟು 2,600 ಅಗ್ನಿವೀರರು ಯಶಸ್ವಿಯಾಗಿ ತರಬೇತಿಯನ್ನು ಪೂರ್ಣಗೊಳಿಸಿದ್ದಾರೆ.

ಲೆಫ್ಟಿನೆಂಟ್ ಗವರ್ನರ್ ಸಿನ್ಹಾ ವಿರುದ್ಧ ತುಷಾರ್ ಗಾಂಧಿ ಕಿಡಿ

ಮುಂಬೈ (ಪಿಟಿಐ): ‘ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರು ಯಾವ ವಿಶ್ವವಿದ್ಯಾಲಯದಿಂದಲೂ ಪದವಿ ಪಡೆದಿಲ್ಲ’ ಎಂದು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ನೀಡಿದ್ದ ಹೇಳಿಕೆಯನ್ನು ಗಾಂಧೀಜಿ ಮರಿ ಮೊಮ್ಮಗ ತುಷಾರ್ ಗಾಂಧಿ ಖಂಡಿಸಿದ್ದಾರೆ.



ತುಷಾರ್ ಗಾಂಧಿ


‘ಗಾಂಧೀಜಿ ರಾಜ್‌ಕೋಟ್‌ನ ಆಲ್ಫ್ರೆಡ್ ಪ್ರೌಢಶಾಲೆಯಲ್ಲಿ ಮೆಟ್ರಿಕ್ ಪೂರ್ಣಗೊಳಿಸಿದ್ದಾರೆ. ಲಂಡನ್‌ನಲ್ಲಿ ಬ್ರಿಟಿಷ್ ಮೆಟ್ರಿಕ್ಯುಲೇಷನ್‌ನಲ್ಲಿ ಉತ್ತೀರ್ಣರಾಗಿದ್ದಾರೆ. ಲಂಡನ್ ವಿಶ್ವವಿದ್ಯಾಲಯದ ಮಾನ್ಯತೆ ಹೊಂದಿರುವ ಇನ್ನರ್ ಟೆಂಪಲ್ ಕಾನೂನು ಕಾಲೇಜಿನಲ್ಲಿ ವ್ಯಾಸಂಗ ನಡೆಸಿ ಪದವಿಯನ್ನೂ ಪಡೆದಿದ್ದಾರೆ. ಲ್ಯಾಟಿನ್ ಹಾಗೂ ಫ್ರೆಂಚ್‌ನಲ್ಲಿ ಡಿಪ್ಲೊಮಾ ಪೂರ್ಣಗೊಳಿಸಿದ್ದಾರೆ’ ಎಂದು ತುಷಾರ್ ಅವರು ಟ್ವೀಟ್ ಮಾಡಿದ್ದಾರೆ.

ಗ್ವಾಲಿಯರ್‌ನ ಐಟಿಎಂ ವಿಶ್ವವಿದ್ಯಾಲಯವು ಗುರುವಾರ ಆಯೋಜಿಸಿದ್ದ ಡಾ.ರಾಮ ಮನೋಹರ ಲೋಹಿಯಾ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಸಿನ್ಹಾ, ‘ಗಾಂಧಿ ಅವರು ಕಾನೂನು ವಿಷಯದಲ್ಲಿ ಪದವಿ ಪಡೆದಿದ್ದಾರೆ ಎಂದು ನಾವೆಲ್ಲಾ ಭಾವಿಸಿದ್ದೇವೆ. ಅದು ಸುಳ್ಳು. ಅವರು ವಕೀಲಿಕೆಗೆ ಅರ್ಹತೆ ಪಡೆದಿದ್ದರೆ ವಿನಃ ಯಾವ ವಿಶ್ವವಿದ್ಯಾಲಯದಿಂದಲೂ ಪದವಿ ಗಳಿಸಿರಲಿಲ್ಲ. ಪ್ರೌಢಶಾಲಾ ಡಿಪ್ಲೊಮಾ ಪೂರ್ಣಗೊಳಿಸಿರುವುದಷ್ಟೇ ಅವರ ವಿದ್ಯಾರ್ಹತೆ’ ಎಂದಿದ್ದರು.

ಜಾಕ್ವೆಲಿನ್‌ಗೆ ವಂಚಕ ಸುಖೇಶ್ ಪ್ರೇಮಪತ್ರ

ನವದೆಹಲಿ (ಪಿಟಿಐ): ಹಲವಾರು ವಂಚನೆ ಪ್ರಕರಣಗಳಿಗೆ ಸಂಬಂಧಿಸಿ ಮಾಂಡೋಲಿ ಜೈಲಿನಲ್ಲಿ ಶಿಕ್ಷೆಗೆ ಗುರಿಯಾಗಿರುವ ವಂಚಕ ಸುಖೇಶ್ ಚಂದ್ರಶೇಖರ್ ಅವರು ತಮ್ಮ ಹುಟ್ಟುಹಬ್ಬದಂದು ಬಾಲಿವುಡ್ ನಟಿ ಜಾಕ್ವೆಲಿನ್ ಫರ್ನಾಂಡಿಸ್ ಅವರಿಗೆ ಪತ್ರ ಬರೆದಿದ್ದಾರೆ. ಅದರಲ್ಲಿ ಪ್ರೇಮ ನಿವೇದನೆ ಮಾಡಿದ್ದಾರೆ.

ಜಾಕ್ವೆಲಿನ್ ಅವರನ್ನು ಗೊಂಬೆ ಎಂದು ಉಲ್ಲೇಖಿಸಿರುವ ಅವರು, ತಮ್ಮ ಹುಟ್ಟಿದದಿನದಂದು ಅವರನ್ನು ತುಂಬಾ ನೆನಪಿಸಿಕೊಳ್ಳುತ್ತಿರುವುದಾಗಿ ಹೇಳಿದ್ದಾರೆ.



ಜಾಕ್ವೆಲಿನ್ ಫರ್ನಾಂಡಿಸ್

‘ನನ್ನ ಗೊಂಬೆ, ನನ್ನ ಹುಟ್ಟಿದ ದಿನದಂದು ನೀನು ತುಂಬಾ ನೆನಪಾಗುತ್ತಿದ್ದೀಯ. ನನ್ನ ಬಗ್ಗೆ ನಿನಗಿರುವ ಪ್ರೀತಿ ಕೊನೆಯಿಲ್ಲದ್ದು. ನಿನ್ನ ಹೃದಯದಲ್ಲಿ ಏನಿದೆ ಎಂದು ನನಗೆ ತಿಳಿದಿದೆ. ಅದಕ್ಕೆ ಸಾಕ್ಷಿ ಬೇಡ. ನೀನು ಮತ್ತು ನಿನ್ನ ಪ್ರೀತಿ ನನಗೆ ದೊರೆತಿರುವ ಅತ್ಯಂತ ಅಮೂಲ್ಯ ಉಡುಗೊರೆ’ ಎಂದು ಪತ್ರದಲ್ಲಿ ಬರೆದಿದ್ದಾರೆ.

ಫೋರ್ಟಿಸ್ ಹೆಲ್ತ್‌ಕೇರ್ ಪ್ರವರ್ತಕ ಶಿವಿಂದರ್ ಮೋಹನ್ ಸಿಂಗ್ ಅವರ ಪತ್ನಿ ಅದಿತಿ ಸಿಂಗ್ ಸೇರಿ ಹಲವು ಗಣ್ಯರನ್ನು ವಂಚಿಸಿರುವ ಆರೋಪ ಸುಖೇಶ್ ಚಂದ್ರಶೇಖರ್ ಮೇಲಿದೆ.

3 ವಿಜ್ಞಾನ ಪಾರ್ಕ್ ಸ್ಥಾಪನೆಗೆ ಕೇರಳ ಸಂಪುಟ ಅಸ್ತು

ತಿರುವನಂತಪುರ (ಪಿಟಿಐ): ವಿಜ್ಞಾನ, ಸಂಶೋಧನೆ ಮತ್ತು ಆವಿಷ್ಕಾರ ಕ್ಷೇತ್ರಗಳಲ್ಲಿ ಹೂಡಿಕೆ ಮಾಡುವ ಮೂಲಕ ಆರ್ಥಿಕ ಪ್ರಗತಿಗೆ ಉತ್ತೇಜನ ನೀಡುವ ಉದ್ದೇಶದಿಂದ ರಾಜ್ಯದಲ್ಲಿ ಮೂರು ವಿಜ್ಞಾನ ಪಾರ್ಕ್ ಸ್ಥಾಪಿಸಲು ಕೇರಳ ಸರ್ಕಾರ ನಿರ್ಧರಿಸಿದೆ.

ನೂತನ ಯೋಜನೆಗೆ ಮಾ.23ರಂದು ಕೇರಳ ಸಂಪುಟ ಅನುಮೋದನೆ ನೀಡಿದೆ. ಇದರಿಂದ ಶೈಕ್ಷಣಿಕ ಸಂಸ್ಥೆಗಳು, ಹೈ-ಟೆಕ್ ಕಂಪನಿಗಳು, ಉದ್ಯಮಿಗಳು ಮತ್ತು ಸ್ಟಾರ್ಟಪ್‌ಗಳಿಗೆ ನೆರವಾಗಲಿದೆ.

₹600 ಕೋಟಿ ವೆಚ್ಚದಲ್ಲಿ ಮೂರು ವಿಜ್ಞಾನ ಪಾರ್ಕ್ ಆರಂಭಿಸುವುದಾಗಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಶನಿವಾರ ಫೇಸ್‌ಬುಕ್ ಪೋಸ್ಟ್ ಮೂಲಕ ತಿಳಿಸಿದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **‘ಪಿವಿ ಬ್ರ್ಯಾಂಡ್ ಸ್ಪಾಟ್’**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಇ.ಡಿ ಎದುರು ಮೀಸಾ ಭಾರತಿ ಹಾಜರು

ನವದೆಹಲಿ (ಪಿಟಿಐ): ಉದ್ಯೋಗಕ್ಕಾಗಿ ಭೂಮಿ ಹಗರಣಕ್ಕೆ ಸಂಬಂಧಿಸಿದಂತೆ ಆರ್‌ಜೆಡಿ ವರಿಷ್ಠ ಲಾಲು ಪ್ರಸಾದ್ ಪುತ್ರಿ, ಸಂಸದೆ ಮೀಸಾ ಭಾರತಿ ಶನಿವಾರ ನವದೆಹಲಿಯಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಕಚೇರಿ ಎದುರು ಹಾಜರಾಗಿ ವಿಚಾರಣೆ ಎದುರಿಸಿದರು ಎಂದು ಅಧಿಕಾರಿಗಳು ತಿಳಿಸಿದರು.

ಇದೇ ಪ್ರಕರಣದಲ್ಲಿ ಮೀಸಾ ಭಾರತಿ ಸಹೋದರ ಬಿಹಾರ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಸಹ ಶನಿವಾರ ಸಿಬಿಐ ಎದುರು ಹಾಜರಾಗಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಲಾಲು ಪ್ರಸಾದ್ ಮತ್ತು ಅವರ ಪತ್ನಿ ರಾಬ್ಡಿ ದೇವಿ ಅವರನ್ನು ಸಿಬಿಐ ವಿಚಾರಣೆಗೆ ಒಳಪಡಿಸಿತ್ತು.



ಗುರುಗ್ರಾಮದಲ್ಲಿ ಶನಿವಾರ ಮಳೆ ಸುರಿದ ಕಾರಣ ದೆಹಲಿ- ಗುರುಗ್ರಾಮ ಎಕ್ಸ್‌ಪ್ರೆಸ್‌ವೇನಲ್ಲಿ ನಿಂತಿದ್ದ ನೀರಿನಲ್ಲಿಯೇ ವಾಹನಗಳು ಸಂಚರಿಸಿದವು –ಪಿಟಿಐ ಚಿತ್ರ

ಅಮೆರಿಕ: ಭೀಕರ ಸುಂಟರಗಾಳಿಗೆ 23 ಮಂದಿ ಸಾವು

ವಾಷಿಂಗ್ಟನ್ (ಎಪಿ): ಅಮೆರಿಕದ ದಕ್ಷಿಣ ರಾಜ್ಯಗಳಾದ ಅಲಬಾಮಾ ಮತ್ತು ಮಿಸಿಸಿಪ್ಪಿಗಳಲ್ಲಿ ಶುಕ್ರವಾರ ಬೀಸಿದ ಭೀಕರ ಸುಂಟರಗಾಳಿಯ ಪರಿಣಾಮ ಕಟ್ಟಡಗಳು ಕುಸಿದು ಬಿದ್ದು 23 ಮಂದಿ ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿದ್ದಾರೆ.

ಹವಾಮಾನ ವೈಪರೀತ್ಯದಿಂದ ಆಲಿಕಲ್ಲುಗಳು ಬಿದ್ದಿವೆ, ಹಲವೆಡೆ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಚಂಡಮಾರುತದ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ ಅಧಿಕಾರಿಗಳು ‘ನಿಮ್ಮ ಜೀವ ಅಪಾಯದಲ್ಲಿದೆ, ಪ್ರಾಣವನ್ನು ರಕ್ಷಿಸಿಕೊಳ್ಳಿ‘ ಎಂದು ಜನರಿಗೆ ಎಚ್ಚರಿಕೆ ನೀಡಿದ್ದಾರೆ.

ಸುಂಟರಗಾಳಿಯು ಮಿಸಿಸಿಪ್ಪಿಯ 160 ಕಿ.ಮೀ.ನಷ್ಟು ದೂರದವರೆಗೆ ಹಾನಿ ಮಾಡಿದೆ ಎಂದು ರಾಷ್ಟ್ರೀಯ ಹವಾಮಾನ ಸಂಸ್ಥೆಯು ತಿಳಿಸಿದೆ.

ಕಾರ್ಖಾನೆಯಲ್ಲಿ ಸ್ಫೋಟ: ಐವರು ಸಾವು

ಪೆನ್ಸಿಲ್ವೇನಿಯಾ (ಎಪಿ): ಇಲ್ಲಿನ ಚಾಕೊಲೆಟ್ ಕಾರ್ಖಾನೆಯಲ್ಲಿ ಶುಕ್ರವಾರ ಸ್ಫೋಟಗೊಂಡು ಐವರು ಮೃತಪಟ್ಟಿದ್ದು, ಆರು ಮಂದಿ ಕಾಣೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರ್.ಎಂ.ಪಾಮರ್ ಕಂಪನಿಯ ಸ್ಥಾವರ ಸ್ಫೋಟಗೊಂಡಿದ್ದು, ಅನೇಕ ಮಂದಿ ಗಾಯಗೊಂಡಿದ್ದಾರೆ ಎಂದು ವೆಸ್ಟ್ ರಿಡಿಂಗ್ ಬರೋದ ಪೊಲೀಸ್ ವಿಭಾಗದ ಮುಖ್ಯಸ್ಥ ವೇನ್ ಹಾಲ್ಬೆನ್ ತಿಳಿಸಿದ್ದಾರೆ.

ಸಂಜೆ 5 ಗಂಟೆಗೂ ಮೊದಲು ಸ್ಫೋಟ ಕಾಣಿಸಿಕೊಂಡಿದ್ದು, ನಂತರ ಬೆಂಕಿಯ ಕೆನ್ನಾಲಿಗೆ ಪಕ್ಕದಲ್ಲಿರುವ ಕಟ್ಟಡಗಳಿಗೂ ವ್ಯಾಪಿಸಿತು. ಈ ಕುರಿತು ತನಿಖೆ ನಡೆಯುತ್ತಿದೆ ಎಂದು ಹೇಳಿದ್ದಾರೆ.

ಇಮ್ರಾನ್‌ಗೆ ಜಾಮೀನು

ಲಾಹೋರ್ (ಪಿಟಿಐ): ಪಾಕಿಸ್ತಾನದ ಪದಚ್ಯುತ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಭಯೋತ್ಪಾದನಾ ವಿರೋಧಿ ನ್ಯಾಯಾಲಯವು ಮೂರು ಭಯೋತ್ಪಾದನಾ ಪ್ರಕರಣಗಳಲ್ಲಿ ಏಪ್ರಿಲ್ 4ರವರೆಗೆ ನಿರೀಕ್ಷಣಾ ಜಾಮೀನು ನೀಡಿ ಶನಿವಾರ ಆದೇಶಿಸಿದೆ.

ಇಮ್ರಾನ್ ಖಾನ್ ತಮ್ಮ ಬೆಂಬಲಿಗರೊಂದಿಗೆ ನ್ಯಾಯಾಲಯದ ಎದುರು ಹಾಜರಾಗಿದ್ದರು.

ಭಾರತದ ಕಾನ್ಸುಲೇಟ್ ಕಚೇರಿ ಮೇಲಿನ ದಾಳಿಗೆ ಖಂಡನೆ

ಭಾರತೀಯ ಅಮೆರಿಕನ್ನರಿಂದ ರ್‍ಯಾಲಿ

ವಾಷಿಂಗ್ಟನ್ (ಪಿಟಿಐ): ಖಾಲಿಸ್ತಾನ ಪರ ಬೆಂಬಲಿಗರು ಸ್ಯಾನ್ ಫ್ರಾನ್ಸಿಸ್ಕೊದಲ್ಲಿರುವ ಭಾರತದ ಕಾನ್ಸುಲೇಟ್ ಕಚೇರಿ ಮೇಲೆ ದಾಳಿ ನಡೆಸಿರುವುದನ್ನು ಖಂಡಿಸಿ ಅಮೆರಿಕದಲ್ಲಿ ನೆಲೆಸಿರುವ ಭಾರತೀಯರು ಕಾನ್ಸುಲೇಟ್ ಕಚೇರಿ ಎದುರು ಶುಕ್ರವಾರ ಶಾಂತಿಯುತ ರ್‍ಯಾಲಿ ನಡೆಸಿದ್ದಾರೆ.

ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದವರು ತ್ರಿವರ್ಣ ಧ್ವಜಗಳನ್ನು ಹಿಡಿದು, ‘ನಾವು ಭಾರತಕ್ಕೆ ಬೆಂಬಲವಾಗಿ ನಿಲ್ಲಲಿದ್ದೇವೆ’ ಎಂಬ ಸಂದೇಶ ರವಾನಿಸಿದ್ದಾರೆ.

ಖಾಲಿಸ್ತಾನ ಪರ ಬೆಂಬಲಿಗರ ದುರ್ವರ್ತನೆ ಕುರಿತು ಆಕ್ರೋಶ ವ್ಯಕ್ತಪಡಿಸಿದ್ದಾರೆ. ‘ವಂದೆ ಮಾತರಂ’ ಘೋಷಣೆಯನ್ನೂ ಮೊಳಗಿಸಿದ್ದಾರೆ. ರ್‍ಯಾಲಿ ವೇಳೆ ಕೆಲ ಕಿಡಿಗೇಡಿಗಳು ಖಾಲಿಸ್ತಾನ ಪರ ಘೋಷಣೆಗಳನ್ನೂ ಕೂಗಿದ್ದಾರೆ. ಮುಂಜಾಗ್ರತಾ ದೃಷ್ಟಿಯಿಂದ ಸ್ಥಳದಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು.

ಇತ್ತೀಚಿನ ದಿನಗಳಲ್ಲಿ ಕೆನಡಾ, ಆಸ್ಟ್ರೇಲಿಯಾ ಮತ್ತು ಬ್ರಿಟನ್‌ನಲ್ಲಿ ಭಾರತ ವಿರೋಧಿ ಚಟುವಟಿಕೆಗಳು ಹೆಚ್ಚಿವೆ. ಖಾಲಿಸ್ತಾನ ಪರ ಬೆಂಬಲಿಗರು ಈ ದೇಶಗಳಲ್ಲಿನ ಕೆಲ ಹಿಂದೂ ದೇವಾಲಯಗಳನ್ನು ನಾಶಪಡಿಸಿದ್ದರು.



ಅಮೆರಿಕದಲ್ಲಿ ನೆಲೆಸಿರುವ ಭಾರತೀಯರು ಸ್ಯಾನ್ ಫ್ರಾನ್ಸಿಸ್ಕೊದಲ್ಲಿರುವ ಭಾರತದ ಕಾನ್ಸುಲೇಟ್ ಕಚೇರಿ ಎದುರು ತ್ರಿವರ್ಣ ಧ್ವಜ ಹಿಡಿದು ಶಾಂತಿಯುತ ರ್‍ಯಾಲಿ ನಡೆಸಿದರು –ಪಿಟಿಐ ಚಿತ್ರ

‘ಪಂಜಾಬ್ ಬೆಳವಣಿಗೆಯ ಮೇಲೆ ನಿಗಾ’

ಟೊರಂಟೊ (ಪಿಟಿಐ): ‘ಪಂಜಾಬ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ನಾವು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ’ ಎಂದು ಕೆನಡಾದ ವಿದೇಶಾಂಗ ಸಚಿವೆ ಮೆಲಾನಿಯಾ ಜೋಲಿ ತಿಳಿಸಿದ್ದಾರೆ.

ಕೆನಡಾ ಸಂಸದ, ಭಾರತೀಯ ಮೂಲದ ಇಕ್ವಿಂದರ್ ಎಸ್.ಗಹೀರ್ ಎಂಬುವರು ಗುರುವಾರ ಹೌಸ್ ಆಫ್ ಕಾಮನ್ಸ್‌ನಲ್ಲಿ ಕೇಳಿದ ಪ್ರಶ್ನೆಗೆ, ‘ನಮಗೆ ಪಂಜಾಬ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಅರಿವಿದೆ. ಅಲ್ಲಿ ಮೊದಲಿದ್ದ ಪರಿಸ್ಥಿತಿಯೇ ಮರಳಲಿ ಎಂದು ನಾವು ಬಯಸುತ್ತೇವೆ. ಆ ಕ್ಷಣಕ್ಕಾಗಿ ಎದುರು ನೋಡುತ್ತಿದ್ದೇವೆ’ ಎಂದು ಮೆಲಾನಿಯಾ ಉತ್ತರಿಸಿದ್ದಾರೆ.ಪಂಜಾಬ್‌ನಲ್ಲಿ ಇಂಟರ್‌ನೆಟ್ ಸೇವೆಯ ಮೇಲೆ ನಿರ್ಬಂಧ ವಿಧಿಸಿರುವುದಾಗಿ ತಿಳಿದುಬಂದಿದೆ. ಭಾರತದಲ್ಲಿನ ಸದ್ಯದ ಪರಿಸ್ಥಿತಿ ಕುರಿತು ಸದನಕ್ಕೆ ಮಾಹಿತಿ ಒದಗಿಸಿ ಎಂದು ಗಹೀರ್ ಅವರು ಮೆಲಾನಿಯಾಗೆ ಮನವಿ ಮಾಡಿದ್ದರು.

ಲಂಡನ್: ಪಾರ್ಲಿಮೆಂಟ್ ಸ್ಕ್ವೇರ್ ಬಳಿ ಪ್ರತಿಭಟನೆ

ಲಂಡನ್ (ಪಿಟಿಐ): ಖಾಲಿಸ್ತಾನ ಪರ ಬೆಂಬಲಿಗರ ಗುಂಪೊಂದು ಇಲ್ಲಿನ ಪಾರ್ಲಿಮೆಂಟ್ ಸ್ಕ್ವೇರ್ ಬಳಿ ಪ್ರತಿಭಟನೆ ನಡೆಸಿದೆ.

ಖಾಲಿಸ್ತಾನದ ಧ್ವಜ ಹಾಗೂ ಬ್ಯಾನರ್ ಹಿಡಿದಿದ್ದ ಪ್ರತಿಭಟನಕಾರರು ಸಿಖ್ ಮೂಲಭೂತವಾದಿ ಧರ್ಮ ಪ್ರಚಾರಕ ಹಾಗೂ ಖಾಲಿಸ್ತಾನ ಪರ ಸಹಾನುಭೂತಿ ಹೊಂದಿರುವ ಅಮೃತ್‌ಪಾಲ್ ಸಿಂಗ್‌ಗೆ ಬೆಂಬಲ ಸೂಚಿಸಿದ್ದಾರೆ.

‘ಸಹೋದರ ಅಮೃತ್‌ಪಾಲ್ ಹಾಗೂ ಸಿಖ್ ಸಮುದಾಯದ ಇತರ ಅಮಾಯಕ ಯುವಕರ ವಿರುದ್ಧ ಭಾರತದ ಪೊಲೀಸರು ಕೈಗೊಂಡಿರುವ ಕ್ರಮವು ತಾರತಮ್ಯದಿಂದ ಕೂಡಿದೆ. ಇದನ್ನು ನಾವು ಖಂಡಿಸುತ್ತೇವೆ’ ಎಂಬ ಬರಹವುಳ್ಳ ಬ್ಯಾನರ್‌ಗಳನ್ನು ಪ್ರತಿಭಟನಕಾರರು ಹಿಡಿದಿದ್ದರು.

‘ಕಾಶ್ಮೀರ ಕಣಿವೆಗೆ ಸಂಪರ್ಕ: ರೈಲು ಮಾರ್ಗ ವರ್ಷಾಂತ್ಯಕ್ಕೆ ಪೂರ್ಣ’

ಶ್ರೀನಗರ (ಪಿಟಿಐ): ಕಾಶ್ಮೀರ ಕಣಿವೆಗೆ ಇತರ ಭಾಗಗಳೊಂದಿಗೆ ಸಂಪರ್ಕ ಕಲ್ಪಿಸುವ ಉಧಂಪುರ–ಬನಿಹಾಲ್ ರೈಲು ಮಾರ್ಗ ಈ ವರ್ಷ ಪೂರ್ಣಗೊಳ್ಳಲಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಶನಿವಾರ ತಿಳಿಸಿದ್ದಾರೆ.



ಅಶ್ವಿನಿ ವೈಷ್ಣವ್

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಮ್ಮು ಮತ್ತು ಶ್ರೀನಗರಕ್ಕೆ ಸಂಪರ್ಕ ಕಲ್ಪಿಸುವ ಈ ಮಾರ್ಗವು ಡಿಸೆಂಬರ್ ಅಥವಾ ಮುಂದಿನ ವರ್ಷದ ಪ್ರಾರಂಭದಲ್ಲಿ ರೈಲುಗಳ ಸಂಚಾರಕ್ಕೆ ಮುಕ್ತವಾಗಲಿದೆ. ಅಲ್ಲದೆ, ಜಮ್ಮು ಮತ್ತು ಕಾಶ್ಮೀರಕ್ಕೆ ಸಂಪರ್ಕ ಕಲ್ಪಿಸುವ ಉಧಂಪುರ-ಶ್ರೀನಗರ-ಬರಾಮುಲ್ಲಾ ರೈಲು ಮಾರ್ಗ ಪ್ರಗತಿಯಲ್ಲಿದ್ದು, ಆ ಮಾರ್ಗವೂ ಪೂರ್ಣಗೊಳ್ಳಲಿದೆ ಎಂದು ತಿಳಿಸಿದ್ದಾರೆ.

ಈ ರೈಲು ಮಾರ್ಗದಲ್ಲಿ ಸಂಚರಿಸಲು ವಿಶೇಷವಾಗಿ ವಂದೇ ಭಾರತ್ ರೈಲನ್ನು ವಿನ್ಯಾಸಗೊಳಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ವಾಮಾಚಾರ ಶಂಕೆ: ಮಹಿಳೆಯನ್ನು ಕೆಂಡದ ಮೇಲೆ ನಡೆಸಿದ ಸಂಬಂಧಿಕರು

ದುರ್ಗ್, ಛತ್ತೀಸಗಢ (ಪಿಟಿಐ): ವಾಮಾಚಾರ ಮಾಡಿಲ್ಲ ಎಂಬುದನ್ನು ಸಾಬೀತುಪಡಿಸಲು ಮಹಿಳೆಯೊಬ್ಬಳಿಗೆ ಆಕೆಯ ಪತಿಯ ಸಂಬಂಧಿಕರು ಸುಡುತ್ತಿರುವ ಕಲ್ಲಿದ್ದಲು ಹಾಗೂ ಕಬ್ಬಿಣದ ಮೊಳೆಗಳ ಮೇಲೆ ನಡೆಯುವಂತೆ ಮಾಡಿದ ಘಟನೆ ಛತ್ತೀಸಗಢದ ದುರ್ಗ್ ಪಟ್ಟಣದಲ್ಲಿ ನಡೆದಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ದುರ್ಗ್ ಪಟ್ಟಣದ ಕೈಲಾಶ್ ನಗರದಲ್ಲಿ ಮಾರ್ಚ್ 20ರಂದು ಈ ಘಟನೆ ನಡೆದಿದ್ದು, ಮಮತಾ ನಿಷಾದ್ ಎಂಬ ಮಹಿಳೆಯ ಕಾಲುಗಳು ಸುಟ್ಟು ಹೋಗಿದ್ದು, ಚಿಕಿತ್ಸೆಗಾಗಿ ಆಕೆಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದೂ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಘಟನೆ ಸಂಬಂಧ ಇಬ್ಬರು ಮಹಿಳೆಯರು, ಒಬ್ಬ ಪುರುಷನನ್ನು ಬಂಧಿಸಲಾಗಿದ್ದು, ತಾಂತ್ರಿಕನೆಂದು ಹೇಳಿಕೊಂಡ ಬಾಲಕನೊಬ್ಬನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ನಾನು ವಾಮಾಚಾರದಲ್ಲಿ ತೊಡಗಿದ್ದೇನೆ ಎಂದು ಶಂಕಿಸಿ ಪತಿಯ ತಮ್ಮ ಮತ್ತು ಆತನ ಹೆಂಡತಿ ಹಾಗೂ ನಾದಿನಿ ನನಗೆ ಕಿರುಕುಳ ನೀಡುತ್ತಿದ್ದರು. ಮಾರ್ಚ್ 20ರಂದು ನನ್ನ ಪತಿಯು ಮನೆಯಲ್ಲಿ ಇಲ್ಲದ ಸಮಯದಲ್ಲಿ ಈ ಮೂವರೂ ನನ್ನನ್ನು ಕೈಲಾಶ್ ನಗರದ ತಾಂತ್ರಿಕರೊಬ್ಬರ ಬಳಿಗೆ ಕರೆದೊಯ್ದು, ವಾಮಾಚಾರ ಮಾಡುತ್ತಿಲ್ಲ ಎಂಬುದನ್ನು ಸಾಬೀತುಪಡಿಸಲು ಸುಡುತ್ತಿರುವ ಕಲ್ಲಿದ್ದಲು ಹಾಗೂ ಕಬ್ಬಿಣದ ಮೊಳೆಯ ಮೇಲೆ ನಡೆಯಲು ಹೇಳಿದರು. ತಾಂತ್ರಿಕ ನನ್ನನ್ನು ಸುಡುತ್ತಿರುವ ಕಲ್ಲಿದ್ದಲ ಮೇಲೆ 12 ಬಾರಿ ಹಾಗೂ ಕಬ್ಬಿಣದ ಮೊಳೆಗಳ ಮೇಲೆ 9 ಬಾರಿ ನಡೆಯುವಂತೆ ಮಾಡಿದ’ಎಂದು ಸಂತ್ರಸ್ತೆ ಮಮತಾ ಆರೋಪಿಸಿದ್ದಾರೆ.

ಪತಿಯು ಮರಳಿದ ಬಳಿಕ ಸಂತ್ರಸ್ತೆಯು ತನ್ನನ್ನು ‘ಅಗ್ನಿಪರೀಕ್ಷೆ’ಗೊಳಪಡಿಸಿದ ಕುರಿತು ತಿಳಿಸಿದ್ದಾಳೆ. ಬಳಿಕ ಪತಿಯು ಸಮೀಪದ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದಾನೆ.

ಘಟನೆ ಸಂಬಂಧ ಬಂಧಿತರಾಗಿದ್ದ ಮೂವರು ಆರೋಪಿಗಳಿಗೆ ಸ್ಥಳೀಯ ನ್ಯಾಯಾಲಯವು ಜಾಮೀನು ನೀಡಿದ್ದು, ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸಂತ್ರಸ್ತೆಯು ಒತ್ತಾಯಿಸಿದ್ದಾರೆ.

‘ಸರ್ಕಾರಿ ನೌಕರರು ಸರ್ಕಾರವನ್ನು ಟೀಕಿಸುವಂತಿಲ್ಲ’

ಪ್ರಜಾವಾಣಿ ವಾರ್ತೆ

ಶ್ರೀನಗರ: ಸಾಮಾಜಿಕ ಜಾಲತಾಣಗಳಲ್ಲಿ ಅಥವಾ ಸಾರ್ವಜನಿಕವಾಗಿ ಸರ್ಕಾರ ಮತ್ತು ಅದರ ನೀತಿಗಳು, ಕ್ರಮಗಳನ್ನು ಸರ್ಕಾರಿ ನೌಕರರು ಟೀಕಿಸದಂತೆ ನಿಷೇಧಿಸಿ ಜಮ್ಮು ಮತ್ತು ಕಾಶ್ಮೀರ ಸರ್ಕಾರ ಸುತ್ತೋಲೆ ಹೊರಡಿಸಿದೆ.

‘ರಾಜಕೀಯ, ಜಾತ್ಯತೀತ ವಿರೋಧಿ ಮತ್ತು ಕೋಮುಭಾವನೆ ಹೊಂದಿರುವ ವಿಷಯಗಳನ್ನು ಪೋಸ್ಟ್ ಮತ್ತು ಶೇರ್ ಮಾಡಬಾರದು. ಈ ರೀತಿಯ ವಿಷಯಗಳನ್ನು ಪ್ರಚುರಪಡಿಸುವ ಜಾಲತಾಣಗಳ ಪೇಜ್‌ಗಳು, ಟ್ವಿಟರ್ ಖಾತೆಗಳು ಮತ್ತು ಬ್ಲಾಗ್‌ಗಳನ್ನು ಸಬ್‌ಸ್ಕ್ರೈಬ್ ಮಾಡಬಾರದು. ಈ ಮಾರ್ಗಸೂಚಿಗಳ ಅಥವಾ ನಿಯಮಗಳ ಉಲ್ಲಂಘನೆಯನ್ನು ದುರ್ವರ್ತನೆ ಎಂದು ಪರಿಗಣಿಸಲಾಗುವುದು. ಅಂತಹ ವರ್ತನೆ ತೋರಿದ ನೌಕರರ ವಿರುದ್ಧ ಸಂಬಂಧಪಟ್ಟ ಕಾನೂನಿನಡಿ ಕ್ರಮ ಜರುಗಿಸಲಾಗುವುದು’ ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ.

ಈ ಸುತ್ತೋಲೆಯನ್ನು ಸರ್ಕಾರದ ಕಾರ್ಯದರ್ಶಿ ಸಂಜೀವ್ ವರ್ಮ ಅವರು ಬಿಡುಗಡೆ ಮಾಡಿದರು.

ಈ ಸುತ್ತೋಲೆಯನ್ನು ವಿರೋಧಿಸಿರುವ ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ, ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಅವರು, ‘ಇದು ಸಾರ್ವಜನಿಕರ ಮೂಲಭೂತ ಹಕ್ಕುಗಳ ಸಂಪೂರ್ಣ ಉಲ್ಲಂಘನೆ’ ಎಂದು ಹೇಳಿದ್ದಾರೆ.

ಸಂಪುಟ ಶಿಫಾರಸು ವಿರುದ್ಧ ಪಿಐಎಲ್: ಪುಟ್ಟಸಿದ್ದ ಶೆಟ್ಟಿ

ಮೈಸೂರು: 'ಪರಿಶಿಷ್ಟರ ಒಳಮೀಸಲಾತಿ ಕುರಿತು ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸು, ಇಲ್ಲದೆ ಕೈಗೊಂಡ ನಿರ್ಧಾರದ ವಿರುದ್ಧ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗುವುದು' ಎಂದು ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕೆ.ಸಿ.ಪುಟ್ಟಸಿದ್ದ ಶೆಟ್ಟಿ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಮತಗಳಿಕೆಗಾಗಿ ಒಲೈಸಲು ಸರ್ಕಾರ ಮುಸ್ಲಿಂರ ಶೇ 4 ಮೀಸಲಾತಿಯನ್ನು ವಿಭಜಿಸಿ ಒಕ್ಕಲಿಗ, ಲಿಂಗಾಯತ ವರ್ಗಕ್ಕೆ ನೀಡಿದೆ. ಶೇ 2ರಷ್ಟಿರುವ ಬ್ರಾಹ್ಮಣ, ಆರ್ಯವೈಶ್ಯ ಸಮುದಾಯಕ್ಕೆ ಶೇ 10 ಆರ್ಥಿಕ ಮೀಸಲಾತಿ ನೀಡಲಾಗಿದೆ' ಎಂದು ಟೀಕಿಸಿದರು.

'197 ಜಾತಿಗಳಿರುವ ಕಾಯಕ ಸಮಾಜದ ಹಿಂದುಳಿದ ಸಮುದಾಯಗಳ ಮೀಸಲಾತಿಯನ್ನು ಶೇ 27ಕ್ಕೆ ಏರಿಸಬೇಕು. ನಿಗಮ ಸ್ಥಾಪಿಸಬೇಕು ಎಂಬ ಬೇಡಿಕೆ ಮನ್ನಿಸದೆ ಒಡೆದು ಆಳುವ ನೀತಿ ಅನುಸರಿಸುತ್ತಿದೆ. ಈ ಬಗ್ಗೆ 27ರಂದು ಕೆ.ಆರ್.ನಗರದಿಂದ 'ಮನೆ ಮನೆ ಜಾಗೃತಿ' ನಡೆಸಲಾಗುವುದು' ಎಂದರು.

ಎರಡು ದಿನ ಗುಡುಗು ಸಹಿತ ಮಳೆ

ಬೆಂಗಳೂರು: ದಕ್ಷಿಣ ಒಳನಾಡಿನ ಕೆಲವೆಡೆ ಎರಡು ದಿನ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ಮೈಸೂರು, ರಾಮನಗರ, ಚಾಮರಾಜನಗರ, ಕೊಡುಗು ಜಿಲ್ಲೆಯ ಒಂದೆರಡು ಕಡೆ ಗುಡುಗು ಸಹಿತ ಮಳೆಯಾಗಲಿದೆ. ಕರಾವಳಿ ಹಾಗೂ ಒಳನಾಡಿನ ಉಳಿದೆಡೆ ಒಣಹವೆ ಇರುವ ಸಾಧ್ಯತೆ ಇದೆ ಎಂದು ಇಲಾಖೆ ಹೇಳಿದೆ.

ಗರಿಷ್ಠ ಉಷ್ಣಾಂಶವು ಉತ್ತರ ಒಳನಾಡಿನ ಒಂದೆರಡು ಕಡೆ ಸಾಮಾನ್ಯಕ್ಕಿಂತ 2 ಡಿಗ್ರಿ ಸೆಲ್ಸಿಯಸ್ ಕಡಿಮೆ, ಕರಾವಳಿಯ ಒಂದೆರಡು ಕಡೆ ಸಾಮಾನ್ಯಕ್ಕಿಂತ 2-3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆಯಿದೆ. ಶನಿವಾರ ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ (38.2 ಡಿಗ್ರಿ ಸೆಲ್ಸಿಯಸ್) ಹಾಗೂ ಧಾರವಾಡದಲ್ಲಿ ಕನಿಷ್ಠ ಉಷ್ಣಾಂಶ (15.6 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ ಎಂದು ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ಅವಧಿಯಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಗರಿಷ್ಠ ಉಷ್ಣಾಂಶ 33 ಮತ್ತು ಕನಿಷ್ಠ ಉಷ್ಣಾಂಶ 22 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಇಲಾಖೆ ಹೇಳಿದೆ.

ತೀರ್ಮಾನ ವಿರೋಧಿಸಿ ರಾಷ್ಟ್ರೀಯ ಅಧ್ಯಕ್ಷ ಸ್ಥಾನ ತ್ಯಜಿಸಿದ ಕಾಶಪ್ಪನವರ

ಪಂಚಮಸಾಲಿ ಮೀಸಲಾತಿ ಹೋರಾಟ ಸ್ಥಗಿತ: ಸಮಿತಿ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೀರಶೈವ ಲಿಂಗಾಯತರಿಗೆ ಪ್ರವರ್ಗ 2ಡಿ ಅಡಿ ಶೇ 7 ಮೀಸಲಾತಿ ಕಲ್ಪಿಸಿದ ರಾಜ್ಯ ಸರ್ಕಾರದ ತೀರ್ಮಾನವನ್ನು ಒಪ್ಪಿ, ಹೋರಾಟವನ್ನು ತಾತ್ಕಾಲಿಕವಾಗಿ ಹಿಂಪಡೆಯಲು ಪಂಚಮಸಾಲಿ ಮೀಸಲಾತಿ ಹೋರಾಟ ಸಮಿತಿ ನಿರ್ಧರಿಸಿದೆ. ಆದರೆ, ಕೇಂದ್ರದ ಒಬಿಸಿ ಮೀಸಲಾತಿ ಪಟ್ಟಿಯಲ್ಲಿ ಸೇರಿಸುವಂತೆ ಒತ್ತಾಯಿಸುವುದನ್ನು ಮುಂದುವರಿಸುವುದಾಗಿ ಹೇಳಿದೆ.

ಪಂಚಮಸಾಲಿ ಸಮುದಾಯಕ್ಕೆ 2ಎ ಅಡಿ ಶೇ 15ರಷ್ಟು ಮೀಸಲಾತಿ ಆಗ್ರಹಿಸಿ ಕಳೆದ 70 ದಿನಗಳಿಂದ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸುತ್ತಿರುವ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಸ್ವಾಮೀಜಿಯ ನಿರ್ಧಾರವನ್ನು ಹೋರಾಟ ಸಮಿತಿಯ ಅಧ್ಯಕ್ಷ ಬಸನಗೌಡ ಪಾಟೀಲ್ ಯತ್ನಾಳ ಅನುಮೋದಿಸಿದರು. ಆದರೆ, ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್ ಅವರು ವಿರೋಧಿಸಿದರು.'ನಮ್ಮ ಬೇಡಿಕೆಯ ಬಗ್ಗೆ ಯತ್ನಾಳ ಅವರು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟರು. ತಡವಾಗಿಯಾದರೂ ಎಲ್ಲ ಲಿಂಗಾಯತ ಸಮುದಾಯದೊಂದಿಗೆ ನಮಗೂ ಮೀಸಲಾತಿ ಕಲ್ಪಿಸಿರುವುದು ಸಮಾಧಾನ ತಂದಿದೆ. ನಮ್ಮ ಹೋರಾಟಕ್ಕೆ ಅಖಿಲ ಭಾರತ ವೀರಶೈವ ಮಹಾಸಭಾ ಬೆಂಬಲ ನೀಡಲಿಲ್ಲ. ಸಿದ್ಧಗಂಗಾ ಮಠ ಮತ್ತು ಉತ್ತರಕರ್ನಾಟಕದ ಕೆಲವು ಮಠಗಳನ್ನು ಬಿಟ್ಟರೆ ಬೇರೆ ಯಾವುದೇ ಮಠಗಳು ಬೆಂಬಲಕ್ಕೆ ನಿಲ್ಲಲಿಲ್ಲ. ಶೇ 100ರಷ್ಟು ನಮ್ಮ ಗುರಿ ಈಡೇರದಿದ್ದರೂ ಮೊದಲ ಹೆಜ್ಜೆಯನ್ನು ಯಶಸ್ವಿಯಾಗಿ ಇಟ್ಟಿದ್ದೇವೆ' ಎಂದು ಸ್ವಾಮೀಜಿ ಭಾವುಕರಾದರು.

'ಪ್ರವರ್ಗ 2ಎಯಲ್ಲಿ ಏನೆಲ್ಲಾ ಸವಲತ್ತುಗಳು ಇವೆಯೋ ಅವೆಲ್ಲವೂ 2ಡಿಯಲ್ಲಿಯೂ ಸಿಗಲಿದೆ ಎಂದು ದೃಢೀಕರಿಸಿಕೊಂಡಿದ್ದೇವೆ. ಈ ಹಿನ್ನೆಲೆಯಲ್ಲಿ ಹೋರಾಟವನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಂಡಿದ್ದೇವೆ. ಆದರೆ, ರಾಜ್ಯ ಸರ್ಕಾರವು ಸಚಿವ ಸಂಪುಟದ ತೀರ್ಮಾನದ ರಾಜ್ಯಪತ್ರ ಅಧಿಸೂಚನೆಯನ್ನು ನೀತಿಸಂಹಿತೆ ಜಾರಿಗೆ ಮೊದಲೇ ಹೊರಡಿಸಬೇಕು. ಅಲ್ಲಿಯವರೆಗೆ ನಾನು ಕೂಡಲಸಂಗಮಕ್ಕೆ ಹೋಗುವುದಿಲ್ಲ' ಎಂದು ಸ್ವಾಮೀಜಿ ಶಪಥ ಮಾಡಿದರು. ಕೇಂದ್ರದ ಒಬಿಸಿ ಮೀಸಲಾತಿಗಾಗಿ ಚುನಾವಣೆ ಬಳಿಕ ಹೋರಾಟ ಮುಂದುವರಿಸೋಣ ಎಂದೂ ಅವರು ಸ್ವಾಮೀಜಿ ಕರೆ ನೀಡಿದರು.

ಯತ್ನಾಳ ಮಾತನಾಡಿ, 'ಸ್ವಾಮೀಜಿಯ ನಿರಂತರ ಹೋರಾಟದಿಂದ ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ನಿರ್ಧಾರ ಆಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ನನ್ನನ್ನು ಮೂರು ಬಾರಿ ದೆಹಲಿಗೆ ಕರೆಸಿಕೊಂಡು ಮಾತುಕತೆ ನಡೆಸಿದ್ದರು. ನ್ಯಾಯಾಲಯ ಕೂಡಾ ಹೊಸ ಪ್ರವರ್ಗ ಮಾಡಲು ಅನುಮತಿ ಕೊಟ್ಟಿದೆ. ನಮ್ಮದು ರಾಜಕೀಯ ಲಾಭಕ್ಕಾಗಿ ಹೋರಾಟವಲ್ಲ, ಸಮುದಾಯದ ಒಳಿತಿಗಾಗಿ ಹೋರಾಟ. ಈಗ ಈ ಸತ್ಯಾಗ್ರಹ ಸ್ಥಗಿತಗೊಳಿಸುತ್ತೇವೆ' ಎಂದರು.

ಈ ಜಯ ನಾನು ಒಪ್ಪಲ್ಲ: ಕಾಶಪ್ಪನವರ

ಮೀಸಲಾತಿ ಹೋರಾಟ ಸ್ಥಗಿತಗೊಳಿಸಿದ ಸ್ವಾಮೀಜಿ ತೀರ್ಮಾನಕ್ಕೆ ವಿರೋಧ ವ್ಯಕ್ತಪಡಿಸಿದ ವಿಜಯಾನಂದ ಕಾಶಪ್ಪನವರ, 'ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ' ಎಂದರು.

'ಸರ್ಕಾರ ಘೋಷಿಸಿರುವ ಮೀಸಲಾತಿ ಚುನಾವಣೆಗೆ ಮಾಡಿರುವ ತಂತ್ರದಂತೆ ಕಾಣಿಸುತ್ತಿದೆ. 2ಎಗೆ ಸಿಗುತ್ತಿರುವ ಸವಲತ್ತುಗಳನ್ನು ಕೊಡಬೇಕು ಎಂದು ನಾವು ಪಕ್ಷಾತೀತವಾಗಿ ಹೋರಾಟ ಮಾಡಿದ್ದೇವೆ. ಆದರೆ, ಸರ್ಕಾರ ಅಲ್ಪಸಂಖ್ಯಾತರ ಮೀಸಲಾತಿ ಕಿತ್ತು ನಮಗೆ ನೀಡಿದೆ. ಆ ಮೂಲಕ, ನಮ್ಮ ಮೇಲೆ ಗೂಬೆ ಕೂರಿಸುವ ಕುತಂತ್ರ ಮಾಡಿದೆ. ಲಿಂಗಾಯತ ಹಾಗೂ ಮುಸ್ಲಿಮರ ಮಧ್ಯೆ ಜಗಳ ಹಚ್ಚಲು ಈ ಮೀಸಲಾತಿ ಕೊಟ್ಟಿದ್ದಾರೆ. ಸ್ವಾಮೀಜಿ ಮೇಲೆ ಒತ್ತಡ ಹಾಕಿ ಈ ರೀತಿ ಹೇಳಿಸಿದ್ದಾರೆ. ಇದನ್ನು ನಾನು ತಿರಸ್ಕರಿಸುತ್ತೇನೆ' ಎಂದೂ ಅವರು ಹೇಳಿದರು.



ಒಕ್ಕಲಿಗರಿಗೆ ಮೀಸಲಾತಿ ಹೆಚ್ಚಿಸಿರುವ ಆದೇಶದ ಪ್ರತಿ ಸಿಕ್ಕಿಲ್ಲ. ಅದು ಸಿಕ್ಕ ನಂತರ ಅಧ್ಯಯನ ನಡೆಸಿ ಪ್ರತಿಕ್ರಿಯಿಸಲಾಗುವುದು.
ನಂಜಾವಧೂತ ಸ್ವಾಮೀಜಿ,
ಪೀಠಾಧ್ಯಕ್ಷರು, ಸ್ಫಟಿಕಪುರಿ ಸಂಸ್ಥಾನ ಮಠ, ಪಟ್ಟನಾಯಕನಹಳ್ಳಿ, ಶಿರಾ ತಾಲ್ಲೂಕು.

'ಒಕ್ಕಲಿಗರ ಮೀಸಲಾತಿ ಹೆಚ್ಚಳ ಸರ್ಕಾರಕ್ಕೆ ಮನವರಿಕೆ'

ಬೆಂಗಳೂರು: 'ಒಕ್ಕಲಿಗ ಸಮುದಾಯಕ್ಕೆ ರಾಜ್ಯ ಸರ್ಕಾರವು 'ಪ್ರವರ್ಗ-2ಸಿ' ಅಡಿ ಶೇಕಡ 6ರಷ್ಟು ಮೀಸಲಾತಿ ನೀಡಿರುವುದು ಸಂತಸದ ಸಂಗತಿ. ಮುಂದಿನ ದಿನಗಳಲ್ಲಿ ಹೆಚ್ಚಿನ ಮೀಸಲಾತಿ ನೀಡುವಂತೆ ಸರ್ಕಾರಕ್ಕೆ ಮನವರಿಕೆ ಮಾಡಲಾಗುವುದು' ಎಂದು ರಾಜ್ಯ ಒಕ್ಕಲಿಗರ ಹೋರಾಟ ಸಮಿತಿ ಅಧ್ಯಕ್ಷ ಗಾ.ನಂ. ಶ್ರೀಕಂಠಯ್ಯ ತಿಳಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಿರ್ಮಲಾನಂದನಾಥ ಸ್ವಾಮೀಜಿ, ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಹಾಗೂ ನಂಜಾವಧೂತ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಮೀಸಲಾತಿ ಹೆಚ್ಚಿಸುವಂತೆ ಮೂರು ವರ್ಷ ಸತತವಾಗಿ ನಮ್ಮ ಸಮಿತಿಯು ಹೋರಾಟ ಮಾಡಿತ್ತು. ನಮ್ಮ ಬೇಡಿಕೆ ಹೆಚ್ಚಿದ್ದರೂ ರಾಜ್ಯ ಸರ್ಕಾರವು ಕಾನೂನಿನ ಇತಿಮಿತಿಯಲ್ಲಿ 'ಪ್ರವರ್ಗ-2ಸಿ' ಅಡಿ, ಒಕ್ಕಲಿಗ ಸಮುದಾಯದ ಮೀಸಲಾತಿಯನ್ನು ಶೇ 4ರಿಂದ ಶೇ 6ಕ್ಕೆ ಹೆಚ್ಚಳ ಮಾಡಿದೆ. ಇದರಿಂದ ಸಮುದಾಯದ ಮಕ್ಕಳಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಹೆಚ್ಚಿನ ಅವಕಾಶಗಳು ದೊರೆಯಲಿವೆ' ಎಂದರು.

'ಒಕ್ಕಲಿಗ ಸಮುದಾಯದವರು ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ 16 ರಷ್ಟಿದ್ದಾರೆ. ಒಕ್ಕಲಿಗರೊಡನೆ ಕೊಡವ, ರೆಡ್ಡಿ, ಕಾಪು ಇನ್ನಿತರೆ ಉಪಜಾತಿಗಳನ್ನು ಸೇರಿಸಲಾಗಿದೆ. ಶೇ 21ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ 'ಪ್ರವರ್ಗ-3ಎ'ಗೆ, ಕೇವಲ ಶೇ 4 ರಷ್ಟು ಮೀಸಲಾತಿ ನೀಡಲಾಗಿತ್ತು. ಒಕ್ಕಲಿಗ ಸಮುದಾಯಕ್ಕೆ ಶೇ 3ಕ್ಕೂ ಕಡಿಮೆ ಮೀಸಲಾತಿ ಸಿಗುತ್ತಿತ್ತು. ಹೀಗಾಗಿ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಒಕ್ಕಲಿಗ ಹಾಗೂ ಇನ್ನಿತರೆ ಹಿಂದುಳಿದ ಜಾತಿಯನ್ನು ಒಳಗೊಂಡ 'ಪ್ರವರ್ಗ-3ಎ' ಅಡಿ ಶೇ 12ರಷ್ಟು ಮೀಸಲಾತಿ ನೀಡಲು ರಾಜ್ಯ ಸರ್ಕಾರಕ್ಕೆ ಕೋರಲಾಗಿತ್ತು. ಮುಂದಿನ ದಿನಗಳಲ್ಲಿ ಈ ಬಗ್ಗೆ ಮನವರಿಕೆ ಮಾಡಿಸುತ್ತೇವೆ' ಎಂದು ತಿಳಿಸಿದರು.

ಮುಸ್ಲಿಮರನ್ನು ಎರಡನೇ ದರ್ಜೆ ನಾಗರಿಕರಾಗಿಸುವ ಹುನ್ನಾರ: ತನ್ವೀರ್

ಮೈಸೂರು: '2ಬಿ ಮೀಸಲಾತಿ ರದ್ದು ಮಾಡಿರುವುದು, ಮುಸ್ಲಿಮರನ್ನು ಎರಡನೇ ದರ್ಜೆ ನಾಗರಿಕರನ್ನಾಗಿಸುವ ಹುನ್ನಾರ' ಎಂದು ಶಾಸಕ ತನ್ವೀರ್ ಸೇಠ್ ಶನಿವಾರ ವಾಗ್ದಾಳಿ ನಡೆಸಿದರು.


ಸುದ್ದಿಗಾರರೊಂದಿಗೆ ಮಾತನಾಡಿ, 'ಮೀಸಲಾತಿ ರದ್ದು ಮಾಡಿರುವುದು ದ್ವೇಷ, ಸೇಡಿನ ರಾಜಕಾರಣ. 'ಚುನಾವಣೆ ದೃಷ್ಟಿಯಿಂದ ಘೋಷಿಸಿದ್ದು, ಪಕ್ಷ ಅಧಿಕಾರಕ್ಕೆ ಬಂದರೆ ರದ್ದುಪಡಿಸುತ್ತೇವೆ' ಎಂದರು. 'ಬಿಜೆಪಿ ಸರ್ಕಾರ ಮುಸ್ಲಿಮರನ್ನಷ್ಟೇ ಅಲ್ಲದೆ ದಲಿತರನ್ನೂ ವಂಚಿಸಿದೆ. ಜಾತಿ ಒಡೆಯಲು ಮುಂದಾಗಿದೆ. ಮೀಸಲಾತಿ ಆಮಿಷವೊಡ್ಡಿ ಅನ್ಯಾಯ ಮಾಡುತ್ತಿದೆ' ಎಂದು ಟೀಕಿಸಿದರು.

'ಅಧಿಕಾರಕ್ಕೆ ಬಂದರೆ ಮುಸ್ಲಿಮರಿಗೆ ಮೀಸಲಾತಿ'

ಮುಂಡಗೋಡ: 'ಮುಸ್ಲಿಮರಿಗೆ ನೀಡಿದ್ದ ಶೇ 4 ಮೀಸಲಾತಿ ರದ್ದುಪಡಿಸಿ ಬಿಜೆಪಿ ಅನ್ಯಾಯ ಎಸಗಿದೆ. ಜೆಡಿಎಸ್ ಅಧಿಕಾರಕ್ಕೆ ಬಂದರೆ ಪುನಃ ಜಾರಿಗೊಳಿಸುತ್ತೇವೆ' ಎಂದು ರಾಜ್ಯ ಜೆಡಿಎಸ್ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಹೇಳಿದರು.

ಶನಿವಾರ ಮಾಧ್ಯಮದವರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ಸಿನ ಪಾಪದಿಂದಾಗಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿದೆ. ಅದರ ಫಲವನ್ನು ನಾವು ಈಗ ಅನುಭವಿಸುತ್ತಿದ್ದೇವೆ' ಎಂದರು.

ನಿರ್ದೇಶಕ ಕಿರಣ್ ಗೋವಿ ನಿಧನ



ಬೆಂಗಳೂರು: ಚಿತ್ರ ನಿರ್ದೇಶಕ ಕಿರಣ್ ಗೋವಿ(50) ಶನಿವಾರ ಮಧ್ಯಾಹ್ನ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ ಮತ್ತು ಇಬ್ಬರು ಹೆಣ್ಣುಮಕ್ಕಳು ಇದ್ದಾರೆ.

ಕಚೇರಿಯಲ್ಲಿ ಅವರ ಮುಂದಿನ ಚಿತ್ರ 'ಜಸ್ಟೀಸ್'ನ ಬರಹದಲ್ಲಿದ್ದ ವೇಳೆ ಗೋವಿ ಅವರಿಗೆ ಹೃದಯಾಘಾತವಾಯಿತು. ಕೂಡಲೇ ಆಸ್ಪತ್ರೆಗೆ ದಾಖಲಿಸಿದರೂ, ಆಗಲೇ ಮೃತಪಟ್ಟಿರುವುದನ್ನು ವೈದ್ಯರು ದೃಢಪಡಿಸಿದರು.

ಸಿನಿಪಯಣ: 2008ರಲ್ಲಿ ತೆರೆಕಂಡ 'ಪಯಣ' ಚಿತ್ರದ ಮೂಲಕ ಅವರು ನಿರ್ದೇಶಕರಾಗಿ ಪದಾರ್ಪಣೆ ಮಾಡಿದ್ದರು. ರವಿಶಂಕರ್ ಗೌಡ ನಾಯಕ ನಟರಾಗಿ ನಟಿಸಿದ್ದ 'ಪಯಣ' ಸಿನಿಮಾ ಹಿಟ್ ಆಗಿತ್ತು. 'ಸಂಚಾರಿ', 'ಪಾರು ವೈಫ್ ಆಫ್ ದೇವದಾಸ್', 'ಯಾರಿಗೆ ಯಾರುಂಟು' ಸಿನಿಮಾಗಳನ್ನು ನಿರ್ದೇಶಿಸಿದ್ದರು. 'ಸಂಚಾರಿ' ತೆಲುಗಿಗೆ ರಿಮೇಕ್ ಆಗಿತ್ತು. ಭಾನುವಾರ ಬೆಂಗಳೂರಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಚ್‌.ಡಿ. ಕುಮಾರಸ್ವಾಮಿ ವಾಗ್ದಾಳಿ

ಸಾಮಾಜಿಕ ನ್ಯಾಯಕ್ಕೆ ಚಟ್ಟ ಕಟ್ಟುತ್ತಿದೆ ಬಿಜೆಪಿ

ಬೆಂಗಳೂರು: ಸಾಮಾಜಿಕ ನ್ಯಾಯದ ವಿಚಾರದಲ್ಲಿ ಇಡೀ ದೇಶಕ್ಕೆ ಮೇಲ್ಪಂಕ್ತಿಯಾಗಿದ್ದ ಕರ್ನಾಟಕವನ್ನು ಮತ ಫಸಲಿಗಾಗಿ, ಮೀಸಲಾತಿಯ ಮೂಲಕವೇ ವಿಭಜಿಸಲು ಬಿಜೆಪಿ ಹೊರಟಿದೆ. ಸಾಮಾಜಿಕ ನ್ಯಾಯಕ್ಕೆ ಚಟ್ಟ ಕಟ್ಟಿ ಆ ಪಕ್ಷ ಸ್ಮಶಾನ ಕೇಕೆ ಹಾಕುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ಮೀಸಲಾತಿಗೆ ಸಂಬಂಧಿಸಿದಂತೆ ಶುಕ್ರವಾರದ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಧಾರಗಳ ಕುರಿತು ಶನಿವಾರ ಸರಣಿ ಟ್ವೀಟ್ ಮಾಡಿರುವ ಅವರು, ಚುನಾವಣೆಯ ಹೊತ್ತಿನಲ್ಲಿ ಜಾತಿ- ಜಾತಿಗಳ ನಡುವೆ ವೈಷಮ್ಯ ಸೃಷ್ಟಿಸಿ ಉರಿಯುವ ಕಿಚ್ಚಿನಲ್ಲಿ ಚಳಿ ಕಾಯಿಸಿಕೊಳ್ಳಬೇಕು ಎನ್ನುವುದೇ ಬಿಜೆಪಿಯ ಅಸಲಿ ಆಟ. ಎಚ್‌.ಡಿ. ದೇವೇಗೌಡರು ಮುಸ್ಲಿಮರಿಗೆ ಪ್ರವರ್ಗ 2-ಬಿ ಅಡಿಯಲ್ಲಿ ಶೇಕಡ 4ರಷ್ಟು ಮೀಸಲಾತಿ ನೀಡಿದ್ದರು. ಆರ್ಥಿಕ ಹಿಂದುಳಿದಿರುವಿಕೆಯ ಲೇಪ ಹಚ್ಚಿ ಅದನ್ನು ಕಸಿದುಕೊಳ್ಳುವ ಬಿಜೆಪಿ ಸರ್ಕಾರದ ಪ್ರಯತ್ನವು ಮೀಸಲಾತಿಯ ಆಶಯವನ್ನೇ ಹಾಳುಗೆಡವಲಿದೆ. ಇದು ಬದುಕುಗಳನ್ನು ಸುಟ್ಟು ಹಾಕುವ ದುಷ್ಟತನ ಎಂದು ಟೀಕಿಸಿದ್ದಾರೆ.

ಚುನಾವಣೆ ಸಮಯದಲ್ಲಿ ಮೀಸಲಾತಿಯನ್ನು ಮರುಹಂಚಿಕೆ ಮಾಡಿ ಬಿಜೆಪಿ ರಾಜಕೀಯ ಮಾಡುತ್ತಿದೆ. ಸಂಪುಟ ಸಭೆಯಲ್ಲಿ ಮೀಸಲಾತಿ ಕುರಿತು ಕೈಗೊಂಡಿರುವ ತೀರ್ಮಾನವೂ ಒಂದು ಖತರ್ನಾಕ್ ನಾಟಕ. ಚುನಾವಣೆಯ ಚದುರಂಗದಾಟದಲ್ಲಿ ಬಿಜೆಪಿ ಬಿಸಿಲು ಕುದುರೆ ಮೇಲೆ ಸವಾರಿ ಮಾಡುತ್ತಿದೆ. ಮತದ ಹೆಸರಿನಲ್ಲಿ ಮತಯುದ್ಧ ಗೆಲ್ಲಬಹುದು ಎಂಬ ಚಟಕ್ಕೆ ಬಿದ್ದಿದೆ. ಸರ್ವಜನರ ಕಲ್ಯಾಣದ ಪ್ರತೀಕವಾದ ಕರ್ನಾಟಕದಲ್ಲಿ ಮೀಸಲಾತಿಯ ಕಳ್ಳಾಟ ಆಡುತ್ತಿದೆ. ಗೆಲ್ಲಲೇಬೇಕು, ಗೆಲ್ಲದಿದ್ದರೆ ಇನ್ನೊಬ್ಬರ ತಟ್ಟೆಗೆ ಕೈ ಹಾಕು, ಆಗದಿದ್ದರೆ ಕಸಿದುಕೋ ಎಂಬ ಕುಟಿಲತೆಯನ್ನು ಬಿಜೆಪಿ ಪ್ರದರ್ಶಿಸುತ್ತಿದೆ ಎಂದು ಕುಮಾರಸ್ವಾಮಿ ಹರಿಹಾಯ್ದಿದ್ದಾರೆ.

ಮೂರೂವರೆ ವರ್ಷದಿಂದ ಗಾಳಿಪಟ ಹಾರಿಸಿಕೊಂಡು ಬಂದಿದ್ದ ಬಿಜೆಪಿ ಸರ್ಕಾರ, ಮೀಸಲಾತಿ ಕುರಿತು ಕಾಗಕ್ಕ- ಗುಬ್ಬಕ್ಕನ ಕತೆಗಳನ್ನು ಹೇಳುತ್ತಿತ್ತು. ಈಗ ಚುನಾವಣಾ ಗಿಮಿಕ್‌ನ ಭಾಗವಾಗಿ ಮೀಸಲಾತಿಯ ತುಪ್ಪವನ್ನು ಜನರ ಹಣೆಗೆ ಸವರುವ ನಾಟಕ ಮಾಡಿದೆ. ಒಬ್ಬರ ಅನ್ನ ಕಸಿದುಕೊಂಡು ಇನ್ನೊಬ್ಬರ ಹೊಟ್ಟೆ ತುಂಬಿಸಬಹುದು ಎಂಬ ಬಿಜೆಪಿಯವರ ರಕ್ಕಸ ಚಾಳಿಯು ಡಾ.ಬಿ.ಆರ್. ಅಂಬೇಡ್ಕರ್ ಅವರ ಆಶಯಕ್ಕೆ ಶಾಶ್ವತವಾಗಿ ಸಮಾಧಿ ಕಟ್ಟಲಿದೆ. ಬಿಜೆಪಿಯವರ ಪಾಪದ ಕೊಡ ತುಂಬಿದೆ. ಅರಗಿನ ಮನೆಯಲ್ಲಿ ಪಾಂಡವರಿಗೆ ಕೊಳ್ಳಿ ಇಡಲು ಹೋಗಿ ಬೆಂದುಹೋದ ಕೌರವರ ಸ್ಥಿತಿ ಬಿಜೆಪಿಯವರಿಗೂ ಬರಲಿದೆ ಎಂದಿದ್ದಾರೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕುಣಿಗಲ್: ಚೌಡೇಶ್ವರಿ ದೇವಿ ಜಾತ್ರೆಯುದ್ದಕ್ಕೂ ದೇಗುಲದಲ್ಲೇ ವಾಸ

ಜನಿವಾರ ಧರಿಸಿದ ದಲಿತರು

ಪ್ರಜಾವಾಣಿ ವಾರ್ತೆ

ಕುಣಿಗಲ್ (ತುಮಕೂರು): ಸೌಹಾರ್ದಕ್ಕೆ ಹೆಸರಾಗಿರುವ ತಾಲ್ಲೂಕಿನ ಉಜ್ಜನಿ ಚೌಡೇಶ್ವರಿ ದೇವಿ ಜಾತ್ರೆ ಸಮಯದಲ್ಲಿ ದಲಿತರು ಜನಿವಾರ ಹಾಕಿಕೊಳ್ಳುತ್ತಾರೆ.

ದೇವಸ್ಥಾನದಲ್ಲಿ ಶುಕ್ರವಾರ ರಾತ್ರಿ ಜನಿವಾರ ಧಾರಣೆ ಮತ್ತು ಕಂಬ ಸ್ಥಾಪನೆ ಮೂಲಕ ದೇವಿಯ ಈ ವರ್ಷದ ಉತ್ಸವ ನಡೆಯಲಿದೆ, 12 ದಿನ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ಗ್ರಾಮದ ದಲಿತ ಸಮುದಾಯದ ಚೌಡಯ್ಯ, ಚೌಡೇಶಿ, ವಾಡೇಲಿಂಗಯ್ಯ, ಅಶೋಕ, ರಾಜಣ್ಣ, ಮರಿಚೌಡಯ್ಯ ಅವರು ಈ ಬಾರಿ ಜನಿವಾರ ಧರಿಸಿದ್ದಾರೆ.

ಉಜ್ಜನಿ ಗ್ರಾಮದ ಜನರು ಹಿಂದಿನಿಂದಲೂ ಜಾತಿ, ಧರ್ಮದ ಹಂಗಿಲ್ಲದೆ, ಕೋಮು ಸಾಮರಸ್ಯದಿಂದ ಬದುಕುತ್ತಿದ್ದಾರೆ. ಚೌಡೇಶ್ವರಿ ದೇವಿಜಾತ್ರೆ ಸಮಯದಲ್ಲಿ ಎಲ್ಲರೂ ಒಗ್ಗೂಡಿ ಉತ್ಸವವನ್ನು ಅದ್ದೂರಿಯಾಗಿ ಆಚರಿಸುತ್ತಾರೆ. ಕುರುಬ ಸಮಾಜದವರು ಜಾತ್ರೆಯ ಕಂಬ ಪ್ರತಿಷ್ಠಾಪಿಸಿದರೆ, ಮಡಿವಾಳರು ಮುಸ್ಲಿಮರ ವೇಷ ಧರಿಸಿ ಬಾಬಯ್ಯನ ಜಲ್ದಿ ಪೂಜೆ ನೆರವೇರಿಸುತ್ತಾರೆ. ಗುಡ್ಡರು ಜಾತ್ರೆಯ ಉಸ್ತುವಾರಿ ನೋಡಿಕೊಳ್ಳುತ್ತಾರೆ.

ಬ್ರಾಹ್ಮಣ ಕನ್ಯೆ,ದಲಿತ ಯುವಕನ ಮದುವೆ ಫಲಶ್ರುತಿ!

ಬ್ರಾಹ್ಮಣ ಸಮುದಾಯದ ಕನ್ಯೆಯಾದ ಹೆಬ್ಬಾರಮ್ಮನು ಚೌಡೇಶ್ವರಿ ದೇವಿಯ ಭಕ್ತೆ. ಈಕೆ ಪರಿಶಿಷ್ಟ ಸಮುದಾಯದ ಯುವಕನನ್ನು ಮದುವೆಯಾಗುತ್ತಾಳೆ. ಐವರು ಗಂಡು ಮಕ್ಕಳ ತಾಯಿಯಾದ ನಂತರ ತಾನು ಮದುವೆಯಾಗಿದ್ದು ಬ್ರಾಹ್ಮಣನಲ್ಲ ಎಂದು ತಿಳಿಯುತ್ತದೆ. ಚೌಡೇಶ್ವರಿ ದೇವಿಯ ಜಾತ್ರೆಯ ಕೊಂಡದಲ್ಲಿ ಅಗ್ನಿ ಪ್ರವೇಶಕ್ಕೆ ನಿರ್ಧರಿಸುತ್ತಾಳೆ.

ನೊಂದ ಪತಿ ಪ್ರಾಯಶ್ಚಿತ್ತಕ್ಕಾಗಿ ಬೇಡಿಕೊಂಡಾಗ, 'ಪ್ರತಿ ವರ್ಷ ಚೌಡೇಶ್ವರಿ ದೇವಿ ಜಾತ್ರೆ ಸಮಯದಲ್ಲಿ ತನ್ನ ಐವರೂ ಮಕ್ಕಳು, ನೀನು (ಗಂಡ) ಸೇರಿ ಆರು ಜನ ಜಾತ್ರೆಯ 15 ದಿನ ಮೊದಲೇ ಜನಿವಾರ ಧರಿಸಿ ಬ್ರಾಹ್ಮಣರಾಗಿ, ಹಬ್ಬ ಮುಗಿಯುವರೆಗೂ ಇರಬೇಕು. ಕೊನೆಯ ದಿನ ಕೊಂಡ ಹಾಯಬೇಕು' ಎಂದು ಹೆಬ್ಬಾರಮ್ಮ ತಿಳಿಸುತ್ತಾಳೆ. ನಂತರ ಕೊಂಡದಲ್ಲಿ ಅಗ್ನಿಪ್ರವೇಶ ಮಾಡಿ ದೇವಿಯೊಳಗೆ ಐಕ್ಯಳಾಗುತ್ತಾಳೆ ಎಂಬ ಪ್ರತೀತಿ ಇದೆ. ಇದೇ ಸಂಪ್ರದಾಯ ಮುಂದುವರಿದಿದೆ. ಜಾತ್ರೆ ವೇಳೆ ಆರು ದಲಿತರು ಜನಿವಾರ ಧರಿಸುತ್ತಾರೆ. ಐವರು ದಲಿತರು ಹೆಬ್ಬಾರಮ್ಮನ ಮಕ್ಕಳ ಪ್ರತಿನಿಧಿಗಳಾದರೆ, ಒಬ್ಬರು ಆಕೆಯ ಗಂಡನ ಪ್ರತಿನಿಧಿಸುತ್ತಾರೆ. ಜಾತ್ರೆಯ ಕಂಬ ವಿಸರ್ಜನೆಯ ದಿನ ಜನಿವಾರ ತೆಗೆದು ಕೆರೆಗೆ ಅರ್ಪಿಸುತ್ತಾರೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಉಜ್ಜನಿ ಸುತ್ತಮುತ್ತಲಿನ ಹಳ್ಳಿಗಳ ಸಾವಿರಾರು ಭಕ್ತರು ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಜಾತಿ, ಜನಾಂಗದ ಭೇದವಿಲ್ಲದೆ ಸರ್ವರೂ ಜಾತ್ರೆಯಲ್ಲಿ ಪಾಲ್ಗೊಂಡು, ಅಗ್ನಿಕೊಂಡ ಹಾಯ್ದು ಹರಕೆ ತೀರಿಸುತ್ತಾರೆ.


ಉಜ್ಜನಿ ಜಾತ್ರೆಯ ಪ್ರಯುಕ್ತ ದಲಿತರು ಜನಿವಾರ ಧಾರಣೆ ಮಾಡಿಕೊಂಡರು

'ಹಳೆಯ ಸಂಪ್ರದಾಯ ಮುಂದುವರಿಸುತ್ತಿದ್ದೇವೆ. ಜಾತ್ರೆ ಮುಗಿಯುವವರೆಗೂ ಬ್ರಾಹ್ಮಣರಾಗಿ ಇರುತ್ತೇವೆ ಮತ್ತು ದೇವಸ್ಥಾನದಲ್ಲಿಯೇ ಇರುತ್ತೇವೆ' ಎಂದು ಜನಿವಾರ ಧರಿಸಿದ ದಲಿತ ಸಮುದಾಯದ ಚೌಡೇಶಿ ಹೇಳಿದರು.

ಬಸವ ಶ್ರೀ, ಜಾನಪದ ಶ್ರೀ ಸೇರಿ 14 ಪ್ರಶಸ್ತಿಗಳಿಗೆ ಆಯ್ಕೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2020–21 ಹಾಗೂ 2021-22ನೇ ಸಾಲಿನ 'ಬಸವಶ್ರೀ ರಾಷ್ಟ್ರೀಯ ಪ್ರಶಸ್ತಿ', 'ಜಾನಪದಶ್ರೀ' ಸೇರಿ 14 ವಾರ್ಷಿಕ ಪ್ರಶಸ್ತಿಗಳನ್ನು ಘೋಷಿಸಿದೆ.

'ಬಸವಶ್ರೀ ರಾಷ್ಟ್ರೀಯ ಪ್ರಶಸ್ತಿ'ಗೆ ಮಹಾರಾಷ್ಟ್ರದ ಭಿಕು ರಾಮ್‌ಜಿ ಇದಾತೆ ರತ್ನಗಿರಿ ಹಾಗೂ ಧಾರವಾಡದ ವೀರಣ್ಣ ರಾಜೂರು ಅವರನ್ನು ಆಯ್ಕೆ ಮಾಡಲಾಗಿದೆ. 'ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ'ಗೆ ಧಾರವಾಡದ ಗಾಯತ್ರಿ ದೇಸಾಯಿ, ಕಲಬುರಗಿಯ ವಿಜಯ್ ಹಾಗರ ಗುಂಡಿಗಿ ಆಯ್ಕೆಯಾಗಿದ್ದಾರೆ. 'ಜಕಣಾಚಾರಿ ಪ್ರಶಸ್ತಿ'ಗೆ ವಿಜಯನಗರದ ಹುಸೇನಿ, ಮೈಸೂರಿನ ಶ್ಯಾಮಸುಂದರ್ ಭಟ್, 'ಜಾನಪದಶ್ರೀ ಪ್ರಶಸ್ತಿ'ಗೆ ರಾಯಚೂರಿನ ಮಾರೆಪ್ಪ ದಾಸರ, ಉ. ಕನ್ನಡದ ಹುಸೇನಾ ಬಿ. ಬುಡೇನ್, ರಾಮನಗರದ ಅಪ್ಪಗೆರೆ ತಿಮ್ಮರಾಜು, ಮೈಸೂರಿನ ಕುಮಾರಸ್ವಾಮಿ ಭಾಜನರಾಗಿದ್ದಾರೆ. 'ಚೌಡಯ್ಯ ಪ್ರಶಸ್ತಿ'ಗೆ ಎಂ.ವಾಸುದೇವ ಮೋಹಿತ, ನವ ದೆಹಲಿಯ ಹರಿಪ್ರಸಾದ್ ಚೌರಾಸಿಯಾ, 'ಭಗವಾನ್ ಮಹಾವೀರ ಶಾಂತಿ ಪ್ರಶಸ್ತಿ'ಗೆ ಪಾವಗಡದ ಜಪಾನಂದ ಸ್ವಾಮೀಜಿ, ಕೇರಳದ ಸದಾನಂದ ಮಾಸ್ಟರ್, 'ಕುಮಾರವ್ಯಾಸ ಪ್ರಶಸ್ತಿ'ಗೆ ಶಿವಮೊಗ್ಗದ ರಾಜಾರಾಂ ಮೂರ್ತಿ, ಮೈಸೂರಿನ ಎಂ.ಕೆ.ರಾಮಶೇಷನ್, 'ಶಾಂತಲಾ ನಾಟ್ಯರಾಣಿ ಪ್ರಶಸ್ತಿ'ಗೆ ಬೆಂಗಳೂರಿನ ಎಂ.ಆರ್.ಕೃಷ್ಣಮೂರ್ತಿ, ಬಿ.ಎಸ್. ಸುನಂದಾದೇವಿ, 'ಸಂತ ಶಿಶುನಾಳ ಶರೀಫರ ಪ್ರಶಸ್ತಿ'ಗೆ ದಕ್ಷಿಣ ಕನ್ನಡದ ಪುತ್ತೂರು ನರಸಿಂಹ ನಾಯಕ್ ಹಾಗೂ ಚಂದ್ರಶೇಖರ ಜೋಯಿಷಾ ಆಯ್ಕೆಯಾಗಿದ್ದಾರೆ. 'ನಿಜಗುಣ ಪುರಂದರ ಪ್ರಶಸ್ತಿ'ಗೆ ಬೆಂಗಳೂರಿನ ಎಂ.ಎಸ್. ಶೀಲಾ, 'ಪ್ರೊ.ಕೆ.ಜಿ.ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ'ಗೆ ಕಾಸರಗೋಡಿನ ರಮಾನಂದ ಬನಾರಿ, ಕುಪ್ಪಂನ ಎಂ.ಎನ್.ವೆಂಕಟೇಶ್, 'ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ'ಗೆ ಮೈಸೂರಿನ ಕೌಸಲ್ಯಾ ಧರಣೇಂದ್ರ, ಧಾರವಾಡದ ಮಾಲತಿ ಪಟ್ಟಣಶೆಟ್ಟಿ, 'ಬಿ.ವಿ.ಕಾರಂತ ಪ್ರಶಸ್ತಿ'ಗೆ ಬೆಂಗಳೂರಿನ ಬಿ.ವಿ.ರಾಜಾರಾಂ, ವಿಜಯನಗರದ ಅಬ್ದುಲ್ಲ ಪಿಂಜಾರ, 'ಗುಬ್ಬಿ ವೀರಣ್ಣ ಪ್ರಶಸ್ತಿ'ಗೆ ಚಿತ್ರದುರ್ಗದ ಕುಮಾರಸ್ವಾಮಿ ,ಕೊಪ್ಪಳದ ಬಾಬಣ್ಣ ಕಲ್ಮನಿ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ತಲಾ ₹5 ಲಕ್ಷ ನಗದು ಹಾಗೂ ಸ್ಮರಣಿಕೆ ಒಳಗೊಂಡಿವೆ.


ಪಣಜಿಯಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಪತ್ರಕರ್ತ ಪದ್ಮರಾಜ ದಂಡಾವತಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ 2022ನೇ ಸಾಲಿನ ಅನುವಾದ ಪ್ರಶಸ್ತಿಯನ್ನು ಅಕಾಡೆಮಿಯ ಅಧ್ಯಕ್ಷ ಮಾಧವ್ ಕೌಶಿಕ್ ಪ್ರದಾನ ಮಾಡಿದರು. ಪ್ರಶಸ್ತಿಯು ₹50 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ.

ಎಫ್‌ಪಿಐ: ಐ.ಟಿ. ಷೇರು ಮಾರಾಟಕ್ಕೆ ಗಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಮಾಹಿತಿ ತಂತ್ರಜ್ಞಾನ (ಐ.ಟಿ.) ವಲಯದ ಕಂಪನಿಗಳ ಷೇರುಗಳನ್ನು ಹೆಚ್ಚಾಗಿ ಮಾರಾಟ ಮಾಡುತ್ತಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ತಿಳಿಸಿದರು.

ವಾಹನ ಮತ್ತು ವಾಹನ ಬಿಡಿಭಾಗಗಳು, ಹಣಕಾಸು ಸೇವೆಗಳು, ಲೋಹ, ಗಣಿ ಮತ್ತು ವಿದ್ಯುತ್ ವಲಯಗಳಲ್ಲಿ ಹೂಡಿಕೆಗೆ ಗಮನ ಹರಿಸುತ್ತಿದ್ದಾರೆ. ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ ಇರುವ ಮಾಹಿತಿಯ ಪ್ರಕಾರ, ಮಾರ್ಚ್ ತಿಂಗಳಿನಲ್ಲಿ ಈವರೆಗೆ ₹6,192 ಕೋಟಿ ಮೊತ್ತದ ಷೇರುಗಳನ್ನು ಖರೀದಿಸಿದ್ದಾರೆ ಎಂದು ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಮಾರ್ಚ್‌ನಲ್ಲಿ ಚೀನಾ ಹೊರತುಪಡಿಸಿ ಪ್ರವರ್ಧಮಾನಕ್ಕೆ ಬರುತ್ತಿರುವ ಎಲ್ಲಾ ಮಾರುಕಟ್ಟೆಗಳಿಂದಲೂ ಬಂಡವಾಳ ಹಿಂಪಡೆದಿದ್ದಾರೆ. ಅಮೆರಿಕದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿನ ಅಸ್ಥಿರತೆಯಿಂದ ಜಾಗತಿಕವಾಗಿ ಬ್ಯಾಂಕಿಂಗ್ ಷೇರುಗಳು ಕುಸಿತ ಕಾಣುತ್ತಿವೆ. ಹೀಗಾಗಿ ಅಲ್ಪಾವಧಿಯಲ್ಲಿ ವಿದೇಶಿ ಹೂಡಿಕೆದಾರರು ಎಚ್ಚರಿಕೆಯಿಂದ ಇರಲಿದ್ದಾರೆ ಎಂದರು.

ಮುಂಬೈ ಧಾರಣೆ

ಶೇಂಗಾ

25-3-2023

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	11900-12000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (1700)
ಒಂದು ವಾರದ ಡೆಲಿವರಿ	1695 (1695)
ಸೋಯಾ ಕಚ್ಚಾ	927 (945)
ಪಾಮ್ ವಾರದ ಡೆಲಿವರಿ	927 (923)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (935)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 59,100 (59,500)
ಬೆಳ್ಳಿ ಕೆ.ಜಿ 69,700 (69,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

15 ಹೆದ್ದಾರಿಗಳಲ್ಲಿ ಕಾರ್ಯಾರಂಭ

ಬಿಪಿಸಿಎಲ್‌ನಿಂದ 19 ಇ.ವಿ. ಚಾರ್ಜಿಂಗ್ ಕಾರಿಡಾರ್

ಕೊಚ್ಚಿ (ಪಿಟಿಐ): ಕರ್ನಾಟಕ, ತಮಿಳುನಾಡು ಮತ್ತು ಕೇರಳದ 15 ಹೆದ್ದಾರಿಗಳಲ್ಲಿ ವಿದ್ಯುತ್ ಚಾಲಿತ ವಾಹನಗಳಿಗೆ ತ್ವರಿತ ಚಾರ್ಜಿಂಗ್ ಸೌಲಭ್ಯ ಒದಗಿಸುವ 19 ಕಾರಿಡಾರ್‌ಗಳಿಗೆ ಚಾಲನೆ ನೀಡಲಾಗಿದೆ ಎಂದು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಶನಿವಾರ ತಿಳಿಸಿದೆ.



ಹೆದ್ದಾರಿಯ ಎರಡೂ ಕಡೆಗಳಲ್ಲಿ, ಸುಮಾರು 100 ಕಿಲೋ ಮೀಟರ್ ಅಂತರದಲ್ಲಿ ತ್ವರಿತವಾಗಿ ಚಾರ್ಜ್ ಆಗುವ ವಿದ್ಯುತ್ ಚಾಲಿತ ಚಾರ್ಜಿಂಗ್ ಕೇಂದ್ರಗಳು ಇವೆ ಎಂದು ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಪಿ.ಎಸ್. ರವಿ ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಮೂರು ಕಾರಿಡಾರ್‌ಗಳ 33 ಪೆಟ್ರೋಲ್ ಪಂಪ್‌ಗಳಲ್ಲಿ, ತಮಿಳುನಾಡಿನಲ್ಲಿ 10 ಕಾರಿಡಾರ್‌ಗಳ 58 ಪೆಟ್ರೋಲ್ ಪಂಪ್‌ಗಳು ಹಾಗೂ ಕೇರಳದಲ್ಲಿ 3 ಕಾರಿಡಾರ್‌ಗಳ 19 ಪೆಟ್ರೋಲ್ ಪಂಪ್‌ಗಳಲ್ಲಿ ತ್ವರಿತವಾಗಿ ಚಾರ್ಜ್ ಆಗುವ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

30 ನಿಮಿಷ ಚಾರ್ಜ್ ಮಾಡಿದರೆ 125 ಕಿಲೋ ಮೀಟರ್‌ವರೆಗೆ ಚಲಾಯಿಸಬಹುದು. ಹೀಗಾಗಿ ಎರಡು ಚಾರ್ಜಿಂಗ್ ಕೇಂದ್ರಗಳ ನಡುವಿನ ಅಂತರವನ್ನು 100 ಕಿ.ಮೀ ಇರುವಂತೆ ವ್ಯವಸ್ಥೆಗೊಳಿಸಲಾಗಿದೆ ಎಂದು ಕಂಪನಿಯ ರಿಟೇಲ್ ವಹಿವಾಟಿನ ದಕ್ಷಿಣ ಭಾಗದ ಮುಖ್ಯಸ್ಥ ಪಿ.ಕೆ. ನಾಯರ್ ತಿಳಿಸಿದ್ದಾರೆ.

ಈ ಚಾರ್ಜರ್‌ಗಳನ್ನು ಬಳಸುವುದು ಸುಲಭವಾಗಿದ್ದು, ನಿರ್ವಹಣೆ ಸುಲಭವಾಗಿದೆ. ಹೀಗಿದ್ದರೂ ಚಾರ್ಜಿಂಗ್ ಕೇಂದ್ರದಲ್ಲಿ ನೆರವಾಗಲು ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ರವಿ ಹೇಳಿದ್ದಾರೆ.

ಇವಿ ಚಾರ್ಜಿಂಗ್ ಕೇಂದ್ರಗಳ ಬಗ್ಗೆ ಮಾಹಿತಿ ಪಡೆಯುವುದು, ಚಾರ್ಜರ್ ಕಾರ್ಯನಿರ್ವಹಣೆ ಹಾಗೂ ಹಣ ಪಾವತಿಸುವುದು ಸೇರಿದಂತೆ ಎಲ್ಲಾ ಕೆಲಸಗಳನ್ನೂ 'HelloBPCL' ಆ್ಯಪ್ ಮೂಲಕ ಡಿಜಿಟಲೀಕಣಗೊಳಿಸಲಾಗಿದೆ ಎಂದು ರವಿ ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಬಂಡೀಪುರ ರಾಷ್ಟ್ರೀಯ ಉದ್ಯಾನ, ಆಂಧ್ರಪ್ರದೇಶದಲ್ಲಿ ತಿರುಪತಿ, ಕೇರಳದಲ್ಲಿ ಗುರುವಾಯೂರು... ಹೀಗೆ ಇನ್ನೂ ಹಲವು ಧಾರ್ಮಿಕ ಮತ್ತು ಪ್ರವಾಸಿ ತಾಣಗಳಿಗೆ ಸಂಪರ್ಕಿಸುವ ಪ್ರದೇಶಗಳಲ್ಲಿ ಇ.ವಿ. ಚಾರ್ಜಿಂಗ್ ಕೇಂದ್ರಗಳನ್ನು ಕಂಪನಿ ಅಳವಡಿಸಿದೆ.

ರಿಲಯನ್ಸ್ ಸಿಎಫ್‌ಒ ಶ್ರೀಕಾಂತ್

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್‌ನ ಮುಖ್ಯ ಹಣಕಾಸು ಅಧಿಕಾರಿ (ಸಿಎಫ್‌ಒ) ಆಗಿ ಶ್ರೀಕಾಂತ್ ವೆಂಕಟಾಚಾರಿ ಅವರನ್ನು ನೇಮಿಸಲಾಗಿದೆ. ಜೂನ್ 1 ರಿಂದ ಅವರು ಸಿಎಫ್‌ಒ ಆಗಿ ಕಾರ್ಯನಿರ್ವಹಿಸಲಿದ್ದಾರೆ.

ಸದ್ಯ ಸಿಎಫ್‌ಒ ಆಗಿರುವ ಅಲೋಕ್ ಅಗರ್ವಾಲ್ ಅವರನ್ನು ಕಂಪನಿ ಅಧ್ಯಕ್ಷ ಮುಕೇಶ್ ಅಂಬಾನಿ ಅವರ ಹಿರಿಯ ಸಲಹೆಗಾರರನ್ನಾಗಿ ನೇಮಿಸಲಾಗಿದೆ. ಹೀಗಾಗಿ ಸಿಎಫ್‌ಒ ಹೊಣೆಗಾರಿಕೆಯನ್ನು ಶ್ರೀಕಾಂತ್‌ಗೆ ನೀಡಲಾಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಶ್ರೀಕಾಂತ್ ಸದ್ಯ ಕಂಪನಿಯಲ್ಲಿ ಜಂಟಿ ಸಿಎಫ್‌ಒ ಆಗಿದ್ದಾರೆ. ಈ ಮೊದಲು ಅವರು ಸಿಟಿ ಗ್ರೂಪ್‌ನಲ್ಲಿ ಎರಡು ದಶಕಗಳವರೆಗೂ ಹಲವು ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಸಕಲೇಶಪುರ

ಕೂಳೆ	480-550
ನಡುಗೋಲು	600-680
ರಾಶಿ	850-900
ರಾಶಿ ಉತ್ತಮ	950-1000
ಜರಡಿ	1100 - 1250
ಹೆರಕಿದ್ದು	1450-1550
ಹಸಿರು ಸಾಧಾರಣ	950-1050
ಹಸಿರು ಉತ್ತಮ	1350-1450
ಹಸಿರು ಅತಿ ಉತ್ತಮ	1950-2050
ಕಾಳು ಮೆಣಸು	470

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14500	14700	14500	179.25ಸೆಂಟ್ಸ್
ಎಸಿ	7700	7350	7000	
ಆರ್‌ಪಿ	10250	10000	10000	ಲಂಡನ್
ಆರ್‌ಸಿ	5160	194onOT	5000	2189 ಡಾಲರ್ಸ್

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹61,350
ಒಡವೆ ಚಿನ್ನ 1ಗ್ರಾಂ	₹5,645
ಬೆಳ್ಳಿ ಕೆ.ಜಿಗೆ	₹72,000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹460
12 ಮೊಟ್ಟೆಗೆ	₹63
ಮೈಸೂರು 100 ಮೊಟ್ಟೆಗೆ	₹462

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1690 (1690)
ಸೋಯಾ (ರಿಫೈಂಡ್)	₹1030(1030)
ಸೂರ್ಯಕಾಂತಿ (ರಿಫೈಂಡ್)	₹1072 (1080)
ಪಾಮೋಲಿನ್	₹929 (925)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)
₹232-555
ದ್ವಿತಳಿ (ಬಿ.ವಿ)
₹266-689

ಸುಧಾ ಓದಿರಿ

ಶಾಸಕಾಂಗ –ನ್ಯಾಯಾಂಗ ಸಂಬಂಧ ಕುರಿತು ಸಚಿವ ಕಿರಣ್ ರಿಜಿಜು

'ಭಿನ್ನಾಭಿಪ್ರಾಯವಿದೆ, ಸಂಘರ್ಷವಿಲ್ಲ'

ಮದುರೈ (ಪಿಟಿಐ): 'ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯಗಳು ಸಹಜ. ಆದರೆ, ಅದನ್ನು ಸಂಘರ್ಷ ಎಂದು ವ್ಯಾಖ್ಯಾನಿಸಲಾಗದು' ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ಪ್ರತಿಪಾದಿಸಿದ್ದಾರೆ.

ನ್ಯಾಯಾಂಗ ಮತ್ತು ಸರ್ಕಾರದ ನಡುವೆ ಸಂಘರ್ಷವಿದೆ ಎಂಬ ಮಾಧ್ಯಮ ವರದಿಗಳನ್ನು ಅವರು ಶನಿವಾರ ತಳ್ಳಿಹಾಕಿದರು. ಸಚಿವರು ಮೈಲಾಡುತುರೈನಲ್ಲಿ ಸಿಜೆಎಂಸಿ ಕೋರ್ಟ್ ಉದ್ಘಾಟಿಸಿ ಮಾತನಾಡಿದರು.

'ಶಾಸಕಾಂಗ, ನ್ಯಾಯಾಂಗದ ನಡುವೆ ಸಂಘರ್ಷವಿಲ್ಲ ಎಂದು ಸ್ಪಷ್ಟಪಡಿಸಲು ನಾನು ಬಯಸುತ್ತೇನೆ. ಭಿನ್ನಾಭಿಪ್ರಾಯಗಳಿವೆ. ಆದರರ್ಥ ಸಂಘರ್ಷವಿದೆ ಎಂಬುದಲ್ಲ. ಇಂತಹ ವರದಿಗಳು ಸಮಾಜಕ್ಕೆ ತಪ್ಪು ಸಂದೇಶ ರವಾನಿಸಲಿದೆ. ಈಗ ಪ್ರಜಾಪ್ರಭುತ್ವದ ತೀವ್ರ ಕ್ರಿಯೆಗಳಿವೆ. ಅದು, ಬಿಕ್ಕಟ್ಟು ಅಲ್ಲ' ಎಂದರು.

ಸರ್ಕಾರ ಮತ್ತು ಸುಪ್ರೀಂ ಕೋರ್ಟ್ ಅಥವಾ ಶಾಸಕಾಂಗ ಮತ್ತು ನ್ಯಾಯಾಂಗದ ನಡುವೆ ಭಿನ್ನಾಭಿಪ್ರಾಯಗಳಿವೆ ಎಂಬ ಮಾಧ್ಯಮ ವರದಿಗಳನ್ನು ಉಲ್ಲೇಖಿಸಿ ಸಚಿವರು ಈ ಮಾತು ಹೇಳಿದರು.

ನ್ಯಾಯಾಂಗವು ಸ್ವತಂತ್ರವಾಗಿರಬೇಕು ಎಂಬುದನ್ನು ಸರ್ಕಾರ ಬೆಂಬಲಿಸಲಿದೆ. ಕೋರ್ಟ್ ಮತ್ತು ವಕೀಲ ಸಂಘ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಪರಸ್ಪರ ಒಗ್ಗೂಡಿ ಕೆಲಸ ಮಾಡಬೇಕು. ಒಂದನ್ನು ಬಿಟ್ಟು ಇನ್ನೊಂದು ಇರಲಾಗದು. ಕೋರ್ಟ್ ಅಂಗಳದಲ್ಲಿ ಉತ್ತಮ ವಾತಾವರಣ ಇರಬೇಕು ಎಂದು ಹೇಳಿದರು.


ಈ ವರ್ಷ ಸರ್ಕಾರ ವಿವಿಧ ರಾಜ್ಯಗಳ ಕೋರ್ಟ್‌ಗಳಿಗೆ ಒಟ್ಟು ₹ 9,000 ಕೋಟಿ ಹಂಚಿಕೆ ಮಾಡಿದೆ. ಹೆಚ್ಚು ಅನುದಾನ ಕೇಳಲು ಅನುವಾಗುವಂತೆ ಹಂಚಿಕೆಯಾದ ಅನುದಾನದ ಪೂರ್ಣ ಬಳಕೆಗೆ ಸಚಿವಾಲಯ ಒತ್ತು ನೀಡಿದೆ. ನ್ಯಾಯಾಂಗ ಪೂರ್ಣವಾಗಿ ಕಾಗದ ರಹಿತವಾಗಿರಬೇಕು ಎಂದೂ ಸರ್ಕಾರ ಬಯಸಿದೆ ಎಂದರು.



ದೇಶದ ಮೊದಲ ಕೇಬಲ್ ಆಧಾರಿತ ರೈಲ್ವೆ ಸೇತುವೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಯಲ್ಲಿನ ಅಂಜಿ ಖಡ್ ರೈಲ್ವೆ ಸೇತುವೆಯ ನಿರ್ಮಾಣ ಕಾರ್ಯ ಬಹುತೇಕ ಪೂರ್ಣಗೊಂಡಿದೆ –ಪಿಟಿಐ ಚಿತ್ರ

ಕೋವಿಡ್ ಪ್ರಕರಣ ಹೆಚ್ಚಳ: ಏ.10, 11ರಂದು ಸಿದ್ಧತಾ ಅಭಿಯಾನ

ನವದೆಹಲಿ (ಪಿಟಿಐ): ಕೋವಿಡ್ 19 ಮತ್ತು ಇನ್‌ಫ್ಲೂಯೆಂಜಾ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಏಪ್ರಿಲ್ 10 ಮತ್ತು 11ರಂದು ದೇಶದಾದ್ಯಂತ ಆಸ್ಪತ್ರೆಗಳಲ್ಲಿ ಸಿದ್ಧತಾ ಅಭಿಯಾನ ಹಮ್ಮಿಕೊಳ್ಳಲು ಕೇಂದ್ರ ಸರ್ಕಾರ ಯೋಜನೆ ರೂಪಿಸಿದೆ.



ಎಲ್ಲಾ ಜಿಲ್ಲೆಗಳ ಖಾಸಗಿ ಮತ್ತು ಸಾರ್ವಜನಿಕ ಆರೋಗ್ಯ ಸೌಲಭ್ಯಗಳು ಈ ಅಭಿಯಾನದಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮತ್ತು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯು (ಐಸಿಎಂಆರ್) ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.

ಆಸ್ಪತ್ರೆಗಳಲ್ಲಿ ಹಾಸಿಗೆ ಲಭ್ಯತೆ, ಆಮ್ಲಜನಕ ಮತ್ತು ಔಷಧಿಗಳ ದಾಸ್ತಾನು ಸಮರ್ಪಕವಾಗಿವೆಯೇ ಪರಿಶೀಲಿಸುವುದು ಈ ಅಭಿಯಾನದ ಉದ್ದೇಶ ಎಂದು ಹೇಳಿದೆ.

ಮಾರ್ಚ್ 27ರಂದು ವರ್ಚುವಲ್ ಸಭೆಯ ಮೂಲಕ ಅಭಿಯಾನದ ಮಾಹಿತಿಯನ್ನು ರಾಜ್ಯಗಳಿಗೆ ನೀಡಲಾಗುವುದು ಎಂದೂ ತಿಳಿಸಿದೆ.

ಒಂದೇ ದಿನ 1,590 ಪ್ರಕರಣಗಳು ದೃಢ: 146 ದಿನಗಳ ಬಳಿಕ ದೇಶದಲ್ಲಿ ಒಂದೇ ದಿನ 1,590 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 8,601ಕ್ಕೆ ಏರಿಕೆಯಾಗಿದೆ.

ಕೋವಿಡ್‌ನಿಂದಾಗಿ ಮತ್ತೆ ಆರು ಮಂದಿ ಸಾವನ್ನಪ್ಪಿದ್ದು, ಇದುವರೆಗೆ ಮೃತಪಟ್ಟವರ ಸಂಖ್ಯೆ 5,30,824ಕ್ಕೆ ಏರಿಕೆಯಾಗಿದೆ. ಮಹಾರಾಷ್ಟ್ರದಲ್ಲಿ ಮೂವರು, ಕರ್ನಾಟಕ, ರಾಜಸ್ಥಾನ ಮತ್ತು ಉತ್ತರಾಖಂಡದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ ಎಂದೂ ವಿವರಿಸಿದೆ.

ಅಮೃತ್‌ಪಾಲ್ ದೃಶ್ಯ ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆ

ಚಂಡೀಗಢ (ಪಿಟಿಐ): ಸಿಖ್ ಮೂಲಭೂತವಾದಿ ಧರ್ಮ ಪ್ರಚಾರಕ ಹಾಗೂ ಖಾಲಿಸ್ತಾನ ಪರ ಸಹಾನುಭೂತಿ ಹೊಂದಿರುವ ಅಮೃತ್‌ಪಾಲ್ ಸಿಂಗ್, ಪಟಿಯಾಲದ ಸ್ಥಳವೊಂದರಲ್ಲಿ ಮೊಬೈಲ್‌ನಲ್ಲಿ ಮಾತನಾಡುತ್ತಾ ಓಡಾಡುತ್ತಿರುವ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾವೊಂದರಲ್ಲಿ ಸೆರೆಯಾಗಿದೆ.

ಈ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಶನಿವಾರ ಹರಿದಾಡಿದ್ದು, ಈ ದೃಶ್ಯ ಸೆರೆಯಾಗಿರುವುದು ಯಾವಾಗ ಎಂಬುದರ ಕುರಿತು ಪೊಲೀಸರು ಅಧಿಕೃತವಾಗಿ ಯಾವುದೇ ಮಾಹಿತಿ ನೀಡಿಲ್ಲ.

'ವಾರಿಸ್ ಪಂಜಾಬ್ ದೇ' ಸಂಘಟನೆಯ ಮುಖ್ಯಸ್ಥನಾಗಿರುವ ಅಮೃತ್‌ಪಾಲ್, ಬಿಳಿ ವಸ್ತ್ರದಿಂದ ತನ್ನ ಮುಖವನ್ನು ಮರೆಮಾಡಿಕೊಂಡು, ಕೈಯಲ್ಲಿ ಬ್ಯಾಗ್‌ವೊಂದನ್ನು ಹಿಡಿದು ಹೋಗುತ್ತಿರುವ ದೃಶ್ಯ ಮೊದಲ ವಿಡಿಯೊ ತುಣುಕಿನಲ್ಲಿದೆ. ಆತನ ಆಪ್ತ ಸಹಚರ ಪಪಲ್‌ಪ್ರೀತ್ ಸಿಂಗ್ ಕೂಡ ಜೊತೆಗಿರುವುದು ಈ ವಿಡಿಯೊದಲ್ಲಿ ಕಂಡುಬಂದಿದೆ.

ಮತ್ತೊಂದು ವಿಡಿಯೊ ತುಣುಕಿನಲ್ಲಿ ಅಮೃತ್‌ಪಾಲ್ ಕಂದು ಬಣ್ಣದ ಜಾಕೆಟ್ ಧರಿಸಿಕೊಂಡು ಮೊಬೈಲ್‌ನಲ್ಲಿ ಮಾತನಾಡುತ್ತಾ ಅದೇ ಸ್ಥಳದಲ್ಲಿ ಏಕಾಂಗಿಯಾಗಿ ಅತ್ತಿಂದಿತ್ತ ಓಡಾಡುತ್ತಿರುವುದು ಕಂಡುಬಂದಿದೆ.

ಅಮೃತ್‌ಪಾಲ್ ಹಾಗೂ ಪಪಲ್‌ಪ್ರೀತ್ ಎಲ್ಲಿ ಅಡಗಿಕೊಂಡಿದ್ದಾರೆ ಎಂಬ ಮಾಹಿತಿ ದೊರೆತಿಲ್ಲ. ಹರಿಯಾಣದ ಕುರುಕ್ಷೇತ್ರ ಜಿಲ್ಲೆಯ ಶಾಹಬಾದ್ ಎಂಬಲ್ಲಿ ಮಹಿಳೆಯೊಬ್ಬರು ಇವರಿಗೆ ಆಶ್ರಯ ನೀಡಿದ್ದಾರೆ ಎಂಬ ಅನುಮಾನ ವ್ಯಕ್ತವಾಗಿತ್ತು. ಈ ಸಂಬಂಧ ಮಹಿಳೆಯನ್ನು ವಿಚಾರಣೆಗೆ ಒಳಪಡಿಸಲಾಗಿತ್ತು.

ಸಂಕ್ಷಿಪ್ತ ಸುದ್ದಿ


ಪಾಕಿಸ್ತಾನ: ನಾಲ್ವರು ಸಾವು

ಲಾಹೋರ್ (ಪಿಟಿಐ): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಸರ್ಕಾರ ನೀಡುವ ಉಚಿತ ಗೋಧಿ ಹಿಟ್ಟು ಪಡೆಯುವ ವೇಳೆ ಕಾಲ್ತುಳಿತಕ್ಕೆ ಸಿಲುಕಿ ಮತ್ತು ಆಯಾಸದಿಂದಾಗಿ ಕಳೆದ ಕೆಲವು ದಿನಗಳಲ್ಲಿ ಕನಿಷ್ಠ ನಾಲ್ವರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ಪಾಕಿಸ್ತಾನ ಸರ್ಕಾರ, ಬಡವರಿಗಾಗಿ ಉಚಿತ ಗೋಧಿ ಹಿಟ್ಟು ನೀಡುವ ಯೋಜನೆ ಆರಂಭಿಸಿದೆ. ಮುಲ್ತಾನ್, ಮುಜಫ್ಫರ್‌ಗಢ ಮತ್ತು ಫೈಸಲಾಬಾದ್‌ನ ವಿತರಣಾ ಕೇಂದ್ರಗಳಿಂದ ಗೋಧಿ ಹಿಟ್ಟು ಪಡೆಯುವ ವೇಳೆ ಇಬ್ಬರು ಕಾಲ್ತುಳಿತಕ್ಕೆ ಸಿಲುಕಿ ಮೃತಪಟ್ಟರೆ, ಇನ್ನಿಬ್ಬರು ಸರದಿಯಲ್ಲಿ ನಿಂತು ತೀವ್ರ ಆಯಾಸಗೊಂಡು ಮೃತಪಟ್ಟಿದ್ದಾರೆ. ಹಲವರು ಗಾಯಗೊಂಡಿದ್ದಾರೆ ಎಂದು ಪಂಜಾಬ್ ಸರ್ಕಾರದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

'ತೀವ್ರ ನೂಕು ನುಗ್ಗಾಟ ಮತ್ತು ಸರ್ಕಾರಿ ವಿತರಣಾ ಕೇಂದ್ರಗಳಲ್ಲಿ ಸೌಲಭ್ಯಗಳ ಕೊರತೆಯ ಕಾರಣದಿಂದ ಈ ಅವಘಡ ಸಂಭವಿಸಿದೆ' ಎಂದರು.

ರಾಯಭಾರಿಯಾಗಿ ಎರಿಕ್ ಗಾರ್ಸೆಟ್ಟಿ ಪ್ರಮಾಣವಚನ



ವಾಷಿಂಗ್ಟನ್ (ಪಿಟಿಐ): ಭಾರತಕ್ಕೆ ಅಮೆರಿಕದ ನೂತನ ರಾಯಭಾರಿಯಾಗಿ ಎರಿಕ್ ಗಾರ್ಸೆಟ್ಟಿ ಅವರು ಪ್ರಮಾಣವಚನ ಸ್ವೀಕರಿಸಿದ್ದಾರೆ.

ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರ ಸಮ್ಮುಖದಲ್ಲಿ ನಡೆದ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಗಾರ್ಸೆಟ್ಟಿ ಅವರ ಮಗಳು ಮಾಯಾ ಅವರು ಬೈಬಲ್ ಹಿಡಿದುಕೊಂಡಿದ್ದರು. ಸಮಾರಂಭದಲ್ಲಿ ಗಾರ್ಸೆಟ್ಟಿ ಅವರ ಕುಟುಂಬ ಸದಸ್ಯರು ಪಾಲ್ಗೊಂಡಿದ್ದರು.

'ಇದು ನನಗೆ ಲಭಿಸಿದ ಅದ್ಭುತ ಅವಕಾಶ' ಎಂದು 53 ವರ್ಷದ ಗಾರ್ಸೆಟ್ಟಿ ಹೇಳಿದ್ದಾರೆ.

ಚಿಕ್ಕಬಳ್ಳಾಪುರ: ನಾಳೆ ವೈದ್ಯಕೀಯ ಶಿಕ್ಷಣ ಕಾಲೇಜು ಉದ್ಘಾಟನೆ; ವಿವಿಧ ಆರೋಗ್ಯ ಕಾರ್ಯಕ್ರಮಗಳಿಗೂ ಚಾಲನೆ

ರಾಜ್ಯದಲ್ಲಿ ಆರೋಗ್ಯ ಕ್ರಾಂತಿ

ಚಿಕ್ಕಬಳ್ಳಾಪುರ: ಆರೋಗ್ಯ ಮತ್ತು ಶಿಕ್ಷಣದ ವಿಚಾರದಲ್ಲಿ ರಾಜ್ಯದಲ್ಲಿಯೇ ಚಿಕ್ಕಬಳ್ಳಾಪುರ ಜಿಲ್ಲೆ ಮಹತ್ವದ ಅಭಿವೃದ್ಧಿ ಕಾಣುತ್ತಿದೆ. ರಾಜಧಾನಿ ಬೆಂಗಳೂರಿಗೆ ಸಮೀಪ ಇರುವ ಚಿಕ್ಕಬಳ್ಳಾಪುರದ ಅಭಿವೃದ್ಧಿ ಸಹಜವಾಗಿ ಬೆಂಗಳೂರಿನ ಮೇಲಿನ ಒತ್ತಡವನ್ನು ತಗ್ಗಿಸುತ್ತದೆ.

ಈಗ ಜಿಲ್ಲೆಯ ಅಭಿವೃದ್ಧಿ ಹಾದಿಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿರುವ ದಿನವಾಗಿ ಸೋಮವಾರ (ಮಾ.27) ಗುರುತು ಪಡೆಯುತ್ತಿದೆ. ಚಿಕ್ಕಬಳ್ಳಾಪುರ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಕಾಲೇಜು (ಮೆಡಿಕಲ್ ಕಾಲೇಜು) ಸೋಮವಾರ ಉದ್ಘಾಟನೆಗೊಳ್ಳಲಿದೆ.

ಸೋಮವಾರ (ಮಾ.27) ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಮನ್ಸುಖ್ ಎಲ್. ಮಾಂಡವಿಯಾ ಕಾಲೇಜಿನ ಕಟ್ಟಡವನ್ನು ಉದ್ಘಾಟಿಸುವರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಘನ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಲಿದೆ. ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದೆ.

ಇದಿಷ್ಟೇ ಅಲ್ಲದೆ ಚಿಕ್ಕಬಳ್ಳಾಪುರದ ನಗರದ ಕೆ.ವಿ.ಕ್ಯಾಂಪಸ್ ಬಳಿಯ ಸುಲಾಲಪ್ಪನದಿಣ್ಣೆಯಲ್ಲಿ ಅಂದು ಬೆಳಿಗ್ಗೆ 11.30ಕ್ಕೆ ವಿವಿಧ ಆರೋಗ್ಯ ಕಾರ್ಯಕ್ರಮಗಳಿಗೂ ಕೇಂದ್ರ ಆರೋಗ್ಯ ಸಚಿವರು ಚಾಲನೆ ನೀಡುವರು.

ಮುಖ್ಯಾಂಶಗಳು

- ಸೋಮವಾರ ಚಿಕ್ಕಬಳ್ಳಾಪುರ ವೈದ್ಯಕೀಯ ಶಿಕ್ಷಣ ಕಾಲೇಜು ಕಟ್ಟಡ ಉದ್ಘಾಟಿಸಲಿರುವ ಕೇಂದ್ರ ಆರೋಗ್ಯ ಸಚಿವ ಡಾ. ಮನ್ಸುಖ್ ಎಲ್. ಮಾಂಡವಿಯಾ
- ಪೆರೇಸಂದ್ರದ ಬಳಿ 60 ಎಕರೆಯಲ್ಲಿ ₹ 800 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಕಾಲೇಜು
- ಜಿಲ್ಲೆಯಲ್ಲಿ ಹಲವು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮೇಲ್ದರ್ಜೆಗೆ, ಔಷಧ ಸಂಗ್ರಹಕ್ಕೆ ಉಗ್ರಾಣ ನಿರ್ಮಾಣ



ತಾಲ್ಲೂಕಿನ ಪೆರೇಸಂದ್ರದ ಬಳಿ 60 ಎಕರೆಯಲ್ಲಿ ₹ 800 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ವೈದ್ಯಕೀಯ ಶಿಕ್ಷಣ ಕಾಲೇಜು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅವರ ಮಹತ್ವಾಕಾಂಕ್ಷೆಯ ಕೂಸು ಎಂದರೆ ಖಂಡಿತ ಅತಿಶಯವಲ್ಲ. ಕಾಲೇಜಿಗೆ ಶಂಕುಸ್ಥಾಪನೆ ನೆರವೇರಿಸಿದ ದಿನದಿಂದ ಡಾ.ಕೆ.ಸುಧಾಕರ್, ಇದು ತಮ್ಮ ಮನೆಯ ಕೆಲಸ ಎನ್ನುವಂತೆ ಮುತುವರ್ಜಿವಹಿಸಿದರು. ಕಾಲೇಜು ಉದ್ಘಾಟನೆಯು ಜಿಲ್ಲೆಯ ಆರೋಗ್ಯ, ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಮೈಲಿಗಲ್ಲು.

ಪ್ರತಿ ತಿಂಗಳು ಸಹ ಖುದ್ದು ಕಟ್ಟಡ ನಿರ್ಮಾಣ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಯ ಪ್ರಗತಿ ಪರಿಶೀಲಿಸುವುದು, ಗುತ್ತಿಗೆದಾರರು, ಅಧಿಕಾರಿಗಳಿಗೆ ಕೆಲಸವನ್ನು ಚುರುಕುಗೊಳಿಸುವಂತೆ ನಿರ್ದೇಶನ ನೀಡುವುದು ಸೇರಿದಂತೆ ಕಟ್ಟಡ ಕಾಮಗಾರಿ ಪೂರ್ಣಗೊಳ್ಳುವವರೆಗೂ ಮುತುವರ್ಜಿವಹಿಸಿದ್ದರು. ಈಗ ಕಟ್ಟಡಕಾಮಗಾರಿಪೂರ್ಣವಾಗಿದೆ.

ಕಾಲೇಜು ನಿರ್ಮಾಣದಿಂದ ಜಿಲ್ಲೆಯ ಜನರಷ್ಟೇ ಅಲ್ಲ ನೆರೆಹೊರೆಯ ಜಿಲ್ಲೆಯ ಜನರು ಹಾಗೂ ಗಡಿಗೆ ಹೊಂದಿಕೊಂಡಿರುವ ಆಂಧ್ರಪ್ರದೇಶದ ಜನರಿಗೂ ಆರೋಗ್ಯ ಸೇವೆಗೆ ಅನುಕೂಲವಾಗಲಿದೆ. ಜನರಿಗೆ ಆರೋಗ್ಯ ಸೇವೆಯನ್ನು ದೊರಕಿಸಿಕೊಡುವ ಜತೆಗೆ ಮೆರಿಟ್ ಪಡೆದ ಮತ್ತು ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣ ಕಲಿಯಬೇಕು ಎನ್ನುವ ಆಸೆಗೆ ನೀರೆರೆಯುತ್ತದೆ.

ಕಾಲೇಜಿನ ಕಟ್ಟಡವಷ್ಟೇ ಅಲ್ಲದೆ ಆವರಣದ ಹಸಿರೀಕರಣಕ್ಕೂ ಈಗಾಗಲೇ ಯೋಜನೆಗಳು ಸಿದ್ಧವಾಗಿದೆ. ಕಾಲೇಜಿನ ಆವರಣದ ಅಂಚಿನ ಅಕ್ಕಪಕ್ಕದ ಖಾಲಿ ಜಾಗ ಗುರುತಿಸಿ 1000ಕ್ಕೂ ಹೆಚ್ಚು ಗಿಡಗಳನ್ನು ನೆಡಲಾಗಿದೆ.

ದಾಖಲೆಯ ಆರೋಗ್ಯ ಮೇಳ: ಸಚಿವ ಡಾ.ಕೆ.ಸುಧಾಕರ್ ವೈದ್ಯಕೀಯ ಕಾಲೇಜು ನಿರ್ಮಾಣದ ಜತೆಯಲ್ಲಿಯೇ ಜಿಲ್ಲೆಯ ಜನರ ಆರೋಗ್ಯ ಸುಧಾರಣೆಗೂ ಆದ್ಯತೆ ನೀಡಿದ್ದಾರೆ.

ಕಳೆದ ವರ್ಷ ಮೇ 14 ಮತ್ತು 15 ರಂದು ಚಿಕ್ಕಬಳ್ಳಾಪುರ ಹೊರವಲಯದ ಆದಿಚುಂಚನಗಿರಿ ಎಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಸಚಿವ ಡಾ.ಕೆ.ಸುಧಾಕರ್ ಅವರ ನೇತೃತ್ವದಲ್ಲಿ ನಡೆದ ಆರೋಗ್ಯ ಮೇಳ ದಾಖಲೆ ಬರೆದಿತ್ತು. 1.5 ಲಕ್ಷ ಜನರು ವಿವಿಧ ಆರೋಗ್ಯ ತಪಾಸಣೆಗಳ ಸೇವೆಯನ್ನು ಇಲ್ಲಿ ಪಡೆದಿದ್ದರು.

ಇದಿಷ್ಟೇ ಅಲ್ಲ ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿ, ಚಿಂತಾಮಣಿ ತಾಲ್ಲೂಕಿನ ಕೈವಾರ, ಶಿಡ್ಲಘಟ್ಟ ತಾಲ್ಲೂಕಿನ ಸಾದಲಿ ಮತ್ತು ಗೌರಿಬಿದನೂರು ತಾಲ್ಲೂಕಿನ ತೊಂಡೇಬಾವಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವಕ್ಕೆ ಹಸಿರು ನಿಶಾನೆ ಸಹ ದೊರೆತಿದೆ. ಈ ಹಿಂದೆ ಮಂಡಿಕಲ್, ಪೆರೇಸಂದ್ರ ಮತ್ತು ದಿಬ್ಬೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗಿದೆ.

ರೆಡ್ಡಿಗೊಲ್ಲರಹಳ್ಳಿಯಲ್ಲಿ ಉಗ್ರಾಣ: ಜಿಲ್ಲೆಗೆ ಆರೋಗ್ಯ ಇಲಾಖೆಯು ಇಲ್ಲಿಯವರೆಗೆ ಕೋಲಾರದ ಔಷಧಿಯ ಉಗ್ರಾಣದಿಂದ ಪ್ರತಿ ತಿಂಗಳು ಜಿಲ್ಲೆಗೆ ಅಗತ್ಯವಿರುವ ಔಷಧಿಗಳನ್ನು ತರಲಾಗುತ್ತಿದೆ. ತಿಂಗಳಿಗೆ ಒಮ್ಮೆ ಕೋಲಾರದಿಂದ ಔಷಧಿಗಳನ್ನು ತರಲಾಗುತ್ತಿದೆ. ಇದಕ್ಕೆ ಕಾರಣ ಜಿಲ್ಲೆಯಲ್ಲಿ ಇಲ್ಲಿಯವರೆಗೂ ಔಷಧ ಸಂಗ್ರಹಕ್ಕೆ ಸೂಕ್ತ ಉಗ್ರಾಣದ ವ್ಯವಸ್ಥೆ ಇರಲಿಲ್ಲ.

ಈಗ ಚಿಕ್ಕಬಳ್ಳಾಪುರ ತಾಲ್ಲೂಕಿನ ರೆಡ್ಡಿಗೊಲ್ಲಾರಹಳ್ಳಿ ಬಳಿ ಆರೋಗ್ಯ ಇಲಾಖೆಯಿಂದ ಔಷಧ ಸಂಗ್ರಹಕ್ಕೆ ಉಗ್ರಾಣ ನಿರ್ಮಾಣವಾಗುತ್ತಿದೆ. ಇಲ್ಲಿಯೇ ಲಸಿಕೆ ಸಂಗ್ರಹಕ್ಕೂ ವ್ಯವಸ್ಥೆ ಮಾಡಿಕೊಳ್ಳಲಾಗುತ್ತದೆ. ನಾಲ್ಕು ಎಕರೆ ವಿಸ್ತೀರ್ಣದಲ್ಲಿ ಇಲ್ಲಿ ಔಷಧ ಉಗ್ರಾಣ ಸೇರಿದಂತೆ ವಿವಿಧ ಕಟ್ಟಡಗಳು ನಿರ್ಮಾಣವಾಗುತ್ತಿವೆ.

ಹೀಗೆ ಚಿಕ್ಕಬಳ್ಳಾಪುರ ಜಿಲ್ಲೆಯನ್ನು ಆರೋಗ್ಯ ಕ್ಷೇತ್ರದಲ್ಲಿ ನಾಡು ಗುರುತಿಸುವಂತೆ ಮಾಡಲು ಡಾ.ಕೆ.ಸುಧಾಕರ್ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ❖

ನನ್ನ ಕನಸು ನನಸು

‘ತವರು ಜಿಲ್ಲೆಯಲ್ಲಿ ವೈದ್ಯಕೀಯ ಶಿಕ್ಷಣ ಕಾಲೇಜು ನಿರ್ಮಾಣವಾಗಬೇಕು ಎಂದು ನಾನು ಚಿಕ್ಕ ವಯಸ್ಸಿನಲ್ಲಿ ಕನಸು ಕಂಡಿದ್ದೆ. ಆ ಕನಸು ನನಸಾಗುತ್ತಿದೆ. ಜಿಲ್ಲೆಯ ಎಲ್ಲ ತಾಲೂಕುಗಳಿಗೆ ಹತ್ತಿರ ಹಾಗೂ ಪ್ರಯಾಣಕ್ಕೆ ಅನುಕೂಲ ಇರುವ ಪ್ರದೇಶದಲ್ಲಿ ಕಾಲೇಜು ನಿರ್ಮಾಣವಾಗಿದೆ. ಆಂಧ್ರಪ್ರದೇಶ ಗಡಿ ಭಾಗದ ಜನರಿಗೂ ಸಮೀಪವಿದೆ.’

ಡಾ.ಕೆ.ಸುಧಾಕರ್, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್









‘ದೃಷ್ಟಿ’ಗೆ ₹360 ಕೋಟಿ

ಮನುಷ್ಯನಿಗೆ ಕಣ್ಣು ಪ್ರಮುಖ ಅವಯವ. ದೃಷ್ಟಿ ಇಲ್ಲದಾದರೆ ಜಗತ್ತನ್ನು ನೋಡುವ ಅವಕಾಶದಿಂದ ವಂಚಿತರಾಗಬೇಕಾಗುತ್ತದೆ. ಹೀಗೆ ಜನರ ಕಣ್ಣಿನ ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ‘ದೃಷ್ಟಿ’ ಯೋಜನೆಗೆ ಕಳೆದ ಸಚಿವ ಸಂಪುಟ ಸಭೆಯಲ್ಲಿ ₹ 360 ಕೋಟಿ ಬಿಡುಗಡೆ ಮಾಡಿದ್ದಾರೆ. ಕಣ್ಣಿನ ದೋಷಗಳ ತಪಾಸಣೆ, ಚಿಕಿತ್ಸೆಯ ಜತೆಗೆ ಕನ್ನಡಕಗಳನ್ನೂ ಉಚಿತವಾಗಿ ಈ ಯೋಜನೆಯಡಿ ನೀಡಲಾಗುತ್ತಿದೆ.

ವೈದ್ಯಕೀಯ ಶಿಕ್ಷಣದಲ್ಲಿ ಬದಲಾವಣೆಯ ಪರ್ವ

ಡಾ.ಕೆ.ಸುಧಾಕರ್ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಾದ ನಂತರ ಚಿಕ್ಕಬಳ್ಳಾಪುರವಷ್ಟೇ ಅಲ್ಲ ರಾಜ್ಯದಲ್ಲಿಯೇ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣದಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಆಗಿವೆ.

ಅದಕ್ಕೆ ನಿದರ್ಶನವಾಗಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಸರ್ಕಾರಿ ವೈದ್ಯಕೀಯ ಶಿಕ್ಷಣ ಕಾಲೇಜುಗಳು ಕಾರ್ಯಾರಂಭ ಮಾಡಿವೆ. ವೈದ್ಯಕೀಯ ಶಿಕ್ಷಣ ಎಂದರೆ ಲಕ್ಷಾಂತರ ರೂಪಾಯಿ ವೆಚ್ಚ ಮಾಡಬೇಕಾಗುತ್ತದೆ. ನಮಗೆ ಗಗನ ಕುಸುಮ ಎಂದುಕೊಳ್ಳುವ ಬಡವರು ಹಾಗೂ ಮಧ್ಯಮ ವರ್ಗದ ಜನರಿಗೆ ಹೊಸ ಕಾಲೇಜುಗಳ ಆರಂಭ ವೈದ್ಯಕೀಯ ಶಿಕ್ಷಣ ಕಲಿಕೆಯ ಅವಕಾಶಗಳನ್ನು ತೆರೆದಿದೆ.

ಚಿಕ್ಕಬಳ್ಳಾಪುರ, ಕೊಡಗು, ಯಾದಗಿರಿ, ಹಾವೇರಿ, ಕಾರವಾರ ಮತ್ತು ಬೆಂಗಳೂರಿನಲ್ಲಿ ಅಟಲ್ ಬಿಹಾರಿ ವೈದ್ಯಕೀಯ ಶಿಕ್ಷಣ ಕಾಲೇಜು ಈಗಾಗಲೇ ಆರಂಭವಾಗಿವೆ. ರಾಮನಗರ ಮತ್ತು ಚಿತ್ರದುರ್ಗದಲ್ಲಿ ವೈದ್ಯಕೀಯ ಶಿಕ್ಷಣ ಕಾಲೇಜು ನಿರ್ಮಾಣಕ್ಕೆ ರಾಜ್ಯ ಸರ್ಕಾರ ಅನುದಾನ ಸಹ ಬಿಡುಗಡೆ ಮಾಡಿದೆ. ಎರಡು ಮೂರು ದಿನಗಳಲ್ಲಿ ಈ ಕಾಲೇಜುಗಳಿಗೆ ಶಂಕು ಸ್ಥಾಪನೆ ಸಹ ನೆರವೇರಲಿದೆ.

ಹೀಗೆ ಒಂದು ರಾಜ್ಯದಲ್ಲಿ ಕಡಿಮೆ ಅವಧಿಯಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಆರಂಭವಾಗಿರುವುದು ಇದೇ ಮೊದಲು. ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಹಕಾರದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಇಚ್ಛಾಶಕ್ತಿಯಲ್ಲಿ ಈ ಎಲ್ಲ ಕಾಲೇಜುಗಳು ಆರಂಭವಾಗಿವೆ.

ಈ ಕಾಲೇಜುಗಳ ಆರಂಭದಿಂದ ಸ್ನಾತಕೋತ್ತರ ಸೀಟುಗಳ ಸಂಖ್ಯೆಯೂ ಹೆಚ್ಚಳವಾಗಿದೆ. ಆ ಮೂಲಕ ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡುವವರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಿದೆ.

ವೈದ್ಯಕೀಯ ಶಿಕ್ಷಣ ವ್ಯಾಸಂಗ ಪೂರ್ಣಗೊಳಿಸಿದ ನಂತರ ಗ್ರಾಮೀಣ ಸೇವೆ ಕಡ್ಡಾಯ ಮಾಡಿರುವುದರಿಂದ ರಾಜ್ಯದಲ್ಲಿ ವೈದ್ಯರ ಕೊರತೆಯೂ ನಿವಾರಣೆ ಆಗುತ್ತಿದೆ. ವರ್ಷಕ್ಕೆ ಸರಾಸರಿ 4 ಸಾವಿರ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣ ಪೂರ್ಣಗೊಳಿಸುತ್ತಿದ್ದಾರೆ. ಇವರು ಗ್ರಾಮೀಣ ಭಾಗದ ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಇದರಿಂದ ವೈದ್ಯಕೀಯ ಕ್ಷೇತ್ರದಲ್ಲಿ ಅಷ್ಟೇ ಅಲ್ಲ ಆರೋಗ್ಯ ಕ್ಷೇತ್ರದಲ್ಲಿಯೂ ಕ್ರಾಂತಿಕಾರಕ ಸುಧಾರಣೆಗಳು ಆಗಿವೆ.

ಜಾಗತಿಕ ಗುಣಮಟ್ಟದ ಆಂಬುಲೆನ್ಸ್ ಸೇವೆ

‘108’ ಆಂಬುಲೆನ್ಸ್ ಸೇವೆಯನ್ನು ಮತ್ತಷ್ಟು ಗುಣಮಟ್ಟದಲ್ಲಿ ನೀಡಲು ಸರ್ಕಾರ ಮುಂದಾಗಿದೆ. ಜಾಗತಿಕ ಗುಣಮಟ್ಟದ ಆಂಬುಲೆನ್ಸ್ ಸೇವೆ ದೊರೆಯಬೇಕು ಎನ್ನುವುದು ಸರ್ಕಾರದ ಆಸೆ. ಇದಕ್ಕೆ ಪೂರಕವಾಗಿ ಈಗಾಗಲೇ ಟೆಂಡರ್‌ಗಳಾಗಿವೆ. ಸರ್ಕಾರ ಮತ್ತು ಸಚಿವ ಡಾ.ಕೆ.ಸುಧಾಕರ್ ಅವರ ಆಸಕ್ತಿಯ ಫಲವಾಗಿ ‘108’ ಆಂಬುಲೆನ್ಸ್ ಸೇವೆಯಲ್ಲಿ ಕೆಲವೇ ದಿನಗಳಲ್ಲಿ ಮಹತ್ವದ ಬದಲಾವಣೆಗಳು ಆಗುತ್ತಿವೆ.

‘108’ಗೆ ಕರೆ ಮಾಡಿದ ತಕ್ಷಣ ಇಂತಿಷ್ಟು ಸಮಯಕ್ಕೆ ಆಂಬುಲೆನ್ಸ್ ಸ್ಥಳದಲ್ಲಿ ಇರಬೇಕು. ರೋಗಿಗೆ ಆಂಬುಲೆನ್ಸ್‌ನಲ್ಲಿಯೇ ಪ್ರಾಥಮಿಕ ಚಿಕಿತ್ಸೆ ನೀಡಲು ಸಿಬ್ಬಂದಿ ಇರಬೇಕು. ನಂತರ ಈ ಸಿಬ್ಬಂದಿ ಟೆಲಿಕಾನ್ಫರೆನ್ಸ್ ಮೂಲಕ ನುರಿತ ವೈದ್ಯರ ಜತೆ ಮಾತುಕತೆ ನಡೆಸಿ ರೋಗಿಯ ಸ್ಥಿತಿಗತಿಯ ಬಗ್ಗೆ ಮಾಹಿತಿ ನೀಡುವರು. ರೋಗಿ ಆರೋಗ್ಯ ಸ್ಥಿತಿ ಹೇಗಿದೆ, ಅವರಿಗೆ ಯಾವ ರೀತಿಯ ಆರೋಗ್ಯ ಚಿಕಿತ್ಸೆ ಅಗತ್ಯ ಎಂದು ಮನಗಂಡು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗುತ್ತದೆ. ರೋಗಿ ದಾಖಲಾಗುವ ಆಸ್ಪತ್ರೆಗೆ ಮುಂಚಿತವಾಗಿಯೇ ಸುದ್ದಿ ಮುಟ್ಟಿಸಿ ಅಲ್ಲಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲು ತಿಳಿಸಲಾಗುತ್ತದೆ. ಹೀಗೆ ಇಷ್ಟೆಲ್ಲವೂ ಕ್ಷಣ ಮಾತ್ರದಲ್ಲಿ ಪೂರ್ಣಗೊಳ್ಳಬೇಕು. ಹೀಗೆ ಆಂಬುಲೆನ್ಸ್ ಸೇವೆಯ ಗುಣಮಟ್ಟವನ್ನು ಉತ್ತಮಗೊಳಿಸುವ ದಿಕ್ಕಿನಲ್ಲಿ ಹೆಜ್ಜೆ ಇಡಲಾಗಿದೆ.

ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಹೆಜ್ಜೆ ಗುರುತು

ರಾಜ್ಯದ ಜನರಿಗೆ ಕೈಗೆಟಕುವ ರೀತಿಯಲ್ಲಿ ಆರೋಗ್ಯ ಸೌಲಭ್ಯ ನೀಡುವ ಉದ್ದೇಶದಿಂದ ರಾಜ್ಯ ಬಿಜೆಪಿ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ಅವರು ಆರೋಗ್ಯ ಕ್ಷೇತ್ರದಲ್ಲಿ ಮಹತ್ತರ ಸುಧಾರಣೆಗಳನ್ನು ಕೈಗೊಂಡಿದ್ದಾರೆ.

ಕೋವಿಡ್‌ಗೂ ಮುನ್ನ ಕೇವಲ ಐದು ಸಾವಿರ ವೈದ್ಯಕೀಯ ಆಮ್ಲಜನಕ ಸಂಪರ್ಕ ಹೊಂದಿದ್ದ ಹಾಸಿಗೆಗಳಿದ್ದವು. ಈಗ ಮೂವತ್ತು ಸಾವಿರಕ್ಕೂ ಹೆಚ್ಚು ವೈದ್ಯಕೀಯ ಆಮ್ಲಜನಕ ಸಂಪರ್ಕ ಹೊಂದಿದ್ದ ಹಾಸಿಗೆಗಳಿವೆ. ಜಿಲ್ಲಾ, ತಾಲ್ಲೂಕು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೂ ಇಂತಹ ವ್ಯವಸ್ಥೆ ಕಲ್ಪಿಸಲಾಗಿದೆ.

ಮಹಿಳೆಯರಿಗಾಗಿ ‘ಆಯುಷ್ಮತಿ ಕ್ಲಿನಿಕ್’

ಮಹಿಳೆಯರ ಆರೋಗ್ಯ ಸುಧಾರಣೆಗಾಗಿ ರಾಜ್ಯದಲ್ಲಿ ಪ್ರಥಮ ಬಾರಿಗೆ ‘ಆಯುಷ್ಮತಿ ಕ್ಲಿನಿಕ್’ ತೆರೆಯಲಾಗಿದೆ. ರಾಜ್ಯಾದಾದ್ಯಂತ ಆಯ್ದ 129 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಲ್ಲಾ ವಯಸ್ಸಿನ ಹೆಣ್ಣು ಮಕ್ಕಳಿಗೆ, ಮಹಿಳೆಯರಿಗೆ ಆರೋಗ್ಯ ಸೇವೆ ಒದಗಿಸಲಾಗುತ್ತದೆ. ಈ ಕೇಂದ್ರಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿ ಮಹಿಳೆಯರೇ ಆಗಿರುತ್ತಾರೆ. ಸ್ತನ ಕ್ಯಾನ್ಸರ್, ಗರ್ಭಕಂಠ ಕ್ಯಾನ್ಸರ್ ಸೇರಿದಂತೆ ಹಲವು ಕಾಯಿಲೆಗಳಿಗೆ ಆಪ್ತ ಸಮಾಲೋಚನೆ ನೀಡಲಾಗುತ್ತದೆ.

ಈ ಕ್ಲಿನಿಕ್‌ನಲ್ಲಿ ಉಚಿತವಾಗಿ ತಜ್ಞ ವೈದ್ಯರ ಸೇವೆ, ಆಪ್ತ ಸಮಾಲೋಚನೆ, ಪ್ರಯೋಗಾಲಯ ಪರೀಕ್ಷೆ, ಔಷಧ ಜತೆಗೆ ಕ್ಷೇಮ ಚಟುವಟಿಕೆಗಳಾದ ಯೋಗ, ಧ್ಯಾನ ಮತ್ತು ರೆಫರಲ್ ಸೇವೆಗಳು ಲಭ್ಯ ಇದೆ.

ನಗರ ಪ್ರದೇಶದ ಬಡವರಿಗೆ ‘ನಮ್ಮ ಕ್ಲಿನಿಕ್’

ನಗರ ಪ್ರದೇಶಗಳ ಬಡವರಿಗೆ ಪ್ರಾಥಮಿಕ ಹಂತದ ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಲು 438 ‘ನಮ್ಮ ಕ್ಲಿನಿಕ್’ಗಳನ್ನು ಆರಂಭಿಸಲಾಗಿದೆ. ಈಗ ಮೂರನೇ ಹಂತದ ‘ನಮ್ಮ ಕ್ಲಿನಿಕ್’ಗಳಿಗೆ ಚಾಲನೆ ನೀಡಲಾಗುತ್ತದೆ. ಇದರಲ್ಲಿ 12 ಬಗೆಯ ಆರೋಗ್ಯ ಸೇವೆಗಳ ಪ್ಯಾಕೇಜ್, ಪ್ರಯೋಗಾಲಯ ಸೌಲಭ್ಯ, ಆರೋಗ್ಯ ತಪಾಸಣೆ, ಉಚಿತ ಔಷಧ, ಟೆಲಿ ಸಮಾಲೋಚನೆ, ರೆಫರಲ್ ಸೇವೆಗಳು, ಕ್ಷೇಮ ಚಟುವಟಿಕೆಗಳು ಒಳಗೊಂಡಿದೆ.

ನಗರ ಪ್ರದೇಶದಲ್ಲಿ ವಾಸಿಸುವ ಬಡ, ದುರ್ಬಲ ವರ್ಗ, ಕೊಳೆಗೇರಿ ಮತ್ತು ವಲಸೆ ಬರುವ ಜನರಿಗೆ ಪ್ರತಿ 15 ಸಾವಿರದಿಂದ 20 ಸಾವಿರ ಜನಸಂಖ್ಯೆಗೆ ಒಂದರಂತೆ ‘ನಮ್ಮ ಕ್ಲಿನಿಕ್’ ಕಾರ್ಯನಿರ್ವಹಿಸಲಿದೆ. ಗುಣಮಟ್ಟದ ಮತ್ತು ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳು, ರೆಫರಲ್ ಸೇವೆಗಳ ಮೂಲಕ ದ್ವಿತೀಯ ಮತ್ತು ತೃತೀಯ ಹಂತದ ಆಸ್ಪತ್ರೆಗಳಿಗೆ ಸಂಪರ್ಕ ಕಲ್ಪಿಸುವುದು ಹಾಗೂ ಆರೋಗ್ಯ ಸೇವೆಗೆ ತಗಲುವ ವೆಚ್ಚ ಕಡಿಮೆಗೊಳಿಸಲು ಸಹಕಾರಿಯಾಗಲಿದೆ.

ಶ್ರವಣದೋಷಮುಕ್ತ ಕರ್ನಾಟಕ

ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸಾ ಯೋಜನೆಯಲ್ಲಿ ರಾಜ್ಯದ ಆರು ವರ್ಷದೊಳಗಿನ ಎರಡು ಕಿವಿಗಳ ಗಂಭೀರ ಶ್ರವಣದೋಷವುಳ್ಳ 500 ಹುಟ್ಟು ಕಿವುಡು ಮಕ್ಕಳಿಗೆ ₹ 6.27 ಲಕ್ಷದ ಶಸ್ತ್ರಚಿಕಿತ್ಸಾ ಸೇವೆಯನ್ನು ಉಚಿತವಾಗಿ ನೀಡಲಾಗುವುದು.

ತಜ್ಞ ವೈದ್ಯರು ಶ್ರವಣದೋಷವುಳ್ಳ ಮಕ್ಕಳ ಆರೋಗ್ಯ ತಪಾಸಣೆ ನಡೆಸುವರು. ಶ್ರವಣ ಸಾಧನ, ಶಸ್ತ್ರಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆ ನಂತರದ ಆಡಿಟರಿ ವರ್ಬಲ್ ಥೆರಪಿ ಸೇವೆಯನ್ನು ನೋಂದಾಯಿತ ಭಾಷಾ ಚಿಕಿತ್ಸಾ ಕೇಂದ್ರಗಳಲ್ಲಿ ಉಚಿತವಾಗಿ ಒದಗಿಸಲಾಗುವುದು.

ರಾಜ್ಯದಲ್ಲಿ ಒಟ್ಟು 25 ಆಸ್ಪತ್ರೆಗಳನ್ನು ಕಾಕ್ಲಿಯರ್ ಇಂಪ್ಲಾಂಟ್ ಯೋಜನೆಯಡಿ ನೋಂದಾಯಿಸಲಾಗಿದೆ. 2022ರ ಫೆಬ್ರುವರಿಯಿಂದ 2023ರ ಮಾರ್ಚ್‌ವರೆಗೆ ಒಟ್ಟು 57 ಕಾಕ್ಲಿಯರ್ ಶಸ್ತ್ರಚಿಕಿತ್ಸೆಗಳು ನಡೆದಿವೆ.

STEMI ನಿರ್ವಹಣಾ ಯೋಜನೆ

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಮತ್ತು ಟ್ರೈಕಾಗ್ ಹೆಲ್ತ್ ಪ್ರೈವೇಟ್ ಲಿಮಿಟೆಡ್ ಸಹಭಾಗಿತ್ವದಲ್ಲಿ STEMI ನಿರ್ವಹಣಾ ಯೋಜನೆ ಆರಂಭಿಸಲಾಗಿದೆ. ತಾಲ್ಲೂಕು ಆಸ್ಪತ್ರೆಗಳಲ್ಲಿ ಹೃದಯ ಸಂಬಂಧಿ ಕಾಯಿಲೆಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. ಇದರಿಂದ ಪ್ರಯಾಣದ ವೆಚ್ಚ, ಸಮಯ ಹಾಗೂ ಮರಣ ಪ್ರಮಾಣವು ಕಡಿಮೆ ಆಗುತ್ತದೆ.

ಬೆಂಗಳೂರು, ಮೈಸೂರು, ಕಲಬುರಗಿಯಲ್ಲಿರುವ ಜಯದೇವ ಆಸ್ಪತ್ರೆ, ಆಯ್ದ ಹತ್ತು ಜಿಲ್ಲಾ ಆಸ್ಪತ್ರೆ ಮತ್ತು 35 ತಾಲ್ಲೂಕು ಆಸ್ಪತ್ರೆಗಳಲ್ಲಿ ಈ ಸೌಲಭ್ಯ ದೊರೆಯಲಿದೆ. ಅಂತರ ಸೌಲಭ್ಯ ವರ್ಗಾವಣೆಗಾಗಿ ಆಂಬುಲೆನ್ಸ್ ಸೇವೆ ಹಾಗೂ ಡಾಟಾ ಎಂಟ್ರಿ ಸಾಮರ್ಥ್ಯದೊಂದಿಗೆ ಮಲ್ಟಿಫಂಕ್ಷನಲ್ 12 ಲೀಡ್ ಇಸಿಜಿ ಇಂಟಿಗ್ರೇಟೆಡ್ ಮಲ್ಟಿ-ಪ್ಯಾರಾ ಮೀಟರ್ ಮಾನಿಟರಿಂಗ್ ಯೂನಿಟ್ ಅನ್ನು ಆಸ್ಪತ್ರೆ ಮತ್ತು ಅವಗಳನ್ನು ಸಂಪರ್ಕಿಸುವ ಆಂಬುಲೆನ್ಸ್‌ಗಳಲ್ಲಿ ಸ್ಥಾಪಿಸಲಾಗಿದೆ.

ಡಯಾಲಿಸಿಸ್ ಸೇವೆ

ಪ್ರಧಾನ ಮಂತ್ರಿ ರಾಷ್ಟ್ರೀಯ ಡಯಾಲಿಸಿಸ್ ಪ್ರೋಗ್ರಾಂ (ಪಿಎಂಎನ್‌ಡಿಪಿ) ಕೈಗೆಟುಕುವ ರೀತಿಯಲ್ಲಿ ಡಯಾಲಿಸಿಸ್ ಸೇವೆಗಳನ್ನು ಒದಗಿಸುವ ಮೂಲಕ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳನ್ನು ಬಲಪಡಿಸಲಾಗುತ್ತಿದೆ. ಡಯಾಲಿಸಿಸ್ ಕಾರ್ಯಕ್ರಮವನ್ನು ರಾಜ್ಯದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಕೈಗೊಳ್ಳಲಾಗುತ್ತದೆ.

ಡಯಾಲಿಸಿಸ್ ಚಿಕಿತ್ಸಾ ಸೇವೆಯನ್ನು ಮಾಸಿಕ 60,000 ನೀಡುತ್ತಿದ್ದು, ಈಗ ಒಂದು ಲಕ್ಷಕ್ಕೆ ಹೆಚ್ಚಿಸಲಾಗಿದೆ. ಡಯಾಲಿಸಿಸ್ ಕೇಂದ್ರಗಳು ಮತ್ತು ಯಂತ್ರಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ.



ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಷಿಪ್ ಗೆದ್ದು ಐತಿಹಾಸಿಕ ಸಾಧನೆ

ನೀತು, ಸ್ವೀಟಿ ಚಿನ್ನದ ಪಂಚ್

ನವದೆಹಲಿ (ಪಿಟಿಐ): ಕೆ.ಡಿ.ಜಾಧವ್ ಒಳಾಂಗಣ ಕ್ರೀಡಾಂಗಣದ ಬಾಕ್ಸಿಂಗ್ ರಿಂಗ್‌ನಲ್ಲಿ ಪ್ರಬಲ ಪಂಚ್‌ಗಳ ಮೂಲಕ ಎದುರಾಳಿಗಳನ್ನು ನಿಬ್ಬೆರಗಾಗಿಸಿದ ಭಾರತದ ಸ್ವೀಟಿ ಬೂರಾ ಮತ್ತು ನೀತು ಗಂಗಾಸ್ ಅವರು ಚಿನ್ನ ಗೆದ್ದು ಸಂಭ್ರಮಿಸಿದರು.

ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ನಡೆದ ಫೈನಲ್‌ನಲ್ಲಿ ಸ್ಪರ್ಧಿಸಿದ ಭಾರತದ ಇಬ್ಬರೂ ಗೆಲುವಿನ ನಗು ಬೀರಿದರು.

ಲೈಟ್ ಹೆವಿವೇಟ್ (81 ಕೆ.ಜಿ.) ವಿಭಾಗದಲ್ಲಿ ಸ್ಪರ್ಧಿಸಿದ ಸ್ವೀಟಿ ಅವರು ಚೀನಾದ ವಾಂಗ್ ಲಿ ನಾ ವಿರುದ್ಧ ಗೆದ್ದರು. ನೀತು ಅವರು 48 ಕೆ.ಜಿ. ವಿಭಾಗದ ಫೈನಲ್‌ನಲ್ಲಿ 5–0 ರಲ್ಲಿ ಮಂಗೋಲಿಯದ ಲುತ್ಸಾಯಿಖಾನ್ ಅಲ್ಟಾನ್‌ಸೆತ್ಸೆಗ್ ಅವರನ್ನು ಮಣಿಸಿದರು.

ಸ್ವೀಟಿ ಅವರು ಚೀನಾದ ಸ್ಪರ್ಧಿಯಿಂದ ಪ್ರಬಲ ಪೈಪೋಟಿ ಎದುರಿಸಿದರು. ಮೊದಲ ಸುತ್ತಿನಲ್ಲಿ ಅವರಿಗೆ ನಿರೀಕ್ಷಿಸಿದಂತೆ ಪಂಚ್ ನೀಡಲು ಆಗಲಿಲ್ಲ. ಆದರೆ ಮೊದಲ ಎರಡು ಸುತ್ತುಗಳನ್ನು 3–2 ರಲ್ಲಿ ಗೆದ್ದುಕೊಂಡರು. ಮೂರನೇ ಸುತ್ತಿನಲ್ಲಿ ಆಕ್ರಮಣ ಹಾಗೂ ರಕ್ಷಣೆಯನ್ನು ಮೈಗೂಡಿಸಿಕೊಂಡು 4–1 ರಲ್ಲಿ ಮೇಲುಗೈ ಪಡೆದರು.

‘ವಿಶ್ವಚಾಂಪಿಯನ್ ಆಗಬೇಕೆಂಬ ಕನಸು ಈಡೇರಿಸಲು ಸಾಧ್ಯವಾಗಿರುವುದು ಅತಿಯಾಸ ಸಂತಸ ನೀಡಿದೆ. ಇಂದಿನ ಬೌಟ್‌ನಲ್ಲಿ ನನ್ನು ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯರೂಪಕ್ಕಿಳಿಸಿದೆ’ ಎಂದು ಸ್ವೀಟಿ ಪ್ರತಿಕ್ರಿಯಿಸಿದರು.

22 ವರ್ಷದ ನೀತು ಆರಂಭದಿಂದಲೇ ಆಕ್ರಮಣಕಾರಿ ಪ್ರದರ್ಶನ ನೀಡಿ ಎದುರಾಳಿಯ ಮೇಲೆ ಒತ್ತಡ ಹೇರಿದರು. ಮೊದಲ ಸುತ್ತಿನಲ್ಲಿ 5–0ರಲ್ಲಿ ಮುನ್ನಡೆ ಸಾಧಿಸಿದರು. ಎರಡನೇ ಸುತ್ತಿನಲ್ಲಿ ಲುತ್ಸಾಯಿಖಾನ್ ಮರುಹೋರಾಟ ನಡೆಸಲು ಪ್ರಯತ್ನಿಸಿದರು. ಆದರೂ ಏಕಾಗ್ರತೆ ಕಳೆದುಕೊಳ್ಳದ ಭಾರತದ ಬಾಕ್ಸರ್ 3–2ರಲ್ಲಿ ಎರಡನೇ ಸುತ್ತು ತಮ್ಮದಾಗಿಸಿಕೊಂಡರು.

ಕೊನೆಯ ಮೂರು ನಿಮಿಷಗಳಲ್ಲೂ ನೀತು ಅವರು ಪಾರಮ್ಯ ಮೆರೆದರು. ಎದುರಾಳಿಯ ಪಂಚ್‌ಗಳಿಂದ ತಪ್ಪಿಸಿಕೊಂಡರಲ್ಲದೆ, ಅವಕಾಶ ಸಿಕ್ಕಾಗ ಪ್ರಬಲ ಪಂಚ್‌ಗಳನ್ನು ನೀಡಿ ಪಾಯಿಂಟ್ ಗಿಟ್ಟಿಸಿಕೊಂಡರು.

ಈ ಚಾಂಪಿಯನ್‌ಷಿಪ್‌ನ ಆರಂಭದಿಂದಲೇ ಉತ್ತಮ ಪ್ರದರ್ಶನ ನೀಡಿದ್ದ ನೀತು, ಮೊದಲ ಮೂರು ಬೌಟ್‌ಗಳನ್ನು ಆರ್‌ಎಸ್‌ಸಿ ಆಧಾರದಲ್ಲಿ ಗೆದ್ದಿದ್ದರು.

ನೀತು ಮತ್ತು ಸ್ವೀಟಿ ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ಭಾರತದ ಆರನೇ ಹಾಗೂ ಏಳನೇ ಬಾಕ್ಸರ್ ಎನಿಸಿಕೊಂಡರು. ಈ ಹಿಂದೆ ಭಾರತದ ಐವರು ಮಹಿಳಾ ಬಾಕ್ಸರ್‌ಗಳು ವಿಶ್ವ ಚಾಂಪಿಯನ್ ಆಗಿದ್ದರು.

ಮೇರಿ ಕೋಮ್ (2002, 2005, 2006, 2008, 2010 ಮತ್ತು 2018) ಆರು ಸಲ ವಿಶ್ವಚಾಂಪಿಯನ್ ಆಗಿದ್ದರೆ, ಸರಿತಾ ದೇವಿ (2006), ಆರ್.ಎಲ್. ಜೆನ್ನಿ (2006), ಕೆ.ಸಿ.ಲೇಖಾ (2006) ಮತ್ತು ನಿಖತ್ ಜರೀನ್ (2022) ಅವರು ತಲಾ ಒಮ್ಮೆ ಚಿನ್ನ ಜಯಿಸಿದ್ದಾರೆ.





ಗೆಲುವಿನ ಸಂಭ್ರಮದಲ್ಲಿ ಸ್ವೀಟಿ ಬೂರಾ (ಎಡ) ಮತ್ತು ನೀತು ಗಂಗಾಸ್ –ಪಿಟಿಐ ಚಿತ್ರಗಳು

ಲವ್ಲಿನಾ, ನಿಖತ್ ಇಂದು ಕಣಕ್ಕೆ

ಭಾರತದ ಲವ್ಲಿನಾ ಬೊರ್ಗೊಹೈನ್ ಮತ್ತು ನಿಖತ್ ಜರೀನ್ ಅವರು ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಕಣಕ್ಕಿಳಿಯಲಿದ್ದಾರೆ. 75 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿರುವ ಲವ್ಲಿನಾ ಅವರು ಆಸ್ಟ್ರೇಲಿಯಾದ ಕೈಟ್ಲಿನ್ ಪಾರ್ಕರ್ ವಿರುದ್ಧ ಪೈಪೋಟಿ ನಡೆಸುವರು. ನಿಖತ್ ಅವರು 52 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ವಿಯೆಟ್ನಾಂನ ಗುಯೆನ್ ಥಿ ಟಾಮ್ ಅವರನ್ನು ಎದುರಿಸುವರು.

ಪ್ರಶಸ್ತಿಗೆ ಮುಂಬೈ- ಡೆಲ್ಲಿ ಸೆಣಸು

ಡಬ್ಲ್ಯುಪಿಎಲ್ ಫೈನಲ್ ಇಂದು; ಕೌರ್–ಮೆಗ್ ಪೈಪೋಟಿ

ಮುಂಬೈ (ಪಿಟಿಐ): ಭಾರತದ ಮಹಿಳಾ ಕ್ರಿಕೆಟ್‌ನಲ್ಲಿ ಹೊಸ ಶಕೆ ಹುಟ್ಟುಹಾಕಿರುವ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟಿ20 ಟೂರ್ನಿಯ ಚೊಚ್ಚಲ ಕಿರೀಟ ಯಾರ ಮುಡಿಗೇರಲಿದೆ ಎಂಬ ಕುತೂಹಲಕ್ಕೆ ಭಾನುವಾರ ತೆರೆಬೀಳಲಿದೆ.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಮುಂಬೈ ಇಂಡಿಯನ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ಎದುರಾಗಲಿದ್ದು, ಜಿದ್ದಾಜಿದ್ದಿನ ಸೆಣಸಾಟ ನಿರೀಕ್ಷಿಸಲಾಗಿದೆ.

ಮೆಗ್ ಲ್ಯಾನಿಂಗ್ ನೇತೃತ್ವದ ಡೆಲ್ಲಿ ತಂಡ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದು ನೇರವಾಗಿ ಫೈನಲ್ ಪ್ರವೇಶಿಸಿದ್ದರೆ, ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಮುಂಬೈ ಇಂಡಿಯನ್ಸ್ ತಂಡ ‘ಎಲಿಮಿನೇಟರ್’ನಲ್ಲಿ ಗೆದ್ದು ಪ್ರಶಸ್ತಿ ಸುತ್ತು ತಲುಪಿದೆ. ಶುಕ್ರವಾರ ನಡೆದಿದ್ದ ‘ಎಲಿಮಿನೇಟರ್’ನಲ್ಲಿ ಮುಂಬೈ, 72 ರನ್‌ಗಳಿಂದ ಯುಪಿ ವಾರಿಯರ್ಸ್ ವಿರುದ್ಧ ಗೆದ್ದಿತ್ತು.

ಲೀಗ್ ಹಂತದಲ್ಲಿ ಇವೆರಡು ತಂಡಗಳು ಮೊದಲ ಬಾರಿ ಎದುರಾಗಿದ್ದಾಗ ಮುಂಬೈ ಇಂಡಿಯನ್ಸ್ 9 ವಿಕೆಟ್‌ಗಳಿಂದ ಗೆದ್ದಿತ್ತು. ಆದರೆ ಎರಡನೇ ಬಾರಿ ಮುಖಾಮುಖಿಯಾದಾಗ ಡೆಲ್ಲಿ ತಂಡ ಅದೇ ಅಂತರದಿಂದ ಗೆದ್ದು ಸೇಡು ತೀರಿಸಿಕೊಂಡಿತ್ತು. ಇದೀಗ ಮೂರನೇ ಬಾರಿ ಪರಸ್ಪರ ಎದುರಾಗುತ್ತಿದ್ದು, ಗೆಲುವು ಯಾರ ಕೈಹಿಡಿಯಲಿದೆ ಎಂಬ ಕುತೂಹಲ ಗರಿಗೆದರಿದೆ.

ನಾಯಕಿ ಹರ್ಮನ್‌ಪ್ರೀತ್ ಅವರ ಕಳಪೆ ಫಾರ್ಮ್ ಮಾತ್ರ ಮುಂಬೈ ತಂಡದ ಚಿಂತೆಗೆ ಕಾರಣವಾಗಿದೆ. ಉಳಿದಂತೆ ಇತರ ಬ್ಯಾಟರ್‌ಗಳು ಮತ್ತು ಬೌಲರ್‌ಗಳು ತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ನಿಭಾಯಿಸಿದ್ದಾರೆ.

ನಥಾಲಿ ಸಿವರ್ ಬ್ರಂಟ್ ಅವರನ್ನು ಕಟ್ಟಿಹಾಕುವ ಸವಾಲು ಡೆಲ್ಲಿ ಕ್ಯಾಪಿಟಲ್ಸ್ ಮುಂದಿದೆ. 9 ಪಂದ್ಯಗಳಿಂದ ಒಟ್ಟು 272 ರನ್ ಕಲೆಹಾಕಿದ್ದಾರಲ್ಲದೆ, 10 ವಿಕೆಟ್‌ಗಳನ್ನೂ ಪಡೆದಿದ್ದಾರೆ. ಹೆಯಿಲಿ ಮ್ಯಾಥ್ಯೂಸ್ (258 ರನ್ ಮತ್ತು 13 ವಿಕೆಟ್) ಅವರ ಆಲ್‌ರೌಂಡ್ ಆಟವೂ ಮುಂಬೈ ತಂಡದ ಬಲ ಹೆಚ್ಚಿಸಿದೆ. ಬೌಲಿಂಗ್‌ನಲ್ಲಿ ಸೈಕಾ ಇಶಾಕ್ (15 ವಿಕೆಟ್), ಇಸಾಬೆಲ್ ವಾಂಗ್ (13 ವಿಕೆಟ್) ಮತ್ತು ಅಮೇಲಿ ಕೆರ್ (12 ವಿಕೆಟ್) ತಮ್ಮ ಸಾಮರ್ಥ್ಯ ತೋರಿದ್ದಾರೆ.

ಡೆಲ್ಲಿ ತಂಡ ಬ್ಯಾಟಿಂಗ್‌ನಲ್ಲಿ ಲ್ಯಾನಿಂಗ್ ಮತ್ತು ಶಫಾಲಿ ವರ್ಮಾ ಅವರನ್ನು ನೆಚ್ಚಿಕೊಂಡಿದೆ. ಲ್ಯಾನಿಂಗ್ ಒಟ್ಟು 310 ರನ್ ಕಲೆಹಾಕಿದ್ದು, ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಮೆರಿಜಾನೆ ಕಾಪ್ ಅವರ ಆಲ್‌ರೌಂಡ್ ಆಟ ಮತ್ತು ಅಲೀಸ್ ಕ್ಯಾಪ್ಸಿ ಅವರ ಅಬ್ಬರದ ಬ್ಯಾಟಿಂಗ್‌ನ ಬಲ ತಂಡಕ್ಕಿದೆ.



ಹರ್ಮನ್‌ಪ್ರೀತ್ ಕೌರ್



ಮೆಗ್ ಲ್ಯಾನಿಂಗ್

ತಂಡಗಳ ವಿವರ

ಡೆಲ್ಲಿ ಕ್ಯಾಪಿಟಲ್ಸ್: ಮೆಗ್ ಲ್ಯಾನಿಂಗ್ (ನಾಯಕಿ), ಜೆಮಿಮಾ ರಾಡ್ರಿಗಸ್, ಶಫಾಲಿ ವರ್ಮಾ, ಅಲೀಸ್ ಕ್ಯಾಪ್ಸಿ, ರಾಧಾ ಯಾದವ್, ಶಿಖಾ ಪಾಂಡೆ, ಮೆರಿಜಾನೆ ಕಾಪ್, ಟೈಟಸ್ ಸಾಧು, ಲಾರಾ ಹ್ಯಾರಿಸ್, ತಾರಾ ನೊರಿಸ್, ಜೆಸಿಯಾ ಅಖ್ತರ್, ಮಿನ್ನು ಮಣಿ, ತಾನಿಯಾ ಭಾಟಿಯಾ, ಪೂನಂ ಯಾದವ್, ಜೆಸ್ ಜೊನಾಸೆನ್, ಸ್ನೇಹಾ ದೀಪ್ತಿ, ಅರುಂಧತಿ ರೆಡ್ಡಿ, ಅಪರ್ಣಾ ಮೊಂಡಲ್

ಮುಂಬೈ ಇಂಡಿಯನ್ಸ್: ಹರ್ಮನ್‌ಪ್ರೀತ್ ಕೌರ್ (ನಾಯಕಿ), ನಥಾಲಿ ಸಿವರ್ ಬ್ರಂಟ್, ಅಮೇಲಿ ಕೆರ್, ಪೂಜಾ ವಸ್ತ್ರಕರ್, ಯಷ್ಟಿಕಾ ಭಾಟಿಯಾ, ಹೆಥರ್ ಗ್ರಹಾಂ, ಇಸಾಬೆಲ್ ವಾಂಗ್, ಅಮನ್‌ಜ್ಯೋತ್ ಕೌರ್, ಧಾರಾ ಗುಜ್ಜಾರ್, ಸೈಕಾ ಇಶಾಕ್, ಹೆಯಿಲಿ ಮ್ಯಾಥ್ಯೂಸ್, ಕ್ಲೋ ಟ್ರೈಯನ್, ಹುಮೇರಾ ಖಾಜಿ, ಕೋಮಲ್ ಜಂಜದ್, ಪ್ರಿಯಾಂಕಾ ಬಾಲಾ, ಸೋನಂ ಯಾದವ್, ನೀಲಂ ಬಿಷ್ಟ್, ಜಿಂತಮಣಿ ಕಲಿತಾ

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಪೋರ್ಟ್ಸ್ 18 ನೆಟ್‌ವರ್ಕ್

ಪೂರ್ಣ ಫಿಟ್ ಆಗಲು ಸಮಯ ಬೇಕು: ಮ್ಯಾಕ್ಸ್‌ವೆಲ್

ಬೆಂಗಳೂರು (ಪಿಟಿಐ): ಎಡಗಾಲಿಗೆ ಆಗಿದ್ದ ಗಾಯದಿಂದ ಗುಣಮುಖರಾಗಿದ್ದು, ಸಂಪೂರ್ಣ ಫಿಟ್ ಆಗಲು ಇನ್ನಷ್ಟು ತಿಂಗಳುಗಳು ಬೇಕಾಗಬಹುದು ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಪ್ರತಿನಿಧಿಸುವ ಆಸ್ಟ್ರೇಲಿಯಾ ಆಟಗಾರ ಗ್ಲೆನ್ ಮ್ಯಾಕ್ಸ್‌ವೆಲ್ ಹೇಳಿದ್ದಾರೆ. ಆರ್‌ಸಿಬಿಯ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಅವರು ಈ ವಿಷಯ ತಿಳಿಸಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಗೆ ಆಲ್‌ರೌಂಡರ್ ಮ್ಯಾಕ್ಸ್‌ವೆಲ್ ಸಜ್ಜಾಗುತ್ತಿದ್ದಾರೆ. ಕಳೆದ ವರ್ಷ ನವೆಂಬರ್‌ನಲ್ಲಿ, ಟಿ20 ವಿಶ್ವಕಪ್ ಟೂರ್ನಿ ಮುಗಿದ ಬಳಿಕ ಗೆಳೆಯನ ಹುಟ್ಟುಹಬ್ಬದ ಸಂಭ್ರಮದ ವೇಳೆ ಜಾರಿ ಬಿದ್ದು ಗಾಯಗೊಂಡಿದ್ದರು. ಆಗ ಅವರ ಎಡಗಾಲಿನ ಮೂಳೆ ಮುರಿದಿತ್ತು.

ಆರ್‌ಸಿಬಿ ಪೂರ್ಣಪ್ರಮಾಣದ ಅಭ್ಯಾಸ ಇಂದು: ಆರ್‌ಸಿಬಿ ತಂಡವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ಪೂರ್ಣಪ್ರಮಾಣದ ಅಭ್ಯಾಸದಲ್ಲಿ ತೊಡಗಲಿದೆ. ತಂಡದ ಟ್ವಿಟರ್ ಖಾತೆಯಲ್ಲಿ ಈ ವಿಷಯ ತಿಳಿಸಲಾಗಿದೆ.

ತಂಡದ ಹಾಲಿ ಮತ್ತು ಮಾಜಿ ಆಟಗಾರರ ಸಮ್ಮಿಲನ ಕಾರ್ಯಕ್ರಮವೂ ನಡೆಯಲಿದೆ. ಮಾಜಿ ಆಟಗಾರರಾದ ಎ.ಬಿ.ಡಿವಿಲಿಯರ್ಸ್ ಮತ್ತು ಕ್ರಿಸ್ ಗೇಲ್ ಅವರಿಗೆ ತಂಡದ ‘ಹಾಲ್ ಆಫ್ ಫೇಮ್’ ಗೌರವವನ್ನೂ ಈ ಸಂದರ್ಭದಲ್ಲಿ ನೀಡಲಾಗುತ್ತದೆ.

ಗಾಲ್ಫ್: ಅಗ್ರಸ್ಥಾನಕ್ಕೆ ಲೊರೆನ್ಜೊ ಸ್ಕಲೀಸ್

ಬೆಂಗಳೂರು: ಇಟಲಿಯ ಲೊರೆನ್ಜೊ ಸ್ಕಲೀಸ್ ಅವರು ಇಲ್ಲಿ ನಡೆಯುತ್ತಿರುವ ಡಂಕನ್ ಟೇಲರ್ ಬ್ಲ್ಯಾಕ್ ಬುಲ್ ಚಾಲೆಂಜ್ ಗಾಲ್ಫ್ ಟೂರ್ನಿಯಲ್ಲಿ ಮುನ್ನಡೆ ಸಾಧಿಸಿದ್ದಾರೆ.

ಕರ್ನಾಟಕ ಗಾಲ್ಫ್ ಸಂಸ್ಥೆ ಕೋರ್ಸ್‌ನಲ್ಲಿ ಶನಿವಾರ ಮೂರನೇ ಸುತ್ತಿನ ಸ್ಪರ್ಧೆಯನ್ನು ಅವರು 65 ಸ್ಟ್ರೋಕ್‌ಗಳಲ್ಲಿ ಕೊನೆಗೊಳಿಸಿದರು. ಈ ಮೂಲಕ ಒಟ್ಟು 201 ಸ್ಕೋರ್‌ಗಳೊಂದಿಗೆ ಅಗ್ರಸ್ಥಾನಕ್ಕೇರಿದರು. 27 ವರ್ಷದ ಲೊರೆನ್ಜೊ ಮೊದಲ 2 ಸುತ್ತುಗಳಲ್ಲಿ ತಲಾ 68 ಸ್ಕೋರ್ ಮಾಡಿದ್ದರು. ಭಾರತದ ಓಂಪ್ರಕಾಶ್ ಚೌಹಾಣ್ (203) ಮೂರನೇ ಸುತ್ತಿನಲ್ಲಿ ನಿಖರ ಪ್ರದರ್ಶನ ನೀಡಿ ಜಂಟಿ ಎರಡನೇ ಸ್ಥಾನಕ್ಕೇರಿದರು. ಅವರು 66 ಸ್ಟ್ರೋಕ್‌ಗಳನ್ನು ತೆಗೆದುಕೊಂಡರು. ಸ್ಪೇನ್‌ನ ವಿಕ್ಟರ್ ಪಾಸ್ತರ್, ಸ್ವೀಡನ್‌ನ ರಿಕಾರ್ಡ್ ಕಾರ್ಲ್‌ಬರ್ಗ್ ಮತ್ತು ವೇಲ್ಸ್‌ನ ಆಶ್ಲೆ ಚೆಸ್ಟರ್ಸ್ ಅವರೂ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ. ಭಾರತದ ಇನ್ನೊಬ್ಬ ಸ್ಪರ್ಧಿ ಅಮನ್ ರಾಜ್ ಜಂಟಿ 9ನೇ ಸ್ಥಾನದಲ್ಲಿದ್ದಾರೆ.

ಮೊದಲ ಎರಡು ಸುತ್ತುಗಳಲ್ಲೂ ಮುನ್ನಡೆ ಕಾಯ್ದುಕೊಂಡಿದ್ದ ಸ್ಪೇನ್‌ನ ಮ್ಯಾನುಯೆಲ್ ಎಲ್ವಿರಾ (207) ಜಂಟಿ 13ನೇ ಸ್ಥಾನಕ್ಕೆ ಕುಸಿತ ಕಂಡರು

ಶೂಟಿಂಗ್: ಮನುಗೆ ಕಂಚು

ಭೋಪಾಲ್ (ಪಿಟಿಐ): ಒಲಿಂಪಿಯನ್ ಶೂಟರ್ ಮನು ಭಾಕರ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡರು.

ಶನಿವಾರ ನಡೆದ ಮಹಿಳೆಯರ 25 ಮೀ. ಪಿಸ್ತೂಲ್ ವಿಭಾಗದಲ್ಲಿ ಅವರು ಈ ಸಾಧನೆ ಮಾಡಿದರು. ಇದರೊಂದಿಗೆ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಗೆದ್ದ ಪದಕಗಳ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ.

ಮನು ಅವರು ಶುಕ್ರವಾರ ನಡೆದಿದ್ದ ಪ್ರಿಸಿಷನ್ ಸುತ್ತಿನಲ್ಲಿ 290 ಸ್ಕೋರ್‌ಗಳನ್ನು ಗಳಿಸಿ ರ‍್ಯಾಪಿಡ್ ಸುತ್ತಿಗೆ ಅರ್ಹತೆ ಪಡೆದುಕೊಂಡಿದ್ದರು. ಶನಿವಾರ ನಡೆದ ರ‍್ಯಾಪಿಡ್ ಹಂತದ ಮೂರು ಸುತ್ತುಗಳಲ್ಲಿ ಕ್ರಮವಾಗಿ 98, 99 ಮತ್ತು 97 ಪಾಯಿಂಟ್ಸ್‌ಗಳೊಂದಿಗೆ ಒಟ್ಟು 294 ಸ್ಕೋರ್ ಗಳಿಸಿ ರ‍್ಯಾಂಕಿಂಗ್ ಸುತ್ತಿಗೆ ಪ್ರವೇಶ ಗಿಟ್ಟಿಸಿಕೊಂಡರು.

ರ‍್ಯಾಂಕಿಂಗ್ ಸುತ್ತಿನಲ್ಲಿ ಸರಾಸರಿ 14 ಪಾಯಿಂಟ್ಸ್ ಕಲೆಹಾಕಿ ಮೂರನೆಯವರಾಗಿ ಪದಕ ಸುತ್ತಿಗೆ ಅರ್ಹತೆ ಗಳಿಸಿದರು. ಕಣದಲ್ಲಿದ್ದ ಭಾರತದ ಇನ್ನೊಬ್ಬ ಶೂಟರ್ ಇಶಾ ಸಿಂಗ್ ಅವರು ರ‍್ಯಾಂಕಿಂಗ್ ಸುತ್ತಿನಲ್ಲಿ ಹೊರಬಿದ್ದರು.

ಪದಕ ಸುತ್ತಿನಲ್ಲಿ ಮನು ಅವರು ಜರ್ಮನಿಯ ಡೊರೀನ್ ವೆನೆಕ್ಯಾಂಪ್, ಚೀನಾದ ಜಿಯು ದು ಮತ್ತು ಯಕ್ಸುವಾನ್ ಕ್ಸಿಯೊಂಗ್ ಜತೆ ಪೈಪೋಟಿ ನಡೆಸಿದರು.

ಕ್ರಮವಾಗಿ 30 ಮತ್ತು 29ರ ಸರಾಸರಿಯಲ್ಲಿ ಪಾಯಿಂಟ್ಸ್ ಗಳಿಸಿದ ಡೊರೀನ್ ಹಾಗೂ ಜಿಯು ದು ಅವರು ಚಿನ್ನ ಹಾಗೂ ಬೆಳ್ಳಿ ತಮ್ಮದಾಗಿಸಿಕೊಂಡರು. ಎದುರಾಳಿಗಳಿಗೆ ಸರಿಸಾಟಿಯಾಗಿ ನಿಲ್ಲಲು ವಿಫಲರಾದ ಮನು ಮೂರನೇ ಸ್ಥಾನ ಗಳಿಸಿದರು. ಈ ಚಾಂಪಿಯನ್‌ಷಿಪ್‌ನಲ್ಲಿ ಮನು ಅವರಿಗೆ ದೊರೆತ ಮೊದಲ ಪದಕ ಇದು. ತಮ್ಮ ನೆಚ್ಚಿನ ಏರ್ ಪಿಸ್ತೂಲ್ ವಿಭಾಗದಲ್ಲಿ 16ನೇ ಸ್ಥಾನ ಪಡೆದು ನಿರಾಶೆ ಅನುಭವಿಸಿದ್ದರು.

ಚೀನಾ ಶೂಟರ್‌ಗಳ ಪ್ರಾಬಲ್ಯ ಮುಂದುವರಿದಿದ್ದು, ಆರು ಚಿನ್ನದ ಪದಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ.



ಮನು ಭಾಕರ್



ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ

ಸಾತ್ವಿಕ್–ಚಿರಾಗ್ ಫೈನಲ್‌ಗೆ

ಬಾಸೆಲ್, ಸ್ವಿಟ್ಜರ್ಲೆಂಡ್ (ಪಿಟಿಐ): ಜಯದ ಓಟ ಮುಂದುವರಿಸಿದ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಡಬಲ್ಸ್ ವಿಭಾಗದ ಫೈನಲ್ ತಲುಪಿದ್ದಾರೆ.

ಶನಿವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಭಾರತದ ಜೋಡಿ 21–19, 17–21, 21–17 ರಲ್ಲಿ ಮಲೇಷ್ಯಾದ ಆಂಗ್ ಯೆವ್ ಸಿನ್–ತಿಯೊ ಯಿ ಅವರನ್ನು ಸೋಲಿಸಿತು. ಈ ಪಂದ್ಯ ಒಂದು ಗಂಟೆ 9 ನಿಮಿಷ ನಡೆಯಿತು. ಎಂಟರ ಘಟ್ಟದ ಪಂದ್ಯದಲ್ಲಿ ಸಾತ್ವಿಕ್-ಚಿರಾಗ್ 15-21, 21-11, 21-14ರಿಂದ ಡೆನ್ಮಾರ್ಕ್‌ನ ಜೆಪ್ ಬೇ– ಲಾಸ್ಸೆ ಮಾಲ್‌ಹಿಡ್ ಅವರನ್ನು ಮಣಿಸಿದ್ದರು.

ವೇಟ್‌ಲಿಫ್ಟಿಂಗ್: ಶ್ರಬಣಿಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಬಂಗಾಳದ ಶ್ರಬಣಿ ದಾಸ್ ಅವರು ಖೇಲೊ ಇಂಡಿಯಾ ಮಹಿಳೆಯರ ರಾಷ್ಟ್ರೀಯ ರ‍್ಯಾಂಕಿಂಗ್ ವೇಟ್‌ಲಿಫ್ಟಿಂಗ್ ಟೂರ್ನಿಯಲ್ಲಿ ಎರಡು ಚಿನ್ನದ ಪದಕ ಜಯಿಸಿದರು.ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ 55 ಕೆಜಿ ವಿಭಾಗದ ಜೂನಿಯರ್ ಮತ್ತು ಸೀನಿಯರ್ ವಿಭಾಗದಲ್ಲಿ ಶನಿವಾರ ಅವರಿಗೆ ಪದಕಗಳು ಒಲಿದವು.

ಜೂನಿಯರ್ ಮತ್ತು ಸೀನಿಯರ್ ವಿಭಾಗಗಳಲ್ಲಿ ಶ್ರಬಣಿ ಒಟ್ಟು ಒಟ್ಟು 178 ಕೆಜಿ (ಸ್ನ್ಯಾಚ್ 76+ ಕ್ಲೀನ್ ಮತ್ತು ಜರ್ಕ್ 102) ಭಾರ ಎತ್ತಿದರು.

ಫಲಿತಾಂಶಗಳು: 59 ಕೆಜಿ: ಯೂತ್: ಸುಮಿತ್ರಾ ಮಲಿಕ್ (ಒಡಿಶಾ, ಒಟ್ಟು ಭಾರ: 131 ಕೆಜಿ: ಸ್ನ್ಯಾಚ್ 57+ ಕ್ಲೀನ್ ಮತ್ತು ಜರ್ಕ್ 74)–1, ಎಸ್. ಭಾನುಪ್ರಿಯಾ (ತಮಿಳುನಾಡು)–2, ಬಿದುಸ್ಮಿತಾ ಬೋಯಿ (ಒಡಿಶಾ)–3. ಜೂನಿಯರ್: ಸೋನಮ್ ಸಿಂಗ್ (ಉತ್ತರ ಪ್ರದೇಶ ಒಟ್ಟು ಭಾರ: 177 ಕೆಜಿ: 78+99)–1, ಟಿ.ಎಂ. ಕೀರ್ತನಾ (ತಮಿಳುನಾಡು)–2, ರಣಮಾಲೆ ಸಾಕ್ಷಿ ಮಹೇಶ್ (ಮಹಾರಾಷ್ಟ್ರ)–3. ಸೀನಿಯರ್: ಪೋಪಿ ಹಜಾರಿಕಾ (ರೈಲ್ವೆ, ಒಟ್ಟು ಭಾರ: 181: 80+101)–1, ಸೋನಮ್ ಸಿಂಗ್ (ಉತ್ತರ ಪ್ರದೇಶ)–2, ಟಿ.ಎಂ.ಕೀರ್ತನಾ (ತಮಿಳುನಾಡು)–3

55 ಕೆಜಿ: ಜೂನಿಯರ್: ಶ್ರಬಣಿ ದಾಸ್ (ಪಶ್ಚಿಮ ಬಂಗಾಳ, ಒಟ್ಟು ಭಾರ: 178 ಕೆಜಿ: 76+102)–1, ಬೋಣಿ ಮಾಂಗ್‌ಕಾ (ಅರುಣಾಚಲ ಪ್ರದೇಶ)–2, ಉಷಾ(ಹರಿಯಾಣ)–3. ಯೂತ್: ಖುಷಿ ಕುಮಾರಿ (ಬಿಹಾರ, ಒಟ್ಟು ಭಾರ: 154 ಕೆಜಿ: 71+83)–1, ಬಿ.ಚಂದ್ರಿಕಾ (ಆಂಧ್ರಪ್ರದೇಶ)–2, ಜ್ಯೋತಿ (ಹರಿಯಾಣ)–3. ಸೀನಿಯರ್: ಶ್ರಬಣಿ ದಾಸ್ (ಪಶ್ಚಿಮ ಬಂಗಾಳ, ಒಟ್ಟು ಭಾರ: 178 ಕೆಜಿ: 76+102)–1, ಅನನ್ಯಾ ಪಾಟೀಲ್ (ಮಹಾರಾಷ್ಟ್ರ)–2, ಬೋಣಿ ಮಾಂಗ್‌ಕಾ (ಅರುಣಾಚಲ ಪ್ರದೇಶ)–3

ಸಂಕ್ಷಿಪ್ತ ಸುದ್ದಿ

ಕೊಡವ ಕೌಟುಂಬಿಕ ಹಾಕಿ: ಚೆಕ್ಕೆರ ತಂಡಕ್ಕೆ ಜಯ

ಬೆಂಗಳೂರು:ನಾಪೋಕ್ಲು (ಕೊಡಗು): ಚೆಕ್ಕೆರ ತಂಡದವರು ಇಲ್ಲಿ ನಡೆಯುತ್ತಿರುವ ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಪಂದ್ಯದಲ್ಲಿ ಗೆಲುವು ಸಾಧಿಸಿದರು.

ಸಮೀಪದ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಕಲ್ಲಂಗಡ ತಂಡದವರನ್ನು 6-2 ಗೋಲುಗಳಿಂದ ಮಣಿಸಿದರು.

ಆತಿಥೇಯ ಅಪ್ಪಚೆಟ್ಟೋಳಂಡ ತಂಡದವರು 2–0ರಲ್ಲಿ ನಾಳಿಯಂಡ ತಂಡದವರನ್ನು ಸೋಲಿಸಿದರು. ನಂಬಡಮಂಡ ತಂಡದವರು 4-0ರಲ್ಲಿ ಬಾಚಮಂಡ ವಿರುದ್ಧ, ಮಣವಟ್ಟಿರ ತಂಡದವರು 3–0ರಿಂದ ಕುಂಚೆಟ್ಟಿರ ಎದುರು ಗೆದ್ದರೆ, ಕೋದಂಡ ತಂಡದವರು 5-4ರಲ್ಲಿ ಮಾಪಣಮಾಡ ತಂಡದ ವಿರುದ್ಧ ರೋಚಕ ಜಯ ಸಾಧಿಸಿದರು.

ನುಚ್ಚಿಮಣಿಯಂಡ 4-2 ಅಂತರದಿಂದ ಕೇಳಪಂಡ ವಿರುದ್ಧ, ಪುಲ್ಲಂಗಡ ತಂಡದವರು 4-0ರಲ್ಲಿ ಬೇಪಡಿಯಂಡ ವಿರುದ್ಧ, ನಾಪಂಡ ತಂಡದವರು 2-1ರಲ್ಲಿ ಮರುವಂಡ ವಿರುದ್ಧ, ಚೆಟ್ಟಿಯಾರಂಡ ತಂಡವು 3-0ರಿಂದ ಬಿದ್ದಂಡ ತಂಡದ ವಿರುದ್ಧ, ಪೊನ್ನೋಲತಂಡ ತಂಡವು 2-1ರಿಂದ ಪಟ್ರಪಂಡ ತಂಡದ ವಿರುದ್ಧ, ಚಂದುರ 3–0ರಲ್ಲಿ ತಾಪಂಡ ತಂಡದ ವಿರುದ್ಧ, ವಾಟೇರಿರ ತಂಡವು 3-1 ಅಂತರದಿಂದ ಕೋಳೆರ ತಂಡದ ಎದುರು ಗೆದ್ದವು.

ಏ. 15ರಿಂದ ಟೆನಿಸ್

ಬೆಂಗಳೂರು: ಬೌರಿಂಗ್ ಸಂಸ್ಥೆಯು ಏಪ್ರಿಲ್ 15 ಮತ್ತು 16ರಂದು ಅಂತರ ಕ್ಲಬ್ ಟೆನಿಸ್ ಟೂರ್ನಿಯನ್ನು ಆಯೋಜಿಸಲಿದೆ.

ಟೂರ್ನಿಯು ತಂಡ ಮತ್ತು ವೈಯಕ್ತಿಕ ವಿಭಾಗದಲ್ಲಿ ನಡೆಯಲಿದ್ದು, ಪ್ರತಿ ಕ್ಲಬ್‌ಗೆ ಹಲವು ತಂಡಗಳನ್ನು ಕಣಕ್ಕಿಳಿಸುವ ಅವಕಾಶವಿದೆ. ಪ್ರತಿ ತಂಡದಲ್ಲಿ ಎಂಟು ಆಟಗಾರರು ಆಡಬಹುದಾಗಿದೆ.

ವೈಯಕ್ತಿಕ ವಿಭಾಗದಲ್ಲಿ ಓಪನ್ ಸಿಂಗಲ್ಸ್ ಸ್ಪರ್ಧೆಗಳು ನಡೆಯಲಿವೆ. 35, 45 ಮತ್ತು 55 ವರ್ಷಕ್ಕಿಂತ ಮೇಲಿನವರು ಸ್ಪರ್ಧಿಸಬಹುದಾಗಿದೆ. ನೋಂದಣಿಗೆ ಏಪ್ರಿಲ್ 10 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂಖ್ಯೆ 9844041260/ 9343780945/ 9980018184 ಸಂಪರ್ಕಿಸಬಹುದು.


ನ್ಯೂಜಿಲೆಂಡ್ ತಂಡಕ್ಕೆ ಭರ್ಜರಿ ಗೆಲುವು

ಆಕ್ಲಂಡ್, ನ್ಯೂಜಿಲೆಂಡ್: ಹೆನ್ರಿ ಶಿಪ್ಲಿ (31ಕ್ಕೆ 5) ಅವರ ಪರಿಣಾಮಕಾರಿ ಬೌಲಿಂಗ್ ಮತ್ತು ಬ್ಯಾಟರ್‌ಗಳ ಸಂಘಟಿತ ಆಟದ ಬಲದಿಂದ ನ್ಯೂಜಿಲೆಂಡ್ ತಂಡವು ಮೊದಲ ಏಕದಿನ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಭರ್ಜರಿ ಜಯ ಗಳಿಸಿತು. ಇಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಆತಿಥೇಯ ತಂಡ 198 ರನ್‌ಗಳಿಂದ ಗೆದ್ದಿತು.

ಮೊದಲು ಬ್ಯಾಟ್ ಮಾಡಿದ ನ್ಯೂಜಿಲೆಂಡ್ 49.3 ಓವರ್‌ಗಳಲ್ಲಿ 274 ರನ್ ಗಳಿಸಿತು. ಗುರಿ ಬೆನ್ನತ್ತಿದ ಶ್ರೀಲಂಕಾ 19.5 ಓವರ್‌ಗಳಲ್ಲಿ ಕೇವಲ 76 ರನ್‌ಗಳಿಗೆ ಕುಸಿಯಿತು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 49.3 ಓವರ್‌ಗಳಲ್ಲಿ 274 (ಫಿನ್ ಅಲೆನ್ 51, ಡೆರಿಲ್ ಮಿಚೆಲ್ 47, ಗ್ಲೆನ್ ಫಿಲಿಪ್ಸ್ 39, ರಚಿನ್ ರವೀಂದ್ರ 49; ಕಸುನ್ ರಜಿತ 38ಕ್ಕೆ 2, ಲಹಿರು ಕುಮಾರ 46ಕ್ಕೆ 2 ಚಮಿಕಾ ಕರುಣರತ್ನೆ 45ಕ್ಕೆ 4). ಶ್ರೀಲಂಕಾ: 19.5 ಓವರ್‌ಗಳಲ್ಲಿ 76 (ಎಂಜೆಲೊ ಮ್ಯಾಥ್ಯೂಸ್ 18, ಚಮಿಕಾ ಕರುಣರತ್ನೆ 11; ಹೆನ್ರಿ ಶಿಪ್ಲಿ 31ಕ್ಕೆ 5, ಡೆರಿಲ್ ಮಿಚೆಲ್ 12ಕ್ಕೆ 2, ಬ್ಲೇರ್ ಟಿಕ್ನರ್ 20ಕ್ಕೆ 2). ಫಲಿತಾಂಶ: ನ್ಯೂಜಿಲೆಂಡ್‌ಗೆ 198 ರನ್ ಗೆಲುವು

ಪ್ರಜಾವಾಣಿ ಭಾನುವಾರದ ಪುರವಣಿ
ಭಾನುವಾರ, 26 ಮಾರ್ಚ್ 2023



ಪ್ರತಿಯೊಂದು ಅಭಿವ್ಯಕ್ತಿಯೂ ಕಾವ್ಯವೇ... 2



ಆನು ಬೆರಗಾದೆ 4

ಹೋಮಿಯೋಪಥಿ ಹುಸಿನಂಬಿಕೆಗಳಿಗೆ ಹೊಸ ಪೆಟ್ಟು



ನಾಗೇಶ ಹೆಗಡೆ

ಒಂದು ಕತೆ ಹೀಗಿದೆ: ಗೂರಲು, ಆಸ್ತಮಾ ಕಾಯಿಲೆಯಿದ್ದ ಒಬ್ಬಾತ ನಸುಗತ್ತಲು ತುಂಬಿದ್ದ ಕಟ್ಟೆಯ ಮೇಲೆ ಕೂತು ಚಾ ಹೀರುತ್ತಿದ್ದ. ತುಟಿಗೆ ಅದೇನೊ ಗಟ್ಟಿವಸ್ತು ಅಡ್ಡ ಬಂದಂತಾಯಿತು. ಏನೆಂದು ನೋಡಿದರೆ ಕಪ್ಪುಬಣ್ಣದ ಜಿರಳೆ! ವ್ಯಾಕ್ ಎಂದು ಉಗುಳಿ, ಕೂಗಾಡಿ, ಲೋಟ ಬಿಸಾಕಿ ಹೋದ. ಆ ರಾತ್ರಿ ಆತನಿಗೆ ಉಬ್ಬಸ ಬರಲೇ ಇಲ್ಲ. ಹಾಯಾಗಿ ನಿದ್ರಿಸಿದ.



ಇಂದು ನಮ್ಮಲ್ಲಿ ಅದೆಷ್ಟೊ ಆಸ್ತಮಾ ಪೀಡಿತರು ಅದೇ ಜಿರಳೆಯ ಕಷಾಯವನ್ನು ಕುಡಿಯುತ್ತಿದ್ದಾರೆ. ಬ್ಲಾಟ್ಟಾ ಓರಿಯಂಟಾಲಿಸ್ ಹೆಸರಿನ ಅದು ಅತ್ಯಂತ ಜನಪ್ರಿಯ ಹೋಮಿಯೋಪಥಿ ಔಷಧ. ಆನ್ಲೈನ್‌ನಲ್ಲೂ ಸಿಗುತ್ತದೆ.

*****

'ವಿಷವೇ ವಿಷಕ್ಕೆ ಔಷಧ' ಎಂಬ ನಂಬುಗೆಯ ಮೇಲೆ ಹೋಮಿಯೋಪಥಿ ಚಿಕಿತ್ಸೆ ಪ್ರಪಂಚದ ಅನೇಕ ದೇಶಗಳಲ್ಲಿ ವ್ಯಾಪಿಸಿದೆ. ಜರ್ಮನಿಯ ಸ್ಯಾಮ್ಯುಯೆಲ್ ಹಾಃನೆಮನ್ ಎಂಬಾತ ಇದರ ಜನಕ. ಮೆಡಿಕಲ್ ಡಿಗ್ರಿ ಪಡೆದಿದ್ದರೂ ಅವನೇನೂ ವೈದ್ಯನಾಗಲಿಲ್ಲ; ಔಷಧವಿಜ್ಞಾನವನ್ನೂ ಓದಿಕೊಂಡಿಲ್ಲ. ಭಾಷಾತಜ್ಞನೆನಿಸಿ, ವಿಜ್ಞಾನ ಪುಸ್ತಕಗಳನ್ನು ತರ್ಜುಮೆ ಮಾಡುತ್ತ, ಹನ್ನೊಂದು ಮಕ್ಕಳ ಸಂಸಾರದೊಂದಿಗೆ ಊರೂರು ಸುತ್ತುತ್ತ ಪ್ಯಾರಿಸ್ಸಿಗೆ ಬಂದು ನೆಲೆಸಿದ.

ಸಿಂಕೋನಾ ಮರದ ತೊಗಟೆಯ ಕಷಾಯ ಕುಡಿದರೆ ಮಲೇರಿಯಾ ರೋಗ ವಾಸಿಯಾಗುತ್ತದೆ ಎಂದು ವಾಕ್ಯವನ್ನು ತರ್ಜುಮೆ ಮಾಡುತ್ತಿದ್ದಾಗ ತಾನೇ ಆ ಕಷಾಯವನ್ನು ಕುಡಿದು ನೋಡಿದ. ಸೊಳ್ಳೆಯಿಂದ ಕಚ್ಚಿಸಿಕೊಳ್ಳದಿದ್ದರೂ ಮಲೇರಿಯಾ ಲಕ್ಷಣವನ್ನೇ ಹೋಲುವ ಜ್ವರ ಅವನಿಗೆ ಬಂತು. ಜ್ವರ ಬರಿಸುವ ಈ ದ್ರವವೇ ಜ್ವರವನ್ನೂ ನಿವಾರಿಸುತ್ತದೆ ಎಂದು 1800ರಲ್ಲಿ ತಾನೇ ನಿರ್ಧರಿಸಿದ. ಅಂದಿನಿಂದ ನಾನಾ ಬಗೆಯ ವಿಷವಸ್ತುಗಳನ್ನೇ ತೀರ ದುರ್ಬಲಗೊಳಿಸಿ, ನಂಜಿನ ಅಂಶವೆಲ್ಲ ನಿರ್ಗುಣವಾಗುವಷ್ಟರ ಮಟ್ಟಿಗೆ ಕಲಕಿ ಅದನ್ನೇ ಔಷಧವೆಂದುಕೊಡುತ್ತ ಹೋದ. ಪ್ರಸಿದ್ಧಿ ಪಡೆದ. ಅವನ ಮೊಮ್ಮಗ ಇಂಗ್ಲೆಂಡಿಗೆ ಹೋಗಿ ಹೋಮಿಯೋಪಥಿ ವೈದ್ಯನಾಗಿ, ಕೀರ್ತಿಶೇಷನಾದ. ಇಂದು ಜರ್ಮನಿಯಲ್ಲಿ ಮತ್ತು ಫ್ರಾನ್ಸ್‌ನಲ್ಲಿ ಹೋಮಿಯೋಪಥಿಗೆ ಸರ್ಕಾರಿ ಮಾನ್ಯತೆ ಇಲ್ಲ. ಆದರೆ ಇಂಗ್ಲೆಂಡಿನಲ್ಲಿ ಅದಕ್ಕೆ ಜನಮಾನ್ಯತೆ ಇದೆ. ಸರ್ಕಾರಿ ಮಾನ್ಯತೆ ಇಲ್ಲ. ರಾಜಮನೆತನದ ಬೆಂಬಲ ಅದಕ್ಕಿದೆ. ಜಗತ್ತಿನೆಲ್ಲೆಡೆ ಹೋಮಿಯೋಪಥಿಗೆ ಖ್ಯಾತಿ-ಕುಖ್ಯಾತಿ, ಬೆಂಬಲ-ವಿರೋಧ ಒಟ್ಟೊಟ್ಟಿಗೇ ಚಾಲ್ತಿಯಲ್ಲಿವೆ. ಅಲೊಪಥಿ ಡಾಕ್ಟರ್‌ಗಳು 'ಹೋಮಿಯೋಪಥಿ ಭಾರೀ ಮೋಸ' ಎನ್ನುತ್ತಾರೆ. ಜನಸಾಮಾನ್ಯರು ಅದರತ್ತ ಮುಗಿಬೀಳುತ್ತಾರೆ. 'ರೋಗಿಯ ನಂಬಿಕೆಯನ್ನೇ ಆಧರಿಸಿದ ಹುಸಿಚಿಕಿತ್ಸೆ' ಎಂದು ವಿಜ್ಞಾನಿಗಳು ಹೇಳುತ್ತಾರೆ. 'ಇಲ್ಲ ಸಾವಿರಾರು ರೋಗಿಗಳ ಮೇಲೆ ಸಂಶೋಧನೆ ನಡೆಸಿ ರೂಪುಗೊಂಡ ಚಿಕಿತ್ಸಾ ವಿಧಾನ ಇದು' ಎಂದು ಹೋಮಿಯೋಪಥಿ ಬೆಂಬಲಿಗರು ಹೇಳುತ್ತಾರೆ. 'ಅವೆಲ್ಲ ಸಂಶೋಧನೆಗಳೂ ಅವೈಜ್ಞಾನಿಕ' ಎಂದು ವಿಜ್ಞಾನಿಗಳು ವಾದಿಸುತ್ತಾರೆ. ವಿವಾದ ಆಗಾಗ ಭುಗಿಲೇಳುತ್ತದೆ, ತಣ್ಣಗಾಗುತ್ತದೆ. ಈಗ ಮತ್ತೆ ಭುಗಿಲೇಳುವಂತಾಗಿದೆ.

> ಜಗತ್ತಿನೆಲ್ಲೆಡೆ ಹೋಮಿಯೋಪಥಿಗೆ ಖ್ಯಾತಿ-ಕುಖ್ಯಾತಿ, ಬೆಂಬಲ-ವಿರೋಧ ಒಟ್ಟೊಟ್ಟಿಗೇ ಚಾಲ್ತಿಯಲ್ಲಿವೆ. ಅದು ವಿಜ್ಞಾನವಲ್ಲ, ಬರೀ ಢೋಂಗಿ ಎಂಬ ಆಪಾದನೆ ಅದರ ಮೇಲಿದೆ. ಢೋಂಗಿಯಾದರೂ ಪರಿಣಾಮಕಾರಿ. ಮೇಲಾಗಿ ಅಡ್ಡ ಪರಿಣಾಮಗಳಿಲ್ಲ ಎಂದು ನಂಬುವವರೂ ಇದ್ದಾರೆ. ಅಡ್ಡ ಪರಿಣಾಮದ ಬಗ್ಗೆ ಗೊತ್ತಿಲ್ಲದ ಕೋವಿಡ್ ಕಾಲದಲ್ಲಿ ಹೋಮಿಯೋಪಥಿ ಔಷಧ ಸೇವಿಸಿ ಲಿವರ್ ಕೆಟ್ಟು ಪ್ರಾಣಬಿಟ್ಟ ಉದಾಹರಣೆಗಳನ್ನು ಇದೀಗ ವೈದ್ಯ ಸಂಶೋಧಕರು ಪ್ರಕಟಿಸಿದ್ದಾರೆ. ಅದು ಅಪಾಯದ ಕಹಳೆಯೊ ಅಥವಾ ಅಪಪ್ರಚಾರದ ಬೊಗಳೆಯೊ?

2010ರಲ್ಲಿ ಇಂಗ್ಲೆಂಡ್‌ನ '10:23' ಹೆಸರಿನ ಸಂಘಟನೆಯೊಂದು 'ಹೋಮಿಯೋಪಥಿ ಎಂದರೆ ಢೋಂಗಿ ವಿಜ್ಞಾನ' ಎಂದು ಪ್ರಚುರಪಡಿಸಲು ಮಾಲ್‌ಗಳಲ್ಲಿ ಸರಣಿ ಡ್ರಾಮಾ ಮಾಡಿತು. ಬರ್ಕ್ಲೆಯಲ್ಲಿ ನೂರಾರು ಮಂದಿ ಶೀಶೆಯಲ್ಲಿದ್ದ ಕಾಫಿಯಾ ಕ್ರೂಡಾ ಹೆಸರಿನ 80 ನಿದ್ದೆಮಾತ್ರೆಗಳನ್ನು (ಅತಿ ಸೇವನೆ ಅಪಾಯಕಾರಿ ಎಂಬ ಅದರ ಎಚ್ಚರಿಕೆಯ ಸೂಚನೆಯನ್ನು ಧಿಕ್ಕರಿಸಿ) ಒಮ್ಮೆಗೇ ನುಂಗಿ ಆತ್ಮಹತ್ಯೆಯ ನಾಟಕ ಆಡಿದರು. ಐದು ದೇಶಗಳಲ್ಲಿ ಏಕಕಾಲಕ್ಕೆ ನಡೆದ ಈ ಸಾಯೋ ಆಟದಲ್ಲಿ 'ಯಾರೂ ಸಾಯಲಿಲ್ಲ' ಎಂದು ನ್ಯೂಸೈಂಟಿಸ್ಟ್ ಪತ್ರಿಕೆ ವರದಿ ಮಾಡಿತು. ಎರಡು ವರ್ಷಗಳ ನಂತರ 30 ದೇಶಗಳ 70 ನಗರಗಳಲ್ಲಿ ಏಕಕಾಲಕ್ಕೆ ಇದೇ ಡ್ರಾಮಾ ನಡೆಯಿತು.

2015ರಲ್ಲಿ ಆಸ್ಟ್ರೇಲಿಯಾದ ಸಂಶೋಧಕರು ಹೋಮಿಯೋಪಥಿಯ 1800 ಸಂಶೋಧನಾ ಪ್ರಬಂಧಗಳ ವಿಶ್ಲೇಷಣೆ ಮಾಡಿದರು. ಅವುಗಳಲ್ಲಿ ಮುಕ್ಕಾಲು ಪಾಲು ಬೋಗಸ್ ಆಗಿದ್ದು, 225ರಷ್ಟು ಮಾತ್ರ 'ಗಟ್ಟಿಕಾಳು ಹೌದು, ಆದರೆ ಏನೂ ಹುರುಳಿಲ್ಲ' ಎಂದು ಘೋಷಿಸಿದರು. ಹೋಮಿಯೋಪಥಿ ಜೊಳ್ಳೆಂದು ಪ್ರತಿಪಾದಿಸಲು ಇಂಥ ಲೆಕ್ಕವಿಲ್ಲದಷ್ಟು ಪ್ರಬಂಧಗಳು ಪ್ರಕಟವಾಗಿವೆ. 'ಇದು ನಂಬಿಕೆಯ ಪ್ರಶ್ನೆ' ಎಂದು ಪ್ರತಿವಾದಿಗಳು ಹೇಳುತ್ತ ಬಂದಿದ್ದಾರೆ.

ರೋಗಿಯನ್ನು ನಂಬಿಸಿ ಬರೀ ಜೋಳದ ಹಿಟ್ಟಿನ ಮಾತ್ರೆಯನ್ನೇ ಕೊಟ್ಟರೂ ಜ್ವರ, ಮೈಕೈ ನೋವು ವಾಸಿಯಾಗುತ್ತದೆ. ಅಂಥ ಢೋಂಗಿ ಔಷಧಕ್ಕೆ ವೈದ್ಯವಿಜ್ಞಾನದಲ್ಲಿ ಮಾನ್ಯತೆಯೂ ಇದೆ. ಅದಕ್ಕೆ 'ಪ್ಲಾಸೆಬೊ' (ಸುಳ್ಳೌಷಧ) ಎನ್ನುತ್ತಾರೆ. ಹೋಮಿಯೋಪಥಿಯ ಹಾಲುಸಕ್ಕರೆಯ ಗುಳಿಗೆಗಳು ಸುಳ್ಳೇ ಆಗಿದ್ದರೂ ಏನಾಯ್ತೀಗ? ಅಲೊಪಥಿಯ ಅಸಲೀ ಮಾತ್ರೆ ನುಂಗಿ ಅಡ್ಡಪರಿಣಾಮಗಳ ಜೊತೆ ಏಗುವುದಕ್ಕಿಂತ, ಏನೂ ತೊಂದರೆ ಇಲ್ಲದ ಹೋಮಿಯೋಪಥಿ ಔಷಧಗಳನ್ನು ಸೇವಿಸುವುದೇ ವಾಸಿಯಲ್ಲವೆ -ಎಂದು ಹೇಳುತ್ತ ಕೆಲವರು ಕಿವಿಗೆ ಹೂ ಇಡುತ್ತಾರೆ, ಇನ್ನು ಕೆಲವರು ಹತ್ತಿ ಇಟ್ಟುಕೊಳ್ಳುತ್ತಾರೆ.

ಸರಕಾರ ಆಯುಷ್ ಹೆಸರಿನಲ್ಲಿ ಆಯುರ್ವೇದ, ಯೋಗ, ಯುನಾನಿ, ಸಿದ್ಧ ಜೊತೆಗೆ ಹೋಮಿಯೋಪಥಿಯನ್ನೂ ಜೋಡಿಸಿ 2014ರಲ್ಲಿ ಮಾನ್ಯತೆ ನೀಡಿದೆ. ಜಗತ್ತಿನ ಅತಿ ಹೆಚ್ಚು ಸಂಖ್ಯೆಯ ಹೋಮಿಯೋಪಥಿ ಬಳಕೆದಾರರು ಭಾರತದಲ್ಲೇ ಇದ್ದಾರೆ. ಇಲ್ಲಿ ನೋಂದಣಿ ಮಾಡಿಕೊಂಡ ಕ್ಲಿನಿಕ್‌ಗಳ ಸಂಖ್ಯೆಯೇ ಎರಡು ಲಕ್ಷಕ್ಕೂ ಹೆಚ್ಚು. ಒಟ್ಟೂ ವೈದ್ಯರು ಎಷ್ಟಿದ್ದಾರೊ? ಹೋಮಿಯೋಪಥಿಗೆ ನಿಷೇಧ ಹಾಕಿದರೆ, ಬದಲೀ ವೈದ್ಯಕೀಯ ವ್ಯವಸ್ಥೆ ಮಾಡಲು ಸರಕಾರಕ್ಕೆ ಸಾಧ್ಯವೆ?

ಬದಲೀ ವ್ಯವಸ್ಥೆ ಇಲ್ಲದಿದ್ದರೂ ಪರವಾಗಿಲ್ಲ; ಆದರೆ ಈ 'ಸುಳ್ಳುಮಾತ್ರೆ, ಢೋಂಗಿ ಔಷಧಗಳನ್ನು ನಂಬಬೇಡಿ' ಎಂದು ಈಗ ಕೂಗೆದ್ದಿದೆ. ನಿರುಪದ್ರವಿ ಎನಿಸಿದ ಹೋಮಿಯೋಪಥಿಯಲ್ಲೂ ಅಪಾಯವಿದೆ ಎಂಬ ಅಂಶ ಹೊರಬಿದ್ದಿದೆ. ಉದಾಹರಣೆಗೆ, ಆರಂಭದಲ್ಲಿ ಹೇಳಿದ ಆಸ್ತಮಾ ಕಷಾಯ (ಬ್ಲಾಟ್ಟಾ ಓರಿಯೆಂಟಾಲಿಸ್) ನೋಡಿ. ಅದರಲ್ಲಿ ಇರುವುದು ಶೇ 99.9ರಷ್ಟು ಬರೀ ಅಲ್ಕೊಹಾಲ್ ಮತ್ತು ಶುಂಠಿ ಮಾತ್ರ. ಜಿರಳೆ ಅಂಶ ಅನಂತಾಲ್ಪ ಅಷ್ಟೆ. ಅದಕ್ಕೆ 'ಮದರ್ ಟಿಂಕ್ಚರ್' ಎನ್ನುತ್ತಾರೆ. ಇದರ 30-40 ಹನಿಗಳನ್ನು ಅರ್ಧ ಲೋಟ ನೀರಿಗೆ ಬೆರೆಸಿ ಆಗಾಗ ಕುಡಿಯಬೇಕು. ಅಷ್ಟಾದರೆ ಪರವಾಗಿಲ್ಲ. 'ಆದರೆ ಕೆಲವು ಡಾಕ್ಟರ್‌ಗಳು ಅದನ್ನೇ ನೇರವಾಗಿ ಕುಡಿಯುವಂತೆ ಹೇಳುತ್ತಾರೆ. ಪುಟ್ಟ ಮಗುವಿಗೂ ಹದಿಹುಡುಗಿಗೂ ಅದನ್ನು ಮತ್ತೆ ಮತ್ತೆ ದೀರ್ಘಕಾಲ ಕುಡಿಸುತ್ತಿದ್ದರೆ ಏನಾದೀತು ಯೋಚಿಸಿ' ಎಂದು ಕೆಣಕುತ್ತಾರೆ, ಕೇರಳದ ಲಿವರ್ ತಜ್ಞ ಡಾ. ಸಿರಿಯಾಕ್ ಅಬ್ಬಿ ಫಿಲಿಪ್ಸ್.

ಫಿಲಿಪ್ಸ್ ಮತ್ತು ಇತರ ಏಳು ವಿಜ್ಞಾನಿಗಳು ಈಚೆಗೆ ಪ್ರಕಟಿಸಿದ ಸಂಶೋಧನಾ ಲೇಖನದಲ್ಲಿ ಅನೇಕ ಆತಂಕಕಾರಿ ಸಂಗತಿಗಳಿವೆ. ಕೊಚ್ಚಿಯಲ್ಲಿರುವ ರಾಜಗಿರಿ ವೈದ್ಯ ಸಂಶೋಧನಾ ಸಂಸ್ಥೆಯಲ್ಲಿ ಯಕೃತ್ತಿನ ಕಾಯಿಲೆಗೆಂದು ಚಿಕಿತ್ಸೆ ಪಡೆಯುತ್ತಿದ್ದ 456 ರೋಗಿಗಳ ಚರಿತ್ರೆಯನ್ನು ಈ ತಂಡ ಅಧ್ಯಯನ ಮಾಡಿತು. ಒಂಬತ್ತು ರೋಗಿಗಳಿಗೆ ಹೋಮಿಯೋಪಥಿ ಔಷಧ ಸೇವನೆಯಿಂದಾಗಿಯೇ ಯಕೃತ್ತಿನ ಕಾಯಿಲೆ ಬಂದಿತ್ತೆಂಬುದು ಖಾತ್ರಿಯಾದ ನಂತರ ಅವರು ಸೇವಿಸಿದ್ದ 15 ಔಷಧಗಳನ್ನು ಮತ್ತೆ ತರಿಸಿ ಪರೀಕ್ಷೆ ಮಾಡಿದರು. ತೀರ ದುರ್ಬಲವೆಂದು ಹೇಳಲಾದ ಕಷಾಯದಲ್ಲೂ ಗಣನೀಯ ಪ್ರಮಾಣದಲ್ಲಿ ಸ್ಟೀರಾಯ್ಡ್, ಆಂಟಿಬಯಾಟಿಕ್ಸ್, ಔದ್ಯಮಿಕ ದ್ರಾವಕಗಳು, ಅಮಲು ಬರಿಸುವ ದ್ರವ್ಯಗಳು, ಕೆಮಿಕಲ್ ಅಫೀಮು, ನಂಜುಲೋಹಗಳು, ವಿಷಕಾರಿ ಸಸ್ಯಜನ್ಯ ಸಂಯುಕ್ತಗಳು ಇದ್ದವು. ಹಿಂದೆಂದೂ ಲಿವರ್ ಸಮಸ್ಯೆ ಇಲ್ಲದವರು ಕೋವಿಡ್ ಬಾರದಂತೆ ಆರ್ಸೆನಿಕಂ ಆಲ್ಬಮ್ ಸೇವನೆ ಮಾಡುತ್ತಿದ್ದರು; ಗ್ಯಾಸ್ಟ್ರಿಕ್ ಸಮಸ್ಯೆ, ಕಿಡ್ನಿಕಲ್ಲು ನಿವಾರಣೆಗೂ ಅಂಥದೇ ಹೋಮಿಯೋಪಥಿ ಔಷಧ ಸೇವಿಸಿದವರಿಗೆ ಲಿವರ್ ಕಾಯಿಲೆ ಬಂದಿದೆ; ನಾಲ್ವರು ತೀರಿಕೊಂಡಿದ್ದಾರೆ.

ಪರೀಕ್ಷೆಗೆಂದು ಜನಪ್ರಿಯ ಔಷಧಿಯೊಂದನ್ನು (ಅದರ ಹೆಸರು ಇಲ್ಲಿ ಬೇಡ) ಇವರ ತಂಡ ತರಿಸಿ ನೋಡಿದಾಗ, 'ಅದರಲ್ಲಿ ವಿದೇಶೀ (ಶಿವಾಸ್ ರೀಗಲ್) ವ್ಹಿಸ್ಕಿಯಲ್ಲಿ ಇದ್ದಷ್ಟೇ ಸಾಂದ್ರತೆಯ, ಕಡಿಮೆ ಬೆಲೆಯ ದೇಶೀ ಮದ್ಯ ಇತ್ತು. ಮದ್ಯ ಬಿಟ್ಟು ಬೇರೇನೂ ಇರಲಿಲ್ಲ. ಅಷ್ಟೇಕೆ, ಕೊರಿಯರ್ ಮೂಲಕ ಈ ಶೀಶೆ ಆಸ್ಪತ್ರೆಗೇ ಬಂತು' ಎಂದು ಅವರು ಮಾಧ್ಯಮ ಗೋಷ್ಠಿಯಲ್ಲಿ ಹೇಳಿದ್ದಾರೆ. ಮದ್ಯನಿಷೇಧ ಜಾರಿಯಲ್ಲಿರುವ ಬಿಹಾರ್ ಮತ್ತು ಗುಜರಾತ್ ರಾಜ್ಯಗಳಲ್ಲಿ ಹಾಗಿದ್ದರೆ ಈ ಔಷಧಕ್ಕೆ ಭಾರೀ ಬೇಡಿಕೆ ಇದ್ದೀತು.

ಅಲೊಪಥಿ, ಆಯುರ್ವೇದ ಔಷಧಗಳಲ್ಲೂ ಕಲಬೆರಕೆ ಇರುತ್ತವೆ. ಭಾರತದಲ್ಲಿ ತಯಾರಾದ ಕೆಮ್ಮಿನ ಕಷಾಯ ಸೇವಿಸಿ ಈಚೆಗೆ ಗಾಂಬಿಯಾ ದೇಶದ 72 ಮಕ್ಕಳು ಸಾವನ್ನಪ್ಪಿದವಲ್ಲ? ಉಜ್ಬೇಕಿಸ್ತಾನದಲ್ಲಿ 'ಭಾರತದ ಸಿರಪ್ಪನ್ನು ಬಳಸಬೇಡಿ' ಎಂದು ವಿಶ್ವ ಆರೋಗ್ಯ ಸಂಸ್ಥೆ ಎಚ್ಚರಿಕೆ ನೀಡಿದೆಯಲ್ಲ? ಔಷಧ ಉತ್ಪಾದಕರ ಎಡವಟ್ಟಿನಿಂದ ಗಂಭೀರ ಅಡ್ಡ ಪರಿಣಾಮ ಯಾವ ವೈದ್ಯ ಪದ್ಧತಿಯಲ್ಲೂ ಆಗಬಹುದು. ಆದರೂ 'ಹೋಮಿಯೋಪಥಿಯ ಬಗ್ಗೆ ವಿಶೇಷ ಎಚ್ಚರಿಕೆ ಬೇಕು; ಏಕೆಂದರೆ ಅದು ನಿರಪಾಯಕಾರಿ ಎಂಬ ಭಾವನೆ ಎಲ್ಲರಲ್ಲಿದೆ' ಎನ್ನುತ್ತಾರೆ, ಹಿಂದೊಮ್ಮೆ ಹೋಮಿಯೋಪಥಿ ವೈದ್ಯರೇ ಆಗಿದ್ದು ಈಗ ವಿಪಕ್ಷ ಸೇರಿದ ಇನ್ನೊಬ್ಬ ಸಂಶೋಧಕ ಡಾ. ಆರಿಫ್ ಹುಸೇನ್.

ಹೆಸರಾಂತ ಪತ್ರಕರ್ತೆ ಬರ್ಖಾ ದತ್ ಜೊತೆಗಿನ ಕಳೆದ ವಾರದ ಸಂದರ್ಶನದಲ್ಲಿ ಅವರು ಕೊಟ್ಟ ಹೋಲಿಕೆ ಹೀಗಿದೆ: 'ನಿಮ್ಮೆದುರಿನ ಜಾಡಿಯಲ್ಲಿ ಕೆಲವು ಉಡುಗೊರೆ ಸಾಮಾನು ಇವೆ; ಅದರಲ್ಲಿ ಒಂದು ಜೀವಂತ ಚೇಳೂ ಇದೆ, ಹುಷಾರಾಗಿರಿ ಎಂದು ಹೇಳುತ್ತೇನೆ. ಅಪಾಯದ ಅರಿವಿದ್ದೂ ನೀವು ಕೈ ಹಾಕುತ್ತೀರಿ. ಚೇಳು ಕಚ್ಚಿದರೆ ಅದಕ್ಕೆ ಪ್ರತಿವಿಷದ ಸೇವನೆ ಮಾಡುತ್ತೀರಿ. ಇಂಥದೇ ಇನ್ನೊಂದು ಸನ್ನಿವೇಶದಲ್ಲಿ, ಒಳಗೆ ವಿಷಜಂತು ಇದೆಯೆಂದು ಗೊತ್ತಿಲ್ಲದೇ ಕೈಹಾಕಿ ಕಡಿಸಿಕೊಂಡರೆ ಎತ್ತ ಓಡುತ್ತೀರಿ ಹೇಳಿ' ಎಂದು ಆರಿಫ್ ಕೇಳುತ್ತಾರೆ. 'ಹೋಮಿಯೋಪಥಿ ಔಷಧವೆಂದರೆ ಸೌಮ್ಯ ಗುಣಗಳ ಪ್ಲಾಸಿಬೊ ಅಲ್ಲ' ಎಂಬುದು ಇವರ ತಂಡದ ಸಂಶೋಧನ ಪ್ರಬಂಧದ ಮುಕ್ತಾಯದ ವಾಕ್ಯವಾಗಿದೆ.

4ನೇ ಪುಟಕ್ಕೆ...

ಕವಿಗಳ ಲೀಲಾವಳಿ!

> ಸುಗಮ ಸಂಗೀತದ ಮೇರು ಪ್ರತಿಭೆಗಳಲ್ಲಿ ಒಬ್ಬರಾಗಿರುವ ಎಚ್‌.ಆರ್‌. ಲೀಲಾವತಿ ಅವರು ಕನ್ನಡದ ಸಾಹಿತ್ಯ ದಿಗ್ಗಜರ ಜತೆ ಆತ್ಮೀಯವಾಗಿ ಒಡನಾಡಿದವರು. ಅವರು 90 ವಸಂತಗಳನ್ನು ಪೂರೈಸಿರುವ ನೆಪದಲ್ಲಿ 'ಹಾಡಾಗಿ ಹರಿದಾಳೆ' ಆತ್ಮಕಥೆ ಇಂದು ಬಿಡುಗಡೆಯಾಗುತ್ತಿದೆ. ಅವರ ನೆನಪುಗಳು ಸಹ ಸಂಗೀತ ಸುಧೆಯಂತೆ ಕೇಳುಗರಿಗೆ ತಂಪೆರೆಯುತ್ತವೆ...

ರವೀಂದ್ರ ಭಟ್ಟ

'ನೀನು ನನ್ನ ಕವನಗಳನ್ನು ಹಾಡದೇ ಇದ್ದಿದ್ದರೆ ನನ್ನ ಕವನದ ಪುಸ್ತಕಗಳೆಲ್ಲ ಬೀರುವಿನಲ್ಲೇ ಇರುತ್ತಿದ್ದವು'

-ಕುವೆಂಪು

'ನಿಮ್ಮ ಹಾಡುಗಾರಿಕೆಯ ಮೂಲಕ ಏಕ್ ದಂ ನಾನು ಒಬ್ಬ ಕವಿ ಎಂದು ಕನ್ನಡ ನಾಡಿನ ಸಹೃದಯರಿಂದ ಸ್ವೀಕೃತವಾಗಿದ್ದು ಒಂದು ಯೋಗಾಯೋಗವೇ ಸರಿ'

-ಜಿ.ಎಸ್.ಶಿವರುದ್ರಪ್ಪ

'ಎಷ್ಟು ಛಲೋ ಹಾಡ್ತೀಯವ್ವ ಆಶಾ ಭೋಂಸ್ಲೆ ಹಂಗೆ'

-ದ.ರಾ.ಬೇಂದ್ರೆ

'ಬೆಂಗಳೂರಿನಲ್ಲಿ ಒಳ್ಳೆ ಚಹಾ ಬೇಕೆಂದರೆ ಕಾಮತ್ ಹೋಟೆಲ್ ಒಂದೆ. ಹಿಂದೂಸ್ತಾನಿ ಸಂಗೀತದ ಭಾವಗೀತವೆಂದರೆ ನಿಮ್ಮ ಕಂಠ ಒಂದೇ'

-ಎನ್ಕೆ

ಹೀಗೆ ಹಿರಿಯ ಕವಿಗಳಿಂದ ನಿರಂತರ ಪ್ರಶಂಸೆಯ ಮಾತುಗಳನ್ನು ಕೇಳಿದವರು ಕನ್ನಡದ ಸುಗಮ ಸಂಗೀತದ ಮೇರು ಪ್ರತಿಭೆಗಳಲ್ಲಿ ಒಬ್ಬರಾದ ಎಚ್.ಆರ್.ಲೀಲಾವತಿ ಅವರು. ಸುಮಾರು 75 ವರ್ಷಗಳಿಂದ ಸುಗಮ ಸಂಗೀತ ಕ್ಷೇತ್ರದಲ್ಲಿ ಧ್ರುವತಾರೆಯಾಗಿಯೇ ಇರುವ ಲೀಲಾವತಿ ಸಂಗೀತಕ್ಕಾಗಿ ಕೆಲಸಬಿಟ್ಟವರು. ಪ್ರಸಿದ್ಧಿಯನ್ನೂ ಬಿಟ್ಟವರು. ಹಣ ಬಿಟ್ಟವರು ಮತ್ತು ಬದುಕಿನ ತುಂಬಾ ಸಂಗೀತವನ್ನೇ ತುಂಬಿಕೊಂಡವರು. ಲೀಲಾವತಿ ಅವರ ಕತೆ ಕೇಳುವುದು ಎಂದರೆ ಕನ್ನಡ ನಾಡಿನ ಕವಿಗಳ ಕತೆ ಕೇಳಿದಂತೆ. ಕವಿ ಪತ್ನಿಯರ ಕತೆಯೂ ಅಲ್ಲಿದೆ. ಬಹುತೇಕ ಎಲ್ಲ ಹಿರಿಯ ಕವಿಗಳೊಂದಿಗೆ ನಿಕಟ ಸಂಬಂಧ ಹೊಂದಿದ್ದ ಲೀಲಾವತಿ ಅವರು ಮಾತಿಗೆ ಕುಳಿತರೆ ಅವರ ವ್ಯಕ್ತಿತ್ವದ ಜೊತೆಗೆ ಕವಿಗಳ, ಸಾಹಿತಿಗಳ ಬದುಕಿನ ಒಳಹೊರಗೂ ತೆರೆದುಕೊಳ್ಳುತ್ತವೆ.

'ಕುವೆಂಪು ಅವರಿಗೆ ನಾನೆಂದರೆ ತುಂಬಾ ಇಷ್ಟ. ಎಷ್ಟು ಇಷ್ಟ ಎಂದರೆ ಅವರು ಒಮ್ಮೆ ಬೆಂಗಳೂರು ಆಕಾಶವಾಣಿ ಕೇಂದ್ರಕ್ಕೆ ತಮ್ಮ ಹಾಡನ್ನು ಲೀಲಾವತಿ ಮತ್ತು ಕಾಳಿಂಗರಾವ್ ಮಾತ್ರ ಹಾಡಬೇಕು ಎಂದು ಕಟ್ಟಾಜ್ಞೆ ಮಾಡಿದ್ದರು. ಆಕಾಶವಾಣಿಯವರು ಈ ಆದೇಶವನ್ನು ಸುಮಾರು ನಾಲ್ಕು ವರ್ಷ ಪಾಲಿಸಿದ್ದರು' ಎಂದು ಹೆಮ್ಮೆಯಿಂದ ಹೇಳುತ್ತಾರವರು.

'ಅವರ ಸಾಕ್ಷ್ಯಚಿತ್ರಕ್ಕೂ ನಾನೇ ಹಾಡಿದೆ. ಮೈಸೂರು ಮಾನಸ ಗಂಗೋತ್ರಿ ಉದ್ಘಾಟನೆಗೂ ನಾನೇ ಹಾಡಿದೆ. ಅವರಿಗೆ ಪಂಪ ಪ್ರಶಸ್ತಿ ಬಂದಾಗಲೂ ನಾನೇ ಹಾಡಿದ್ದು. ನಾನು ಅವರ ಮನೆಗೆ ಹೋದಾಗಲೆಲ್ಲಾ ಇದು ಹಾಡಿ ಇದು ಹಾಡಿ ಎಂದು ಕವನ ಪುಸ್ತಕ ಕೊಡೋರು. ಸಾಧಾರಣವಾಗಿ ಯಾರೇ ಬಂದರೂ ಕುವೆಂಪು ಅವರು ತಮ್ಮ ಪತ್ನಿಯನ್ನು ಕರೆದಿದ್ದು ಕಡಿಮೆ. ಆದರೆ ನಾನು ಹೋದರೆ ಮಾತ್ರ 'ಹೇಮಾ ಯಾರು ಬಂದಿದ್ದಾರೆ ನೋಡು' ಎಂದು ಪತ್ನಿಯನ್ನು ಕರೆಯೋರು. ಆ ಮೇಲೆ ನಾನು ಹೇಮಾವತಿಯವರು ಮಾತನಾಡುತ್ತಿದ್ದೆವು. ಅವರು ನನಗೆ ಹಾಲು ಕೊಡೋರು. ಕುಡಿದ ನಂತರ ಕುವೆಂಪು ಅವರಿಗೆ ನನ್ನ ಹಾಡಿನ ಸೇವೆ. ಒಮ್ಮೆ ನಾನು ಅವರ 'ತಾಯಿಯ ಮಡಿಲು' ಎಂಬ ಕವನ ಹಾಡಿದೆ. ಅದು ಅವರಿಗೆ ಎಷ್ಟು ಇಷ್ಟ ಆಯಿತು ಎಂದರೆ 'ಈ ಕವಿತೆಯನ್ನು ನೀನೇ ಇನ್ನೊಮ್ಮೆ ಹಾಡಿದರೂ ಅಷ್ಟು ಚೆನ್ನಾಗಿ ಹಾಡಲು ಸಾಧ್ಯವಿಲ್ಲ' ಎಂದು ಕೊಂಡಾಡಿದರು' ಎಂದು ಕುವೆಂಪು ಅವರೊಂದಿಗಿನ ಒಡನಾಟ ಬಿಚ್ಚಿಟ್ಟರು.

'ಶಿವರಾಮ ಕಾರಂತರು ನಾನು ಅತ್ಯಂತ ಗೌರವಿಸುವ ವ್ಯಕ್ತಿಯಾಗಿದ್ದರು. ಅವರ ಸತ್ಯಸಂಧತೆ, ನಿಷ್ಠುರ ಭಾವಕ್ಕೆ ಸರಿಸಾಟಿಯೇ ಇಲ್ಲ. ಅವರು ಮೈಸೂರಿಗೆ ಬಂದಾಗಲೆಲ್ಲಾ ಮಾಡರ್ನ್ ಹೊಟೇಲ್‌ನಲ್ಲಿ ಉಳಿದುಕೊಳ್ಳುತ್ತಿದ್ದರು. ಸಾಧಾರಣವಾಗಿ ರೂಂ ನಂಬರ್ 8ರಲ್ಲಿಯೇ ಇರ್ತಿದ್ದರು. ಅವರ ಬಂದಿದ್ದು ಗೊತ್ತಾದ ತಕ್ಷಣ ನಾನು ಹೋಗ್ತಿದ್ದೆ. ಅವರ ಕಾದಂಬರಿಗಳ ಬಗ್ಗೆ ಚರ್ಚೆ ಮಾಡ್ತಿದ್ದೆ. ಕೆಲವೊಮ್ಮೆ ಹಲವಾರು ಮಕ್ಕಳನ್ನೂ ಕರೆದುಕೊಂಡು ಹೋಗ್ತಿದ್ದೆ. ಮಕ್ಕಳು ಬಂದರೆ ಅವರು ನನ್ನನ್ನು ಬಿಟ್ಟು ಅವರ ಜೊತೆಗೇ ಕಾಲ ಕಳೆಯೋರು. ಮಕ್ಕಳಿಗೆ ಈ ಮರ ನೋಡು, ಈ ಮೋಡ ನೋಡು, ಈ ಹಕ್ಕಿ ನೋಡು ಎಂದು ಪಾಠ ಮಾಡೋರು' ಎಂದು ಕಾರಂತರ ಲೋಕಕ್ಕೆ ಜಿಗಿದರು.

'ಅವರು ಮೈಸೂರಿಗೆ ಬರುವಾಗಲೆಲ್ಲಾ ನನಗೆ ಪತ್ರ ಬರೆದು ತಿಳಿಸುತ್ತಿದ್ದರು. ಒಮ್ಮೆ ನಾನು ನನ್ನ ಚಿಕ್ಕಪ್ಪನ ಮಗಳು 6 ವರ್ಷದ ಹುಡುಗಿಯನ್ನು ಕರೆದುಕೊಂಡು ಹೋಗಿದ್ದೆ. ನಾವು ಹೋದಾಗ ಕಾರಂತರು ಸಿಗರೇಟ್ ಸೇದುತ್ತಾ ಇದ್ದರು. ಅದನ್ನು ನೋಡಿದ್ದೇ ನನ್ನ ಚಿಕ್ಕಪ್ಪನ ಮಗಳು 'ಥೂ ಗಬ್ಬುವಾಸನೆ' ಎಂದಳು. 'ಏನು, ನಾನು ಸಿಗರೇಟು ಸೇದೋದು ಬೇಡ್ವೋ' ಎಂದು ಕೇಳಿದರು. 'ಥೂ ಬೇಡ' ಎಂದಿತು ಮಗು. 'ಇಗೊ ಬಿಟ್ಟೆ' ಎಂದು ಸಿಗರೇಟನ್ನು ಆ್ಯಷ್ ಟ್ರೇಗೆ ಹಾಕಿದರು. ನಂತರ ಸುಮಾರು ನಾಲ್ಕು ವರ್ಷ ಅವರು ಸಿಗರೇಟು ಸೇದಲಿಲ್ಲ. ಆಮೇಲೆ ಮತ್ತೆ ಶುರು ಮಾಡಿದರು. 'ನೀವು ಸಿಗರೇಟ್ ಸೇದೋದು ಬಿಟ್ಟಿದ್ದಿರಿ. ಮತ್ಯಾಕೆ ಶುರುಮಾಡಿದಿರಿ. ಅದರಿಂದ ನಿಮಗೆ ಏನು ಸಿಗುತ್ತದೆ' ಎಂದು ಒಮ್ಮೆ ಕೇಳಿದೆ. 'ಸೇದಿದರೂ ಏನೂ ಸಿಗಲ್ಲ. ಸೇದದಿದ್ದರೂ ಏನೂ ಸಿಗಲ್ಲ. ಮಗು ಬೇಡ ಅಂತು ಬಿಟ್ಟೆ. ಇನ್ಯಾರೋ ಕೊಟ್ಟರು ಸೇದಿದೆ ಅಷ್ಟೆ' ಎಂದು ಉತ್ತರಿಸಿದರು. ಅವರು ಒಂತರಹ ಸ್ಥಿತಪ್ರಜ್ಞರಂತೆ ಇದ್ದರು'.

'ನಾನು ಅವರ ಮನೆಗೆ ಹೋಗಿ ಉಳಿದುಕೊಳ್ಳುವುದೂ ಇತ್ತು. ಲೀಲಾ ಕಾರಂತರ ಕೈ ಊಟ ಮಾಡಿದ್ದೇನೆ. ಕಾರಂತರು ಬೆಳಿಗ್ಗೆ 11ಕ್ಕೆ ಊಟಕ್ಕೆ ಕುಳಿತುಕೊಳ್ಳೋರು. ಕಾರಂತರು ಊಟಕ್ಕೆ ಕುಳಿತ ತಕ್ಷಣವೇ ಅವರ ಹಿತ್ತಿಲಿಗೆ ಕಾಗೆಗಳು ಬರುತ್ತಿದ್ದವು. ಅವುಗಳಿಗೆ ಊಟ ಹಾಕಿ ಇವರು ಊಟ ಮಾಡೋರು. ಅವರಿಗೆ ದೇವರ ಬಗ್ಗೆ ನಂಬಿಕೆ ಇರಲಿಲ್ಲ. 2ನೇ ಪುಟಕ್ಕೆ...



ಪ್ರತಿಯೊಂದು ಅಭಿವ್ಯಕ್ತಿಯೂ ಕಾವ್ಯವೇ...


ಸಂದರ್ಶನ: ದಾದಾಪೀರ್ ಜೈಮನ್

ಆಧುನಿಕ ಕನ್ನಡ ಸಾಹಿತ್ಯಕ್ಕೆ ಕಾವ್ಯದ ಮೂಲಕ ದಲಿತ ಪ್ರಜ್ಞೆಯನ್ನು ತುಂಬಿದ, ಬೌದ್ಧ ಅರಿವನ್ನೂ ಹರಿಸಿದ ನಮ್ಮ ನಡುವಿನ ಮಹತ್ವದ ಕವಿ ಮೂಡ್ನಾಕೂಡು ಚಿನ್ನಸ್ವಾಮಿ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿರುವ ಅವರೊಂದಿಗೆ ಒಂದು ಮುಖಾಮುಖಿ... ಸಂದರ್ಶನದ ಪೂರ್ಣಪಾಠಕ್ಕೆ www.prajavani.net

• ನಮಸ್ಕಾರ ಸರ್. ಮೊದಲಿಗೆ ಶುಭಾಶಯಗಳು ನಿಮಗೆ. ಅವಕಾಶವಂಚಿತ ಸಮುದಾಯದಿಂದ ಬಂದ ನೀವು ಅಂಬೇಡ್ಕರ್ ತೋರಿದ ಅಕ್ಷರದ ಬೆಳಕಿನಲ್ಲಿ ಬೆಳೆದು ಸತತವಾಗಿ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಿರುವ ಹೊತ್ತಲ್ಲಿ ನಿಮ್ಮ ವೈಚಾರಿಕ ಪ್ರಬಂಧ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ಏನನಿಸಿತು?

ಥ್ಯಾಂಕ್ಸ್ ದಾದಾಪೀರ್. ಸಂತೋಷ ಆಯ್ತು. ನನ್ನೊಳಗಿನ ಮಾಯದ ಗಾಯಕ್ಕೆ ಒಂದು ಹೂವಿನಿಂದ ನೇವರಿಸಿದ ಹಾಗಾಯ್ತು. ನೋವೇ ಸ್ಥಾಯಿಯಾದ ನನ್ನ ಸಾಹಿತ್ಯಕ್ಕೆ ಸಿಕ್ಕ ಪುರಸ್ಕಾರವಾಗಿ ಸಹಜವಾಗಿ ಖುಷಿಕೊಟ್ಟಿತು.

ಸಂದರ್ಶನ



• ನೀವು ಬರೆಯಬೇಕು ಎಂದುಕೊಂಡಾಗ ಇದ್ದ ಅವಕಾಶಗಳ ಬಗ್ಗೆ ಹೇಳಬಹುದಾ? ನೀವು ಬರೆದ ಮೊದಲ ಕವಿತೆ ಯಾವುದು? ನಿಮ್ಮನ್ನು ಬರೆಯುವಂತೆ ಮಾಡಿದ ಘಟನೆಯನ್ನು ನೆನಪಿಸಿಕೊಳ್ಳಬಹುದಾ?

ನಾನು ಮೊದಲು ಪದ್ಯ ಬರೆದಿದ್ದು ಎಸ್ಸೆಸ್ಸೆಲ್ಸಿಯಲ್ಲಿ. ಆಮೇಲೆ ಪಿಯು, ಡಿಗ್ರಿ ಅವಧಿಯಲ್ಲಿ ಕಾಲೇಜು ಮ್ಯಾಗಝಿನ್ನುಗಳಲ್ಲಿ ಒಂದಷ್ಟು ಪ್ರಕಟ ಆಗಿದ್ದವು. ಅವೆಲ್ಲ ಚಿಕ್ಕಪುಟ್ಟ ಬರಹಗಳು. ಬರವಣಿಗೆಯ ತುಡಿತ ನನ್ನೊಳಗೆ ಸದಾ ಇತ್ತು. 1984ರಲ್ಲಿ ಹುಬ್ಬಳ್ಳಿಯ ಆಫೀಸ್‌ನಲ್ಲಿದ್ದೆ. ಆಗ ನಮ್ಮ ಕಾಲದ ಒಂದು ದೊಡ್ಡ ವಿದ್ಯಮಾನವೇ ಆಗಿದ್ದ ಇಂದಿರಾಗಾಂಧಿ ಹತ್ಯೆ ಆಗಿತ್ತು. ಅಂದು ರಾತ್ರಿ ಮನೆಗೆ ಬಂದು ಧಾರವಾಡ ಆಕಾಶವಾಣಿಯಲ್ಲಿ ಶ್ರದ್ಧಾಂಜಲಿ ಪದ್ಯಗಳನ್ನು ಕೇಳ್ತಾ ಇದ್ದೆ. ನನಗ್ಯಾಕೋ ಆ ಕವಿತೆಗಳು ಅಷ್ಟು ತೃಪ್ತಿ ಕೊಡಲಿಲ್ಲ. ಅದಕ್ಕೆ ನಾನೊಂದು ಪದ್ಯ ಬರೆದೆ. ‘ಪ್ರಿಯದರ್ಶಿನಿಗೊಂದು ಶ್ರದ್ಧಾಂಜಲಿ’ ಅಂತ ಅದರ ಹೆಸರು. ನಾನು ಈಗ ಹಿಂತಿರುಗಿ ನೋಡಿದಾಗ ಅದೇ ನನ್ನ ಮೊದಲ ಕವಿತೆ ಎಂದು ಹೇಳಬಹುದೇನೋ. ಮರುದಿನವೇ ಪಾಟೀಲ ಪುಟ್ಟಪ್ಪನವರ ವಿಶ್ವವಾಣಿಯಲ್ಲಿ ಆ ಕವಿತೆ ಪ್ರಕಟ ಆಯ್ತು. ಆಗ ನಾನು ಬಿ.ಸಿ. ಸ್ವಾಮಿ ಅನ್ನುವ ಹೆಸರಿನಿಂದ ಬರೀತಾ ಇದ್ದೆ (ಇದನ್ನು ಬಹಳ ಕಡೆ ಹೇಳಿದ್ದೀನಿ. ಕ್ಷಮೆ ಇರಲಿ). ಅದಾದ ಮೇಲೆ ನಾನು ಬರೆದ ಕವಿತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗತೊಡಗಿದವು. ನಾನು ಮೂಲತಃ ವಾಣಿಜ್ಯಶಾಸ್ತ್ರದ ಹಿನ್ನೆಲೆಯವನು. ಮೊದಮೊದಲಿಗೆ ನನ್ನಿಂದ ಇದೆಲ್ಲಾ ಸಾಧ್ಯವಾ ಎಂಬ ಹಿಂಜರಿಕೆ ಇತ್ತು. ಕನ್ನಡದಲ್ಲಿ ಎಂ.ಎ ಮಾಡಿದ ಮೇಲೆ ಆ ಹಿಂಜರಿಕೆ ಹೋಯ್ತು. ಒಂದಷ್ಟು ಕಾಲ ಆದ ಮೇಲೆ ಸ್ನೇಹಿತರ ಒತ್ತಾಯದಿಂದ ನನ್ನ ಮೊದಲ ಕವನ ಸಂಕಲನ ‘ಕೊಂಡಿಗಳು ಮತ್ತು ಮುಳ್ಳುಬೇಲಿಗಳು’ ಸಂಕಲನ ಪ್ರಕಟ ಆಯ್ತು.

• ಕವಿತೆ, ಕತೆ, ನಾಟಕ, ಪ್ರಬಂಧ, ಸಂಪಾದನೆ ಹೀಗೆ ಹಲವಾರು ಪ್ರಕಾರಗಳಲ್ಲಿ ನಿಮ್ಮ ನಲವತ್ತಕ್ಕೂ ಹೆಚ್ಚು ಕೃತಿಗಳು ಪ್ರಕಟವಾಗಿವೆ. ‘ಹೊಳೆದದ್ದು ಈ ಹಾದಿಗೆ’ ಅಥವಾ ‘ಈ ಹಾದಿಗೆ ಈ ಹೊಳಹಿನ ಯಾತ್ರೆ’ ಅಂತ ನಿಮಗೆ ತಿಳಿಯುವ ಕ್ಷಣ ಯಾವುದು? ಅಥವಾ ನೀವು ಮೊದಲೇ ಪ್ರಕಾರ ನಿರ್ಧರಿಸಿಕೊಂಡು ಬರೆಯುತ್ತೀರಾ? ಅಥವಾ ಇವೆರಡರ ನಡುವಿನ ಜೋಕಾಲಿ ಜೀಕುವಿಕೆಯ ಮಾದರಿಯೇ?

ಕವಿತೆಯನ್ನು ಅದು ತಾನಾಗೇ ಬಂದಾಗ ಮಾತ್ರ ಬರೆಯೋಕೆ ಸಾಧ್ಯ. ಒತ್ತಡದಲ್ಲಿ ಕವಿತೆ ಹುಟ್ಟುವುದಿಲ್ಲ. ಆದರೆ ಲೇಖನಗಳನ್ನ ಬರೆಯುವಾಗ ಒಳಗಿನ ಮತ್ತು ಹೊರಗಿನ ಒತ್ತಡ ಎರಡೂ ಇರುತ್ತೆ. ಹೊರಗಿನ ಒತ್ತಡ ಅಂದರೆ ಪತ್ರಿಕೆಗಳು ಅಥವಾ ಇತರರು ಲೇಖನ ಬೇಕು ಎಂದಾಗ ಬರೆಯುವುದು. ಆದರೆ ನಾನು ಸುಧಾ ವಾರಪತ್ರಿಕೆಗೆ ಬರೆದ ಲೇಖನಗಳ ಸಂಗ್ರಹ ‘ಬಹುತ್ವ ಭಾರತ ಮತ್ತು ಬೌದ್ಧ ತಾತ್ವಿಕತೆ’ ಮಾತ್ರ ಸಂಪೂರ್ಣ ಒಳಗಿನ ಒತ್ತಡದಿಂದಲೇ ಬರೆದಿದ್ದು. ತುಂಬಾ ಧ್ಯಾನಿಸಿ ಬರೆದ ಕಾರಣವಾಗಿಯೇ ಅದಕ್ಕೆ ಅಷ್ಟೊಂದು ಮನ್ನಣೆ ಸಿಕ್ಕಿತು ಅನಿಸಿದೆ. ಕಥೆಗಳು ಮಾತ್ರ ಮತ್ತೆ ಮತ್ತೆ ಕಾಡುವ ನನ್ನ ಹಳ್ಳಿಯ ಪರಿಸರ ಜೀವನದ ಅಚ್ಚಳಿಯದೆ ಕೂತ ಚಿತ್ರಳಿಂದಾಗಿ ಬಂದವು.

• ದಲಿತ ಬಂಡಾಯ ಸಾಹಿತ್ಯ ಚಳವಳಿಯ ಸತ್ವಪೂರ್ಣ ದನಿ ಅಂತಲೇ ನಿಮ್ಮನ್ನು ಗುರುತಿಸುತ್ತಾರೆ. ಈಗ ಚಳವಳಿಗಳಿಲ್ಲದ ಕಾಲ. ಆದರೆ ಹಿಂದಿನ ದಿನಗಳಿಗಿಂತಲೂ ಎಲ್ಲಾ ರೀತಿಯ ಹಿಂಸೆಗಳು ಹೆಚ್ಚುತ್ತಿರುವ ಅತ್ಯಂತ ಸಂಕೀರ್ಣ ಕಾಲಘಟ್ಟವನ್ನು ಹೇಗೆ ನೋಡಬಯಸುತ್ತೀರಿ?

ದಲಿತ ಬಂಡಾಯ ಸಂದರ್ಭದಲ್ಲಿ ಚಳವಳಿ ಮತ್ತು ಸಾಹಿತ್ಯ ಒಂದಕ್ಕೊಂದು ಪೂರಕವಾಗಿದ್ದವು. ಆದರೆ ಈಗ ಅದರ ಅಗತ್ಯ ಇದೆಯಾ ಅನ್ನೋದು ಪ್ರಶ್ನೆ! ಏಕೆಂದರೆ ಭಾರತದಲ್ಲಿ ಹುಟ್ಟುವ ಚಳವಳಿಗಳನ್ನು ಸೋಲಿಸುವ ಶಕ್ತಿ ಜಾತಿವ್ಯವಸ್ಥೆಗಿದೆ. ಜ್ಯೋತಿಬಾ ಫುಲೆ, ಅಂಬೇಡ್ಕರ್, ಬಸವಣ್ಣ, ಪೆರಿಯಾರ್, ನಾರಾಯಣ ಗುರುಗಳಂಥ ಮಹಾಪುರುಷರು ಹುಟ್ಟು ಹಾಕಿದ ಕ್ರಾಂತಿಯನ್ನು ಸೋಲಿಸಿ ಜಾತಿ ವ್ಯವಸ್ಥೆ ಅಟ್ಟಹಾಸ ಮೆರೆಯುತ್ತಿದೆ. ಬುದ್ಧನಿಗೂ ಹಿಂದಿನ ಕಾಲದಿಂದ ಜಾತಿ ವ್ಯವಸ್ಥೆ ಒಂದು ವಿಷ ಸರ್ಪದಂತೆ ಕಾಡುತ್ತಿದೆ. ಬುದ್ಧನನ್ನೇ ಬುಡಮೇಲು ಮಾಡಿದ ದೈತ್ಯ ಶಕ್ತಿ ಅದಕ್ಕಿದೆ. ಈಗಂತೂ ಎರಡು ಯುವಮನಸ್ಸುಗಳು ಪರಸ್ಪರ ಪ್ರೀತಿಸಲಾರದಷ್ಟು ವ್ಯವಸ್ಥೆ ಕೆಟ್ಟಿದೆ. ಸ್ವತಃ ಹೆತ್ತವರೇ ಅವರನ್ನು ಕೊಲ್ಲಲು ಸುಪಾರಿ ಕೊಡುವ ಹಂತಕ್ಕೆ ಸಮಾಜ ಬಂದು ನಿಂತಿದೆ. ರೈತ ಚಳವಳಿ, ಮಹಿಳಾ ಚಳವಳಿ ಮತ್ತೆ ಮತ್ತೆ ಸೋಲುತ್ತಿರುವ ಈ ಹೊತ್ತಿನಲ್ಲಿ ಪ್ರತಿಯೊಬ್ಬ ಲೇಖಕನೂ ಸಹ ಚಳವಳಿಯೋಪಾದಿಯಲ್ಲಿ ಬರೆಯಬೇಕಾದ ತುರ್ತು ಇಂದಿಗಿದೆ.

ಈಗಿರುವ ಒತ್ತಾಯದ ಮೌನವನ್ನು ಮುರಿದು ಮಾತಾಡಬೇಕು. ಇಂದಿನ ಭಾರತದಲ್ಲಿ ಮಾನವೀಯತೆಯ ಕೊರತೆ ಹೆಚ್ಚುತ್ತಿರುವುದು ಢಾಳಾಗಿ ಗೋಚರಿಸುತ್ತಾ ಇದೆ. ಭಾರತವನ್ನು ಇಲ್ಲಿರುವ ಹಲವು ಧರ್ಮಗಳ, ಜಾತಿಗಳ ಹಿನ್ನೆಲೆಯಲ್ಲಿ ಸಮಾಜ ಶಾಸ್ತ್ರೀಯ ನೆಲೆಗಟ್ಟಿನಿಂದ ನೋಡಿದಾಗಲೇ ಇದರ ಸಂಕೀರ್ಣತೆ ನಮಗೆ ಅರ್ಥ ಆಗತ್ತೆ. ಇದೆಲ್ಲದಕ್ಕೆ ಕಾರಣ ಎಂದರೆ ನಮ್ಮ ಮಕ್ಕಳಿಗೆ ಸಂವಿಧಾನದ ಆಶಯಗಳ ಪ್ರಕಾರ ಶಿಕ್ಷಣ ದೊರೆಯದಿರುವುದು. ಅಂದರೆ ಸಮಾನತೆ, ಸೋದರತೆ ಆಧಾರದಲ್ಲಿ. ಹಾಗಾದಾಗ ಮಾತ್ರ ಅಂಬೇಡ್ಕರ್ ಹೇಳಿದ ಜಾತಿ ವಿನಾಶ ಮತ್ತು ಗಾಂಧಿ ಹೇಳಿದ ಅಸ್ಪೃಶ್ಯತೆ ನಿವಾರಣೆಯನ್ನು ಸಾಧ್ಯವಾಗಿಸಬಹುದು. ಜಾತಿಯನ್ನು ತಾರತಮ್ಯ ನೀತಿಯ ಅಡಿಯಲ್ಲಿ ತರಲು ನಮ್ಮಿಂದ ಇಂದಿಗೂ ಸಾಧ್ಯವಾಗಿಲ್ಲ. ಅಮೆರಿಕಾದ ಸಿಯಾಟಲ್ ಕೌಂಟಿಯಲ್ಲಿ ಅದು ಈಗ ಸಾಧ್ಯವಾಗಿದೆ. ಅಸಹನೆ ಮತ್ತು ಅದರ ಪರಿಣಾಮವಾಗಿ ಉತ್ಪನ್ನವಾಗುವ ಹಿಂಸೆ ಹೆಚ್ಚುತ್ತಿರುವ ಕಾಲದಲ್ಲಿ ಜಾತಿ ವಿನಾಶ ಮತ್ತು ಅಸ್ಪೃಶ್ಯತೆ ನಿವಾರಣೆಯೇ ಉತ್ತರ.

• ಸಾಮಾಜಿಕ ಬದಲಾವಣೆಗಾಗಿನ ನಿಮ್ಮ ತುಡಿತ ನಿಮ್ಮ ಸಾಹಿತ್ಯ ಪ್ರಯಾಣವನ್ನು ದಣಿವಿಲ್ಲದೆ ಮಾಡುತ್ತಾ ಬಂದಿದ್ದೀರಿ. ಅಮೃತಕಾಲದಲ್ಲಿ ಹೆಚ್ಚುತ್ತಿರುವ ಉರಿ ನಂಜುಗಳ ಹೊತ್ತಲ್ಲಿ ಇಂದಿನ ಯುವ ತಲೆಮಾರಿಗೆ ಅಂಬೇಡ್ಕರ್, ಗಾಂಧಿ, ಬುದ್ಧ ಎಲ್ಲರೂ ತಲುಪುತ್ತಿದ್ದಾರೆಯೇ? ಆ ವ್ಯವಸ್ಥೆ ಆಗುತ್ತಿದೆಯೇ? ಅಥವಾ ಅದು ಪ್ರತಿಯೊಬ್ಬ ವ್ಯಕ್ತಿಯೇ ಹುಡುಕಿಕೊಳ್ಳಬೇಕಾದ ಏಕಲವ್ಯ ಮಾದರಿಯ ಪ್ರಯಾಣವೇ?

ನೀವು ಹೇಳಿದ ಹೆಸರುಗಳು ಪ್ರಭುತ್ವಕ್ಕೆ ಪಥ್ಯವಾಗಬೇಕಲ್ಲವೆ? ಅವರ ಹೆಸರಿನಲ್ಲಿ ಕೇವಲ ಕೆಲವು ನೀತಿ ಪಾಠಗಳನ್ನು ಹೇಳಿದರೆ ಸಾಲದು. ಏಕಲವ್ಯ ಮಾದರಿ ಸರಿ, ಆದರೆ ಅದು ಎಲ್ಲರಿಗೂ ಸಾಧ್ಯ ಆಗಲಿಕ್ಕಿಲ್ಲ. ಹಾಗಾಗಿ ನಾನು ಮತ್ತೆ ಶಿಕ್ಷಣದ ಮಹತ್ವಕ್ಕೆ ವಾಪಾಸ್ ಬರ್ತೀನಿ. ಪ್ರತಿಯೊಬ್ಬ ಮಗುವನ್ನು ಜಾತ್ಯತೀತವಾಗಿ ಬೆಳೆಯುವಂತೆ ಮಾಡುವುದು ಶಿಕ್ಷಕರ ಕರ್ತವ್ಯ. ಅದಕ್ಕೆ ಸರಿಯಾದ ವ್ಯವಸ್ಥೆಯನ್ನು ರೂಪಿಸುವುದು ಸರ್ಕಾರದ ಕರ್ತವ್ಯ. ಆಮೇಲೆ ನೀವು ಹೇಳಿದ ಅಮೃತಕಾಲದ ಉರಿ, ನಂಜು, ದ್ವೇಷ, ಅಸಹನೆ, ಹಿಂಸೆ, ಸುಳ್ಳುಗಳು ಜಾಸ್ತಿ ಕಾಲ ನಿಲ್ಲುವುದಿಲ್ಲ. ಸುಳ್ಳು ಜನರಿಗೆ ಒಂದಲ್ಲ ಒಂದು ದಿನ ತಿಳಿಯುತ್ತದೆ. ಸ್ವಾತಂತ್ರ್ಯ, ಜಾತ್ಯತೀತತೆ, ಸಮಾನತೆ, ಭ್ರಾತೃತ್ವಗಳನ್ನು ಮೂಲದ್ರವ್ಯವಾಗಿಸಿಕೊಳ್ಳದ ಶಿಕ್ಷಣದಿಂದ ಏನೂ ಪ್ರಯೋಜನವಾಗುವುದಿಲ್ಲ.

• ನಿಮ್ಮ ವೃತ್ತಿ ನಿಮ್ಮ ಬರವಣಿಗೆಗೆ ಸಹಾಯ ಮಾಡಿತೇ? ಯಾವ ರೀತಿ? ಇಲ್ಲವಾದರೆ ನಿಮ್ಮೊಳಗೂ ಬೇರೆ ವೃತ್ತಿಗಳನ್ನು ಮಾಡಿಕೊಂಡು ಬರೆಯುತ್ತಿರುವ ನಮ್ಮ ಹಾಗೆ ಎರಡು ಲೋಕಗಳು ಇದ್ದವೇ? ಎರಡನ್ನೂ ನೀವು ಹೇಗೆ ತೂಗಿಸುತ್ತಿದ್ದಿರಿ?

ಪ್ರತಿಯೊಬ್ಬ ಮನುಷ್ಯನಲ್ಲೂ ಖಾಸಗಿ ಜೀವನ ಮತ್ತು ಸಾರ್ವಜನಿಕ ಜೀವನ ಅಂತ ಇರುತ್ತೆ. ಇದೊಂದು ತರಹ ಅಂತರಂಗ ಬಹಿರಂಗಗಳ ಪ್ರತಿರೂಪದ ಹಾಗೆ! ಹೊಟ್ಟೆಪಾಡಿಗಾಗಿ ನಾವು ವೃತ್ತಿ ಮಾಡುತ್ತಿದ್ದರೂ ನಮ್ಮೊಳಗೇ ಒಂದು ಕಾಳಜಿ, ಕಲೆ, ಸೃಜನಶೀಲತೆ, ಮಮಕಾರ, ತುಡಿತ ಇರುತ್ತದೆ. ಅದು ನಮ್ಮೊಳಗೆ ಇರುವ ಅದೆಷ್ಟೋ ಲೋಕಗಳಲ್ಲಿ ಸದಾ ಸಂಚಾರ ಮಾಡುತ್ತಾ ಇರುತ್ತದೆ. ಅದೇ ನನ್ನ ಬರವಣಿಗೆಯಾಗಿ ಮೂಡಿದೆ. ಅದಕ್ಕೆ ಜೀವಸತ್ವವಾಗಿ ಸಿಕ್ಕಿದ್ದು ಅಂಬೇಡ್ಕರ್, ಬಸವಣ್ಣ ಮತ್ತು ಬುದ್ಧ ತೋರಿದ ಬೆಳಕು. ಕೈಹಿಡಿದಿದ್ದು ಕಲೆ. ನನ್ನ ಭಾಷೆ. ನನ್ನ ಚಾಮರಾಜನಗರದ ಭಾಷೆಯಿಂದ ಜೀವಪೋಷಕತೆಯನ್ನು ಪಡೆದುಕೊಂಡಿರುವೆ. ಮಂಟೇಸ್ವಾಮಿ, ಮಹದೇಶ್ವರ ಕಾವ್ಯ ನನ್ನನ್ನು ಪ್ರಭಾವಿಸಿವೆ. ಹೀಗೆ ನನ್ನೊಳಗಿನ ಖಾಸಗಿ ವ್ಯಕ್ತಿ ನನ್ನಿಂದ ಇಷ್ಟೆಲ್ಲಾ ಮಾಡಿಸುತ್ತಿದ್ದಾನೆ.

• ನಿಮ್ಮನ್ನು ಆಳವಾಗಿ ಪ್ರಭಾವಿಸಿದ ಬರಹಗಾರರು ಅಥವಾ ವ್ಯಕ್ತಿಗಳು ಯಾರು?

ನನ್ನ ತಾಯಿ ಗೌರಮ್ಮ. ಅವರು ರೂಪಕಗಳಲ್ಲೇ ಮಾತಾಡ್ತಿದ್ರು. ಮಾತು ಮಾತಿಗೂ ಒಂದು ಗಾದೆ ಹೇಳೋರು. ನಮಮ್ಮ ಕೇವಲ ನಾಲ್ಕನೇ ಕ್ಲಾಸ್ ಓದಿದ್ದಾದ್ರೂ ಆ ಜನಪದರ ಜೀವನವೇ ಹೇಗೆ ಕಾವ್ಯಾತ್ಮಕವಾಗಿತ್ತು ಅನ್ನೋದು ನನ್ನ ತಾಯಿಯಿಂದಾಗಿ ನನಗೆ ಕಾಣಿಸಿತು.

• ಯುವ ಬರಹಗಾರರಿಗೆ ಎದುರಾಗುವ ಸಮಸ್ಯೆಯೆಂದರೆ ತಾವು ಓದಿಕೊಂಡ ಸಾಹಿತ್ಯ ಪರಂಪರೆಯ ಪೂರ್ವಸೂರಿಗಳ ಪ್ರಭಾವಳಿಯಿಂದ, ಶೈಲಿಯಿಂದ ಪ್ರಜ್ಞಾಪೂರ್ವಕವಾಗಿ ಬಿಡಿಸಿಕೊಳ್ಳುವ ಸವಾಲು. ಇದು ನಿಮಗೂ ಎದುರಾಗಿತ್ತೆ? ನೀವು ಇಂತಹ ಸವಾಲನ್ನು ಹೇಗೆ ನಿಭಾಯಿಸಿದಿರಿ?

ನಾನು ಅಕಾಡೆಮಿಕ್ ಹಿನ್ನೆಲೆಯಿಂದ ಬಂದವನಲ್ಲ. ನಾನು ನವ್ಯ ಅಥವಾ ನವ್ಯೋತ್ತರ ಸಾಹಿತ್ಯ ಓದುವಾಗ ಅಲ್ಲಿ ನನಗೆ ನನ್ನ ಬರವಣಿಗೆಗೆ ಹೊಳಹುಗಳು, ಕವಲುಗಳು, ಕಿಡಿಗಳು, ಟಿಸಿಲುಗಳು ಕಾಣಿಸಿಕೊಳ್ಳುತ್ತಿದ್ದವು. ಅವುಗಳನ್ನು ಹಿಡಿಯಲು ನನಗೆ ಸಾಧ್ಯ ಆಗ್ತಾ ಇತ್ತು ಮತ್ತು ನನ್ನದೇ ಶೈಲಿ ನನಗೆ ಸಿಕ್ಕಿತು. ಹಲವು ವಿಮರ್ಶಕರು ಅದನ್ನು ಗುರುತಿಸಿದ್ದಾರೆ.

• ‘ಕಲೆಗಾಗಿ ಕಲೆ’ ಎನ್ನುವ ವಿಚಾರವನ್ನು ನೀವು ಒಪ್ಪುತ್ತೀರಾ?

ನನಗೆ ‘ಕಲೆಗಾಗಿ ಕಲೆ’ ಎನ್ನುವುದರಲ್ಲಿ ನಂಬಿಕೆಯಿಲ್ಲ. ‘ಬದುಕಿಗಾಗಿ ಕಲೆ’ ಎಂಬುದನ್ನು ಹೆಚ್ಚು ನಂಬುತ್ತೇನೆ

• ಇಂದು ಅತೀವ ಸ್ಪರ್ಧೆಗಳ ಕಾಲದಲ್ಲಿ ನಾವಿದ್ದೇವೆ? ಸ್ಪರ್ಧೆಗಳು ನಿಗದಿ ಮಾಡುವ ಮೊತ್ತದ ನಡುವೆಯೇ ಮದುವೆ ಮುಯ್ಯಿಯ ತರಹದ ಸ್ಪರ್ಧೆ ಇದೆ. ಈ ಸ್ಪರ್ಧೆ, ಪ್ರಶಸ್ತಿಗಳನ್ನು ನೀವು ಹೇಗೆ ನೋಡುತ್ತೀರಿ?

ಸ್ಪರ್ಧೆ ಒಂದು ಮಟ್ಟದವರೆಗೂ ಒಳ್ಳೆಯದೇ. ಅದು ಯುವಕರಲ್ಲಿ ಬರೆಯುವಂತೆ ಪ್ರೇರೇಪಣೆ ನೀಡುತ್ತದೆ. ಆದರೆ, ಸ್ಪರ್ಧೆ ಆಯೋಜಿಸುತ್ತಿರುವವರ ನಡುವೆಯೇ ಏರ್ಪಡುತ್ತಿರುವ ಸ್ಪರ್ಧೆ ಅಪಾಯಕಾರಿ. ಅಲ್ಲಿ ಬರವಣಿಗೆ ಮುಖ್ಯವಾಗದೆ ಅದನ್ನು ತಮ್ಮ ಬ್ರಾಂಡಿಗೆ ಬಂಡವಾಳವಾಗಿ ನೋಡುವ ನಿಲುವುಗಳು ಗೋಚರಿಸತೊಡಗಿದಾಗ ಕಿರಿಕಿರಿಯೆನಿಸುತ್ತದೆ. ಬರವಣಿಗೆ ಕೇವಲ ಪ್ರಚಾರ ಸಾಮಗ್ರಿ ಆಗಬಾರದು. ಧಾವಂತದಲ್ಲಿ ಬಹಳಷ್ಟು ಕಳೆದುಹೋಗಿಯೇ ಹೋಗುತ್ತದೆ. ತಮ್ಮ ಬರಹವನ್ನು ಉಳಿಸಿಕೊಳ್ಳಬೇಕಾದ್ದು ಲೇಖಕರಿಗಿರಬೇಕಾದ ಎಚ್ಚರ.

• ಈ ಹೊತ್ತಿನ ತಲ್ಲಣಗಳನ್ನು ಹೇಳಲು ನಮಗೆ ಶಕ್ತವಾದ ಭಾಷೆ ಇದೆ ಎಂದು ನಿಮಗನಿಸುತ್ತದೆಯೇ?

ಭಾಷೆ ಒಂದು ನದಿಯ ಹಾಗೆ. ಅದಕ್ಕೊಂದು ಚಲನಶಕ್ತಿ ಇದೆ. ಅದು ತನ್ನನ್ನು ತಾನು ವಿಸ್ತರಿಸಿಕೊಂಡು ಬೆಳೆಯುತ್ತಿರುತ್ತದೆ. ಮಾತೃಭಾಷೆಯಲ್ಲಿ ಬರೆಯುವ ಲೇಖಕನಿಗೆ ಎಂಥದೇ ತಲ್ಲಣದ ಅಭಿವ್ಯಕ್ತಿ ಖಂಡಿತಾ ಸಾಧ್ಯ. ಅದಕ್ಕೆ ಲೇಖಕ ತನ್ನ ಗಮನಶಕ್ತಿಯನ್ನು ಹರಿತಗೊಳಿಸಿಕೊಳ್ಳುತ್ತಿರಬೇಕು.


• ನಿಮ್ಮ ಮುಂದಿನ ಯೋಜನೆಗಳೇನು?

‘ಸಂವಾದ’ ಪತ್ರಿಕೆಗೆ ಬರೆಯುತ್ತಿದ್ದ ಬೌದ್ಧ ಧರ್ಮದ ಸರಳವಾದ ನಿರೂಪಣೆ ಇರುವ ಸುಮಾರು 50 ಲೇಖನಗಳನ್ನೊಳಗೊಂಡ 'ಧಮ್ಮಯಾನ' ಅನ್ನುವ ಕೃತಿ ಅಚ್ಚಾಗಬೇಕಿದೆ. ಮತ್ತು ಒಂದು ಪ್ರವಾಸಕಥನವನ್ನು ಪ್ರಕಟಿಸಬೇಕೆನ್ನುವ ಯೋಜನೆಯಿದೆ.

ಗ್ರಾಮ ಭಾರತದ ಕೋವಿಡ್ ಡೈರಿ

ಕೋವಿಡ್ ಕಾಲಘಟ್ಟ ಹಿರಿಯ ಪತ್ರಕರ್ತ, ಕಾದಂಬರಿಕಾರ ಜಾಣಗೆರೆ ವೆಂಕಟರಾಮಯ್ಯ ಅವರನ್ನು ಬಹುವಾಗಿ ಕಾಡಿದಂತಿದೆ. ಈ ಸಂದರ್ಭದ ನೋವು-ಸಂಕಟಗಳಿಗೆ ಅವರ ಸೃಜನಶೀಲ ಮನಸ್ಸು ಯಾವ ಪರಿಯಲ್ಲಿ ಸ್ಪಂದಿಸಿದೆ ಎನ್ನುವುದಕ್ಕೆ ಇದೇ ಕಾಲಘಟ್ಟದಲ್ಲಿ ಬಂದ ಅವರ ಮೂರು ಕಾದಂಬರಿಗಳೇ ಸಾಕ್ಷಿ. ‘ಜಲಯುದ್ಧ’ ಮತ್ತು ‘ಭೂಮ್ತಾಯಿ’ ಕಾದಂಬರಿಗಳ ಮೂಲಕ ಸಹೃದಯರ ಮನಸೂರೆಗೊಂಡಿದ್ದ ಅವರೀಗ ‘ಅನ್ನದಾತ’ನ ಮೂಲಕ ಓದುಗರ ಮುಂದೆ ಬಂದಿದ್ದಾರೆ.

ಕೋವಿಡ್ ಕಾಲಘಟ್ಟ, ಮನುಷ್ಯತ್ವವನ್ನು ಪ್ರಸ್ತುತ ಸಮಾಜ ಎಷ್ಟೊಂದು ನಿಕೃಷ್ಟವಾಗಿ ಕಾಣುತ್ತಿದೆ ಎಂಬುದನ್ನು ಬಹು ಢಾಳಾಗಿ ತೋರಿಸಿದ ಸಂದರ್ಭವೂ ಆಗಿದೆ. ಕೊರೊನಾ ಕಾಟದಲ್ಲಿ ನಗರ, ಪಟ್ಟಣ ಪ್ರದೇಶಗಳ ಗೋಳಾಟಗಳೇನೋ ಕಣ್ಣಿಗೆ ಕುಕ್ಕುವಂತೆ ಎದ್ದುಕಂಡವು. ಆದರೆ, ಗ್ರಾಮಭಾರತವನ್ನು ಬಹುವಾಗಿ ನಿರ್ಲಕ್ಷಿಸಲಾಯಿತು. ಲಾಕ್‌ಡೌನ್ ಜಾರಿಯಾದಾಗಲೆಲ್ಲ ರೈತರು ಬೆಳೆದ ಹೂವು, ಹಣ್ಣು, ತರಕಾರಿ ಮಾರುಕಟ್ಟೆ ತಲುಪದೆ ಕೊಳೆತು ಹೋಗುತ್ತದೆ. ಬೆಳೆದ ಬೆಳೆಗಳು ಕಣ್ಣಮುಂದೆಯೇ ಮಣ್ಣು ಪಾಲಾದಾಗ ಅನ್ನದಾತನ ಕರುಳು ಚುರ್ರ್ ಎಂದಿದ್ದು ಯಾರ ಅನುಭವಕ್ಕೂ ದಕ್ಕದೇ ಹೋಯಿತು. ಇಂತಹ ಗ್ರಾಮಭಾರತ ಎಳೆ ಹಿಡಿದುಕೊಂಡ ರಚಿತವಾದ ಕಾದಂಬರಿಯೇ ‘ಅನ್ನದಾತ’.



ಪು: 304
₹300

ಕೃತಿ: ಅನ್ನದಾತ
ಲೇ: ಜಾಣಗೆರೆ ವೆಂಕಟರಾಮಯ್ಯ
ಪ್ರ: ಕಿರಂ ಪ್ರಕಾಶನ
ಸಂ: 7090180999

ಆರಂಭದಲ್ಲಿ ಸಿನಿಮಾ ಕಥೆಯಂತೆ ಐ.ಟಿ. ಕಂಪನಿಯಲ್ಲಿ, ಉದ್ಯೋಗದ ಬದುಕಿನಲ್ಲಿರುವ ಬ್ಯುಸಿ ಬ್ಯುಸಿ ಪಾತ್ರಗಳಿಂದ ತೆರೆದುಕೊಳ್ಳುವ ಕಾದಂಬರಿ ಮುಂದೆ ಆರ್ದ್ರವಾಗುತ್ತಾ ಹೋಗಿದೆ. ಹಳ್ಳಿ ಜಗತ್ತಿನ ಕಡೆಗೆ ತಿರುಗಿದೆ.

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಉನ್ನತ ಹುದ್ದೆಗೇರಿದರೂ ಗ್ರಾಮಪರ ಕಾಳಜಿ ಇರುವ ಕಥಾ ನಾಯಕ ಅವನ ಪ್ರಬುದ್ಧತೆಯನ್ನು ನಿರೂಪಿಸುತ್ತಾ ಹೋಗಿದೆ. ಅದರೊಳಗೆ ಸಾಂಸಾರಿಕ ಕಥನಗಳು ತೆರೆದುಕೊಂಡಿವೆ.ಇದ್ದಕ್ಕಿದ್ದಂತೆಯೇ ಘೋಷಣೆಯಾಗುವ ಲಾಕ್‌ಡೌನ್. ಅತಂತ್ರರಾಗುವ ರೈತರು, ಕೂಲಿಕಾರ್ಮಿಕರು, ಕಾಡುವ ಹಸಿವು, ಬದುಕಿನ ಹಪಹಪಿಕೆ ಎಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ಕಾದಂಬರಿ ಕಟ್ಟಿಕೊಟ್ಟಿದೆ.

ಕಥಾನಾಯಕನ ನೇತೃತ್ವದಲ್ಲಿ ಆರಂಭವಾಗುವ ಕೋವಿಡ್ ಕಾಲದ ದಾಸೋಹಕ್ಕೆ ಊರಿನ ಮಂದಿಯೆಲ್ಲಾ ಕೈಜೋಡಿಸುವ ಸನ್ನಿವೇಶವಿದೆ. ಸರ್ಕಾರ, ನಮ್ಮನ್ನಾಳುವ ಮಂದಿ ಕೈ ಬಿಟ್ಟರೂ ಪರಸ್ಪರ ಕೈ ಹಿಡಿದುಕೊಂಡು ಬಾಳೋಣ ಎಂಬ ತಿರುಳನ್ನು ಈ ಸನ್ನಿವೇಶ ಕಟ್ಟಿಕೊಟ್ಟಿದೆ. ರೈತರ, ಜನರ ಸಂಕಷ್ಟಕ್ಕೆ ಉಡಾಫೆಯಿಂದ ಪ್ರತಿಕ್ರಿಯಿಸುವ ಜನಪ್ರತಿನಿಧಿಗಳ ಬಗ್ಗೆ ಪಾತ್ರಗಳು ಸಾತ್ವಿಕ ಆಕ್ರೋಶವನ್ನು ಹೊರಹಾಕುವ ಪರಿ ಚೆನ್ನಾಗಿ ಮೂಡಿಬಂದಿದೆ. ನಗರವಾಸಿ ಉದ್ಯಮಿಯೊಬ್ಬ ಹಳ್ಳಿಯಲ್ಲಿ ತನ್ನ ಅಸ್ತಿತ್ವ ಸ್ಥಾಪಿಸಿಕೊಳ್ಳುವುದು ಸುಲಭವಲ್ಲ. ಅವನು ಸಾಕಷ್ಟು ಅಡೆತಡೆಗಳನ್ನು ಎದುರಿಸಲೇಬೇಕಾಗುತ್ತದೆ. ತನ್ನವರು ಎನಿಸಿಕೊಂಡವರಿಂದಲೇ ಊಹಾತೀತ ಪ್ರಸಂಗಗಳನ್ನು ಎದುರಿಸಬೇಕಾಗುತ್ತದೆ. ರಾಜಕಾರಣಕ್ಕಿಳಿದ ಕಥಾ ನಾಯಕನಿಗೆ ಕೊನೆಗೆ ದ್ರೋಹ ಎಸಗಿದವರು ತನ್ನವರೇ ಎಂದು ತಿಳಿಯುತ್ತದೆ. ಆಗ ಆತ ಎದುರಿಸುವ ಆಘಾತ ಊಹಾತೀತ.

ಗ್ರಾಮ ಭಾರತದಲ್ಲಿ ಏನೇನೋ ಅನಿವಾರ್ಯತೆಗೆ ಒಳಗಾಗಿ ರೈತರು ಭೂಮಿ ಮಾರಾಟ ಮಾಡಬೇಕಾದ ಪರಿಸ್ಥಿತಿ ಎದುರಾಗುವ ಪ್ರಸಂಗಗಳೂ ಅಲ್ಲಲ್ಲಿ ಇಣುಕಿವೆ. ಇಲ್ಲಿ ಸಾಲ ಅಥವಾ ಇನ್ಯಾವುದೇ ಸಂಕಷ್ಟಕ್ಕೊಳಗಾಗಿ ಭೂಮಿಯ ಮಾರಾಟ ನಡೆಯುವುದಲ್ಲ. ಹಳ್ಳಿಗರ ಮುಂದಿನ ಪೀಳಿಗೆ ನಗರಮುಖಿಗಳಾಗಿ ಅಲ್ಲಿಯೇ ಬದುಕು ಕಟ್ಟಿಕೊಳ್ಳುವುದು, ಮೂಲ ಬೇರು ಮರೆತುಬಿಡುವುದೂ ರೈತರ ಭೂಮಿ ಮಾರಾಟಕ್ಕೆ ಕಾರಣ ಎನ್ನುವುದು ಮನಸ್ಸಿಗೆ ನಾಟುತ್ತದೆ.

ಕಾದಂಬರಿಯ ನಿರೂಪಣೆ ಅಲ್ಲಲ್ಲಿ ಲಂಬವಾದಂತಿದೆ. ಆದರೆ, ಕೋವಿಡ್ ಎರಡು ಅಲೆಗಳ ಕಾಲದ ಗ್ರಾಮ ಭಾರತದ ನೆನಪಿನ ಡೈರಿಯಂತೆ, ಅನ್ನದಾತರ ಭಾವನೆಗಳ ದಾಖಲೆಯಂತೆ, ಸಂಕಷ್ಟಕಾಲದಲ್ಲಿ ಉಳ್ಳವರ ಜವಾಬ್ದಾರಿ ನೆನಪಿಸುವ ಫಲಕದಂತೆ ಈ ಕಾದಂಬರಿ ಭಾಸವಾಗುತ್ತದೆ. ಬರಹದ ಜನಪರ ಆಶಯಕ್ಕೆ ತಕ್ಕಂತೆ ಈ ಕೃತಿಯನ್ನು ‘ಪ್ರಜಾವಾಣಿ’ಗೆ ಅರ್ಪಿಸಿದ್ದು ಗಮನಾರ್ಹ.

ಕವನ

‘ಪ್ರಜಾವಾಣಿ @75’, ‘ವೀರಲೋಕ’ ಪ್ರಕಾಶನದ ಸಹಯೋಗದಲ್ಲಿ ಆಯೋಜಿಸಿದ್ದ ‘ಕಾವ್ಯ ಸಂಕ್ರಾಂತಿ-2023’ರ ಸ್ಪರ್ಧೆಯಲ್ಲಿ ಮೆಚ್ಚುಗೆ ಪಡೆದ ಕವನ

ಫಾಲ್ಗುಣ ಗೌಡ ಅಚವೆ ಅವರ **ದಣಪೆ**

ಕವನ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಕಥೆ

ಸ್ಮಿತಾ ಅಮೃತರಾಜ್ ಅವರ **ಕವಡೆ ನರಸಣ್ಣ**

ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಲೀಲಾವಳಿ



ಮೊದಲ ಪುಟದಿಂದ...

‘ನಾನು ದೇವರನ್ನು ನಂಬುವುದಿಲ್ಲ. ಮನುಷ್ಯನ ಶಕ್ತಿಯ ಮೇಲೆ ಮಾತ್ರ ನಂಬಿಕೆ. ನನ್ನ ಹೆಂಡತಿ ಲೀಲಾಳಿಗೆ ದೇವರ ಮೇಲೆ ಅಪಾರ ವಿಶ್ವಾಸ. ನಾನು ನನ್ನದೇ ಕಾರಿನಲ್ಲಿ ಅವಳನ್ನು ಅವಳು ಹೇಳಿದ ದೇವಾಲಯಗಳಿಗೆ ಕರೆದುಕೊಂಡು ಹೋಗ್ತೇನೆ. ಅವಳು ದೇವರ ದರ್ಶನ ಮಾಡಿ ಬರ್ತಾಳೆ. ನಾನು ಕಾರಲ್ಲಿ ಅವಳಿಗಾಗಿ ಕಾಯುತ್ತೇನೆ’ ಎಂದು ಅವರು ಹೇಳುತ್ತಿದ್ದರು. ಒಮ್ಮೆ ನಮ್ಮ ಮನೆಗೆ ಬಂದು ನಾಲ್ಕಾರು ಗಂಟೆ ಕುಳಿತಿದ್ದರು. ಕುಡಿಯಲು ನೀರು ಬೇಕು ಎಂದರು. ಕೊಟ್ಟೆ. ಕೊಡುವಾಗ ‘ಇದು ಬೋರ್ ನೀರು. ರುಚಿ ಇಲ್ಲ’ ಎಂದೆ. ತಕ್ಷಣವೇ ‘ಐ ಬೋರ್ಡ್ ಯು’ ಎಂದು ಚಟಾಕಿ ಹಾರಿಸಿದರು. ನನ್ನ ಬದುಕಿನಲ್ಲಿ ಅತ್ಯಂತ ಪ್ರಭಾವ ಬೀರಿದ ವ್ಯಕ್ತಿ ಅವರು. ದುಃಖದಲ್ಲಿ ನನ್ನನ್ನು ಸಂತೈಸಿದ್ದರು’ ಹೀಗೆ ಕಾರಂತರ ನೆನೆದ ಸಂತಸ ಅವರಿಗೆ.

‘ಒಮ್ಮೆ ಶಿವರುದ್ರಪ್ಪನವರ ಯಾವುದೋ ಹಾಡನ್ನು ಹೇಳಿದ್ದೆ. ಅದನ್ನು ಆಕಾಶವಾಣಿಯಲ್ಲಿ ಕೇಳಿ ಅವರು ಇಷ್ಟಪಟ್ಟಿದ್ದರು. ಅವರ ‘ಉಡುಗಣ ವೇಷ್ಟಿತ’ ಹಾಡನ್ನು ತುಂಬಾ ಮೆಚ್ಚಿಕೊಂಡಿದ್ದರು. ಎಲ್ಲಿ ಹೋದರೂ ಅದನ್ನು ಹೇಳೋರು. ನನಗೆ ಪತ್ರ ಬರೆದು ಹೊಗಳೋರು. ಕೆಲವು ಕಾಲ ಅವರು ನನಗೆ ಮೇಷ್ಟ್ರಾಗಿದ್ದರು. ಅವರ ಕೊನೆಯ ಕಾಲದಲ್ಲಿ ಒಮ್ಮೆ ನನ್ನನ್ನು ನೋಡಬೇಕು ಎಂದು ಬಯಸಿದರು. ನೋಡಲು ಹೋಗಿದ್ದೆ. ಒಂದಿಷ್ಟು ಹಾಡುಗಳನ್ನು ಹೇಳಿದೆ. ‘ನಾನು ಕೃಷ್ಣನ ಬಗ್ಗೆ ಬರೆದ ಹಾಡುಗಳಿಗೆ ನೀನು ಸಂಗೀತ ಸಂಯೋಜಿಸಿ ಹಾಡಬೇಕು ಎಂದು ಕೇಳಿಕೊಂಡರು. ನಾನೇನೋ ಸಂಗೀತ ಸಂಯೋಜನೆ ಮಾಡಿದೆ. ಆದರೆ ಕಾರ್ಯಕ್ರಮ ನಡೆಸಲು ಆಗಲಿಲ್ಲ. ಅದೊಂದು ವ್ಯಥೆ ನನ್ನೊಳಗೇ ಉಳಿದುಕೊಂಡು ಬಿಟ್ಟಿತು. ಇತ್ತೀಚಿಗೆ ಕೆಲವು ವರ್ಷಗಳ ಹಿಂದೆ ಆ ಕಾರ್ಯಕ್ರಮ ಮಾಡಿದೆ. ಆದರೂ ಅವರು ಬದುಕಿದ್ದಾಗ ಮಾಡಲಾಗಲಿಲ್ಲವಲ್ಲ ಎಂಬ ನೋವು ಇನ್ನೂ ಇದೆ’ ಎಂದು ಕಣ್ಣೀರು ತಂದುಕೊಂಡರು.

‘ದ.ರಾ.ಬೇಂದ್ರೆ ಅವರು ಕವನ ವಾಚಿಸುವುದನ್ನು ನೋಡಿದ್ದೆ. ಅವರ ಕವಿತೆ ಓದಿದರೆ ಮತ್ತೆ ಅದನ್ನು ಯಾರೂ ಹಾಡುವುದು ಬೇಡ ಹಾಗೆ ಓದುತ್ತಿದ್ದರು. ಒಮ್ಮೆ ಧಾರವಾಡದಲ್ಲಿ ಅವರ ನಾಟಕವೊಂದಕ್ಕೆ ಹಾಡಿದೆ. ಅದನ್ನು ಕೇಳಿದ ಬೇಂದ್ರೆ ‘ಎಷ್ಟು ಛಲೋ ಹಾಡ್ತೀಯಮ್ಮ ಆಶಾ ಭೋಂಸ್ಲೆ ಹಾಗೆ’ ಎಂದು ಬೆನ್ನುತಟ್ಟಿದ್ದರು’ ಎಂದು ಖುಷಿಗೊಂಡರು.

‘ಆಕಾಶವಾಣಿಗೆ ಯಾವುದೇ ರೂಪಕ ಮಾಡಿದರೂ ಹೊಸ ಹೊಸ ಕವಿತೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೆ. ಒಮ್ಮೆ ಒಂದು ರೂಪಕಕ್ಕೆ ಕೆ.ಎಸ್. ನರಸಿಂಹಸ್ವಾಮಿ ಅವರಿಗೆ ಹೊಸ ಕವಿತೆಗಳು ಬೇಕು ಎಂದಿದ್ದೆ. ಆದರೆ ಅಷ್ಟರಲ್ಲೆ ನನಗೆ ಆರೋಗ್ಯ ಹದಗೆಟ್ಟಿತು. ಈಗ ನನಗೆ ಕಾಯಿಲೆ ಆಗಿದೆ. ಗುಣವಾದ ಮೇಲೆ ಕವಿತೆ ತೆಗೆದುಕೊಳ್ಳುತ್ತೇನೆ ಎಂದು ಅವರಿಗೆ ತಿಳಿಸಿದ್ದೆ. ಬೆಂಗಳೂರು ಗುಣಶೀಲ ಆಸ್ಪತ್ರೆಯಲ್ಲಿ ಇದ್ದೆ. ಒಂದು ದಿನ ನಾನು ಮಲಗಿದ್ದಾಗ ದೂರದಲ್ಲಿ ಯಾರೋ ಬಂದ ಹಾಗೆ ಕಾಣಿಸಿತು. ನೋಡಿದರೆ ಕೆ.ಎಸ್.ನ. ಬಂದವರೆ ನನ್ನ ತಲೆ ಸವರಿ ‘ನೋಡು ನಿನಗೋಸ್ಕರ ಕವನ ತಂದಿದ್ದೀನಿ’ ಎಂದರು. ‘ನೀನು ಆಸ್ಪತ್ರೆಯಲ್ಲಿ ಇರುವುದು ಗೊತ್ತಾಯ್ತು. ನಿನ್ನ ನೋಡಿದ ಹಾಗೂ ಆಯ್ತು, ಕವನ ಕೊಟ್ಟ ಹಾಗೂ ಆಯ್ತು ಎಂದು ಬಂದೆ’ ಎಂದರು. ಈ ಸರಳತನಕ್ಕೆ ಈ ದೊಡ್ಡತನಕ್ಕೆ ಏನು ಹೇಳೋಣ’ ಎಂದು ತಮ್ಮಷ್ಟಕ್ಕೆ ತಾವೇ ಪ್ರಶ್ನೆ ಮಾಡಿಕೊಂಡರು.

‘ಒಮ್ಮೆ ಬೆಂಗಳೂರಿನಲ್ಲಿ ಭ್ರಮರ ಟ್ರಸ್ಟ್ ಕಾರ್ಯಕ್ರಮದಲ್ಲಿ ಕೆ.ಎಸ್.ನಿಸಾರ್ ಅಹ್ಮದ್ ಅವರ ಹೊಸ ಹೊಸ ಹಾಡುಗಳನ್ನು ಹೇಳಿದೆ. ಅದನ್ನು ಕೇಳಿ ಅವರಿಗೆ ತುಂಬಾ ಇಷ್ಟ ಆಯ್ತು. ಒಂದು ಹಾಡಂತೂ ಇದನ್ನು ಬರೆದಿದ್ದು ನಾನೇನಾ ಅಮ್ಮಾ ಎಂದು ಕೇಳಿದರು. ನನಗೆ ತುಂಬಾ ದುಃಖ ವ್ಯಥೆಯಾಗುತ್ತಿದೆ. ಯಾಕೆಂದರೆ ನಾನು ಬರೆದಿರುವುದು ಮೂರೇ ಕವನ ಅಮ್ಮ. ಕುರಿಗಳು ಸಾರ್ ಕುರಿಗಳು, ಜೋಗದ ಸಿರಿ, ಬೆಣ್ಣೆ ಕದ್ದನಮ್ಮ ಈ ಹಾಡುಗಳನ್ನು ಮಾತ್ರ ಹಾಡ್ತಾರೆ. ಹೊಸ ಹಾಡು ಹೇಳಲ್ಲ’ ಎಂದು ಖೇದ ವ್ಯಕ್ತಪಡಿಸಿದ್ದರು’ ಎಂದು ಹೇಳಿ ಹೊಸ ಹಾಡಿನ ಮಹತ್ವ ತಿಳಿಸಿದರು.

‘ಗೋಪಾಲಕೃಷ್ಣ ಅಡಿಗರು ನನಗೆ ಎರಡು ವರ್ಷ ಗುರುಗಳಾಗಿದ್ದರು. ನನ್ನ ಕಂಡರೆ ಖುಷಿ ಅವರಿಗೆ. ನಮ್ಮ ಮನೆಗೂ ಬರೋರು. ಅವರ ಕವನಗಳ ಬಗ್ಗೆ ಚರ್ಚೆ ಮಾಡುತ್ತಿದ್ದೆ. 1959ರಲ್ಲಿ ನನಗೆ ಟೈಫಾಯ್ಡ್ ಆಗಿತ್ತು. 6 ತಿಂಗಳು ಮಲಗಿದ್ದೆ. ಆಗ ಅಡಿಗರು ಮೈಸೂರಿನ ಸೇಂಟ್ ಫಿಲೋಮಿನಾ ಕಾಲೇಜಿನಲ್ಲಿದ್ದರು. 6 ತಿಂಗಳೂ ನನಗೆ ಅನ್ನವನ್ನೇ ಕೊಟ್ಟಿರಲಿಲ್ಲ. ಕೆಲದಿನಗಳ ನಂತರ ಸ್ವಲ್ಪ ಅನ್ನ ಕೊಟ್ಟರು. ಒಂದು ದಿನ ನಾನು ಅನ್ನ ಕೊಟ್ಟಿಲ್ಲ ಎಂದು ಅಳುತ್ತಿದ್ದೆ. ಆ ದಿನ ಅಡಿಗರು ಬಂದಿದ್ದರು. ನನ್ನ ತಲೆ ಮೇಲೆ ಕೈಯಿಟ್ಟು ‘ನೋಡಮ್ಮ ನಿನ್ನ ತಂದೆ ತಾಯಿ ನಿನ್ನನ್ನು ಉಳಿಸಿಕೊಂಡಿದ್ದಾರೆ. ಹೋಗ್ತಾ ಹೋಗ್ತಾ ಜಾಸ್ತಿ ಕೊಡ್ತಾರೆ. ನೀನು ಗುಣವಾಗು ಆಮೇಲೆ ನಿನಗೆ ಏನು ಬೇಕೋ ಅದನ್ನು ತಿನ್ನೋವಂತೆ’ ಎಂದು ಸಮಾಧಾನ ಮಾಡಿದ್ದರು’ ಎಂದು ಹೇಳುತ್ತಾ ಇಂತಹ ಹಲವಾರು ಮಂದಿ ಸಾಹಿತಿಗಳ ಸಂಪರ್ಕದಿಂದಲೇ ನನ್ನ ಬದುಕು ಪೂರ್ಣವಾಗಿದೆ ಎಂದರು.



ನೆಚ್ಚಿನ ಕವಿ ಕುವೆಂಪು ಅವರೊಂದಿಗೆ

‘ಗೋಪಾಲಕೃಷ್ಣ ಅಡಿಗರಿಗೆ ಪಾರ್ಶ್ವವಾಯು ಆಗಿತ್ತು. ಆಗ ನಾನು ಮತ್ತು ರಘುರಾಂ ಅವರನ್ನು ನೋಡಲು ಹೋಗಿದ್ದೆವು. ಆಗ ಅಡಿಗರು ‘ನರಸಿಂಹರಾಜ ಮೊಹಲ್ಲಾದಲ್ಲಿ ನನ್ನ ಮನೆಯೊಂದಿದೆ. ಅದನ್ನು ಮಾರಾಟ ಮಾಡಿಸಿಕೊಟ್ಟರೆ ನನಗೆ ಸಹಾಯವಾಗುತ್ತದೆ’ ಎಂದರು. ತಕ್ಷಣವೇ ರಘುರಾಂ ತಾವು ಮಾರಾಟ ಮಾಡಿಸುವುದಾಗಿ ಹೇಳಿದರು. ‘ಹೀಗೆ ಹೇಳಿದ ಹತ್ತನೇ ವ್ಯಕ್ತಿ ನೀನು’ ಎಂದು ರಘುರಾಂ ಅವರಿಗೆ ಹೇಳಿದಾಗ ‘ಇಲ್ಲ, ಖಂಡಿತ ಮಾಡಿಸಿಕೊಡುತ್ತೇನೆ’ ಎಂದು ರಘುರಾಂ ಭರವಸೆ ನೀಡಿದರು. ಅದರಂತೆ ಜೀಶಂಪ ಅವರ ಅಳಿಯನಿಗೆ ಅದನ್ನು ಮಾರಾಟ ಮಾಡಲಾಯಿತು. ನೋಂದಣಿ ಮಾಡಿಸಲು ಅಡಿಗರು ಸಬ್ ರಿಜಿಸ್ಟ್ರಾರ್ ಕಚೇರಿಗೆ ಬಂದರು. ಆಗ ಮಧ್ಯಾಹ್ನ 1.30 ಆಗಿತ್ತು. ಸಬ್ ರಿಜಿಸ್ಟ್ರಾರ್ ಇದ್ದಾರೋ ಇಲ್ಲವೋ ನೋಡಿಕೊಂಡು ಬರುತ್ತೇನೆ ಎಂದು ರಘುರಾಂ ಹೋದರು. ಅಲ್ಲಿಂದ ಬಂದವರೆ ‘ಸಾರ್ ಸಬ್ ರಿಜಿಸ್ಟ್ರಾರ್ ಊಟಕ್ಕೆ ಹೋಗಿದ್ದಾರಂತೆ’ ಎಂದರು. ತಕ್ಷಣವೇ ಅಡಿಗರು ‘ಇಲ್ಲೀವರೆಗೂ ಇಲ್ಲಿ ಕುಳಿತು ತಿಂದಿದ್ದು ಸಾಲದು ಅಂತಾ ಮನೆಗೆ ಹೋಗಿ ಊಟ ಬೇರೆ ಮಾಡಬೇಕಾ ಅವರು’ ಎಂದು ಪ್ರಶ್ನೆ ಮಾಡಿದ್ದರು’ ಹೀಗಿದ್ದರು ಅಡಿಗರು ಎಂದರು.

‘ಪು.ತಿ.ನ ಅವರು ನನ್ನ ಜೊತೆ 25 ವರ್ಷ ಮಾತನಾಡಲಿಲ್ಲ ಗೊತ್ತಾ? 1952 ರಲ್ಲಿ ಅವರ ಸಂಗೀತ ರೂಪಕಕ್ಕೆ ನಾನು ಹಾಡಬೇಕಿತ್ತು. ನನ್ನ ಹಾಡು ಹಾಡ್ತೀಯೋ ಎಂದು ಕೇಳಿ ಹಾಡಿಸಿದರು. ಆದರೆ ನನ್ನ ಗುರು ಪದ್ಮಚರಣ್‌ಗೆ ಇದು ಇಷ್ಟ ಇರಲಿಲ್ಲ. ನಾನು ಹಾಡುವುದನ್ನು ತಪ್ಪಿಸಿದರು. ಇದರಿಂದ ಸಿಟ್ಟಾದ ಪುತಿನ ಅಷ್ಟು ವರ್ಷಗಳ ಕಾಲ ನನ್ನ ಜೊತೆ ಮಾತನಾಡಲಿಲ್ಲ. ನನಗೆ ಸಂಗೀತ ಬೇಕಿತ್ತು. ಅದಕ್ಕೆ ಪದ್ಮಚರಣ್ ಮಾತು ಮೀರಲಿಲ್ಲ ನಾನು. ಪುತಿನ ಸಿಟ್ಟು ಮಾಡಿಕೊಂಡಿದ್ದು ಸರಿ ಇತ್ತು. ಆದರೆ ನಾನು ಇಕ್ಕಟ್ಟಿನಲ್ಲಿದ್ದೆ. ನಂತರ ಎಷ್ಟೋ ವರ್ಷಗಳ ಮೇಲೆ ಅವರ ಅಹಲ್ಯೆ ನಾಟಕಕ್ಕೆ ಸಂಗೀತ ಸಂಯೋಜನೆ ಮಾಡಿದೆ. ಅದು 1979ರಲ್ಲಿ ಪ್ರಸಾರ ಆಯ್ತು. ಆಗ ಅವರು ಅದನ್ನು ಮೆಚ್ಚಿಕೊಂಡು ‘ಇದಕ್ಕಿಂತ ಚೆನ್ನಾಗಿ ಸಂಗೀತ ಮಾಡೋದು ಯಾರಿಗೂ ಸಾಧ್ಯವಿಲ್ಲ’ ಎಂದರು. 1988ರಲ್ಲಿ ನನಗೆ ಸಖತ್ ಕಾಯಿಲೆ. ಆಗ ನಾನು ಕೃಷ್ಣನ ಕುರಿತು ಕವನಗಳನ್ನು ಬರೆದೆ. ಅದನ್ನು ಪು.ತಿ.ನ ಅವರಿಗೆ ಕೊಟ್ಟೆ. ಅದನ್ನು ಓದಿ ‘ಶ್ರೀಹರಿ ಗೀತ’ ಎಂದು ಹೆಸರು ಇಟ್ಟರು. ಜೊತೆಗೆ ಅದಕ್ಕೊಂದು ಚೆಂದದ ಮುನ್ನುಡಿ ಬರೆದುಕೊಟ್ಟರು. ಅದರಲ್ಲಿ ನನ್ನನ್ನು ಸುಗಮ ಸಂಗೀತದ ವಾಗ್ಗೇಯಕಾರ ಎಂದು ಗುರುತಿಸಿದರು. ಹೀಗಿತ್ತು ನಮ್ಮ ಸಂಬಂಧ’ ಎಂದು ಹೇಳಿದರು.

ಪದ್ಮಚರಣ್ ನನ್ನ ಗುರುಗಳು. ಅವರಿಂದ ನನಗೆ ಸಂಗೀತ ಸಿಕ್ಕಿತು. ಆದರೆ ಜೀವನ ಕಳಕೊಂಡೆ. ಅವರ ಬಳಿ 22 ವರ್ಷ ಕಲಿತಿದ್ದೇನೆ. ಅವರಲ್ಲಿ ಕಲಿಯುವುದು ಕಷ್ಟ. ಆದರೂ ಸಂಗೀತಕ್ಕಾಗಿ ಎಲ್ಲವನ್ನೂ ಸಹಿಸಿಕೊಂಡೆ. ವೃದ್ಧಾಪ್ಯದಲ್ಲಿ ಅವರಿಗೆ ಆರೋಗ್ಯ ಸರಿ ಇಲ್ಲದಾಗ ಹುಳಿಮಾವಿನಲ್ಲಿ ಇದ್ದರು. ನನ್ನ ನೋಡಲು ಬಯಸಿದರು. ಹೋದೆ. ಆಗ ಅವರು ಯಾರನ್ನೂ ಗುರುತಿಸುತ್ತಿರಲಿಲ್ಲ. ನಾನು ಅವರ ಎದುರಿಗೆ ನಿಂತಾಗ ‘ಇವರು ಯಾರು ಎಂದು ಗೊತ್ತಾಯಿತಾ’ ಎಂದು ಅವರ ಜೊತೆ ಇದ್ದವರು ಕೇಳಿದರು. ಸ್ವಲ್ಪ ಹೊತ್ತು ನನ್ನ ನೋಡಿ ‘She is my music' ಎಂದರು.

ಹೌದು, ಎಚ್.ಆರ್.ಲೀಲಾವತಿ ಕೇವಲ ಪದ್ಮಚರಣ್ ಸಂಗೀತ ಮಾತ್ರ ಆಗಿರಲಿಲ್ಲ. ಆಗಿನ ಕಾಲದ ಬಹುತೇಕ ಕವಿಗಳ ಸಂಗೀತವೂ ಆಗಿದ್ದರು!

ಅಂಗೈಯಲ್ಲಿ ಜಗತ್ತು ಕಟ್ಟಿಕೊಡುವ ಕೃತಿ



ಪು: 668
₹650

ಜಗಲಿಯಿಂದ ಜಗತ್ತು
ಲೇ: ನಾಗತಿಹಳ್ಳಿ ಚಂದ್ರಶೇಖರ
ಪ್ರ: ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ
ಸಂ: 080-26712230

ಈ ಹಿಂದೆ ‘ಅರಿಗಟೊ ಗೊಜಾಯಿಮಸ್’ ಎಂಬ ಶೀರ್ಷಿಕೆ ಹೊತ್ತ ಕೃತಿಯಲ್ಲಿ ಜಪಾನ್‌ಗೊಂದು ಕೃತಜ್ಞತೆ ಸಲ್ಲಿಸುತ್ತಾ, ಪುಟ್ಟ ದೇಶದಲ್ಲಿ ಓಡಾಡಿದ ನೆನಪುಗಳ ಬುತ್ತಿಯನ್ನು ಲೇಖಕ ನಾಗತಿಹಳ್ಳಿ ಚಂದ್ರಶೇಖರ ಅವರು ಓದುಗರ ಮುಂದಿಟ್ಟಿದ್ದರು. ಈ ಹೊಸ ಕೃತಿಯಲ್ಲಿ ಅವರ ಪಯಣ ವಿಸ್ತಾರವಾಗಿದೆ, ವಿವರವಾಗಿದೆ.

ಜಪಾನ್ ಜೊತೆಗೆ ಅಮೆರಿಕ, ಫ್ರಾನ್ಸ್, ಈಜಿಪ್ಟ್ ಹೀಗೆ ಸುತ್ತಾಡುತ್ತಾ ಅಲ್ಲಿನ ಸ್ಥಳಗಳಿಗೆ ತಾವು ಭೇಟಿ ಕೊಟ್ಟಾಗ ಸೆಳೆದ ವಸ್ತುಗಳು, ವ್ಯಕ್ತಿಗಳು, ಚೆಂದದ ಏರೋಪ್ಲೇನ್‌ಗಳು, ಎದುರಾದ ಅಪರೂಪದ ಘಟನೆಗಳು, ಹಬ್ಬ ಹೀಗೆ ಅನುಭವ, ಅನುಭಾವದ ಸರಣಿಗಳನ್ನು ಹೆಕ್ಕಿ, ಓದುಗರಿಗೆ ಕಥೆಯಂತೆ ಇಲ್ಲಿ ಹೇಳುತ್ತಾ ಹೋಗಿದ್ದಾರೆ. ವಿದೇಶದ ಪ್ರವಾಸದ ಜೊತೆಗೆ ಹೊರನಾಡಿನಲ್ಲಿ ಭೇಟಿ ಮಾಡಿದ ಅಪರೂಪದ ಸ್ಥಳಗಳ ಬಗ್ಗೆಯೂ ಇಲ್ಲಿ ವರ್ಣನೆಯಿದೆ. ಉದಾಹರಣೆಗೆ ‘ಚಾಪ್ಲಿನ್ ಮನೆಯಲ್ಲಿ’ ಎಂಬ ಅಧ್ಯಾಯದಲ್ಲಿ ಆತನ ಮನೆಯನ್ನು ಮನೆಯನ್ನಷ್ಟಾಗೇ ನೋಡದೆ ಆತನ ಸಿನಿಮಾಗಳು ಪ್ರಸಕ್ತ ಕಾಲಕ್ಕೂ ಹೇಗೆ ವಾಸ್ತವ ಎಂದು ವಿವರಿಸಿದ್ದಾರೆ. ವೈಟ್ ಹೌಸ್ ಮುಂದಿದ್ದ ಫಲಕಕ್ಕೂ, ಬೆಂಗಳೂರಿನ ವಿಧಾನಸೌಧದ ಮುಂದಿರುವ ಫಲಕದಲ್ಲಿನ ಮಾತಿಗೂ ಸಂಪರ್ಕ ಕಲ್ಪಿಸಿ ಅವರು ಸೂಕ್ಷ್ಮವಾಗಿ ಕುಟುಕುವ ಕೆಲಸವನ್ನೂ ಮಾಡಿದ್ದಾರೆ. ಜಪಾನ್‌ನಲ್ಲಿ ತಿರುಗಾಡಿದ್ದಷ್ಟೇ ಅಲ್ಲದೆ, ಅಲ್ಲಿನ ಪದಗಳನ್ನು ಪಟ್ಟಿ ಮಾಡಿ ಜಪಾನ್‌ಗೆ ಹೋದವನು ಬದುಕಬಹುದಾದಷ್ಟು ಬೇಕಾಗುವ ಒಂದಿಷ್ಟು ಮಾತುಗಳನ್ನು ಕಟ್ಟಿ ಕೊಟ್ಟಿದ್ದಾರೆ. ಹೊರನಾಡಿನ ಹೆಜ್ಜೆಗಳ ಜೊತೆಗೆ ಒಳನಾಡಿನ ಕೇರಳ, ಶ್ರವಣಬೆಳಗೊಳ ಹೀಗೆ ಹಲವು ಸ್ಥಳಗಳಿಗೆ ಭೇಟಿ ನೀಡಿದ ಅನುಭವಗಳ ಬುತ್ತಿ ಇಲ್ಲಿದೆ.

ಪ್ರವಾಸ ಕಥನಗಳ ಸಿದ್ಧಸೂತ್ರವನ್ನು ಬದಿಗೊತ್ತಿ, ಒಂದೇ ಒಂದು ಛಾಯಾಚಿತ್ರವನ್ನು ಅಡಕಗೊಳಿಸದೆ ಊರಿನ, ಘಟನೆಗಳ ವರ್ಣನೆಯನ್ನು ಮಾಡುತ್ತಾ ಲೇಖಕರು ಹೆಜ್ಜೆ ಇಡುತ್ತಾರೆ. ಹೃದ್ಯ ಬರವಣಿಗೆಯಲ್ಲಿ ಚಿತ್ರಕಶಕ್ತಿ ಇದ್ದರೂ, ಕೇವಲ ಅಕ್ಷರಗಳೇ ತುಂಬಿರುವ ಈ ಬೃಹತ್ ಕೃತಿಯನ್ನು ಇಂದಿನ ಓದುಗ ಅರಗಿಸಿಕೊಳ್ಳುವುದು ಕಷ್ಟಸಾಧ್ಯ! ಒಟ್ಟಿನಲ್ಲಿ ಬಾಲ್ಯದಲ್ಲಿ ಸ್ಕೂಲ್ ಇನ್ಸ್‌ಪೆಕ್ಟರ್ ಎದುರು ‘ಲಾರಿ ಡ್ರೈವರ್ ಆಗ್ತೀನಿ’ ಎಂದು ಎದೆ ಸೆಟೆಸಿ ಹೇಳಿದ್ದ ನಾಗತಿಹಳ್ಳಿ ಅವರು ಓದುಗರನ್ನೆಲ್ಲಾ ಲಾರಿಯಲ್ಲೇ ಗುಡ್ಡೆ ಹಾಕಿ ವಿಶ್ವ ಸುತ್ತಿಸಿದ್ದಾರೆ.





ಸಸ್ಯಗಳ ಅದ್ಭುತ ಲೋಕ

ಪುಷ್ಪಾ ಮೋಹನ ಮುದಕವಿ

ಸಸ್ಯ ಶಾಸ್ತ್ರದಲ್ಲಿ ವಿಶೇಷ ಆಸಕ್ತಿ ತಳೆದ ನನಗೆ ಕಳೆದ ಬೇಸಿಗೆಯಲ್ಲಿ ಲಂಡನ್ ವಾಸ್ತವ್ಯದ ಅವಧಿಯಲ್ಲಿ ಕಿವ್, ರಾಯಲ್ ಬಟಾನಿಕಲ್ ಗಾರ್ಡನ್ ನೋಡುವ ಅವಕಾಶವನ್ನು ಮಗಳು-ಅಳಿಯ ಒದಗಿಸಿದ್ದು ಅವರ್ಣನೀಯ ಆನಂದವನ್ನು ಒದಗಿಸಿತ್ತು. ಅದೊಂದು ಸುಂದರ ಅನುಭವ.

ಲಂಡನ್ನಿನ ಬೇಸಿಗೆಯ ಬೆಳಗಿನ ಹಿತವಾದ ಬಿಸಿಲು, ತಂಪಾದ ವಾತಾವರಣ, ಹಕ್ಕಿಗಳ ಕಲರವ, ಬಾನೆತ್ತರಕ್ಕೆ ಬೆಳೆದ ವಿಧ ವಿಧ ಮರಗಳು, ಅಂದದ ವಾಸ್ತುಶಿಲ್ಪದಿಂದ ನಿರ್ಮಿತವಾದ 40ಕ್ಕೂ ಹೆಚ್ಚು ಐತಿಹಾಸಿಕ ಆಕರ್ಷಕ ಕಟ್ಟಡಗಳು, ಹಸಿರಾದ ಹುಲ್ಲು ಮೈದಾನ, ವಿವಿಧ ಜಾತಿಯ ಸಸ್ಯ ಸಂಕುಲ, ಅದರಲ್ಲಿ ಪಲ್ಲವಿಸಿದ ಬಣ್ಣ ಬಣ್ಣದ ಸುಂದರ ಪುಷ್ಪಗಳು, ಕನಸಿನ ಕಿನ್ನರ ಲೋಕವನ್ನೇ ಧರೆಗಿಳಿಸಿದ ಈ ಸುಂದರ ಕಿವ್ ರಾಯಲ್ ಬಟಾನಿಕಲ್ ಗಾರ್ಡನ್ ಲಂಡನ್ ನಗರದ ಅತ್ಯಂತ ಪ್ರಮುಖ ಆಕರ್ಷಣೆಗಳಲ್ಲೊಂದು.

ಪ್ರತಿವರ್ಷ ಸುಮಾರು 15 ಲಕ್ಷ ಪ್ರವಾಸಿಗರು ಭೇಟಿ ನೀಡುವ ತಾಣ. ಇದು ಲಂಡನ್ ನಗರದ ನೈಋತ್ಯ ದಿಕ್ಕಿನಲ್ಲಿ ಥೇಮ್ಸ್ ನದಿ ದಡದ ಲಂಡನ್ ಬರೋ ಆಫ್ ರಿಚ್‌ಮಂಡ್‌ನಲ್ಲಿ ನೆಲೆ ಕಂಡುಕೊಂಡ 18ನೇ ಶತಮಾನದಲ್ಲಿ (1759) ಮೈದಳೆದ ಉದ್ಯಾನ. 2003ರಲ್ಲಿ ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳ ಪಟ್ಟಿಯಲ್ಲಿ ಸ್ಥಾನ ಪಡೆಯಿತು. ಈ ಉದ್ಯಾನಕ್ಕೆ ನಾಲ್ಕು ಸಾರ್ವಜನಿಕ ಪ್ರವೇಶ ದ್ವಾರಗಳಿವೆ. ಲಂಡನ್ ಕೇಂದ್ರ ಸ್ಥಳದಿಂದ 30 ನಿಮಿಷಗಳ ದಾರಿ.

ಜಗತ್ತಿನ ವಿವಿಧ ಭಾಗಗಳಿಂದ ತಂದ ಸುಮಾರು 28,000 ಪ್ರಭೇದಗಳ ಸಸ್ಯಸಂಪತ್ತು ಮತ್ತು ಕ್ರಮವಾಗಿ ಜೋಡಿಸಲ್ಪಟ್ಟ 83 ಲಕ್ಷ ಸಸ್ಯ ಹಾಗೂ ಶಿಲೀಂಧ್ರಗಳ ಶುಷ್ಕ ಮಾದರಿಗಳ ಸಂಗ್ರಹವಿದೆ. ಸಹಸ್ರಮಾನದ ಬೀಜ ಬ್ಯಾಂಕ್‌ನ ತವರು. 30,000 ಬೀಜ ಮಾದರಿಗಳಿವೆ.

ರಾಯಲ್ ಹಾರ್ಟಿಕಲ್ಚರಲ್ ಸೊಸೈಟಿ ಮತ್ತು ಪ್ರೆಸಿಡೆಂಟ್ ಕ್ಯಾವೆಂಡಿಶ್‌ನ ಪ್ರಯತ್ನದಿಂದ ವಿಲಿಯಂ ಹೂಕರ್ ನಿರ್ದೇಶನದಲ್ಲಿ ಉದ್ಯಾನವನ್ನು 300 ಎಕರೆ ವರೆಗೆ ವಿಸ್ತರಿಸಲಾಯಿತು. ಪ್ರಥಮ ಮೇಲ್ವಿಚಾರಕ ಜಾನ್ ಸ್ಮಿತ್. ಕಿವ್ ಗಾರ್ಡನ್‌ನ ಮೂಲೆ ಮೂಲೆಯೂ ವಿಶೇಷವನ್ನು ಹೊಂದಿದೆ. ಅದರಲ್ಲೂ ಈ ಉದ್ಯಾನದಲ್ಲಿ ನೋಡಲೇಬೇಕಾದ ಹತ್ತು ಆಕರ್ಷಣೆಗಳು: ಟೆಂಪರೇಟ್ ಹೌಸ್, ಪಾಮ್ ಹೌಸ್, ಟ್ರೀ ಟಾಪ್ ವಾಕ್ ವೇ, ಡೇವಿಸ್ ಅಲ್ಪೈನ್ ಹೌಸ್, ಪ್ರಿನ್ಸೆಸ್ ಆಫ್ ವೇಲ್ಸ್ ಕನ್ಸರ್ವೇಟರಿ, ಆರ್ಬೋರೇಟಮ್, ಮರಿಯಾನ್ನೇ, ನಾರ್ತ್ ಗ್ಯಾಲರಿ, ಶಿರ್ಲೆ ಶೇರ್‌ವುಡ್ ಗ್ಯಾಲರಿ ಆಫ್ ಬಟಾನಿಕಲ್ ಆರ್ಟ್, ಗ್ರೇಟ್ ಪಗೋಡಾ ಮತ್ತು ಕಿವ್ ಪ್ಯಾಲೇಸ್.

ಒಮ್ಮೆ ಉದ್ಯಾನದ ಒಳಹೊಕ್ಕರೆ ಒಂದೇ ದಿನದಲ್ಲಿ ಆದ್ಯಂತವಾಗಿ ವೀಕ್ಷಿಸುವುದು ಅಸಾಧ್ಯ. ಅಷ್ಟೊಂದು ವಿಸ್ಮಯಕಾರಿ ಸಂಗತಿಗಳನ್ನು ತನ್ನ ಒಡಲಲ್ಲಿ ತುಂಬಿಕೊಂಡಿದೆ. ಹಾಗೇ ನಡೆಯುತ್ತಾ ನೋಡುತ್ತಾ ಹೋದಂತೆ ಉದ್ಯಾನದ ಅಗಾಧತೆಯ ಅರಿವಾಗುತ್ತಾ ಹೋಗುತ್ತದೆ. ಜಗತ್ತಿನಾದ್ಯಂತ ಸಮುದಾಯಗಳ ಅಗತ್ಯಗಳಿಗೆ ತಕ್ಕಂತೆ ವಿಜ್ಞಾನ ಮತ್ತು ಪ್ರಕೃತಿಗೆ ಅನುಗುಣವಾಗಿ ಹೊಸ ಹೊಸ ವಿಚಾರಗಳೊಂದಿಗೆ ವಿಸ್ತಾರವಾಗುತ್ತಾ ಸಾಗಿದೆ ಈ ಉದ್ಯಾನ. ಆ ಬದಲಾವಣೆಯನ್ನು ಬೃಹತ್ ಸಸ್ಯಸಂಗ್ರಹವೇ ಪ್ರತಿಬಿಂಬಿಸುತ್ತದೆ. ಎಲ್ಲಾ ಕಾಲಗಳಲ್ಲೂ ಕಿವ್ ಸೌಂದರ್ಯದ ಖನಿಯೇ. ಜಗತ್ತಿನ ಯಾವುದೇ ಉದ್ಯಾನದಲ್ಲೂ ಕಂಡುಬರದಂತಹ ವನಸ್ಪತಿ ಪ್ರಭೇದಗಳಿವೆ.



ಟೆಂಪರೇಟ್ ಹೌಸ್: 1862ರಿಂದಲೇ ಕಾರ್ಯನಿರ್ವಹಿಸುತ್ತಿದ್ದು ಡೆಸಿಮಸ್ ಬರ್ಟನ್ ಇದರ ವಿನ್ಯಾಸಕ. ಜಗತ್ತಿನ ಅತ್ಯಂತ ದೊಡ್ಡದಾದ ವಿಕ್ಟೋರಿಯನ್ ಗಾಜಿನ ಮನೆ. ಆಯತಾಕಾರದ ಸುಂದರ ರಚನೆ. ಪಾಮ್ ಹೌಸ್‌ನ ಇಮ್ಮಡಿ ಗಾತ್ರ. ಐದು ಖಂಡಗಳ, ಹದಿನಾರು ದ್ವೀಪಗಳ ಸಸ್ಯ ಸಮೂಹವಿಲ್ಲಿದೆ. ಸಮಶೀತೋಷ್ಣ ವಲಯದ 10,000 ಸಸ್ಯ ನಮೂನೆಗಳ ಮಧ್ಯೆ ಸಂಚರಿಸುವುದೊಂದು ಅದ್ಭುತ ಅನುಭವ. ಮಧ್ಯದಲ್ಲಿ ವೀಕ್ಷಣಾ ಗ್ಯಾಲರಿ ಇದೆ. ಬಾಳೆ, ನೇಪಲ್ ಯ್ಯಾಮ್ ಮೆಜೆಂಟಾ ಲಿಲ್ಲಿ ಪಿಲ್ಲಿ, ಕ್ಲೈಂಬಿಂಗ್ ವೈನ್ ಮೊದಲಾದ ಸಸ್ಯಗಳು ಇಲ್ಲಿವೆ.

ಪಾಮ್ ಹೌಸ್: ಇದು ಹಸಿರು ಮನೆ. ಕಿವ್‌ನ ಗಮನಾರ್ಹ ಕಟ್ಟಡ. ಐರಿಶ್ ಎಂಜಿನಿಯರ್ ಡೆಸಿಮಸ್ ಬರ್ಟನ್ನನೇ ಇದನ್ನು ರಚಿಸಿದ್ದು. ಪ್ರಪಂಚದ ಮಳೆಕಾಡು, ಉಷ್ಣವಲಯದ ಪಾಮ್ ಮಾದರಿಗಳ ಸಂಗ್ರಹ ಈ ಉಷ್ಣ ಹಾಗೂ ಆರ್ದ್ರ ಕಟ್ಟಡದಲ್ಲಿದೆ.

ಟ್ರೀ ಟಾಪ್ ವಾಕ್ ವೇ: ಡೆವಿಡ್ ಮಾಂಕ್ ಇದರ ವಿನ್ಯಾಸಕ. ಭೂಮಿಯಿಂದ 18 ಮೀಟರ್ ಎತ್ತರದ ಮೇಲೆ ನಿರ್ಮಿಸಲಾದ ಕಾನನದ ಮರಗಳ ನಡುವಿನ ಬಯಲಲ್ಲಿ ಮರಗಳಿಂದ ಆಚ್ಛಾದಿತವಾದ 200 ಮೀಟರ್ ಉದ್ದದ ವಿಹಾರ ಪಥದಲ್ಲಿ ಸಾಗುವದು ಪ್ರವಾಸಿಗರಿಗೊಂದು ಮೈನವಿರೇಳಿಸುವ ಅನುಭವ. 2008ರಲ್ಲಿ ಈ ಕ್ಯಾನೋಪಿ ವಾಕ್ ವೇ ಬಳಕೆಗೆ ತೆರೆದುಕೊಂಡಿತು. ಈ ಪಥಕ್ಕೆ ಮೆಟ್ಟಿಲುಗಳೂ ಇವೆ. ಲಿಫ್ಟ್ ಕೂಡ ಇದೆ. ಪಥ ರಂಧ್ರಗಳಿಂದ ಕೂಡಿದ್ದು ಲೋಹದಿಂದ ಮಾಡಲ್ಪಟ್ಟಿದೆ. ಮುಂದೆ ಸಾಗಿದಂತೆ ಇಡೀ ಸೇತುವೆಯೇ ಗಾಳಿಯಲ್ಲಿ ತೂರಾಡುವುದು. ಈ ಪಥದ ವಿಹಾರದಲ್ಲಿ ಪರಿಸರದಲ್ಲಿರುವ ಗಿಡ, ಮರ, ಸಸ್ಯ, ಪಕ್ಷಸಂಕುಲ, ಕೀಟ ವೈವಿಧ್ಯ ಶಿಲೀಂಧ್ರಗಳು, ಲೈಕೆನ್‌ಗಳ ಮಾದರಿಗಳನ್ನು ಕಣ್ತುಂಬಿಕೊಳ್ಳಬಹುದು.

ಅಲ್ ಪೈನ್ ಹೌಸ್‌ನಲ್ಲಿಯ ಪರ್ವತ ಪ್ರದೇಶದ, ಮೆಡಿಟರೇನಿಯನ್ ಭಾಗದ ಸಸ್ಯಗಳ ನೋಟ ಬಲು ಸೊಗಸು. ಪ್ರಿನ್ಸೆಸ್ ಆಫ್ ವೇಲ್ಸ್ ಕನ್ಸರ್ವೇಟರಿಯಲ್ಲಿ ತಂತ್ರಜ್ಞಾನದಿಂದ ನಿಯಂತ್ರಿತ ಬೇರೆ ಬೇರೆ ಹವಾಗುಣದ ಹತ್ತು ಸೂಕ್ಷ್ಮ ವಲಯಗಳಿವೆ. ಉಷ್ಣವಲಯದ, ಮಳೆಕಾಡುಗಳ ಮತ್ತು ಸಮಶೀತೋಷ್ಣ ವಲಯದ 30,000 ವಿಧ ವಿಧ ಸಸ್ಯ ಪ್ರಭೇದಗಳನ್ನು ಕಾಣಬಹುದು. ಗಣನೀಯವಾದ ಸಸ್ಯಗಳಿಂದ ಅಂಚು ಕಟ್ಟಿದ ವಿಹಾರ ಪಥದ ಬಣ್ಣ ಬಣ್ಣದ ಹೂಹಾಸು ರಮ್ಯಮನೋಹರ.

ಆರ್ಬೋರೇಟಮ್ (ಉಪವನ): ಕಿವ್‌ನ 2/3 ಭಾಗ ವಿಸ್ತರಿಸಿದೆ. ಇದನ್ನು ಸುತ್ತಿ ಬರುವಷ್ಟರಲ್ಲಿ ಸುಸ್ತಂತೂ ಖಂಡಿತ. ಆದರೆ ಜಗವನ್ನೇ ಸುತ್ತಿ ಬಂದಷ್ಟು ಆನಂದ, ತೃಪ್ತಿ. ಏಕೆಂದರೆ ಜಗತ್ತಿನ ಎಲ್ಲಾ ಭಾಗಗಳ ಸುಮಾರು 14,000 ಗಿಡಮರಗಳ ವಿವರವನ್ನು ಈ ಉಪವನದಲ್ಲಿ ಸಂಚರಿಸಿ ತಿಳಿದುಕೊಳ್ಳಬಹುದು. ಅತಿ ವಿರಳವಾಗಿ ದೊರೆಯುವ ಹಾಗೂ ಪುರಾತನ (ಕಿವ್‌ನಷ್ಟೇ) ಮರಗಳೂ ಇಲ್ಲಿವೆ. ಪ್ರತಿಯೊಂದು ಮರವೂ ಜ್ಞಾನದ ಆಕರ. ಅರಣ್ಯನಾಶದಿಂದ ಅಳಿಯುತ್ತಿರುವ ಹಲವಾರು ಪ್ರಭೇದಗಳ ರಕ್ಷಣೆಯ ಅರಿವು ಮೂಡುತ್ತದೆ. ಇಲ್ಲಿನ ಮರಗಳು ಓಕ್, ಜಪನೀಸ್ ಪಗೋಡಾ, ಬ್ಲ್ಯಾಕ್ ಲೋಕಸ್ಟ್, ಬೃಹದಾಕಾರದ ರೆಡ್ ವುಡ್, ಚೆಸ್ಟ್‌ನಟ್, ಪೆಂಡುಲಾ, ಬಿದಿರು ಸಸ್ಯ ಕುಟುಂಬದ ಬಹುತೇಕ ಎಲ್ಲ ಪ್ರಭೇದಗಳು ಇಲ್ಲಿವೆ. ಗ್ಯಾಲರಿಗಳಲ್ಲಿ ಸಸ್ಯಗಳ ಸುಂದರ ವರ್ಣಚಿತ್ರಗಳಿವೆ. ಅಂದಿನಿಂದ ಇಂದಿನವರೆಗಿನ ಸೊಗಸಾದ ಸಸ್ಯ ಛಾಯಾಚಿತ್ರಗಳಿವೆ. 1762ರಲ್ಲಿ ರಾಜಕುಮಾರಿ ಆಗಷ್ಟಾಳಿಗೆ ಬಳುವಳಿಯಾಗಿತ್ತ ಕಟ್ಟಡ ಪಗೋಡಾ. ಮೈಲುಗಳಾಚೆಯಿಂದಲೇ ಕಾಣಬಲ್ಲ ಗಗನಚುಂಬಿ ಕಟ್ಟಡ. ಹತ್ತು ಅಂತಸ್ತಿನ ಅಷ್ಟಕೋನಾಕೃತಿಯ ಚೈನೀಸ್ ಮಾದರಿಯ ರಚನೆ. ಸುಮಾರು 50 ಮೀಟರ್ ಎತ್ತರ. 18ನೇ ಶತಮಾನದ ವೈಭವವನ್ನು ಉಳಿಸಿಕೊಂಡಿದೆ. ವಿಲಿಯಂ ಚೇಂಬರ್ಸ್ ಇದರ ವಿನ್ಯಾಸಕ.

ಕಿವ್ ಪ್ಯಾಲೇಸ್ - ಗಾರ್ಡನ್‌ನಲ್ಲಿರುವ ಚಿಕ್ಕ ಅರಮನೆ, 1631ರಲ್ಲಿ ನಿರ್ಮಿತವಾದದ್ದು. ಈಗ ಉಳಿದಿರುವ ಡಚ್ ಹೌಸ್ ನೋಡಬಹುದಾಗಿದೆ.

ಕೃತ್ರಿಮ ಜೇನುಗೂಡು: ವನಸುಮಗಳ ಮೈದಾನದ ಹೃದಯ ಭಾಗದಲ್ಲಿ ಪ್ರತಿಷ್ಠಾಪಿಸಿದ 17ಮೀಟರ್ ಎತ್ತರದ ವಿಶೇಷ ಲಕ್ಷಣಗಳಿಂದ ಕೂಡಿದ ಕೃತ್ರಿಮ ಜೇನುಗೂಡು ಕಿವ್‌ನ ಮತ್ತೊಂದು ಆಕರ್ಷಣೆ. 1000 ಎಲ್‌ಇಡಿ ವಿದ್ಯುದ್ದೀಪಗಳು ದುಂಬಿಗಳ ಚಲನವಲನಗಳಿಗೆ ಅನುಗುಣವಾಗಿ ಬೆಳಗುವವಲ್ಲದೇ ಹಿನ್ನಲೆಯಲ್ಲಿ ಪ್ರತಿ ಶಬ್ದ ಕೂಡ ದುಂಬಿಯ ಸ್ಪರ್ಶಕ್ಕೆ ತಕ್ಕಂತೆ ಬದಲಾಗುವ ವಿನ್ಯಾಸ ಅಚ್ಚರಿ ಮೂಡಿಸುತ್ತದೆ. ಇಂಗ್ಲೆಂಡ್‌ನ ಕಲಾಕಾರ ವೂಲ್ಫ್ ಗಾಂಗ್ ಬಟ್ರಸ್ ಸೃಷ್ಟಿಸಿದ್ದು. ಈ ಜೇನುಗೂಡಿನ ವೈಶಿಷ್ಟ್ಯಪೂರ್ಣ ಜಾಲಂಧ್ರದ ಮೈಕಟ್ಟನ್ನು 170,000 ಅಲ್ಯುಮಿನಿಯಂ ಬಿಡಿ ಭಾಗಗಳಿಂದ ತಯಾರಿಸಲಾಗಿದೆ.

ನಿಲ್ಲೋಕೆ ನಿಕ್ಕರ್, ಗೆಲ್ಲೋಕೆ ಕುಕ್ಕರ್!

ಎಂ.ಎಸ್.ನರಸಿಂಹಮೂರ್ತಿ

ಬಾಗಿಲು ಸದ್ದಾದಾಗ ವಿಶ್ವ ತನ್ನ ಗೆಳೆಯ ಮೋಹನನ ಜೊತೆ ಹರಟುತ್ತಿದ್ದ.

'ರೀ, ಮೋಹನ್ ಜೊತೆ ಹರಟೆ ಸಾಕು. ಯಾರೋ ಬಾಗಿಲು ಬಡೀತಾ ಇದ್ದಾರೆ ತೆಗೀರಿ' ಎಂದಳು ಮಡದಿ ವಿಶಾಲು. 'ಬಡಿಯೋರು ನಿಮ್ಮ ಪೈಕೀನೇ ಇರ್ತಾರೆ, ನೀನೇ ತೆಗೀ' ಎಂದು ವಿಶ್ವ ರೇಗಿದ.

'ಈ ಮಟಮಟ ಮಧ್ಯಾಹ್ನ ದೆವ್ವ ಕುಣಿಯೋ ಹೊತ್ತಲ್ಲಿ ನಮ್ಮ ಬಂಧುಗಳು ಬರೊಲ್ಲ. ನಾನು ಬಾಗಿಲು ತೆಗೆಯೊಲ್ಲ' ಎಂದು ವಿಶಾಲು ಹಟ ಮಾಡಿದಳು.

'ಮುಂಬಾಗಿಲು ಕಿತ್ತು ಹಿಂಬಾಗಿಲು ಮಾಡಿಸ್ತೀನಿ. ಆಗ ಏನು ಬಡೀತಾರೆ ?' ಎಂದ ವಿಶ್ವ.

ಬಾಗಿಲ ಶಬ್ದ ಜಾಸ್ತಿ ಆಯ್ತು.

'ಕಿತ್ತು ಬಂದ್ರೆ ಕಷ್ಟ, ನಾನೇ ಹೋಗಿ ನೋಡ್ತೀನಿ, ನಿಮಗಂತೂ ಜವಾಬ್ದಾರಿ ಇಲ್ಲ'

ಗೊಣಗುತ್ತಾ ವಿಶಾಲು ಹೋಗಿ ಬಾಗಿಲನ್ನು ತೆಗೆದಳು. ಬಾವುಟಗಳನ್ನು ಹಿಡಿದಿದ್ದ ಇಪ್ಪತ್ತು ಜನ ನಿಂತಿದ್ದರು. ಯಾವುದೋ ಪಾರ್ಟಿಯಿಂದ ಮತಬೇಟೆಗೆ ಬಂದಿದ್ದರು. ಎಲ್ಲರೂ ಭಕ್ತಿಯಿಂದ ಅಣ್ಣಮ್ಮನ ಗುಡಿ ಟೈಪಲ್ಲಿ ನಮಸ್ಕಾರ ಮಾಡಿದರು. ಗುಂಪಿನ ನಾಯಕನೊಬ್ಬ ತುಂಬಾ ಕಾಳಜಿ ತೋರಿಸಿದ.

'ನಮಸ್ಕಾರ ವಿಶಾಲು ಅವರೇ, ತಾವು ನಮ್ಮ ಕ್ಷೇತ್ರದಲ್ಲಿರೋದು ಈ ಏರಿಯಾಗೇ ಭೂಷಣ' ಎಂದ.

'ಓಹ್! ಏನು ಎಲ್ಲಾ ಬಾವುಟಗಳು ಹಿಡ್ಕೊಂಡು ಬಂದಿದ್ದೀರ. ಐದು ವರ್ಷಗಳಿಂದ ಯಾರೂ ಬಂದಿರಲಿಲ್ಲ?' ಎನ್ನುತ್ತಾ ವಿಶ್ವ ಬಂದು ಬಾಗಿಲ ಬಳಿ ನಿಂತ. ಅವನ ಹಿಂದೆ ಮೋಹನ್ ಸಹ ಬಂದ. ಈ ಮನೆಯಲ್ಲಿ ಮೂರು ಓಟಿದೆ ಎಂದು ತಿಳಿದ ಪಾರ್ಟಿ ಜನರಿಗೆ ಖುಷಿಯಾಯ್ತು. ಪ್ರತಿಯೊಬ್ಬರಿಗೂ ಬೇರೆ ಬೇರೆ ನಮಸ್ಕಾರಗಳು ಬಿದ್ದವು.

ಬ್ರಹ್ಮಕಮಲ 12 ವರ್ಷಕ್ಕೆ ಒಮ್ಮೆ ಅರಳುತ್ತೆ. ರಾಜಕಾರಣಿಗಳು 5 ವರ್ಷಕ್ಕೆ ಒಮ್ಮೆ ಕೆರಳ್ತಾರೆ ಎಂದುಕೊಂಡ ವಿಶ್ವ.

'ನಮಸ್ಕಾರ ಸಾರ್, ನೀವು ಸಿಕ್ಕಿದ್ದು ಮೊಸರನ್ನದಲ್ಲಿ ಗೋಡಂಬಿ ಸಿಕ್ಕಂತಾಯ್ತು. ಭಾನುವಾರದ ಮಧ್ಯಾಹ್ನ ಊಟ ಮಾಡಿ ಮನೇಲೇ ಇರ್ತೀರ ಅಂತ ಗೊತ್ತಾಯ್ತು. ಅದಕ್ಕೆ ನಿಮ್ಗೆ ನಮಸ್ಕಾರ ಹಾಕೋಣ ಅಂತ ಬಂದ್ವಿ' ಎಂದು ಲೀಡರ್ ಹೇಳಿದ. 'ಏನಾಗ್ಬೇಕಾಗಿತ್ತು ನಮ್ಮಿಂದ?' ವಿಶಾಲು ವಿಷಯಕ್ಕೆ ಬಂದಳು.

'ಮೇಡಂ, ನಿಮ್ಮ ಮನೆಯ ಕುಕ್ಕರ್ ಸೈಜ್, ನಿಮ್ಮೆಜಮಾನರ ನಿಕ್ಕರ್ ಸೈಜ್ ಬೇಕಿತ್ತು' ಎಂದ ನಾಯಕ.

ವಿಶಾಲು ಗೊಳ್ಳನೆ ನಕ್ಕಳು. ನಮ್ಮೆಜಮಾನರ ನಿಕ್ಕರ್ ಸೈಜ್ ನನಗೇ ಗೊತ್ತಿಲ್ವಲ್ಲ ಎನ್ನಿಸಿತು. ವಿಶ್ವನ ಮುಖ ನೋಡಿದಳು.

'ಲೇ, ಮದ್ವೆ ಆಗಿ ಇಷ್ಟು ವರ್ಷ ಆಗಿದೆ. ಗಂಡನ ನಿಕ್ಕರ್ ಸೈಜ್ ಗೊತ್ತಿಲ್ಲ ಅಂದ್ರ ಹೇಗೆ? ಈ ವಿಷಯ ನಾಳೆ ಪೇಪರಲ್ಲಿ ಬಂದ್ಬಿಡುತ್ತೆ' ಎಂದು ವಿಶ್ವ ಮೆಲ್ಲನೆ ಎಚ್ಚರಿಸಿದ. 'ರೀ, ನಿಕ್ಕರ್ಗೆ ಸೈಜ್ ಇರುತ್ತೇನ್ರೀ ?' ಎಂದು ವಿಶಾಲೂ ಕೇಳಿದಾಗ ನಾಯಕ ತಿದ್ದುಪಡಿಯನ್ನು ಕೊಟ್ಟ.

'ಹೌದು ಮೇಡಂ, ನಾವು ಲಾಡಿ ಹಾಕೋ ನಿಕ್ಕರು, ಬೀಡಿ ಇಡೋ ನಿಕ್ಕರ್ ಕೊಡ್ತೊಲ್ಲ. ಅದು ಹಳೇ ಫ್ಯಾಷನ್. ನಮ್ಮ ನಿಕ್ಕರ್ಗೆ ಬೆಲ್ಟ್ ಇರುತ್ತೆ. ಆ ಬೆಲ್ಟಲ್ಲಿ ಮೊಬೈಲ್ ಸಿಕ್ಕಿಸಿಕೊಳ್ಳೋಕೆ, ಪೆನ್ ಇಟ್ಕೊಳ್ಳೋಕೆ, ಬೇಕಾದ್ದೆಲ್ಲ ತುಂಬ್ಸೋಕೆ ಅಂಗಡಿಯಿಂದ ದಿನಸಿ ತರೋಕೆ ದೊಡ್ಡ ಜೇಬುಗಳು ಇರುತ್ವೆ, ಬ್ಯಾಗ್ ಬೇಕಾಗೊಲ್ಲ' ಎಂದು ನಾಯಕ ಹೊಗಳಿದ.


ಅಷ್ಟರಲ್ಲಿ ಶಿಷ್ಯನೊಬ್ಬ ವಿಶ್ವ ಹಾಗೂ ಮೋಹನ ಇಬ್ಬರ ಸೊಂಟದ ಅಳತೆಯನ್ನು ತೆಗೆದುಕೊಂಡ. 'ಅಯ್ಯೋ! ನನ್ನ ಸೊಂಟದ ಅಳತೆ ಯಾಕೆ?' ಎಂದ ಮೋಹನ.

'ತೆಪ್ಪಗೆ ನಿಂತ್ಕೋ ಮೋಹನ. ತೆಪ್ಪೋತ್ಸವ ನಡೆಯೋವಾಗ ತೆಪ್ಪಗೆ ಕೈ ಮುಗಿದರೆ ಬಾಳೆಹಣ್ಣು ಸಿಗುತ್ತೆ' ಎಂದ ವಿಶ್ವ. ಕುಕ್ಕರ್ ಬಗ್ಗೆ ವಿಶಾಲೂ ಹೇಳಿದಳು.

'ಹನ್ನೆರಡು ಲೀಟರ್ ಕುಕ್ಕರ್ ತಗೋಬೇಕು ಅಂತ ಇದ್ದೆ' ಎಂದು ಇಂಡೆಂಟ್ ಹಾಕಿದಳು. 'ನೀವು ಕೊಡೋ ಕುಕ್ಕರ್ ಶಿಳ್ಳೆ ಹೊಡೆಯುತ್ತಾ?'

'ಮೇಡಂ, ಶಿಳ್ಳೆ ಹೊಡೆಯೊಲ್ಲ. ಗೋವಿಂದಾ ಗೋವಿಂದಾ ಅಂತ ಮ್ಯೂಸಿಕ್ ಹೇಳುತ್ತೆ. ಹೊಸ ಟೈಪು!'

'ಗೋವಿಂದಾನೇ ಇರ್ಲಿ ಚೆನ್ನಾಗಿರುತ್ತೆ' ಎಂದು ವಿಶಾಲೂ ಒಪ್ಪಿದಾಗ ವಿಶ್ವನ ಅನುಮಾನ ಜಾಸ್ತಿ ಆಯ್ತು.



ಕಲೆ: ಜಬೀವುಲ್ಲಾ ಅಸದ್

'ನಾವು ನಿಮಗೆ ಗುರುತಿಲ್ಲ, ಪರಿಚಯ ಇಲ್ಲ. ಇದೆಲ್ಲ ಯಾಕೆ?' ಎಂದ ವಿಶ್ವ.

'ನಿಮ್ಮ ಮನೆಯಲ್ಲಿರೋ ಎಲ್ಲಾ ಓಟುಗಳೂ ನಮ್ಮ ಪಕ್ಷಕ್ಕೆ ಬೀಳ್ಬೇಕು. ಈ ಮೊದಲು ಯಾರೂ ನಮ್ಮ ಟೈಪ್ ರಾಜ್ಯಭಾರ ಮಾಡಿರೊಲ್ಲ ಸಾರ್. 3ನೇ ಪುಟಕ್ಕೆ... ಮೈಸೂರು ಮಹಾರಾಜರು ಬಿಟ್ಮೇಲೆ ನಾವೇ ಈಗ. ನಮಗೊಂದು ಅವಕಾಶ ನೀವು ಕೊಡ್ಬೇಕು' ಎಂದು ಕಾಲಿಗೆ ಬಿದ್ದ. 'ಬಿಡೆನು ನಿನ್ನ ಪಾದ' ಹಾಡಿದ.

'ಬದಲಾವಣೆ ಜಗದ ನಿಯಮ. ಅವಕಾಶ ಕೊಡೋಣ' ಎಂದು ಮೋಹನ ಸಮರ್ಥಿಸಿದ. ಯಾಕೆಂದರೆ ಅವನ ಸೊಂಟದ ಅಳತೆಯನ್ನು ಕೂಡ ತೆಗೆದಿದ್ದರು.

'ಕುಕ್ಕರ್ರು ನಿಕ್ಕರ್ರು ಕೊಡ್ತಾ ಇದ್ದೀವಿ. ಸ್ವೀಕರಿಸಬೇಕು. ಓಟು ಕೊಡ್ತೀವಿ ಅಂತ ದಯವಿಟ್ಟು ಪ್ರಮಾಣ ಮಾಡಿದ್ರೆ ಸಾಕು' ಒಂದು ದೇವರ ಫೋಟೊವನ್ನು ನಾಯಕ ಕೈಲಿ ಹಿಡಿದು ಪ್ರಮಾಣ ಮಾಡಿಸಿಕೊಂಡ.

'ನಿಮಗೇ ಹಾಕ್ತೀವಿ' ಎಂದು ವಿಶ್ವ, ವಿಶಾಲು ಹೇಳಿದರು. ಏನು ಹಾಕ್ತೀವಿ ಅಂತ ಕಮಿಟ್ ಆಗಲಿಲ್ಲ. ಸುಪ್ರೀತನಾದ ನಾಯಕ. ಇನ್ನಷ್ಟು ಲಾಭಗಳ ಬಗ್ಗೆ ಹೇಳಿದ.

'ಮೇಡಂ, ನಿಮ್ಗೆ ಪ್ರತೀ ತಿಂಗಳೂ ಕಾಸ್ಮೆಟಿಕ್ಸ್‌ಗೆ ಅಂತ ಎರಡು ಸಾವಿರ ರೂಪಾಯಿ ನಾವು ಕೊಡ್ತೀವಿ. ಪೌಡರ್ರು, ಸ್ನೋ, ಲಿಪ್‌ಸ್ಟಿಕ್ಕು ಎಲ್ಲಾ ಖರ್ಚೂ ನಮ್ದೇನೇ' ವಿಶಾಲೂಗೆ ಖುಷಿಯಾಯ್ತು. ಗಂಡನಿಗಿಂತ ಇವರೇ ಬೆಸ್ಟು ಅಂದುಕೊಂಡಳು.

'ಒಳ್ಳೇದಾಯ್ತು. ಹೇರ್ಪಿನ್‌ಗೂ ಗಂಡನ ಹತ್ರ ಗೋಗರೀಬೇಕಾಗಿತ್ತು. ಇನ್ಮೇಲೆ ಗಂಡ ಬೇಕಾಗೊಲ್ಲ. ಪ್ರತಿ ತಿಂಗಳೂ ಹಣ ಕೊಡೋಕೆ ನೀವೇ ಇರ್ತೀರಾ. ಬಹಳ ಸಂತೋಷ' ಎಂದು ಬೀಗಿದಳು.

ಒಂದು ಕುಕ್ಕರ್ ಮತ್ತು ಎರಡು ನಿಕ್ಕರನ್ನು ಕೊಟ್ಟರು. ತಮ್ಮ ಬಳಿ ಇದ್ದ ಓಟರ್ಸ್ ಲಿಸ್ಟಲ್ಲಿ ಟಿಕ್ ಮಾಡಲು ಹೆಸರುಗಳನ್ನು ಹುಡುಕಿದರು. ಮೋಹನನ ಓಟು ಮಾತ್ರ ಸಿಗಲಿಲ್ಲ. 'ನನ್ನ ಓಟು ಮಂಗಳೂರಲ್ಲಿದೆ. ನನ್ನ ಫ್ರೆಂಡನ್ನ ನೋಡೋಕೆ ಬೆಂಗಳೂರಿಗೆ ಬಂದಿದ್ದೆ ಅಷ್ಟೇ' ಎಂದ ಮೋಹನ.

ನಾಯಕನ ಮುಖದ ಮೇಲೆ ಸಿಟ್ಟು ಕಾಣಿಸಿಕೊಳ್ತು. ಕೊಟ್ಟ ನಿಕ್ಕರ್ನ ವಾಪಸ್ ಪಡೆಯುವಂತಿಲ್ಲ. 'ತೊಟ್ಟ ಬಾಣ ತೊಡಬೇಡ, ಕೊಟ್ಟ ನಿಕ್ಕರ್ ಹಿಂಪಡೆಯಬೇಡ' ಅಂತ ಗಾದೆ ಇದೆ.

'ಇರ್ಲಿ ಬಿಡಿ. ಬೆಂಗಳೂರಲ್ಲಿರೋ ನಿಮ್ಮ ಸ್ನೇಹಿತರಿಗೆಲ್ಲ ನಮ್ಮ ಪಾರ್ಟಿ ಬಗ್ಗೆ ಹೇಳಿ. ನಿಕ್ಕರ್ನ ನೀವೇ ಇಟ್ಕೋಬಹುದು. ನಿಮ್ದು ಓಟಿಲ್ಲದಿದ್ರೂ ನಿಕ್ಕರ್ ಕೊಡ್ತಾ ಇದ್ದೀವಿ' ಎಂದು ಹೇಳಿ ಹೊರಟ. ದುರ್ದಾನ ಪಡೆದವರಂತೆ ಎಲ್ಲರೂ ಹಾಲ್‌ಗೆ ಬಂದರು. ವಿಶ್ವ ಏನೋ ತಪ್ಪು ಮಾಡಿದವನಂತೆ ತಲೆ ತಗ್ಗಿಸಿ ಕುಳಿತ. ಯೋಚಿಸಿ ತಲೆ ಕೆಡಿಸಿಕೊಂಡಿದ್ದ ಮೋಹನ ಬಾಯಿಗೆ ಬಂದಂತೆ ಬೈಯಲು ಶುರು ಮಾಡಿದ.

'ಅಲ್ವೋ, ಈ ರೀತಿ ಎಲೆಕ್ಷನ್ನುಗಳಲ್ಲಿ ಬಿಟ್ಟಿ ಬಹುಮಾನಗಳು ಕೊಡ್ತಿದ್ರೆ ಕಡೆಗೆ ದೇಶ ಏನಾಗುತ್ತೆ ಗೊತ್ತಾ?'

'ರೀ, ಎಲ್ಲಿಂದ ಕೊಡ್ತಾರ್ರೀ ಅವರು? ಈ ದುಡ್ಡು ಅವರಿಗೆ ಎಲ್ಲಿ ಸಿಗುತ್ತೆ?' ಎಂದಳು ವಿಶಾಲು.

'ನಾವು ಕೊಡೋ ಟ್ಯಾಕ್ಸ್ ದುಡ್ಡಲ್ಲೇ ಅವರು ಗಿಫ್ಟ್ ಕೊಡೋದು. ಇನ್ನೇನು ಸ್ವಂತ ಹಣದಿಂದ ಕೊಡ್ತಾರಾ? ಸಾವಿರ ರೂಪಾಯಿ ಬಂಡವಾಳ ಹಾಕಿದ್ರೆ ಒಂದು ಲಕ್ಷ ದುಡೀಬಹುದು. ಅದು ಕುಕ್ಕರ್ ಸ್ಕೀಮು'

'ನನಗೆ ಗೊತ್ತೇ ಇರ್ಲಿಲ್ಲ' ಎಂದು ವಿಶಾಲು ಪೇಚಾಡಿದಳು.

'ಗಾಳಕ್ಕೆ ಎರೇಹುಳೂನ ಸಿಕ್ಕಿಸ್ತಾರೆ. ಸಿಗೋ ಮೀನು ಸಾವಿರಾರು ರೂಪಾಯಿ ಬೆಲೆ ಬಾಳುತ್ತೆ' 'ಇದರಿಂದ ದೇಶಕ್ಕೆ ತೊಂದ್ರೆ ಆಗುತ್ತಾ ?' ತಾವು ಗೆಲ್ಲಬೇಕು ಅಂತ ಇದೇ ಥರ 'ಫ್ರೀ ಬೀಸ್' ಎಲ್ಲರಿಗೂ ಕೊಟ್ರು. 'ಹೌದು ವಿಶಾಲೂ ಅವರೇ, ಶ್ರೀಲಂಕಾ ಪಾಪರ್ ಆಗಿದ್ದು ಹಾಗೇ. ಶ್ರೀಲಂಕಾದಲ್ಲಿ ಅರಾಜಕತೆ ಕಾಣಿಸಿಕೊಳ್ತು. ಅಲ್ಲಿನ ಪಾರ್ಲಿಮೆಂಟ್‌ಗೆ ನುಗ್ಗಿದ ಜನ ದಾಂಧಲೆ ಮಾಡಿದರು. ಅಲ್ಲಿ ಇವತ್ತು ತಿನ್ನೋಕೆ ಹಿಟ್ಟಿಲ್ಲ. ಎಲ್ಲಾ ಫ್ರೀಬೀಸ್ ಪ್ರಭಾವ. ನೆಟ್‌ನಲ್ಲಿ ನೋಡಿ. ನಮ್ಮ ದೇಶದಲ್ಲೂ ಅನೇಕ ರಾಜ್ಯಗಳು ಫ್ರೀಬೀಸ್‌ನಿಂದ ಹಾಳಾಗ್ತಿವೆ. ಬಿಟ್ಟಿ ಬಂದಿದ್ದನ್ನ ತಗೋಬಾರ್ದು. ಕಂಡವರ ಕೊಡುಗೆ ದೇಶದ ನೆಮ್ಮದಿ ಸ್ಥಿತಿಗೆ ವಿಷ ಬೆರೆಸುತ್ತೆ' ಎಂದ.

'ಅಲ್ವೇ, ನಿನ್ನ ಮುಖಕ್ಕೆ ಕಾಸ್ಮೆಟಿಕ್ಸ್ ಬಳ್ಕೊಳ್ಳೋಕೆ ದುಡ್ಡು ಕೊಡೋಕೆ ಅವನ್ಯಾರೇ? ಅವನಿಗೂ, ನಿನಗೂ ಏನು ಸಂಬಂಧ?'

ಜಗಳ ಅತಿರೇಕಕ್ಕೆ ಹೋಯಿತು. ಮೋಹನ್ ಇಬ್ಬರಿಗೂ ಸಮಾಧಾನ ಮಾಡಿದ. 'ಆ ಕಾಲದಲ್ಲಿ ಹರಿಶ್ಚಂದ್ರ ತನ್ನನ್ನು ತಾನು ಹರಾಜ್ ಮಾಡ್ಕೊಂಡ. ಇವತ್ತು ನಾವು ಒಂದು ನಿಕ್ಕರ್ಗೆ, ಒಂದು ಕುಕ್ಕರ್ಗೆ ನಮ್ಮ ತನಾನ, ನಮ್ಮ ಹಕ್ಕನ್ನ ಹರಾಜ್ ಮಾಡ್ಕೋತಾ ಇದ್ದೀವಿ' ಎಂದ.

ಮೋಹನನ ಮಾತು ಕೆನ್ನೆಗೆ ರಪ್ಪನೆ ಬಡಿದಂತಾಯಿತು. ವಿಶ್ವ, ವಿಶಾಲೂ ತಲೆ ತಗ್ಗಿಸಿ ನಿಂತರು. ಇಂಥ ಆಮಿಷಗಳಿಗೆ ನಮ್ಮನ್ನ ಒಳಗಾಗಿಸಬೇಡ ದೇವರೇ ಎಂದು ಭಾರತಾಂಬೆಯ ಫೋಟೊಕ್ಕೆ ಕೈ ಮುಗಿದರು.

ಮುನ್ನೋಟ 26-03-2023 ರಿಂದ 1-04-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಜೀವನದಲ್ಲಿನ ಹೊಸ ಗುರಿಗಳನ್ನು ಅರಿತು ನಡೆಯಿರಿ. ಬೇರೆಯವರಿಗೆ ಹೋಲಿಕೆ ಮಾಡಿಕೊಳ್ಳದಿರಿ. ಆಟೋಮೊಬೈಲ್ ತಂತ್ರಜ್ಞರಿಗೆ ಬೇಡಿಕೆ ಹೆಚ್ಚಾಗುತ್ತದೆ. ಛಾಯಾಗ್ರಾಹಕರಿಗೆ ಹೆಚ್ಚು ಕೆಲಸ ದೊರೆಯುತ್ತದೆ. ನಿಮ್ಮ ಆಪ್ತರಿಂದಲೇ ಮೋಸ ಹೋಗುವ ಸಂದರ್ಭವಿದೆ. ಎಚ್ಚರ ವಹಿಸಿ. ವ್ಯವಹಾರದ ಕೆಲವು ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳು ದೊರೆಯುತ್ತವೆ. ಧನಾದಾಯವು ತಕ್ಕಮಟ್ಟಿಗೆ ಸುಧಾರಿಸುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ರೈತರು ಉತ್ತಮ ಬೆಳೆಯನ್ನು ಪಡೆಯುವ ಯೋಗವಿದೆ. ಅನಾರೋಗ್ಯ ಮುಕ್ತರಾಗಲು ಚಿಕಿತ್ಸೆಯ ಜೊತೆಗೆ ಮಾನಸಿಕ ಧೈರ್ಯವಿರಲಿ. ಕಚೇರಿ ಕೆಲಸದ ನಿಮಿತ್ತ ಕೆಲವರಿಗೆ ವಿದೇಶ ಪ್ರಯಾಣ, ಗಣ್ಯರ ಪರಿಚಯ ಆಗುವ ಸಂದರ್ಭವಿದೆ. ಇದರಿಂದ ನಿಮ್ಮ ಸ್ವಂತ ಕೆಲಸ ಕಾರ್ಯಗಳು ಸರಾಗವಾಗಿ ಆಗುತ್ತದೆ. ಹಣದ ಒಳಹರಿವು ಮಧ್ಯಮಗತಿಯಲ್ಲಿರುತ್ತದೆ. ಸರ್ಕಾರಿ ಕೆಲಸಗಳಲ್ಲಿ ಸಾಕಷ್ಟು ಮುನ್ನಡೆ ಇರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ನಿಮ್ಮ ಕೆಲವೊಂದು ವ್ಯವಹಾರದಲ್ಲಿನ ರೀತಿ ರಿವಾಜುಗಳನ್ನು ಬದಲಾವಣೆ ಮಾಡುವಿರಿ. ಕಚೇರಿಯಲ್ಲಿ ನಿಮ್ಮ ಕೆಲಸಕ್ಕೆ ಅಡೆತಡೆಗಳು ಎದುರಾಗಬಹುದು. ಹಣದ ಒಳಹರಿವು ಸಾಮಾನ್ಯವಾಗಿದೆ. ಕ್ರೀಡಾಪಟುಗಳಿಗೆ ಕಲಿಯುವ ಅವಕಾಶವಿದೆ. ಸಿದ್ಧ ಉಡುಪುಗಳನ್ನು ರಫ್ತು ಮಾಡುವವರಿಗೆ ಹೆಚ್ಚಿನ ವ್ಯವಹಾರ ನಡೆಯುತ್ತವೆ. ವೃತ್ತಿಯಲ್ಲಿದ್ದ ಗೊಂದಲಗಳು ನಿವಾರಣೆ ಆಗಿ ಸಂತಸವೆನಿಸುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ದ್ರವರೂಪದ ವಸ್ತುಗಳನ್ನು ಮಾರಾಟ ಮಾಡುವವರಿಗೆ ಹೆಚ್ಚಿನ ಲಾಭವಿದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ತಾಂತ್ರಿಕ ಪರಿಣತಿ ಹೊಂದಿದವರು ತಮ್ಮ ಸ್ವಂತ ಉದ್ದಿಮೆಯನ್ನು ಸ್ಥಾಪಿಸಬಹುದು. ತೋಟಗಾರಿಕೆ ಮಾಡುವವರಿಗೆ ಕೀಟಬಾಧೆ ಎದುರಾಗಬಹುದು. ಆಸ್ತಿ ಮಾರಾಟ ವಿಚಾರದಲ್ಲಿ ಸ್ವಲ್ಪ ನಷ್ಟದ ಸಾಧ್ಯತೆ ಇದೆ. ಕಣ್ಣಿನ ತೊಂದರೆ ಇರುವವರು ಹೆಚ್ಚು ಎಚ್ಚರ ವಹಿಸಿರಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಕಚೇರಿಯಲ್ಲಿ ಬಡ್ತಿ ದೊರೆಯಬಹುದು. ರಾಜಕೀಯ ವ್ಯಕ್ತಿಗಳು ಬಿರುಸಿನ ಓಡಾಟ ಮಾಡುವುದು ಅನಿವಾರ್ಯ. ಯಾವ ಹಾದಿಯನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ಖಚಿತವಿಲ್ಲದಿದ್ದರೂ ಬದಲಿ ಅವಕಾಶ ಸಿದ್ಧಪಡಿಸಿಕೊಳ್ಳಿ. ಕುಟುಂಬದವರ ಜೊತೆ ತೀರ್ಥಯಾತ್ರೆ ಮಾಡುವ ಅವಕಾಶವಿರುತ್ತದೆ. ಹೊಸ ಉದ್ಯೋಗದ ಪ್ರಯತ್ನಗಳು ಈಗ ಫಲ ಕೊಡುತ್ತವೆ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಸಿಹಿ ಪದಾರ್ಥ ಮಾರುವವರಿಗೆ ಹೆಚ್ಚಿನ ವ್ಯವಹಾರವಿರಲಿದೆ. ರಂಗಭೂಮಿಯ ಕಲಾವಿದರಿಗೆ ಒಳ್ಳೆಯ ಅವಕಾಶಗಳು ದೊರೆಯುತ್ತವೆ. ಸಾಂಪ್ರದಾಯಿಕ ಕೃಷಿಕರ ಬೆಳೆಗಳಿಗೆ ಉತ್ತಮ ಮೌಲ್ಯ ದೊರೆಯುತ್ತದೆ. ಅನಿರೀಕ್ಷಿತವಾಗಿ ರಫ್ತು ವ್ಯಾಪಾರದಲ್ಲಿ ನಿಮಗೆ ಪಾಲು ದೊರೆಯಬಹುದು. ಧನದಾಯವು ಮಧ್ಯಮ ಗತಿಯಲ್ಲಿರುತ್ತದೆ. ಮೀನುಗಾರಿಕೆಯನ್ನು ಮಾಡುತ್ತಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಈ ಹಿಂದೆ ಆದ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರವಹಿಸುವುದು ಬಹಳ ಒಳ್ಳೆಯದು. ಕಮಿಷನ್ ವ್ಯವಹಾರ ಮಾಡುವವರಿಗೆ ಹೆಚ್ಚಿನ ಲಾಭ ಇರುತ್ತದೆ. ಉದ್ಯೋಗ ಸ್ಥಳದಲ್ಲಿ ಹೆಚ್ಚಿನ ಪರಿಶ್ರಮ ಹಾಕಿ ಕೆಲಸ ಮಾಡಿ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ತಾಯಿಯಿಂದ ಸಿಗುತ್ತಿದ್ದ ಸಹಾಯ ನಿಲ್ಲುವ ಸಾಧ್ಯತೆ ಇದೆ. ಹಣಕಾಸಿನ ವ್ಯವಹಾರಗಳು ನಷ್ಟ ತರಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಸಿವಿಲ್ ಎಂಜಿನಿಯರ್‌ಗಳಿಗೆ ಕೆಲಸದ ಜೊತೆಗೆ ಕೀರ್ತಿ ಒದಗಲಿದೆ. ಸಾಕಷ್ಟು ಸಂಪಾದನೆಯ ಕೆಲಸ ದೊರೆಯಬಹುದು. ಲೆಕ್ಕಪತ್ರ ವ್ಯವಹಾರದವರಿಗೆ ಸ್ವಲ್ಪ ಸಂದಿಗ್ಧ ಎದುರಾಗಬಹುದು. ಹಿರಿಯರ ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು. ಧನಾದಾಯವು ನಿರೀಕ್ಷಿತ ಮಟ್ಟದಲ್ಲಿ ಇರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ನಿಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಉದ್ಯೋಗದಲ್ಲಿ ಜವಾಬ್ದಾರಿಯ ಹುದ್ದೆ ದೊರಕುವುದು. ಒಂದೆಡೆ ಹಣದ ಉಳಿತಾಯಕ್ಕೆ ಯತ್ನಿಸಿದರೆ ಮತ್ತೊಂದೆಡೆ ಖರ್ಚು ಹೆಚ್ಚಾಗಲಿದೆ. ವಕೀಲರಿಗೆ ಸಂಪಾದನೆ ಹೆಚ್ಚಾಗುತ್ತದೆ. ಕಟ್ಟಡ ಕಾರ್ಮಿಕರಿಗೆ ಉಡುಗೊರೆಯ ಜೊತೆ ಸೂಕ್ತ ಪ್ರೋತ್ಸಾಹದ ಧನ ದೊರೆಯುವ ಸಾಧ್ಯತೆಗಳಿವೆ. ಕೆಟರಿಂಗ್ ನಡೆಸುವವರಿಗೆ ಸಾಕಷ್ಟು ಒಳ್ಳೆಯ ಅವಕಾಶಗಳು ದೊರೆಯುತ್ತವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ನಿಮ್ಮ ಪ್ರಯತ್ನಗಳಲ್ಲಿ ಹೆಚ್ಚಿನ ಫಲವನ್ನು ಕಾಣಬಹುದು. ವೃತ್ತಿ ರಂಗದಲ್ಲಿ ಹೊಸ ಅದೃಷ್ಟ ಎದುರಾಗಲಿದೆ. ರಫ್ತು ವ್ಯವಹಾರಸ್ಥರಿಗೆ ಹೆಚ್ಚಿನ ಲಾಭವಿದೆ. ವಿದ್ಯುತ್ ಉಪಕರಣಗಳ ಮಾರಾಟಗಾರರ ವ್ಯವಹಾರ ವಿಸ್ತರಿಸುತ್ತದೆ. ಮಹಿಳಾ ರಾಜಕಾರಣಿಗಳಿಗೆ ಸೂಕ್ತ ಸ್ಥಾನಮಾನ ದೊರೆಯುತ್ತವೆ. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿರಲಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಸಾಧನೆಯ ಅವಕಾಶ ದೊರೆಯುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಸಹ ಕಲಾವಿದರುರಿಗೆ ಹೆಚ್ಚಿನ ಅವಕಾಶಗಳು ದೊರೆತು ಹೆಚ್ಚು ಸಂಪಾದನೆ ಆಗುತ್ತದೆ. ವೈದ್ಯಕೀಯ ವಿದ್ಯಾರ್ಥಿಗಳು ಹೆಚ್ಚು ಪರಿಶ್ರಮಪಡುವುದು ಅಗತ್ಯ. ಕೆಲವು ವಿಷಯಗಳಲ್ಲಿ ಸ್ವತಂತ್ರವಾಗಿ ತೀರ್ಮಾನ ತೆಗೆದುಕೊಳ್ಳಿ. ಧನಾದಾಯವು ನಿರೀಕ್ಷೆಯಷ್ಟಿರುತ್ತದೆ. ದೂರದ ಸ್ಥಳಕ್ಕೆ ಕೆಲವರಿಗೆ ವರ್ಗಾವಣೆಯಾಗಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಸಮಸ್ಯೆಗಳನ್ನು ಸೌಹಾರ್ದಯುತ ಮತ್ತು ನ್ಯಾಯವಾಗಿ ಈಗ ಬಗೆಹರಿಸಿಕೊಳ್ಳಿ. ರಾಜಕೀಯ ವ್ಯಕ್ತಿಗಳಿಗೆ ನಿಕಟವರ್ತಿಗಳ ಸಹಕಾರದಿಂದ ಹಾದಿ ಸುಗಮವಾಗುತ್ತದೆ. ಸರ್ಕಾರಿ ಕೆಲಸಕಾರ್ಯಗಳು ಸರಾಗವಾಗಿ ಆಗುತ್ತವೆ. ಸಂಗೀತ ಕಲಾವಿದರಿಗೆ ಉತ್ತಮ ಅವಕಾಶಗಳಿವೆ. ಜವಳಿ ವ್ಯಾಪಾರಿಗಳು ಹೆಚ್ಚು ಪ್ರಗತಿ ಹೊಂದುವರು. ಹಣದ ಒಳಹರಿವು ಮಧ್ಯಮ ಗತಿಯಲ್ಲಿರುತ್ತದೆ. ಇಚ್ಛೆಪಟ್ಟ ಕೃಷಿ ಭೂಮಿಯನ್ನು ಕೊಳ್ಳುವಿರಿ.

ಪದಬಂಧ 2782



ಮೇಲಿನಿಂದ ಕೆಳಕ್ಕೆ

1. ಪದಬಂಧದಲ್ಲಿ ಸಿಗುವ ಪದ ಸಂಪತ್ತು 5
2. ವಾಮನನನ್ನು ಎದುರಿಸಿದ ಅತಿ ಶಕ್ತಿ ಶಾಲಿ ಅರಸ 4
3. ದೇಹದ ದೇಗುಲಕ್ಕಿರುವ ಒಂಬತ್ತು ಬಾಗಿಲುಗಳು 4
4. ಹೂವಿನಲಂಕಾರದೊಂದಿಗೆ ತಲೆಯ ಮೇಲೆ ಹೊರುವ ಕಳಸದ ಶಕ್ತ್ಯುತ್ಸವ 3
6. ಹೊಸ ಹರುಷವನ್ನು ತರುತ್ತಾ ಮತ್ತೆ ಮರಳಿ ಬರುವ ಸಂವತ್ಸರದ ಆರಂಭ 3
7. ಶಿವರಾತ್ರಿಯಂದು ನಿದ್ದೆ ಕೆಡುವ ಜಾಣೆ 4
8. ಚುನಾವಣೆಯೆಂದೊಡನೆ ಆರಂಭವಾಗುವ ಓಟು ಬೇಡಿಕೆ 5
9. ಮಾತು ಕತ್ತಿಯಷ್ಟೇ ಹರಿತ 3
10. ಎಲ್ಲಿಂದೆಲ್ಲಿಗಾದರೂ ಹೋಗಲು ಸಿಗುವ ಮುಕ್ತ ಪಥದ ಚೀಟಿ 4
11. ಚಳಿಯಲ್ಲಿ, ಭಯದಲ್ಲಿ ಆಗುವ ಮೈ ಕಂಪನ 3
13. ಚುನಾವಣೆಯಲ್ಲಿ ಗೆಲ್ಲುವ ಮಂದಿಯ ಮುಖಂಡ 3
15. ಕಾಮನನ್ನು ಸುಡುವ ಬೆಳದಿಂಗಳ ರಾತ್ರಿ 5
16. ಹೊರಲು ಕಷ್ಟವೆನಿಸುವ ತೂಕ ಈಗ ತಪ್ಪಿಹೋಗಿದೆ 4
17. ದರಿದ್ರರ ಪಾಲಿಗಿರುವ ಮಹಾವಿಷ್ಣು 4
18. ಎಲ್ಲವೂ ಸಿಂಧುವಾಗಿ ವ್ಯವಸ್ಥೆಗೆ ಬಂದದ್ದು 3

ಎಡದಿಂದ ಬಲಕ್ಕೆ

1. ಹೆಸರಿಗೆ ಸಿಕ್ಕ ಪದವಿ, ಆ ಪದವಿಗೊಂದು ಹೆಸರು 4
3. ನಿಮಗೆ ಸ್ವಲ್ಪವೂ ಗೊತ್ತಾಗದಂತೆ ಮೋಸ ಮಾಡುವವ 5
5. ದ್ವಾರಕೆಯಲ್ಲಿ ಕೃಷ್ಣ ಜನಿಸಿದ ಕಾಲ 5
7. ನೆರಳು ನೀಡದ ಮುಳ್ಳಿನ ವೃಕ್ಷ 4
9. ಎಲ್ಲದರಲ್ಲೂ ಈತನೇ ಪ್ರಥಮ 4
10. ಕೆಲಸದ ಮಧ್ಯೆ ಬಿಡುವಿನ ದಿವಸ 4
12. ಪ್ರಜೆಗಳು ತಮ್ಮ ಹಕ್ಕು ಚಲಾಯಿಸುವ ಆಡಳಿತ ಪ್ರಕ್ರಿಯೆ 4
14. ಎಲ್ಲೋ ರಸ್ತೆಯಲ್ಲಿ ಹೋಗುವ ಅಪರಿಚಿತ 4
16. ಸೋತಾಗ ಹಿಡಿವ ಗೃಹ ವಿಧಿನಡೆ 4
18. ಸಂಪನ್ನನಿಗಿರುವ ಎಲ್ಲಾ ಸ್ವಭಾವ ನಡತೆ 5
19. ಮನಸ್ಸೇ ದೇವಾಲಯವೆಂಬ ವೇದೋಕ್ತಿ 5
20. ಹಣದೊಡತಿ, ರಮಿಸುವ ಪ್ರಿಯ ಸತಿ 4

ಪದಬಂಧ ಉತ್ತರ -2781

ಮೇಲಿಂದ ಕೆಳಕ್ಕೆ

1.ದಾರಿಗ 2. ಸಮಾನಸ್ಕಂದ 3.ಜಲವಿಹಾರ 4.ಹಿರಿಯೂರು 7.ವನದೇವಿ 10. ಯಾತ್ರಿಕ 12.ಹಾವಭಾವ 13.ಮಾತಿನಮನೆ 14.ತೆರೆದಮನ 15.ಕರಣಿಕ 17.ರಸನ

ಎಡದಿಂದ ಬಲಕ್ಕೆ

1. ದಾಸಾನುದಾಸ 3. ಜನಸ್ನೇಹಿ 5.ಮಾಯಾಜಾಲ 6.ಗಜವದನ 8.ಹಾರುವರು 9.ದಯಾಪರ 11.ಜಾಹ್ನವಿ 12.ಹಾರಂಗಿ 13.ಮಾತುಕತೆ 15.ಕಲ್ಲಾರತಿ 16.ದಶಾವತಾರ 18.ಮನೋರಮ 19.ಕರಿಯಾನೆ 20.ನವನವೀನ



ಆನು ಬೆರಗಾದೆ

ಕಮಲ ಎಂ. ಎಸ್. ಬಾಲು

‘ಹಸಿವಾದೊಡೆ ಊರೊಳಗೆ ಭಿಕ್ಷಾನ್ನಗಳುಂಟು
ತೃಷೆಯಾದೊಡೆ ಕೆರೆಬಾವಿಗಳುಂಟು ಅಂಗಶೀತಕ್ಕೆ ಬೀಸಾಟ
ಅರಿವೆಗಳುಂಟು’

ಎಂದು ದಿಟ್ಟವಾಗಿ ತನ್ನ ಉಡುಗೆಯನ್ನೇ ಅಲ್ಲದೆ ಸಮಸ್ತವನ್ನೂ ಧಿಕ್ಕರಿಸಿ ಆತ್ಮಸಂಗಾತಕ್ಕೆ ಚೆನ್ನಮಲ್ಲಿಕಾರ್ಜುನನನ್ನು ಹುಡುಕಲು ಹೊರಟ ಅಕ್ಕಮಹಾದೇವಿ ಇಂದಿಗೂ ಜನಮನದಲ್ಲಿ ಒಂದು ಬೆರಗು.

ಆಕೆ ಮೈಮೇಲೆ ಬಟ್ಟೆಯಿಲ್ಲದೆ ತನ್ನ ಉದ್ದವಾದ, ದಟ್ಟವಾದ ಕೂದಲನ್ನೇ ಮುಚ್ಚಿಕೊಂಡು ಹೊರಟಳು ಎನ್ನುವ ಪರಿ ನನಗಂತೂ ವಿಸ್ಮಯ ಉಂಟುಮಾಡುತ್ತಿತ್ತು. 12ನೆಯ ಶತಮಾನದ ಸಮಾಜ ಅವಳನ್ನು ಒಪ್ಪಿಕೊಂಡಿತೋ ಬಿಟ್ಟಿತೋ, ಅವಳು ಅದನ್ನೆಲ್ಲಾ ಗಣನೆಗೇ ತೆಗೆದುಕೊಳ್ಳಲಿಲ್ಲ. ಆದರೂ ಆ ಕಾಲದ ಪ್ರಪಂಚವನ್ನು ಹೇಗೆ ಎದುರಿಸಿದಳು ಎನ್ನುವುದು ನನಗೆ ಯಾವಾಗಲೂ ಕಸಿವಿಸಿ ಉಂಟುಮಾಡುತ್ತಿತ್ತು.



ವೀಣಾ ಬಸವರಾಜಯ್ಯ ಅವರ ಪರಿಕಲ್ಪನೆ ಮತ್ತು ನಿರ್ದೇಶನದಲ್ಲಿ ಇದೇ ತಿಂಗಳ ಎಂಟನೇ ತಾರೀಖು ಪ್ರಸ್ತುತಿಗೊಂಡ ರೂಪಕ ‘ಕಾಯ’ ರಂಗಶಂಕರದಲ್ಲಿ ಪ್ರದರ್ಶಿತವಾಯಿತು. ಹನ್ನೆರಡನೇ ಶತಮಾನದ ಸ್ತ್ರೀವಾದಿ ಕವಯಿತ್ರಿ ಅಕ್ಕಮಹಾದೇವಿಯ ವಚನಗಳಿಂದ ಸ್ಫೂರ್ತಿಗೊಂಡ ಈ ಪ್ರದರ್ಶನದಲ್ಲಿ ಸಂಭಾಷಣೆಗಳು ಇರಲಿಲ್ಲ. ಎಲ್ಲವೂ ಅಕ್ಕನ ವಚನದ ಮೇಲೇ ಆಧರಿತವಾಗಿತ್ತು. ಕೆಲವು ವಚನಗಳು ಸರಿಯಾಗಿ ಕೇಳಿಸದೇ ಇದ್ದುದರಿಂದ ಪ್ರದರ್ಶನಕ್ಕೂ ಸಂಗೀತಕ್ಕೂ ತಾಳೆ ಹಾಕುವುದು ಸ್ವಲ್ಪ ಕಷ್ಟವಾಯಿತು. ಆದರೂ ಈ ಮೊದಲ ಪ್ರಸ್ತುತಿಯನ್ನು ನೋಡಿದಾಗ ಅಕ್ಕನ ಮಾತಿನಲ್ಲೇ ಹೇಳುವುದಾದರೆ: ‘ಆನು ಬೆರಗಾದೆ’

ರಂಗಭೂಮಿ

ಕ್ರಿಯೇಟಿವ್ ಥಿಯೇಟರ್‌ನ ಈ ಪ್ರಸ್ತುತಿಯ ಸಹಪರಿಕಲ್ಪಿತರು ಹಾಗೂ ಅಭಿನಯಿಸಿದವರು ಲಕ್ಷ್ಮೀ ಚಂದ್ರಶೇಖರ್, ಅನಘಾ ಕಶ್ಯಪ್, ದೀಪ್ತಿ ನಾಗೇಂದ್ರ, ಪ್ರಿಯಾಂಕಾ ಚಂದ್ರಶೇಖರ್ ಹಾಗೂ ಶ್ರೀಪ್ರಿಯಾ. ಈ ಪ್ರದರ್ಶನವನ್ನು ನೋಡಿದಾಗ ಅದು ಅನೇಕ ಪ್ರಶ್ನೆಗಳಿಗೆ ಉತ್ತರ ಕೊಟ್ಟಿತು ಎಂದು ಹೇಳಿದರೆ ತಪ್ಪಾಗಲಾರದು.

ಮನೆ ಬಿಟ್ಟು ಚೆನ್ನಮಲ್ಲಿಕಾರ್ಜುನನನ್ನು ಅರಸುತ್ತಾ ಊರೂರು ಅಲೆದ ಅಕ್ಕನ ಮನಸ್ಸು ಪರಿಪಕ್ವವಾಗಿ ವಿರಕ್ತ ಜೀವನದ ಹಂತವನ್ನು ತಲುಪಿದಾಗ ಹಾಡಿದ ಹಾಡೇ ಬೇರೆಯಾಗಿ ಕಂಡಿತು.

‘ಮನೆ ಮನೆದಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ ಬೇಡಿದೊಡೆ ಇಕ್ಕದಂತೆ ಮಾಡಯ್ಯ ಇಕ್ಕಿದೊಡೆ ನೆಲಕ್ಕೆ ಬೀಳುವಂತೆ ಮಾಡಯ್ಯ ನೆಲಕ್ಕೆ ಬಿದ್ದೊಡೆ ನಾನೆತ್ತಿಕೊಂಬುದಕ್ಕೆ ಮುನ್ನವೆ ಸುನಿಯೆತ್ತಿಕೊಂಬಂತೆ ಮಾಡಯ್ಯ’

ಎನ್ನುವ ಈ ವಚನದಲ್ಲಿ ಆಕೆ ಈ ಲೋಕದ ಯಾವ ಹಂಗೂ ಬೇಡ ಎನ್ನುವ ಗುರಿಯನ್ನು ತಲುಪಿದ ಸ್ಥಿತಿಯನ್ನು ಕಾಣುತ್ತೇವೆ. ಈ ವಚನವನ್ನು ಹಾಡಿಕೊಂಡು ಅಭಿನಯಿಸಿದ ಹೆಣ್ಣನ್ನು ತಕ್ಷಣವೇ ಓಡಿಹೋಗಿ ಎತ್ತಿಕೊಂಡು ಸಮಾಧಾನ ಮಾಡೋಣ ಎನಿಸಿತು ನನಗೆ.

ಪ್ರದರ್ಶನದ ಆರಂಭದಿಂದಲೂ ಹಂತಹಂತವಾಗಿ ಅಕ್ಕನ ತೊಳಲಾಟ, ಅವಳು ಪಟ್ಟ ಪಾಡು, ಪ್ರಪಂಚದ ಮೂಸೆಯಲ್ಲಿ ಅನುಭವಿಸಿ, ಕರಕರಗಿ, ಕನಸಿನಲ್ಲಿ ಕಳವಳಿಸಿ, ಆಪತ್ತಿನಲ್ಲಿ ಯಾವ ಸಖಿಯರನ್ನೂ ಕಾಣದೆ ಬೆಂದು ಹೋದ ರೀತಿಯನ್ನು ಕಣ್ಣಿಗೆ ಕಟ್ಟುವ ಹಾಗೆ, ಮನದಾಳಕ್ಕೆ ಇಳಿಯುವ ಹಾಗೆ ರೂಪಿಸಿ ಪ್ರದರ್ಶಿಸಿದ ಈ ಕಲಾವಿದೆಯರು ತಾವು ಪ್ರತಿಯೊಬ್ಬರೂ ಅಕ್ಕಮಹಾದೇವಿಯೇ ಎಂದು ತೋರಿಸಿಕೊಟ್ಟರು. ಅವತ್ತಿನ ಎಲ್ಲ ಪ್ರೇಕ್ಷಕರಿಗೂ ಅಕ್ಕನ ಗುಂಗು ಹತ್ತಿಕೊಂಡಿರುವುದರಲ್ಲಿ ಆಶ್ಚರ್ಯವೇ ಇಲ್ಲ.

12ನೇ ಶತಮಾನದ ಅದ್ಭುತ ಕವಯಿತ್ರಿ ಅಕ್ಕ ನಾವು ಯಾರೂ ಕಂಡಿರದ, ಕಾಣಲಾಗದ ಪರಮ ವಸ್ತು. ಆಕೆಯ ಅಂತರಾಳವನ್ನು ನಮಗೆಲ್ಲ ತೆರೆದಿಟ್ಟವರು ಲಕ್ಷ್ಮೀ ಚಂದ್ರಶೇಖರ್ ಮತ್ತಿತರ ಹೆಣ್ಣುಮಕ್ಕಳು. ಲಕ್ಷ್ಮೀ ಚಂದ್ರಶೇಖರ್ ಆರಂಭದಿಂದ ಅಂತ್ಯದವರೆಗೂ ವಯಸ್ಕ ಅಕ್ಕನಾಗಿದ್ದರು. ಉಳಿದ ನಾಲ್ವರು ಅವಳ ಬೇರೆ ಬೇರೆ ವಯಸ್ಸುಗಳನ್ನು ಪ್ರತಿನಿಧಿಸಿದ್ದರು.

ಪ್ರಾರಂಭದ ದೃಶ್ಯದಲ್ಲಿ ಅಕ್ಕನ ಪಾತ್ರಧಾರಿಗಳು ಒಬ್ಬೊಬ್ಬರಾಗಿ ಪ್ರವೇಶ ಮಾಡಿದ ರೀತಿ ಅದ್ಭುತವಾಗಿತ್ತು. ಹಿನ್ನೆಲೆಯ ಸಂಗೀತದೊಡನೆ ಪಾರದರ್ಶಕವಲ್ಲದಿದ್ದರೂ ಚರ್ಮದ ಬಣ್ಣದ ಉಡುಗೆ ಧರಿಸಿ ಅವರು ಬಂದರೆ, ಅಕ್ಕನೇ ದಿಗಂಬರಳಾಗಿ ಬಂದಳೋ ಎನಿಸುತ್ತಿತ್ತು. ಅದಕ್ಕೆ ಬೆಂಬಲವಾಗಿ ನೆಳಲು ಬೆಳಕುಗಳ ಆಟ. ಪ್ರತಿಯೊಬ್ಬರೂ ತಲೆಯ ಮೇಲೆ ಕಾಡಿನ ಮರಗಳಂತೆ ಇದ್ದ ತುಂಡನ್ನು ಹೊತ್ತಿದ್ದರು. ಅದರ ಕೆಳಗೆ ಚಿನ್ನದ ಕೂದಲಿನ ಜಡೆ ಭುಜದಿಂದ ಕೆಳಗಿಳಿದು ಅವರನ್ನು ಹಿಂಬಾಲಿಸುತ್ತಿತ್ತು. ಅಕ್ಕ ಕಾಡುಮೇಡುಗಳನ್ನು ಅಲೆಯುವ ಚಿತ್ರಣ ಇದು.

ಅನಂತರ ಒಬ್ಬೊಬ್ಬರಾಗಿ ಬಂದು ಅಕ್ಕ ಅನುಭವಿಸಿದ ವಿವಿಧ ರೀತಿಯ ಪರೀಕ್ಷೆಗಳನ್ನು ತೋರಿಸಿದರು. ನಟನೆ ಅಲ್ಲ ಎಂದು ಭಾಸವಾಗುವ ಹಾಗಿತ್ತು ಅವರ ಪ್ರಸ್ತುತಿ. ಒಬ್ಬಾಕೆ ‘ನೋಡುವಿರಾ’ ಎಂದು ತನ್ನ ದೇಹದ ಪ್ರತಿಯೊಂದು ಅಂಗವನ್ನೂ ಬೆಟ್ಟು ಮಾಡಿ ತೋರಿಸಿದಾಗ ಮೈ ಝುಮ್ಮೆಂದಿತು. ಅಕ್ಕ ಬಸವೇಶ್ವರರ ಮಹಾಮನೆಯನ್ನು ತಲುಪಿದಾಗ ಅಲ್ಲಿನ ಶರಣರು ಅವಳನ್ನು ಮುಟ್ಟಿ ಮುಟ್ಟಿ ಪರೀಕ್ಷಿಸಿದ ಪರಿ ಇದು.

ಹೀಗೇ ಮುಂದುವರಿದ ಪ್ರಸ್ತುತಿಯ ಒಂದು ಹಂತದಲ್ಲಿ ಅಂಗಸಂಗ ಇಲ್ಲದೆ ಯಾವುದೂ ಹುಟ್ಟದು ಎಂಬ ಜ್ಞಾನ ಅಕ್ಕನ ತಿಳಿವಳಿಕೆಗೆ ಬಂದ ಬಗೆಯನ್ನು ಆಕೆ ಹೀಗೆ ವರ್ಣಿಸಿದ್ದಾಳೆ:

ಸಂಗದಿಂದಲ್ಲದೆ ಅಗ್ನಿ ಹುಟ್ಟದು ಸಂಗದಿಂದಲ್ಲದೆ ಬೀಜ ಮೊಳೆದೋರದು ಸಂಗದಿಂದಲ್ಲದೆ ಹೂವಾಗದು ಸಂಗದಿಂದಲ್ಲದೆ ಸರ್ವಸುಖದೋರದು.

ಈ ಅನುಭವದ ಮೂಸೆಯಲ್ಲಿ ಕರಕರಗಿ ಅನುಭಾವಿಯಾದ ಅಕ್ಕನ ಅಂತ್ಯವನ್ನು ನೋಡುವುದೇ ಒಂದು ಉಸಿರು ಕಟ್ಟುವ ಸನ್ನಿವೇಶ. ಹಿರಿಯಳಾದ ಅಕ್ಕ ತನ್ನ ಬೇರೆ ಬೇರೆ ಅಕ್ಕಂದಿರೊಂದಿಗೆ ಕಾಯಕ್ಕೆ ನೆಳಲಾಗಿದ್ದ ಸ್ಥಳದಲ್ಲಿ ಕರಗಿ ಮಾಯವಾಗುತ್ತಾಳೆ. ಈ ದೃಶ್ಯ ನೋಡಿದಾಗ ಲಕ್ಷ್ಮೀ ಚಂದ್ರಶೇಖರ್ ಅವರ ಜೊತೆಯಲ್ಲಿದ್ದ ಉಳಿದ ನಾಲ್ವರೂ ಅಕ್ಕನೇ ಎಂದು ನನಗೆ ಅರಿವಾದಾಗ ಆನು ಬೆರಗಾದೆ!

ಹೋಮಿಯೋಪಥಿ



ಮೊದಲ ಪುಟದಿಂದ...

ಆದರೂ ಯಾಕೆ ಜನ ಅದಕ್ಕೆ ಮುಗಿಬೀಳುತ್ತಾರೆ? ಈ ಪ್ರಶ್ನೆಗೆ ಸಂಶೋಧಕರ ವಾದ ಹೀಗಿದೆ: ಕೆಲವು ಕಾಯಿಲೆಗಳು ಔಷಧವಿಲ್ಲದೇ ತಂತಾನೇ ಗುಣವಾಗುತ್ತವೆ. ಅಂಥ ಕಾಯಿಲೆಗಳು ಯಾವುವೆಂದು ಹೋಮಿಯೋಪಥಿ ವೈದ್ಯರಿಗೆ ಗೊತ್ತಿರುತ್ತದೆ. ಅದಕ್ಕೆ ಅವರು ಉತ್ಸಾಹದಿಂದ ಹೋಮಿಯೋಪಥಿ ಔಷಧ ಕೊಟ್ಟು ಅದರ ಯಶಸ್ಸನ್ನೇ ಹಾಡಿ ಹೊಗಳುತ್ತಿರುತ್ತಾರೆ. ಅಂಥ ಯಶಸ್ಸೇ ಜನಜನಿತವಾಗಿರುತ್ತದೆ. ‘ಕೆಲವು ಕಾಯಿಲೆಗಳ ನಿವಾರಣೆ ಸಾಧ್ಯವೇ ಇಲ್ಲ. ಎರಡನೇ ಹಂತದ ಲಿವರ್ ಕ್ಯಾನ್ಸರನ್ನು ಅವರು ವಾಸಿ ಮಾಡಲಿ ನೋಡೋಣ. ಅಥವಾ ಬ್ಯಾಕ್ಟೀರಿಯಲ್ ನ್ಯೂಮೊನಿಯಾ ಅಥವಾ ಮಂಗನ ಕಾಯಿಲೆಗೆ ಅವರಲ್ಲಿ ಔಷಧವಿಲ್ಲ’ ಎನ್ನುತ್ತಾರೆ ಫಿಲಿಪ್ಸ್.

ಹೋಮಿಯೋಪಥಿ ಯಶಸ್ಸಿಗೆ ಇನ್ನೊಂದು ಸಾಧ್ಯತೆಯೂ ಇದೆ: ರೋಗ ವಾಸಿಗೆಂದು ಅನೇಕರು ಮೊದಲು ಅಲೊಪಥಿ, ಆಮೇಲೆ ಆಯುರ್ವೇದ ಸೇವನೆ ಮಾಡಿ, ಗುಣವಾಗಿಲ್ಲವೆಂದು ಕೊನೆಯದಾಗಿ ಹೋಮಿಯೋಪಥಿಗೆ ಬರುತ್ತಾರೆ. ಅಷ್ಟರಲ್ಲಿ ಹಿಂದೆ ಸೇವಿಸಿದ ಔಷಧ ನಿಧಾನವಾಗಿ ಫಲ ಕೊಡಲು ಆರಂಭಿಸುತ್ತದೆ ಅಥವಾ ಶರೀರವೇ ಅದನ್ನು ವಾಸಿಮಾಡಿರುತ್ತದೆ. ಆದರೆ ಶಾಭಾಸ್‌ಗಿರಿ ಸಿಗುವುದು ಹೋಮಿಯೋಪಥಿಗೆ.

ಶಾಭಾಸ್‌ಗಿರಿಯನ್ನು ನಮ್ಮ ಸರ್ಕಾರವೂ ಕೊಡುತ್ತಿದೆ. ಅದಕ್ಕೆಂದು ತೆರಿಗೆದಾರರ ಕೋಟಿಗಟ್ಟಲೆ ಹಣವನ್ನೂ ಸುರಿಯುತ್ತಿದೆ. ಪ್ರಶಸ್ತಿಗಳ ಸರಮಾಲೆಗಳನ್ನೇ ಕೆಲವರಿಗೆ ತೊಡಿಸಿ, ಅವರ ಮೂಲಕ ಈ ವೈದ್ಯಕೀಯದ ಜನಪ್ರಿಯತೆ ಮೇಲೇರುತ್ತಲೇ ಇರುವಂತೆ ಮಾಡುತ್ತಿದೆ. ಕೋವಿಡ್ ಕಾಲದಲ್ಲಿ ಸರ್ಕಾರವೇ ಇದರ ಪ್ರಚಾರ ಮಾಡಿತ್ತಲ್ಲ? ಹೋಮಿಯೋಪಥಿ ಡಿಗ್ರಿ ಕಾಲೇಜುಗಳು, ಸರ್ಕಾರಿ ಕ್ಲಿನಿಕ್‌ಗಳು ಎಲ್ಲ ಸೇರಿ ಜಗತ್ತಿನ ಅತಿದೊಡ್ಡ ವ್ಯವಸ್ಥೆ ಇಲ್ಲಿ ಬೇರೂರಿ ಹೆಮ್ಮರವಾಗಿದೆ. ‘ಇಂಥ ಅವೈಜ್ಞಾನಿಕ ವೈದ್ಯಪದ್ಧತಿಗೆ ಸರ್ಕಾರಿ ಅನುದಾನವನ್ನು ಸಂಪೂರ್ಣ ನಿಲ್ಲಿಸಿ ಅಷ್ಟೂ ಹಣವನ್ನು ಅಸಲೀ ವೈದ್ಯಕೀಯಕ್ಕೆ ನೀಡಬೇಕು’ ಎಂದು ಡಾ. ಫಿಲಿಪ್ಸ್ ವಾದಿಸುತ್ತಾರೆ. ಜರ್ಮನಿ, ಬ್ರಿಟನ್, ಫ್ರಾನ್ಸ್ ಈಗಾಗಲೇ ಹೋಮಿಯೋಪಥಿ ಪದ್ಧತಿಗೆ ಧನಸಹಾಯವನ್ನು ನಿಲ್ಲಿಸಿವೆ. ಯುರೋಪಿನ ಇನ್ನು ಕೆಲವು ದೇಶಗಳಲ್ಲಿ ಹೋಮಿಯೋಪಥಿ ಚಿಕಿತ್ಸೆಗೆ ವಿಮೆ ಹಣ ಸಿಗುವುದಿಲ್ಲ. ರಷ್ಯಾ ಮತ್ತು ಆಸ್ಟ್ರೇಲಿಯಾ ತನ್ನ ಪ್ರಜೆಗಳಿಗೆ ಎಚ್ಚರಿಕೆ ನೀಡಿವೆ. ಚೀನಾಕ್ಕಂತೂ ತನ್ನದೇ ಬದಲೀ ವ್ಯವಸ್ಥೆ ಇದೆ. ಅಲ್ಲೆಲ್ಲ ಏನಾದರಾಗಲಿ; ಇಲ್ಲಿ, ಭಾರತದಲ್ಲಿ ಈಗ ಅಪಸ್ವರ ಏಕೆ? ಅಲೊಪಥಿ ಔಷಧ ಕಂಪನಿಗಳೇ ಹೋಮಿಯೋಪಥಿಯ ವಿರುದ್ಧ ಮಸಲತ್ತು ಮಾಡುತ್ತ ಬಂದಿರಬಾರದೇಕೆ? ಈ ವೈದ್ಯಪದ್ಧತಿ ಅವೈಜ್ಞಾನಿಕವೇ ಹೌದೆಂದು ಒಪ್ಪಿಕೊಂಡರೂ ಏನಾಯ್ತೀಗ? ದೇವರನ್ನು ನಂಬುವುದೇ ಅವೈಜ್ಞಾನಿಕ ಎಂದು ಅದೆಷ್ಟೇ ವೈಜ್ಞಾನಿಕವಾಗಿ ವಾದಿಸಿದರೂ ದೇವರ ದರ್ಶನದ ಧಾವಂತದಲ್ಲಿ ಸಾವಿರಾರು ಜನರು ಸಾವಪ್ಪುತ್ತಿದ್ದರೂ ಜನರ ನಂಬಿಕೆಯನ್ನು ಅಳಿಸಲು ಸಾಧ್ಯವೆ? ಮತ್ತೆ ಯಾಕೆ ಈ ಲೇಖನ? ಅದೂ ಮೂರ್ಖರ ದಿನಕ್ಕೆ ಆರು ದಿನ ಹಾಗೂ ‘ವಿಶ್ವ ಹೋಮಿಯೋಪಥಿ ದಿನ’ಕ್ಕೆ 16 ದಿನ ಬಾಕಿ ಇರುವಾಗ, ಅದೂ ಕೇವಲ 9 ರೋಗಿಗಳ ಮೇಲಿನ ಅಧ್ಯಯನಕ್ಕೆ ಇಷ್ಟೆಲ್ಲ ಪ್ರಚಾರ ಯಾಕೆ?

ಅದಕ್ಕೆ ಉತ್ತರ ಇಲ್ಲಿದೆ: ವಿಜ್ಞಾನ ಎಂದರೆ ದೇವರ ಹಾಗಲ್ಲ. ಅದು ತನ್ನನ್ನು ತಾನೇ ಪರೀಕ್ಷೆಗೆ ಒಡ್ಡುತ್ತ, ರೂಢ ನಂಬಿಕೆಗಳನ್ನು ಪ್ರಶ್ನಿಸುತ್ತ, ತನ್ನ ತಪ್ಪನ್ನು ತಿದ್ದಿಕೊಳ್ಳುತ್ತ, ಅಗತ್ಯಬಿದ್ದರೆ ದೇವರನ್ನೆಲ್ಲ ಬಂಧನದಲ್ಲಿರಿಸಿ (ಕೋವಿಡ್ ದಿನಗಳಲ್ಲಿ ಆದಂತೆ) ಮನುಷ್ಯನನ್ನು ಸರ್ವಶಕ್ತನನ್ನಾಗಿ ಮಾಡಲು ಹೊರಟಿದೆ. ಭಾರತವಂತೂ ವೈಜ್ಞಾನಿಕ ಮನೋಭಾವವನ್ನು ರೂಢಿಸಿಕೊಳ್ಳಬೇಕೆಂದು ಸಂವಿಧಾನದಲ್ಲೇ ಹೇಳಿಕೊಂಡ ಏಕೈಕ ರಾಷ್ಟ್ರ. ಅದು ಈಗ ವಿಶ್ವಗುರು ಪಟ್ಟಕ್ಕೇರುವ ಸನ್ನಾಹದಲ್ಲಿದೆ. ಹೋಮಿಯೋಪಥಿ ಢೋಂಗಿ ಎಂದು ಜಗತ್ತಿನ ವಿಜ್ಞಾನಿಗಳೆಲ್ಲ ಹೇಳುತ್ತಿರುವಾಗ, ಜಗತ್ತಿನ ಅತಿದೊಡ್ಡ ಹೋಮಿಯೋಪಥಿ ಆಡುಂಬೊಲ ಎನ್ನಿಸಿದ ಭಾರತದಲ್ಲಿ ವಿಜ್ಞಾನಿಗಳು ಪರೀಕ್ಷೆ ನಡೆಸಿದರೆ, ಆ ಯತ್ನವನ್ನು ಮುಚ್ಚಿಡಬಾರದು ತಾನೆ?

‘ನನಗೆ ಇದರಲ್ಲಿ ನಂಬಿಕೆ ಇಲ್ಲ; ಆದರೂ ಅದು ವರ್ಕಾಗುತ್ತದೆ’ ಎಂಬ ನಂಬಿಕೆಯ ಹಿಂದಿನ ನಿಗೂಢ ಸತ್ಯ ಏನೆಂದು ನಾಳಿನ ವಿಜ್ಞಾನಿಗಳಾದರೂ ಹುಡುಕುವಂತಾದರೆ ತಪ್ಪೇನು ಅದರಲ್ಲಿ?

ವೈದ್ಯರಂಗದ ರಾಮರ್ ಪಿಳ್ಳೈಗಳು

ಹೋಮಿಯೋಪಥಿ ಚರಿತ್ರೆಯಲ್ಲಿ ‘ಬೆನ್ವೆನಿಸ್ಟ್ ಹಗರಣ’ ಎಂದೇ ಖ್ಯಾತಿ ಪಡೆದ ಒಂದು ಘಟನಾಸರಣಿ ಹೀಗಿದೆ:

1988ರಲ್ಲಿ ಫ್ರೆಂಚ್ ವೈದ್ಯವಿಜ್ಞಾನಿ ಜಾಕಿಸ್ ಬೆನ್ವೆನಿಸ್ಟ್ ಎಂಬಾತ ಪ್ರಸಿದ್ಧ ‘ನೇಚರ್’ ಪತ್ರಿಕೆಗೆ ತನ್ನ ಒಂದು ಸಂಶೋಧನ ಪ್ರಬಂಧವನ್ನು ಕಳಿಸಿದ. ಮನುಷ್ಯನ ದೇಹದಲ್ಲಿನ ರೋಗನಿರೋಧಕ (ಆಂಟಿಬಾಡೀಸ್) ಕಣಗಳನ್ನು ತೀರಾತೀರಾ ದುರ್ಬಲ ದ್ರಾವಣವಾಗಿ ಮಾಡಿ ಅದರಲ್ಲಿ ಔಷಧೀಯ ಗುಣವನ್ನು ಹೆಚ್ಚಿಸಲು ಸಾಧ್ಯ ಎಂದು ಪ್ರತಿಪಾದಿಸಿದ. ‘ನೇಚರ್’ ಪತ್ರಿಕೆಗೆ ಸಂಶಯ ಬಂದು, ‘ಬೇರೆಯವರೂ ಈ ಪ್ರಯೋಗ ಮಾಡಲಿ’ ಎಂದಿತು. ಅದೇ ಪ್ರಕಾರ ಕೆನಡಾ, ಇಟಲಿ, ಇಸ್ರೇಲ್ ಮತ್ತು ಫ್ರಾನ್ಸ್ ದೇಶಗಳ ವಿಜ್ಞಾನಿಗಳನ್ನು ಸಹಲೇಖಕರನ್ನಾಗಿ ಮಾಡಿದ ನಂತರ ಲೇಖನ ಪ್ರಕಟವಾಯಿತು. ಆಗಲೂ ಸಂಶಯ ಬಂದು ಪತ್ರಿಕೆಯೇ ಒಂದು ತನಿಖಾ ಸಮಿತಿಯನ್ನು ನೇಮಕ ಮಾಡಿತು. ಅದರಲ್ಲಿ ಸ್ವತಃ ಸಂಪಾದಕ ಜಾನ್ ಮಡಾಕ್ಸ್, ಖ್ಯಾತ ಪವಾಡ ಪರೀಕ್ಷಕ ಜೇಮ್ಸ್ ರಾಂಡಿ, ಮೋಸಪರೀಕ್ಷಕ ವಾಲ್ಟರ್ ಸ್ಟೀವರ್ಟ್ ಮತ್ತು ಜೊತೆಗೆ ಬೆನ್ವೆನಿಸ್ಟ್ ತಂಡದ್ದೇ ಒಬ್ಬ ವಿಜ್ಞಾನಿಯ ಎದುರು ಅದೇ ಪ್ರಯೋಗ ನಡೆಯಿತು. ಫಲಿತಾಂಶ ಬೇರೆಯದೇ ಬಂತು! ಒಂದಲ್ಲ, ಏಳು ಬಾರಿ ಅದೇ ಪ್ರಯೋಗವನ್ನು ನಡೆಸಿದರೂ ಮೊದಲಿನ ಫಲಿತಾಂಶ ಬರಲಿಲ್ಲ.

ಹೋಮಿಯೋಪಥಿ ಬೆಂಬಲಿಗರ ಈಗಿನ ವಾದ ಏನೆಂದರೆ: ಸತ್ಯಾಸತ್ಯದ ಪರೀಕ್ಷೆ ಮಾಡಲು ಹೋಗಿದ್ದೇ ಆದರೆ ಸತ್ಯ ಕಣ್ತಪ್ಪಿಸಿಕೊಳ್ಳುತ್ತದೆ!

ಮಜ ಮಜ ಮಜಕೂರ



• ಎಂ.ಎಸ್.ಪೂಜಾರ

ಅಂಗನವಾಡಿ ಅಂಗಳದಲ್ಲಿ...

ಹಣ್ಣಿನ ಹಾಡು

ಹಣ್ಣು ಬೇಕೇನ್ರಿ ಹಣ್ಣು
ತಂದು ಕೊಡತಿನಿ ತಿನ್ನು ||ಹಣ್ಣು ಬೇಕೇನ್ರಿ||
ಮಾವ ತಿನ್ನೋದು ಮಾವಿನ ಹಣ್ಣು
ಅತ್ತಿ ತಿನ್ನೋದು ಅತ್ತಿ ಹಣ್ಣು

ಕಾಕಾ ತಿನ್ನೋದು ಕಾಕಿ ಹಣ್ಣು
ಚಿಕ್ಕಪ್ಪ ತಿನ್ನೋದು ಚಿಕ್ಕು ಹಣ್ಣು ||ಹಣ್ಣು ಬೇಕೇನ್ರಿ||

ಪಾರವ್ವ ತಿನ್ನೋದು ಪ್ಯಾರಲಹಣ್ಣು
ನೀಲವ್ವ ತಿನ್ನೋದು ನೀರಲಹಣ್ಣು
ಪಾಪಣ್ಣ ತಿನ್ನೋದು ಪಪ್ಪಾಯಿ ಹಣ್ಣು
ಬಾಳಣ್ಣ ತಿನ್ನೋದು ಬಾಳೆ ಹಣ್ಣು ||ಹಣ್ಣು ಬೇಕೇನ್ರಿ||

ಅಂಜು ತಿನ್ನೋದು ಅಂಜೂರ ಹಣ್ಣು
ಮಂಜಪ್ಪ ತಿನ್ನೋದು ಮೋಸಂಬಿ ಹಣ್ಣು
ಅಜ್ಜಯ್ಯ ತಿನ್ನೋದು ಖರ್ಜೂರ ಹಣ್ಣು
ಶೇಖಪ್ಪ ತಿನ್ನೋದು ಸೇಬು ಹಣ್ಣು ||ಹಣ್ಣು ಬೇಕೇನ್ರಿ||

ಕಲ್ಲಪ್ಪ ತಿನ್ನೋದು ಕಲ್ಲಂಗಡಿ ಹಣ್ಣು
ಬೋರಪ್ಪ ತಿನ್ನೋದು ಬೋರೆಹಣ್ಣು
ಗೂಳಪ್ಪ ತಿನ್ನೋದು ದಾಳಿಂಬ್ರ ಹಣ್ಣು
ಕಾಳವ್ವ ತಿನ್ನೋದು ಕವಳಿ ಹಣ್ಣು ||ಹಣ್ಣು ಬೇಕೇನ್ರಿ||

ದ್ರಾಕ್ಷಾಯಿಣಿ ತಿನ್ನೋದು ದ್ರಾಕ್ಷಿ ಹಣ್ಣು
ಸೀತವ್ವ ತಿನ್ನೋದು ಸೀತಾಫಲ ಹಣ್ಣು
ಪರಪ್ಪ ತಿನ್ನೋದು ಪೈನಾಪಲ್ಲು
ಕರಿಯಪ್ಪ ತಿನ್ನೋದು ಕಿತ್ತಳೆ ಹಣ್ಣು ||ಹಣ್ಣು ಬೇಕೇನ್ರಿ||

ಅದಲು ಬದಲು ಕಂಚಿ ಕದಲು

1 ರಿ, ಇವಳು = _____ 2 ನಕಲಿ ಕದ = _____

3 ಕಡುನಾರು = _____ 4 ಸರಿಹೋದ = _____

ಗಣಿತದಲ್ಲಿ ಗರ್ದಿ ಗಮ್ಮತ್ತು

ಗೆಲುವಿನ ಗುಟ್ಟು

ಇಬ್ಬರು ಕೂಡಿ ಆಡುವ ಆಟವಿದು. ಮೊದಲು ಒಂದು ಬೋರ್ಡಿನ ಮೇಲೆ Aಯಿಂದ Z ಅಕ್ಷರಗಳವರೆಗೆ ಬರೆಯಿರಿ. ಇಬ್ಬರಲ್ಲಿ ಒಬ್ಬರು A ಯಿಂದ E ವರೆಗೆ ಅಂದರೆ ಆರಂಭದಿಂದ ಐದು ಅಕ್ಷರಗಳ ಒಳಗೆ ಬೇಕಾದ ತಮಗೆ ಇಷ್ಟವಾದ ಅಕ್ಷರಕ್ಕೆ √ ಪಾಸ್ ಗುರುತು ಹಾಕುವುದು. ಪಾಸ್ (√) ಗುರುತು ಹಾಕಿದ ಅಕ್ಷರದ ಮುಂದಿನ ಅಕ್ಷರದಿಂದ ಮತ್ತೆ ಐದು ಅಕ್ಷರಗಳ ಒಳಗೆ ಇನ್ನೊಬ್ಬ ಗೆಳೆಯ ಗುರುತು ಹಾಕುತ್ತಾನೆ. ಈಗ ಮತ್ತೆ √ ಗುರುತಿನ ಮುಂದಿನ ಅಕ್ಷರದಿಂದ ಮೊದಲ ಆಟಗಾರ ಮೊದಲಿನಂತೆ ಒಂದು ಅಕ್ಷರಕ್ಕೆ ಗುರುತು ಹಾಕುತ್ತಾನೆ. ಹೀಗೆ ಹಾಕುತ್ತಾ ಕೊನೆಯ ಅಕ್ಷರಕ್ಕೆ ಯಾರು ಗುರುತು ಹಾಕುತ್ತಾರೋ ಅವರು ಗೆದ್ದಂತೆ. ಪ್ರತಿ ಬಾರಿಯೂ ನೀವೇ ಗೆಲ್ಲಬೇಕಾದರೆ ಈ ಗುಟ್ಟಿನ ವಾಕ್ಯ ನೆನಪಿಡಿ.

A FAT KANGAROO PICK UP ZEBRA (AFKPUZ) ಇಲ್ಲಿ ವಾಕ್ಯದ ಮೊದಲ ಅಕ್ಷರಗಳಿಗೆ ನೀವು √ ಗುರುತು ಹಾಕುತ್ತಾ ಸಾಗಿದರೆ ಯಾವಾಗಲೂ ನೀವೇ ಗೆಲ್ಲುತ್ತೀರಿ.


ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಎರಡು ಅಕ್ಷರಗಳಿಗೆ ಪಕ್ಕದಲ್ಲಿ ಕೊಟ್ಟ ಸುಳಿವು ಆಧರಿಸಿ ಖಾಲಿ ಜಾಗಗಳಲ್ಲಿ ಎರಡು ಅಕ್ಷರ ತುಂಬಿ ನಾಲ್ಕು ಅಕ್ಷರಗಳ ಅರ್ಥಬದ್ಧ ಪದ ಮಾಡಿ

1	–	ಪ	ಟ	–	ಪಟ ಹಾರಿಸುವಾಗ ಆದ ತೊಂದರೆ
2	–	ಕ	ಲಾ	–	ಕಲಾಕಾರರಿಗೆ ಬಂದೊದಗುವ ತೊಂದರೆ
3	–	ಕ	ಡಿ	–	ಕಡಿಯುತ್ತಾ ಕಡಿಯುತ್ತಾ ಮಾಡಿದ ನಿದ್ದೆ
4	–	ಗ	ಡಿ	–	ಗಡಿ ಕಾಯುವಾಗ ಆದ ಸ್ನೇಹಿತ
5	–	ತಾ	ಪ	–	ತಾಪ ಹೆಚ್ಚಾಗುವಂತೆ ಮಾಡಿದ ಸಲ್ಲದ ಕೆಲಸ

ಗುಂಡ ಮತ್ತು ಗಾಳ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗುಂಡಣ್ಣ ಒಮ್ಮೆ ಮೀನು ಹಿಡಿಯಲು ಹೋದ. ಗಾಳ ಬಿಡಿಸಿಕೊಂಡು ಕೆರೆಯ ದಂಡೆಯ ಮೇಲೆ ಕುಳಿತ. ಮೀನು ಸಿಗುವ ನಿರೀಕ್ಷೆಯಿಂದ ದೀರ್ಘ ಹೊತ್ತಿನವರೆಗೆ ಕಾದು ಕುಳಿತ

ತುಂಬಾ ಹೊತ್ತಿನ ಬಳಿಕ ಗುಂಡಣ್ಣ ಹಾಕಿದ ಗಾಳಕ್ಕೆ ಮೀನೊಂದು ಸಿಕ್ಕಿಬಿತ್ತು. ಅವನು ತುಂಬಾ ಖುಷಿಯಾದ. ನಿಧಾನಕ್ಕೆ ಗಾಳವನ್ನು ಮೇಲಕ್ಕೆಳೆಯುತ್ತಾ ಬಂದ

ಮೀನು ಮೇಲೆ ಬರುತ್ತಿದ್ದಂತೆಯೇ ಕೆರೆಯ ದಂಡೆಯಲ್ಲಿ ಹೊಂಚು ಹಾಕುತ್ತಿದ್ದ ಬಕ ಪಕ್ಷಿಯೊಂದು ಗಾಳದ ಮೇಲೆಯೇ ಬಂದು ಕುಳಿತಿತು. ಗುಂಡಣ್ಣ ಸ್ವಲ್ಪ ಗಾಬರಿಯಾದ

ಇದ್ದಕ್ಕಿದ್ದಂತೆಯೇ ಬಕವು ಹಾರಿ ಬಂದು ಇಡೀ ಗಾಳವನ್ನೇ ಕಚ್ಚಿ ಹಿಡಿದು ಮೀನು ಸಮೇತ ಹಾರಿ ಹೋಯಿತು. ಗುಂಡ ಮೀನೂ ಇಲ್ಲದೇ, ಗಾಳವನ್ನೂ ಕಳೆದುಕೊಂಡು ಪೆಚ್ಚಾಗಿ ಹೋದ

ಹೊಂದಿಸು ಆನಂದಿಸು

ಇಲ್ಲಿ ಕೊಟ್ಟಿರುವ ಆಟಗಳಲ್ಲಿ ಪ್ರತಿ ತಂಡಕ್ಕೆ ಎಷ್ಟು ಮಂದಿ ಇರಬೇಕು ಎಂಬುದನ್ನು ಆಟ ಮತ್ತು ಮುಂದೆ ಕೊಟ್ಟಿರುವ ಸಂಖ್ಯೆಗಳ ಜೊತೆ ಹೊಂದಿಸಿ

1	ಫುಟ್‌ಬಾಲ್	A	9
2	ನೆಟ್‌ಬಾಲ್	B	15
3	ಬ್ಯಾಡ್ಮಿಂಟನ್ ,ಟೆನಿಸ್	C	7
4	ಬ್ಯಾಸ್ಕೆಟ್‌ಬಾಲ್	D	6
5	ರಗ್ಬಿ, ಫುಟ್‌ಬಾಲ್	E	1 ಅಥವಾ 2
6	ವಾಲಿಬಾಲ್	F	5
7	ಬೇಸ್‌ಬಾಲ್	G	11

ಹಣ್ಣಿನ ಹೆಸರು ಹೇಳಿ

ಎ
ಕ ಕಾ ಕಿ ಕೀ ಬಳ್ಳಿಯ ಅಕ್ಷರಗಳಿಂದ ಪ್ರಾರಂಭವಾಗುವ ಕನಿಷ್ಠ 5 ಹಣ್ಣುಗಳ ಹೆಸರುಗಳನ್ನು ಹೇಳಿ

1	ಕಾ	
2	ಕಿ	
3	ಕ	
4	ಕ	
5	ಕ	

ಬಿ
ದೀರ್ಘ ಚಿಹ್ನೆ ಹೊಂದಿರುವ 5 ಹಣ್ಣುಗಳ ಹೆಸರು ಹೇಳಿ

1	–	ೀ	–
2	–	ೀ	–
3	–	ೀ	–
4	–	ೀ	–
5	–	ೀ	–

ಸಿ
ಒತ್ತಕ್ಷರ ಹೊಂದಿರುವ ಐದು ಹಣ್ಣುಗಳ ಹೆಸರುಗಳನ್ನು ಹೇಳಿ

1	
2	
3	
4	
5	

ಡಿ
ಅನುಸ್ವಾರ ಬರುವ ಐದು ಹಣ್ಣುಗಳ ಹೆಸರುಗಳನ್ನು ಹೇಳಿ

1	
2	
3	
4	
5	

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬಂಧ: 1 ಟೀಕಾಕಾರ 2 ಲೋಕದಳ 3 ಗ್ರಾಮಗಡಿ 4 ವಿತರಿಸು 5 ಸುಮಧುರ

ಅದಲು ಬದಲು: 1 ತಡವರಿಸು 2 ಪ್ರಭಾವತಿ 3 ರವಿಚಡಿಗ 4 ಸಣ್ಣ ಕೆಲಸ

ಉಪ -ಪದಗಳು: 1 ಉಪದ್ರವ 2 ಉಪನ್ಯಾಸ 3 ಉಪಕಾರ 4 ಉಪವಾಸ 5 ಉಪಟಳ 6 ಉಪನ್ಯಾಸ 7 ಉಪಸ್ಥಿತಿ 8 ಉಪಗ್ರಹ 9 ಉಪಚಾರ 10 ಉಪಯೋಗ

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ಪಲ್ಲವಿ ಎ.ಎಸ್., ಹುಬ್ಬಳ್ಳಿ



ಆಯೂಬ್, ಪಾವಗಡ



ಕುಶಾಲ ಮಂಗೊಂಡ, ವಿಜಯಪುರ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

